

ಮಹಾತ್ಮಾ ಗಾಂಧೀಜಿ
ಬೆಳಗಾವಿ 1924



ಮನೋಜ್ ಪಾಟೀಲ

ಮಹಾತ್ಮಾ ಗಾಂಧೀಜಿ
ಬೆಳಗಾವಿ - 1924

(ಬೆಳಗಾವಿಯಲ್ಲಿ 1924, ಡಿಸೆಂಬರ್ 26-27 ರಂದು ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಪ್ರಮುಖ ವಿವರಗಳು)

ಸಂಪಾದಕ

ಮನೋಜ್ ಪಾಟೀಲ

ಪ್ರಕಾಶಕರು

ಪವನ ಪುಸ್ತಕ ಪ್ರಕಾಶನ

ಶ್ರೀ ಮಹಾಲಕ್ಷ್ಮಿ, ಸನ್ಮತಿ ಮಾರ್ಗ, ಧಾರವಾಡ - 580 001.

MAHATMA GANDHIJI
BELGAAVI - 1924

Collection of Major events of Indian National Congress session held at Belgaum on 26 & 27 th December 1924 Under the presidentship of Mahatma Gandhiji

Edited by : MANOJ PATIL

Publisher : Smt. Shailaja M. Patil
Shree Mahalaxmi, Sanmati Marg, DHARWAD-01.
~~Tel. : 0836 - 2744398~~.
~~Cell : 99803 55366~~ Cell 9986572630

ಮಹಾತ್ಮಾ ಗಾಂಧೀಜಿ

ಬೆಳಗಾವಿ - 1924

(ಬೆಳಗಾವಿಯಲ್ಲಿ 1924 ಡಿಸೆಂಬರ 26 ಹಾಗೂ 27 ರಂದು ಮಹಾತ್ಮಾ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನದ ಪ್ರಮುಖ ವಿವರಗಳು)

ಸಂಪಾದಕ	:	ಮನೋಜ್ ಪಾಟೀಲ
ಪ್ರಕಾಶಕರು	:	ಶ್ರೀಮತಿ ಶೈಲಜಾ ಮ. ಪಾಟೀಲ ಪವನ ಪುಸ್ತಕ ಪ್ರಕಾಶನ ಶ್ರೀ ಮಹಾಲಕ್ಷ್ಮಿ ಸನ್ಮತಿ ಮಾರ್ಗ, ಧಾರವಾಡ - 580 001.
ಕಾಪಿರೈಟ್	:	ಮನೋಜ್ ಪಾಟೀಲ
ಮೊದಲ ಮುದ್ರಣ	:	ಜೂನ್ 2013
ಪುಟಗಳು	:	192 + 16
ಪ್ರತಿಗಳು	:	1000
ಬೆಲೆ	:	ರೂ. 200-00 (ಎರಡು ನೂರು ರೂಪಾಯಿ ಮಾತ್ರ)
ಅಕ್ಷರ ಜೋಡಣೆ	:	ಮೃತ್ಯುಂಜಯ ಶಾಂತಪೂರಮಠ
ಮುದ್ರಣ	:	ಭೂಮಿಕಾ ಪ್ರಿಂಟರ್ಸ್, ಸರ್ ಸಿದ್ದಪ್ಪ ಕಂಬಳಿ ಮಾರ್ಗ, ಹುಬ್ಬಳ್ಳಿ - 20.
ಮುಖಪುಟ ಕಲೆ	:	ಶಶಿ ಸಾಲಿ, ಸಾಲಿ ಗ್ರಾಫಿಕ್ಸ್, ಕೊಪ್ಪಿಕರ ರಸ್ತೆ, ಹುಬ್ಬಳ್ಳಿ-20.

ಅರ್ಪಣೆ



ಹಿರಿಯ ಸ್ವಾತಂತ್ರ್ಯಯೋಧರೂ
ಆಗಿದ್ದ ನನ್ನ ಅಜ್ಜಿ - ಅಜ್ಜ (ತಾಯಿಯ ತಾಯಿ - ತಂದೆ)
ಪದ್ಮಾವತಿಬಾಯಿ ವಾ. ದೇಸಾಯಿ ಬಿದರಿ (1915 - 1992)
ವಾಮನ ರಾವ ದೇಸಾಯಿ ಬಿದರಿ (1900 - 1945)
ಅವರಿಗೆ

ಕೃತಜ್ಞತೆಗಳು



ಮಹಾತ್ಮಾ ಗಾಂಧೀಜಿ ಬೆಳಗಾವಿ - 1924 ಪುಸ್ತಕ ಪ್ರಕಟಣೆಗೆ
ಮಾರ್ಗದರ್ಶನ, ಧೈರ್ಯ, ಸ್ಥೈರ್ಯ ನೀಡಿದ

ಮಾನ್ಯಶ್ರೀ ಎಸ್. ಆರ್. ಪಾಟೀಲ

ಸನ್ಮಾನ್ಯ ಸಚಿವರು, ಮಾಹಿತಿ-ಜೈವಿಕ ತಂತ್ರಜ್ಞಾನ, ವಿಜ್ಞಾನ
ಹಾಗೂ ತಂತ್ರಜ್ಞಾನ ಖಾತೆ, ಕರ್ನಾಟಕ ಸರಕಾರ
ಅವರಿಗೆ

ಮುನ್ನುಡಿ

1924 ರ ಡಿಸೆಂಬರ್ 26 ಮತ್ತು 27 ರಂದು (ಸುಮಾರು 90 ವರ್ಷಗಳಷ್ಟು ಹಿಂದೆ) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ 39 ನೇಯ ಮಹಾಧಿವೇಶನ ನಮ್ಮ ಕರ್ನಾಟಕದ ಬೆಳಗಾವಿಯಲ್ಲಿ ನಡೆಯಿತು. ಸರ್ವಾಧ್ಯಕ್ಷರಾಗಿದ್ದವರು ಮತ್ಯಾರು ಅಲ್ಲ, ಸ್ವತಃ ಮಹಾತ್ಮಾ ಗಾಂಧಿ. ಈ ಸಂಗತಿಯನ್ನು ನನ್ನಂತಹ ಅನೇಕ ಕನ್ನಡಿಗರು ಹೆಮ್ಮೆಯಿಂದ ನೆನಪು ಮಾಡಿಕೊಳ್ಳುತ್ತೇವೆ. ನಮ್ಮ ಡುಬ್ಬ ನಾವೇ ತಟ್ಟಿಕೊಂಡು ಅಷ್ಟಕ್ಕೇ ತೃಪ್ತರಾಗಿ ಬಿಡುತ್ತೇವೆ. ಆದರೆ ಆ ಅಧಿವೇಶನ ಹೇಗೆ ನಡೆಯಿತು ? ಇಂದಿನ ಹೆಚ್ಚಿನ ಸಮ್ಮೇಳನಗಳಂತೆ ಬರಿಯ ಉತ್ಸವ ಆಯಿತೆ, ಕೆಲವೇ ಕೆಲವರ ಷೋ ಆಯಿತೆ ? ಅಥವಾ ಅಲ್ಲಿಯ ಅರ್ಥಪೂರ್ಣ ಭಾಷಣಗಳು, ಚರ್ಚೆಗಳು ಗೊತ್ತುವಳಿ ಮಂಡನೆಗಳು ಅವುಗಳಿಗೆ ಅಂದಿನ ಹಿರಿಯರ ಹಾಗೂ ಪ್ರತಿನಿಧಿಗಳ ಪ್ರತಿಕ್ರಿಯೆಗಳು ನಮಗೆ ಇಂದೂ ಯಾವ ರೀತಿಯಲ್ಲಾದರೂ ದಾರಿದೀಪಗಳಾಗಬಲ್ಲವೇ ? ಅಧಿವೇಶನ ವ್ಯವಸ್ಥಿತವಾಗಿ ನಡೆಯಿತೇ ? ಗಾಂಧೀಜಿಯವರಲ್ಲದೆ ಅಂದು ತಮ್ಮ ಉಪಸ್ಥಿತಿ ಮತ್ತು ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಕರ್ನಾಟಕದ ಇಡೀ ಜನತೆಯ ಮೈ ಮನಗಳನ್ನು ಪುಳಕಿಸಿ ಅವರಲ್ಲಿ ಧನ್ಯತಾಭಾವವನ್ನು ಉಕ್ಕಿಸಿದ ಇತರ ರಾಷ್ಟ್ರೀಯ ಮತ್ತು ಪ್ರಾಂತೀಯ ದಿಗ್ಗಜರು ಯಾರಿದ್ದರು ? ಇಂತಹವುಗಳನ್ನು ತಿಳಿದುಕೊಳ್ಳುವ ಗೋಜಿಗೆ ಹೋಗದೇ ನಾವೇನನ್ನಾದರೂ ಕಳೆದು ಕೊಂಡಿದ್ದೇವೆಯೇ ?

ಈ ಮಹಾಧಿವೇಶನಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನೂ ಹಲವು ವರ್ಷಗಳ ಶ್ರಮದಿಂದ ದೊರಕಿಸಿಕೊಂಡು ಮೂಲ ಇಂಗ್ಲೀಷಿನಲ್ಲಿದ್ದ ಅವುಗಳ ಯಥಾವತ್ ಕನ್ನಡ ರೂಪವನ್ನು ಶ್ರೀ ಮನೋಜ ಪಾಟೀಲರು ಇಲ್ಲಿ ನಮಗಿತ್ತು ಕನ್ನಡ ಜನತೆಗೆ ಮಹದುಪಕಾರವನ್ನು ಮಾಡಿದ್ದಾರೆ. ಇಲ್ಲಿ ದೊರೆಯುವ ಮಾಹಿತಿ ಅಮೂಲ್ಯ. ಅಂದಿನ ಹಿರಿಯರ ಹಾಗೂ ಪ್ರತಿನಿಧಿಗಳ ನಡತೆ, ಭಿನ್ನಾಭಿಪ್ರಾಯಗಳ ಹೊರತಾಗಿಯೂ, ಸೌಜನ್ಯ, ಸಜ್ಜನಿಕೆಗಳಿಗೆ ಮಾದರಿ, ಮುಖ್ಯವಾಗಿ ಭಾರತದ ಭವ್ಯ ಭವಿಷ್ಯಕ್ಕಾಗಿ, ಇಡೀ ಜನತೆಯ ಒಳಿತಿಗಾಗಿ ಕಾರ್ಯತತ್ಪರರಾಗಿರಲು ಅವರಲ್ಲಿದ್ದ ಅದಮ್ಯ ಉತ್ಸಾಹ ಮತ್ತು ಬದ್ಧತೆ, ಈ ದಿಶೆಯಲ್ಲಿ ಸರ್ವ ತ್ಯಾಗಕ್ಕೂ ಸಿದ್ದರಿದ್ದ ಅವರೆಲ್ಲರ ಆದರ್ಶ ಈ ವರದಿಯಲ್ಲಿ ಸ್ಫುಟವಾಗಿ ಮೈದೋರಿವೆ. ಕ್ರಿಕೆಟ್ ಮ್ಯಾಚೊಂದರ ವೀಕ್ಷಕ ವಿವರಣೆಯನ್ನು ನೆನಪಿಸುವಂತೆ ಅಧಿವೇಶನದ ಪ್ರತಿಕ್ಷಣದ ಆಗು ಹೋಗುಗಳನ್ನು ಶಬ್ದಗಳಲ್ಲಿ ಹಿಡಿದಿಟ್ಟಿರುವ ವರದಿ ನಾವೂ 'ವಿಜಯನಗರ'ದ ಆ ಮಹಾಧಿವೇಶನದಲ್ಲಿ ಪಾಲ್ಗೊಳ್ಳುತ್ತಿರುವ ಅನುಭವ ನೀಡುತ್ತದೆ.

ಗಾಂಧೀಜಿ, ಚಿತ್ತರಂಜನದಾಸ್, ಸರೋಜಿನಿ ನಾಯ್ಡು, ರಾಜಾಜಿ, ಮೋತಿಲಾಲ್ ನೆಹರೂ ಮುಂತಾದ ರಾಷ್ಟ್ರೀಯ ನಾಯಕರಲ್ಲದೆ, ಗಂಗಾಧರರಾವ್ ದೇಶಪಾಂಡೆ, ಮುದವೀಡು ಕೃಷ್ಣರಾಯರು, ನಾ.ಸು. ಹರ್ಡೀಕರ, ಗರೂಡ ಸದಾಶಿವರಾವ್ ಇತರ ಅನೇಕ ಸ್ಥಳೀಯ ಕಾಂಗ್ರೆಸ್ ಹಿರಿಯರು ನಮ್ಮೊಡನಿದ್ದಾರೆ. ಲಾಲಾ ಲಜಪತರಾಯ್, ಮೌಲಾನಾ ಆಜಾದ್, ಜವಾಹರಲಾಲ್ ನೆಹರೂ ಅವರ ಸಾಮೀಪ್ಯ ನಮ್ಮನ್ನು ಪುಳಕಿತಗೊಳಿಸುತ್ತದೆ.

ವರದಿಯಲ್ಲಿ ಪೀಠಿಕಾ ರೂಪವಾಗಿ ಅಧಿವೇಶನದ ವ್ಯವಸ್ಥಿತ ಸಿದ್ಧತೆಗಳ ಕುರಿತು ಮಾಹಿತಿ ನೀಡಿರುವ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಎಂ.ಆರ್. ಕೆಂಭಾವಿ ಅವರು ಅಧಿವೇಶನಕ್ಕೆ ಬೆಳಗಾವಿಯನ್ನೇ ಏಕೆ ಆಯ್ಕೆ ಮಾಡಲಾಯಿತು ಎಂದು ಪ್ರಶ್ನಿಸಿಕೊಂಡು ನಾವು ನೆನಪಿಡಬೇಕಾದ ಕೆಲವು ಮಾಹಿತಿಗಳನ್ನು ನೀಡಿದ್ದಾರೆ. ಬೆಳಗಾವಿ ಅಷ್ಟೇನೂ ದೊಡ್ಡ ನಗರವಲ್ಲದಿದ್ದರೂ ಈ ಮಹಾಧಿವೇಶನ ನಡೆಸುವುದಕ್ಕೆ ಎಲ್ಲ ಸಾಧನ - ಸಂಪನ್ಮೂಲಗಳನ್ನು ಹೊಂದಿದೆ. ಎಲ್ಲರಿಗೂ ಸಮಾಧಾನಕರವೆನಿಸುವಂತೆ ಸೌಲಭ್ಯಗಳನ್ನು ಏರ್ಪಾಡು ಮಾಡಲು ಶಕ್ತವಿದೆ. ಇದಕ್ಕೂ ಹೆಚ್ಚಾಗಿ ರಾಷ್ಟ್ರದ ಇತ್ತೀಚಿನ ರಾಜಕೀಯ ಚಟುವಟಿಕೆಗಳಲ್ಲಿ ಬೆಳಗಾವಿ ಮಹತ್ವದ ಪಾತ್ರ ವಹಿಸುತ್ತ ಬಂದಿದೆ. ಮುಖ್ಯವಾಗಿ 1916 ರ ಮುಂಬಯಿ ಪ್ರಾಂತೀಯ ಕಾಂಗ್ರೆಸ್ ಅಧಿವೇಶನ ನಡೆದದ್ದು ಬೆಳಗಾವಿಯಲ್ಲಿ. ಲೋಕಮಾನ್ಯ ಟಿಳಕರು ಭಾರತದ ಹೋಂರೂಲ್ ಲೀಗ್ ಸ್ಥಾಪಿಸಿದುದೂ ಬೆಳಗಾವಿಯಲ್ಲೇ.

ಮಹಾತ್ಮಾ ಗಾಂಧೀ ಮತ್ತು ಇತರರ ವೈಭವಯುತ ಮೆರವಣಿಗೆಯೊಂದಿಗೆ ಆಗಮಿಸುವುದರಿಂದ ಮೊದಲು ಮಾಡಿ ಎರಡು ದಿನಗಳ ಕಾರ್ಯ ಕಲಾಪಗಳ ಕ್ಷಣ ಕ್ಷಣದ ವಿವರಣೆ ಇಲ್ಲಿ ನಮಗೆ ದೊರೆಯುತ್ತದೆ. ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಗಂಗಾಧರರಾವ್ ದೇಶಪಾಂಡೆ ತಮ್ಮ ಸ್ವಾಗತ ಭಾಷಣದಲ್ಲಿ ಅಂದಿನ ರಾಜಕೀಯ ಹಾಗೂ ಸಾಮಾಜಿಕ ಪರಿಸ್ಥಿತಿಯ ಬಗ್ಗೆ ಗಮನ ಸೆಳೆಯುತ್ತಾರೆ. ಕಾಂಗ್ರೆಸ್‌ನಲ್ಲಿ ಸ್ವರಾಜ್ಯ ಪಕ್ಷದ ಸ್ಥಾಪನೆಯೊಂದಿಗೆ ಉಂಟಾಗಿದ್ದ ಬಿರುಕು, ಗಾಂಧೀಜಿಯವರ ಹಿರಿತನದಲ್ಲಿ ಅವರು ಮತ್ತೆ ಕಾಂಗ್ರೆಸ್ಸಿನಲ್ಲಿದ್ದು ಕೊಂಡು ಐಕ್ಯತೆಯನ್ನು ಕಾಪಾಡಿಕೊಳ್ಳುವ ಭರವಸೆಯನ್ನು ಪ್ರಸ್ತಾಪಿಸುತ್ತಾರೆ. ಕರ್ನಾಟಕದ ಸಾಂಸ್ಕೃತಿಕ ಹಿನ್ನೆಲೆಯನ್ನು ಪರಿಚಯಿಸುತ್ತಾರೆ. ಗಾಂಧೀಜಿ ನಮ್ಮೆದುರುಗಿರಿಸಿದ ತ್ರಿವಿಧ ವಿಧಾಯಕ ಕಾರ್ಯಕ್ರಮವೊಂದೇ ನಮ್ಮೆಲ್ಲರ ಶಕ್ತಿ ಸಾಮರ್ಥ್ಯಗಳನ್ನು ಸಮಗ್ರವಾಗಿ ಒಟ್ಟು ಗೂಡಿಸಲು ಸರ್ವಶಕ್ತವಾಗಿದೆ ಎಂಬ ವಿಶ್ವಾಸವನ್ನು ಪ್ರಕಟಿಸುತ್ತಾರೆ.

ಖಾದಿ, ಹಿಂದು ಮುಸ್ಲಿಂ ಬಾಂಧವ್ಯ ಮತ್ತು ಅಸ್ಪೃಶ್ಯತಾ ನಿವಾರಣೆ ಇವೇ ಗಾಂಧೀಜಿ ಮುಂದಿಟ್ಟ ತ್ರಿವಿಧ ವಿಧಾಯಕ ಕಾರ್ಯಕ್ರಮಗಳು. ತಮ್ಮ ಭಾಷಣದಲ್ಲಿ ಪ್ರತ್ಯೇಕ ಘಟನೆಗಳನ್ನು ಮುಖ್ಯವಾಗಿ ಅಂದು ಇಡೀ ರಾಷ್ಟ್ರವನ್ನೇ ಕದಡಿದ್ದ ಕೋಹತ್‌ನಗರದ ಕೋಮು ದಳ್ಳುರಿಯನ್ನು ವಿಶ್ಲೇಷಿಸುವ ಅವರು ಈ ಮೂರು ಕಾರ್ಯಕ್ರಮಗಳ ಯಶಸ್ವಿ

ಅನುಷ್ಠಾನದಿಂದ ಮಾತ್ರವೇ ಸ್ವರಾಜ್ಯಗಳಿಸಲು ಸಾಧ್ಯ ಎಂದು ಪ್ರತಿಪಾದಿಸುತ್ತಾರೆ. ಈ ಎರಡು ದಿನಗಳ ಅಧಿವೇಶನದಲ್ಲಿ ಮಂಡಿಸಲಾದ ಹೆಚ್ಚಿನ ಗೊತ್ತುವಳಿಗಳು ಈ ಕುರಿತೇ ಆಣತಿ. ಗಮನಿಸಬೇಕಾದ ಸಂಗತಿ ಎಂದರೆ ಗೊತ್ತುವಳಿಗಳನ್ನು ಅನುಮೋದಿಸುವವರಿಗಿಂತ ಅವನ್ನು ವಿರೋಧಿಸುವ ಪ್ರತಿನಿಧಿಗಳನ್ನು ವೇದಿಕೆಗೆ ಆಮಂತ್ರಿಸಿ ಅವರ ಅಭಿಪ್ರಾಯಗಳನ್ನು ನಿರ್ಭಿಡೆಯಿಂದ ತಿಳಿಸುವ ಅವಕಾಶವನ್ನು ಗಾಂಧೀಜಿ ನೀಡುತ್ತಾರೆ. ಇಲ್ಲಿ ನಮ್ಮ ಗಮನ ಸೆಳೆಯುವ, ಸೆಳೆಯಬೇಕಾದ ವಿಷಯ ಎಂದರೆ, ಆ ವಿರೋಧಿಗಳು ಗಾಂಧೀಜಿಯ ಯೋಜನೆಗಳನ್ನು ಕಟುವಾಗಿ ವಿರೋಧಿಸುವಾಗಲೂ, ಗಾಂಧೀಜಿಯವರನ್ನೇ ನೇರವಾಗಿ ಟೀಕಿಸುವಾಗಲೂ, ಗಾಂಧಿ ಆಗಲಿ, ಇತರ ನಾಯಕರಾಗಲೀ ಸಭಿಕರೇ ಆಗಲಿ, ಗೊಂದಲ ಲೆಕ್ಕಿಸದೆ ತಾಳ್ಮೆಯಿಂದಲೇ ಪರ, ವಿರೋಧ ಅಭಿಪ್ರಾಯಗಳನ್ನು ಕೇಳುತ್ತಾರೆ. ಪರಸ್ಪರ ವಿಶ್ವಾಸ, ಪ್ರೀತಿ, ಗೌರವಕ್ಕೆ ಭಿನ್ನಾಭಿಪ್ರಾಯಗಳು ಕಿಂಚಿತ್ತೂ ಅಡ್ಡಿ ಬರುವುದಿಲ್ಲ.

ಗಾಂಧೀಜಿಯವರಾಡಿದ ಒಂದೆರಡು ಮಾತುಗಳು : 'ನಾನು ಹೇಳಿದ್ದೇ ನಿಜ, ಇತರರ ಮಾತು ಸರಿಯಲ್ಲ, ಸುಳ್ಳು ಎಂಬ ಆಶಯ ಯಾರಲ್ಲೂ ಇರಕೂಡದು. ಜಗತ್ತಿನಲ್ಲಿ ಎಲ್ಲಿಯವರೆಗೆ ಬುದ್ಧಿ ಶಕ್ತಿ ವಿಚಾರ ಸರಣಿ ಬೇರೆ ಬೇರೆಯಾಗಿ ಇರುತ್ತದೆಯೋ ಅಲ್ಲಿಯವರೆಗೆ ಬೇರೆ ಬೇರೆ ಅಭಿಮತಗಳಿರುತ್ತವೆ. ಇಂಥದರಲ್ಲಿ ಸಹನಶೀಲತೆ ಹೊಂದಬೇಕಾದುದು ಸಹ ಅಹಿಂಸೆಯೇ ಒಂದು ಅಂಶವೇ ಆಗಿದೆ.

'ದೇಶಬಂಧು ಚಿತ್ತರಂಜನದಾಸರು ಮಂಡಿಸುವ ಸೂಚನೆಯನ್ನು ನೀವು ಒಪ್ಪಲಿ, ಒಪ್ಪದಿರಲಿ ಅಂಗೀಕರಿಸಬೇಕೆಂದು ನಾನು ಹೇಳುತ್ತಿಲ್ಲ. ಸಮ್ಮತಿ ಇರುವುದಾದರೆ ಅಂಗೀಕರಿಸಿ, ಅಸಮ್ಮತಿವೆನಿಸುವುದಾದರೆ ತಿರಸ್ಕರಿಸಿ ಎಂದೇ ಹೇಳ ಬಯಸುತ್ತೇನೆ... ಗಾಂಧಿ ನಿಮಗೆಲ್ಲಾ ಅಪಾಯದಲ್ಲಿ ಸಿಲುಕಿಸುತ್ತಾನೆ, ಮೋಸ ಮಾಡುತ್ತಾನೆ ಎಂದೆನಿಸಿದರೆ ನೀವು ಇದನ್ನು ಸ್ವೀಕಾರ ಮಾಡುವುದೇ ಬೇಡ (ಇಂದಿನ ವ್ಹಿಪ್ ಸಂಸ್ಕೃತಿಯನ್ನು ನೆನಪಿಸಿಕೊಳ್ಳಿ !)

'ಎಲ್ಲಿಯವರೆಗೆ ಕೋಟ್ಯಾಂತರ ಬಡವರ ಹೊಟ್ಟೆಗೆ ರೊಟ್ಟಿ ಲಭಿಸುವುದಿಲ್ಲವೋ ಅಲ್ಲಿಯ ತನಕ ಸ್ವರಾಜ್ಯ ಲಭಿಸಲಾರದು.

'ಸತ್ಯ - ಅಸತ್ಯ ಎರಡೂ ಜೊತೆ ಜೊತೆಯಾಗಿರಲಾರವು. ಸತ್ಯದ ಹೆಸರಿನಲ್ಲಿ ಅಸತ್ಯ ಅನುಸರಿಸಿದರೆ ದೇಹವೇ ನಾಶವಾಗುತ್ತದೆ. ನನ್ನ ಮನಸ್ಸು ಸಹ ಸುಟ್ಟು ಹೋಗುತ್ತದೆ. ನನ್ನನ್ನು ನಿಂದಿಸಿರಿ, ನನಗೆ ಹೊಡೆಯಿರಿ, ಪಾದರಕ್ಷೆ ಎಸೆಯಿರಿ, ನನ್ನ ಮೇಲೆ ಥೂ ಎಂದು ಉಗುಳಿರಿ ನನಗೆ ಸಿಟ್ಟು ಬರುವುದಿಲ್ಲ. ಆದರೆ ನೀವು ದೇವರ ಹೆಸರಿನಲ್ಲಿ ಪ್ರತಿಜ್ಞೆಗೈದು ಉಲ್ಲಂಘಿಸಿದರೆ ಮಾತ್ರ, ನನಗೆ ಸಹನೆ ಮೀರುತ್ತದೆ. ಮಾಡಿದ ಪ್ರತಿಜ್ಞೆಯಂತೆ ನಡೆದುಕೊಳ್ಳದೇ ಹೋದರೆ ನನಗೆ ಶರೀರವೇ ಬೆಂದು ಹೋದಂಥ ಅನುಭವವುಂಟಾಗುತ್ತದೆ. ಸ್ವತಃ ಅಪವಿತ್ರನಾಗಿದ್ದು

ಕೊಂಡು ಪವಿತ್ರತೆಯನ್ನು ಸಮರ್ಥಿಸ ತೊಡಗಿದವರನ್ನು ನೋಡಿದಾಗ ನಾನು ಸಾಯುವುದಿಲ್ಲವೇಕೆ ? ಎಂದು ಕೊಳ್ಳುತ್ತೇನೆ. ಅಂಥವರನ್ನು ಕಣ್ಣೆತ್ತಿಯೂ ನೋಡದೆ ನಾನೇ ಸತ್ತು ಹೋಗಬೇಕೆನಿಸುತ್ತದೆ.

ಬೆಳಗಾವಿಯಿಂದ ಹಿಂದಿರುಗಿದ ನಂತರ ಗಾಂಧೀಜಿ 'ಯಂಗ್ ಇಂಡಿಯಾ'ದಲ್ಲಿ ಬರೆದ ಬೆಳಗಾವಿಯ ನೆನಹುಗಳು ಲೇಖನವನ್ನು ಕನ್ನಡಿಸಿ ಶ್ರೀ ಮನೋಜ ಪಾಟೀಲರು ಇಲ್ಲಿ ಜೋಡಿಸಿದ್ದಾರೆ. ಇದೊಂದು ಅಮೂಲ್ಯ ಲೇಖನ. ಗಾಂಧೀಜಿಯವರನ್ನು ಒಳಹೊಕ್ಕು ಅರಿಯಲು ನಮಗೆ ಇಂಬು ನೀಡುವಂತಹ ಸಾಧನ. ಎಂದೆಂದೂ ನಿರ್ಭಿಡೆಯಿಂದಲೇ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುವ ಗಾಂಧೀಜಿ ಅಧಿವೇಶನದ ಸುವ್ಯವಸ್ಥೆ, ವಿವಿಧ ಉಪಯೋಗಿ ಕಾರ್ಯಕ್ರಮಗಳು ಅವುಗಳಿಗೆ ಕಾರಣೀಭೂತರಾದ ಎಲ್ಲ ಕಾಂಗ್ರೆಸ್ ನಾಯಕರು, ಸ್ಥಳೀಯರು, ಸ್ವಯಂಸೇವಕರು ಎಲ್ಲರನ್ನೂ ಮುಕ್ತಕಂಠದಿಂದ ಪ್ರಶಂಸಿಸುವಂತೆಯೇ ತಾವು ಅಲ್ಲಿ ನ್ಯೂನ್ಯತೆಗಳಿಂದ ಕಂಡ ಸಂಗತಿಗಳ ಬಗ್ಗೆಯೂ ಅಷ್ಟೇ ಸ್ಪಷ್ಟವಾಗಿ ತಿಳಿಸುತ್ತಾರೆ. ಅಧ್ಯಕ್ಷರ ವಸತಿಗಾಗಿ ಖಾದಿ ಅರಮನೆ ನಿರ್ಮಿತವಾಗಿತ್ತು. ಚಿಕ್ಕ ಹಾಗೂ ಸಣ್ಣ ರೀತಿಯಲ್ಲಿ ನಿರ್ಮಿತವಾಗಿದ್ದ ಅದು ತನ್ನ ವಿಶಿಷ್ಟ ಅಲಂಕಾರಗಳಿಂದಾಗಿ ಅರಮನೆ ಎಂಬ ಸಾರ್ಥಕ ನಾಮದಿಂದ ಗುರುತಿಸಲ್ಪಟ್ಟಿತ್ತು. ಆದರೆ ವೆಚ್ಚದ ದೃಷ್ಟಿಯಿಂದ ಅದು ಒಂದು ಕುಟೀರವೇ ಸರಿ !. ಎಂದು ಕಾರ್ಯದರ್ಶಿಗಳಾಗಿದ್ದ ಎಂ.ಆರ್. ಕೆಂಭಾವಿ ತಮ್ಮ ವರದಿಯಲ್ಲಿ ತಿಳಿಸುತ್ತಾರೆ. ಆದರೆ ಸರಳ ಜೀವಿ, ಸಮಾನತೆಯ ಪ್ರತಿಪಾದಕ ಗಾಂಧೀಜಿಗೆ ಅದು ಅಪ್ಯಾಯಮಾನವಾಗಿರಲಿಲ್ಲ. ಸ್ವಾಗತ ಸಮಿತಿಯ ಸದಸ್ಯರ ಉದ್ದೇಶ ಒಳ್ಳೆಯದೇ ಆದರೂ ಪಕ್ಷದ ವರಿಷ್ಠರಿಗೆ, ಉನ್ನತ ವ್ಯಕ್ತಿಗಳಿಗೆ ಐಷಾರಾಮೀ ಏರ್ಪಾಟುಗಳನ್ನು ವ್ಯವಸ್ಥೆಗೊಳಿಸುವ ಪಾರಂಪರಿಕ ಅನುಕರಣೆಯ ಮೋಹ ಕಳೆದುಕೊಳ್ಳಲು ಅವರಿಗೆ ಸಾಧ್ಯವಾಗಿಲ್ಲ ಎಂದು ದೂರುತ್ತಾರೆ. ಅಧ್ಯಕ್ಷರ ನಿವಾಸವನ್ನೇ ತೆಗೆದುಕೊಳ್ಳಿ ಖಾದಿ ಕುಟೀರವೊಂದನ್ನು ಮಾತ್ರ ನಾನು ಬಯಸಿದ್ದೆ. ಆದರೆ ಖಾದಿ ಅರಮನೆಯನ್ನು ನನಗಾಗಿ ನಿರ್ಮಿಸುವ ಮೂಲಕ ನನಗೆ ಅವಮಾನ ಪಡಿಸಲಾಗಿದೆ. ಎಂದು ತಮ್ಮ ಅಸಂತೋಷವನ್ನು ಹೊರಗೆಡಹುತ್ತಾರೆ. ಉತ್ತಮ ಹಾಗೂ ಅಧಿಕ ವೆಚ್ಚವಿಲ್ಲದ ಸೌಲಭ್ಯಗಳನ್ನು ಹೇಗೆ ಪಡೆಯ ಬಹುದೆಂಬುದನ್ನೂ ಅವರು ತಿಳಿಸುತ್ತಾರೆ. ಅದಕ್ಷತೆ ಹಾಗೂ ಜಿಪುಣತನಕ್ಕೆ ಅವಕಾಶ ಕೊಡದ ಹಾಗೆಯೇ ನಾವು ಹೆಚ್ಚು ಮಿತವ್ಯಯ ಆಗಲೇಬೇಕು ಎಂಬ ಕಿವಿ ಮಾತನ್ನು ನುಡಿಯುತ್ತಾರೆ. ನಗರ ಪಾಲಿಕೆಯ ಭಂಗೀ ಜನರೊಡನೆ ಕೈಜೋಡಿಸಿ ಸ್ವಯಂಸೇವಕರು ಬ್ರಾಹ್ಮಣರೂ ಕೂಡ ನೈರ್ಮಲ್ಯ ವ್ಯವಸ್ಥೆಯನ್ನು ನಿರ್ವಹಿಸಿದ್ದುದು ಅವರ ವಿಶೇಷ ಪ್ರಶಂಸೆಗೆ ಪಾತ್ರವಾಗುತ್ತದೆ. ದೇವರು ಕೆಲವರನ್ನು ಅಸ್ಪೃಶ್ಯನಾಗಿರಿಸಿದ್ದಾನೆಂದರೆ ಅದು ಆ ದೇವರಿಗೆ ಅಪಮಾನ. ಯಾವುದೇ ವಿಶೇಷ ಜಾತಿಗಷ್ಟೇ ದೇವರು ತನ್ನ ಸಂದೇಶ ನೀಡುವುದಿಲ್ಲ ಎನ್ನುವುದು ಅವರ ಖಚಿತ ಅಭಿಪ್ರಾಯ.

ಶ್ರೀ ಮನೋಜ ಪಾಟೀಲರು ನಮಗಿತ್ತಿರುವ ಮಾಹಿತಿಯಲ್ಲಿ ನಮಗೆ ಬಹುಶಃ ತಿಳಿದಿರದಿದ್ದ ಹಲವಾರು ಕುತೂಹಲಕಾರಿ ವಿಷಯಗಳು ಬೆಳಕಿಗೆ ಬರುತ್ತವೆ. ಅಧಿವೇಶನದಲ್ಲಿ ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಪ್ರಾರ್ಥನಾ ರೂಪದಲ್ಲಿ ಹಾಡಿದರೆಂಬುದು ಗೊತ್ತಿರುವ ಸಂಗತಿ. ಹಾಗೆಯೇ ಮೊದಲ ದಿನ ಸ್ವಾಗತವು ಸ್ವಾಗತವು ಸಕಲ ಜನ ಸಂಕುಲಕೆ ಎಂಬ ಬೆಟಗೇರಿ ಕೃಷ್ಣಶರ್ಮರ ಸ್ವಾಗತ ಗೀತೆ ಮತ್ತು 'ಶಾಂತ ಕವಿ' ಸಕ್ಕರಿ ಬಾಳಾಚಾರ್ಯ ವಿರಚಿತ ನಮ್ಮದೈ ನಮ್ಮದೀ ಭಾರತ ಭೂಮಿ' ಎಂಬ ರಾಷ್ಟ್ರ ಗೀತೆಯನ್ನು ಹಾಡಲಾಗಿತ್ತು.

ಅಧಿವೇಶನದ ವೆಚ್ಚಕ್ಕೆ ಮೈಸೂರು ಸಂಸ್ಥಾನ ಉದಾರ ದೇಣಿಗೆಯನ್ನಿತ್ತಿತ್ತು. ಅಲ್ಲದೆ ಅಲ್ಲಿಯ ಆಸ್ಥಾನ ವಿದ್ವಾನ್ ವೈಣಿಕ ಶಿಖಾಮಣಿ ಶೇಷಣ್ಣನವರು ಅಧಿವೇಶನದಲ್ಲಿ ತಮ್ಮ ಅಪ್ರತಿಮ ವೀಣಾವಾದನದಿಂದ ಕಲಾರಸಿಕರ ಮನ ತಣಿಸಿದ್ದರು.

ಬೆಳಗಾವಿಯಲ್ಲಿ ಅಂದಿನ ದಿನಗಳಲ್ಲಿ ಮುದ್ರಣಾಲಯವೇ ಇರಲಿಲ್ಲ. ಪರಿಣಾಮವಾಗಿ ಕೆಲವು ಗೊತ್ತುವಳಿಗಳನ್ನು ಮುದ್ರಿಸಿ ಪ್ರತಿಗಳನ್ನು ಮುಂಚಿತವಾಗಿ ನೀಡಲು ಸಮಯಾವಕಾಶವಾಗಲಿಲ್ಲ.

ಬೆಳಗಾವಿಯ ಹೊರವಲಯದಲ್ಲಿ ರಮ್ಯ ನಿಸರ್ಗದ ನಡುವೆ 80 ಎಕರೆ ವಿಶಾಲ ಜಾಗದಲ್ಲಿ ತಲೆಯೆತ್ತಿದ್ದ ಅಧಿವೇಶನ ನಗರ 'ವಿಜಯ ನಗರ'ಕ್ಕೆ ಎಂ.ಆ್ಯಂಡ್ಎಸ್ಸೆಮ್. ರೇಲ್ವೆ ತಾತ್ಪೂರ್ತಿಕ ರೈಲು ನಿಲ್ದಾಣವನ್ನೊದಗಿಸಿತ್ತು.

ಬೆಳಗಾವಿ ನಗರದಲ್ಲಿ ನೀರು ಪೂರೈಕೆಯ ಸುವ್ಯವಸ್ಥೆ ಇರಲಿಲ್ಲ. ನಿರಂತರ ನೀರು ಪೂರೈಕೆಗಾಗಿ 50 x 50 ಚೌರಸ್ ಫೂಟು ವಿಸ್ತೀರ್ಣದ 40 ಅಡಿ ಆಳದ ಭಾವಿಯನ್ನು ತೋಡಿಸಿ 30 ಸಾವಿರ ಗ್ಯಾಲನ್ ನೀರನ್ನು ಅಲ್ಲಿ ಸಂಗ್ರಹಿಸಲಾಯಿತು. ಇದು ಇಂದು ಕಾಂಗ್ರೆಸ್ ಭಾವಿ ಎಂದು ಪ್ರಸಿದ್ಧ.

500 x 100 ರ ವಿಶಾಲವಾದ ಭೋಜನ ಗೃಹದಲ್ಲಿ ವಿವಿಧ ಪ್ರಾಂತಗಳಿಂದ ಬಂದವರಿಗೆ ತಮ್ಮ ಬಳಕೆಯ ಆಹಾರ ಸಿದ್ಧಪಡಿಸಿಕೊಳ್ಳಲು ಪ್ರತ್ಯೇಕ ಅಡುಗೆ ಕೋಣೆಗಳ ಹಾಗೂ ಅವರಿಗೆ ಖರೀದಿಸಲಾದ ದರದಲ್ಲೆ (ಉಚಿತವಲ್ಲ!) ಕಿರಾಣಿ ಸಾಮಾನುಗಳ ಪೂರೈಕೆಯ ವ್ಯವಸ್ಥೆಯಾಗಿತ್ತು.

ವಸ್ತು ಸಂಗ್ರಹಾಲಯದ ಮ್ಯೂಸಿಯಂ, ಪ್ರಾತ್ಯಕ್ಷಿಕೆ, ವ್ಯಾಪಾರ ಮತ್ತು ಆಯುರ್ವೇದ ವಿಭಾಗಗಳನ್ನು ಹೊಂದಿದ ಸ್ವದೇಶಿ ಪ್ರದರ್ಶನವೊಂದು ಅಧಿವೇಶನದ ಆಕರ್ಷಣೆಯಾಗಿತ್ತು.

ರಾಷ್ಟ್ರಹಿತ, ಜನತಾ ಜನಾರ್ಧನನ ಸೇವೆಗಳೇ ನಮ್ಮ ಏಕೈಕ ಗುರಿಯಾಗಿಸಿಕೊಂಡು, ಅದಕ್ಕಾಗಿಯೇ ಅಹರ್ನಿಶಿ ತಮ್ಮ ಜೀವ ತೇಯ್ದು ನಮ್ಮ ಹಿರಿಯ ಪೀಳಿಗೆಯ ಎಲ್ಲರ ಸಾಮೀಪ್ಯಕ್ಕೆ ನಮ್ಮನ್ನು ಕರೆದೊಯ್ದು ಅವರಿಂದ ಸ್ಫೂರ್ತಿಗೊಂಡು ನಮ್ಮ ಜೀವನವನ್ನು ನೇರ್ಪುಗೊಳಿಸಿಕೊಳ್ಳುವಂತೆ ಮಾರ್ಗದರ್ಶನ ಮಾಡುವ ಈ ಪುಸ್ತಿಕೆಯನ್ನು ಪ್ರೀತಿಯಿಂದ ಸಿದ್ಧಪಡಿಸಿ ನಮಗಿತ್ತಿರುವ ಶ್ರೀ ಮನೋಜ ಪಾಟೀಲರು ನಮ್ಮೆಲ್ಲರ ಕೃತಜ್ಞತೆಗೆ, ಅಭಿನಂದನೆಗೆ ಪಾತ್ರರಾಗಿದ್ದಾರೆ. ಈ ಪುಸ್ತಿಕೆ ಎಲ್ಲ ಕನ್ನಡಿಗರ ಅದರಲ್ಲೂ ಸಾರ್ವಜನಿಕ ವಲಯದಲ್ಲಿ ಸೇವೆ ಸಲ್ಲಿಸುತ್ತಿರುವವರ, ಕೈ ಸೇರಬೇಕೆಂಬುದೇ ನನ್ನ ಆಶಯ.

ಧಾರವಾಡ

ಪ್ರೊ. ಸಿ.ವಿ. ವೇಣುಗೋಪಾಲ

ನನ್ನ ನುಡಿ

1924 ರಲ್ಲಿ ಬೆಳಗಾವಿಯಲ್ಲಿ ಮಹಾತ್ಮಾ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಬಗ್ಗೆ ನನ್ನ ಅಜ್ಜಿ ಹಾಗೂ ಹಿರಿಯ ಸ್ವಾತಂತ್ರ್ಯಯೋಧೆಯೂ ಆಗಿದ್ದ ದಿವಂಗತ ಪದ್ಮಾವತಿಬಾಯಿ ವಾಮನರಾವ ದೇಸಾಯಿ ಬಿದರಿ (1915-1992) ಬಾಲ್ಯಾವಸ್ಥೆಯಲ್ಲಿಯೇ ನನ್ನ ಕುತೂಹಲ ಕೆರಳಿಸಿದ್ದರು. ಬರಿ ಹತ್ತು ವರ್ಷದವಳಿದ್ದ ಆಗ ಆಕೆ ತಲೆಗೆ ಕುಲಾಯಿ ಕಟ್ಟಿಕೊಂಡು ಸ್ವಯಂಸೇವಕರ ಬಿಲ್ಲೆಯನ್ನು ಎದೆಗೆ ಹಚ್ಚಿಕೊಂಡು ಠಿಳಕವಾಡಿ... ಓಡಾಡುತ್ತ 'ನಾನು ವಾಲಂಟಿ' (ವಾಲಂಟೀಯರ್) ಎಂದು ಸಂಭ್ರಮದಿಂದ ಸಂಚರಿಸಿದ್ದನ್ನು ಹೇಳುತ್ತಿದ್ದಳು.

ಎಷ್ಟು ಬಾರಿ ಕೇಳಿದರೂ ಆಕೆಯ ಸಂಭ್ರಮ ಒಂದಿನಿತೂ ಕಡಿಮೆ ಆಗುತ್ತಿರಲಿಲ್ಲ. ಗುಲಾಬಿ ಬಣ್ಣದ ಜವಾಹರಲಾಲ್ ನೆಹರೂರನ್ನು ನೋಡಿದ್ದು, ಭಾಷೆ ಅರ್ಥವಾಗದಿದ್ದರೂ ಗಾಂಧೀಜಿಯವರ ಭಾಷಣ ಕೇಳಿದ್ದು, ಆರಡಿಗೂ ಮಿಕ್ಕ ಎತ್ತರವಿದ್ದ ಮಹಮ್ಮದ ಅಲಿ, ಶೌಕತ್ ಅಲಿ ಅವರ ಕೈಗಳಿಗೆ ಜೋತು ಬಿದ್ದು ಆಟವಾಡಿದ್ದು, ಗಂಗಾಧರರಾವ ದೇಶಪಾಂಡೆ ಅವರಿಂದ ಬಣ್ಣದ ಕಲ್ಲು ಸಕ್ಕರೆ ತುಳುಕನ್ನು ಪಡೆದಿದ್ದು ಎಲ್ಲವನ್ನೂ ಹೂಬೇ ಹೂಬ ವರ್ಣಿಸುತ್ತಿದ್ದಳು. ನನ್ನ ಅಜ್ಜಿ ಇದರ ಕೊನೆಗೊಂದು ಮಾತೂ ಸೇರಿಸುತ್ತಿದ್ದಳು. ಮುಂದಿನ ವರ್ಷವೇ (1925) ತನ್ನ ಲಗ್ನವಾಗಲಿದ್ದ ಬಿದರಿ ವಾಮನರಾಯರ ಬಗ್ಗೆ ಹೇಳಿಕೊಂಡಿದ್ದು. ಅವರು ಬೆಳಿಗ್ಗೆ ಸಂಡಾಸದ ಬುಟ್ಟಿ ಮತ್ತು ಪೊರಕೆಯನ್ನು ಕೈಯಲ್ಲಿ ಹಿಡಿದುಕೊಂಡು ಹೇಸಿಗೆ ಬಳಿಯುತ್ತಿದ್ದದನ್ನು ಮುಖ ಮುಚ್ಚಿಕೊಂಡು ನಗುತ್ತಲೇ ಹೇಳುತ್ತಿದ್ದಳು.

ಸ್ವಾತಂತ್ರ್ಯ ಹೋರಾಟದ ಈ ದಂಪತಿಗಳ ಅವಿಸ್ಮರಣೀಯ ಘಟನೆಗಳ ಮೆಲುಕುಗಳೊಂದಿಗೆ ನಾನು ನನ್ನ ಬಾಳ ಪಥವನ್ನು ಸಾಗಿಸಿದ್ದೇನೆ. ವಾಮನರಾಯರನ್ನು (1900-1945) ನೋಡದಿದ್ದರೂ ಅವರ ಕರ್ಮಭೂಮಿ ಬೆಳಗಾವಿ ಜಿಲ್ಲೆಯ ಅಕ್ಕ ತಂಗೇರಹಾಳ ಗ್ರಾಮದಲ್ಲಿ 1988 ರಲ್ಲಿ ಅಜ್ಜಿಯ ಸಮ್ಮುಖದಲ್ಲಿಯೇ ನಾನು ಬರೆದ ವೀರ ವಾಮನರಾಯರು ಪುಸ್ತಕವನ್ನು ಬಿಡುಗಡೆ ಮಾಡಿಸಿದ್ದೆ.

ಸಮಕಾಲೀನರಾಗಿದ್ದ ಅಣ್ಣು ಗುರೂಜಿ ಅವರೂ ಸೇರಿದಂತೆ ಹಲವು ಅಂದಿನ ಸ್ವಾತಂತ್ರ್ಯ ಯೋಧರೂ ನೆರೆದಿದ್ದರು. ಈ ದಂಪತಿಗಳ ಬಗ್ಗೆ ಅವರಿಗಿದ್ದ ಗೌರವಾದರ ಕಂಡು ಮೂಕವಿಸ್ಮಿತನಾಗಿದ್ದೆ.

ಬೆಳಗಾವಿ ಕಾಂಗ್ರೆಸ್‌ನ ಬಗ್ಗೆ ನನ್ನ ಕುತೂಹಲ ಹೆಚ್ಚುತ್ತಲೇ ಇತ್ತು. ನಾನು ಸಂಯುಕ್ತ ಕರ್ನಾಟಕದ ಬೆಳಗಾವಿ ಜಿಲ್ಲಾ ಪ್ರತಿನಿಧಿ (1985-87) ಆಗಿದ್ದಾಗ ಈ ಅಧಿವೇಶನ ನಡೆದ ಸ್ಥಳ (ಬೆಳಗಾವಿ ಕಾಂಗ್ರೆಸ್ ರಸ್ತೆ - ಟಿಳಕವಾಡಿ ಮೊದಲನೆಯ ರೈಲ್ವೆ ಗೇಟ್ ಬಳಿಯ ಪ್ರದೇಶ) ಕಾಂಗ್ರೆಸ್ ಬಾವಿ ಇವೆಲ್ಲವನ್ನು ಕಂಡು ರೋಮಾಂಚನಗೊಂಡಿದ್ದೆ. ಜೊತೆಗೆ ಅಧಿವೇಶನದ ಕೆಲವೇ ಕಾಯ್ದಿಟ್ಟ ಫೋಟೋಗಳನ್ನು ನೋಡಿ ಖುಷಿ ಪಟ್ಟಿದ್ದೆ. ಇಷ್ಟೆಲ್ಲ ಆಗಿದ್ದರೂ ಸಹ ಮನಸ್ಸಿನ ಒಂದು ಮೂಲೆಯ ಒಳಗೆ ಅಧಿವೇಶನದ ಪುಸ್ತಕ ರೂಪದ ವಿಚಾರ ಸುಪ್ತವಾಗಿದ್ದರೂ ಜಾಗೃತಾವಸ್ಥೆಯಲ್ಲಿಯೇ ಇತ್ತು.

ದಶಕದ ಹಿಂದೆ ನಮ್ಮ ಮಾತೃ ಸಂಸ್ಥೆ ಲೋಕ ಶಿಕ್ಷಣ ಟ್ರಸ್ಟಿಗೆ ಕಾರ್ಯದರ್ಶಿ ಆಗಿ ಬಂದಿದ್ದ ಶ್ರೀ ಎಂ. ಎಚ್. ಕೌಜಲಗಿ ಅವರು 1924 ರ ಬೆಳಗಾವಿ ಅಧಿವೇಶನದ ಕೆಲವು ಮುದ್ರಿತ ವಿವರ ವರದಿಯನ್ನು ಮತ್ತು ಮುಖತಃ ಕೆಲವು ವಿಷಯಗಳನ್ನು ಬಾಯಲ್ಲಿ ತಿಳಿಸಿ ಕೊನೆಗೆ ನನ್ನ ಬೆನ್ನು ಚಪ್ಪರಿಸುತ್ತ ಒಂದು ಮಾತು ಹೇಳಿದರು. ನನ್ನ ಹಾಗೇ ನೀನೂ ಸ್ವಾತಂತ್ರ್ಯಯೋಧರ ಕುಟುಂಬದಲ್ಲಿ ಹುಟ್ಟಿದವ. ಇದನ್ನು ಪುಸ್ತಕ ರೂಪದಲ್ಲಿ ಬರೆ ಎಂದು ಹೇಳಿದರು. ಆದರೆ ಇದಾದ ಕೆಲವೇ ಕಾಲದಲ್ಲಿ ಅವರು ನಮ್ಮನ್ನಗಲಿ ಹೋಗಿದ್ದು ನನ್ನ ಮುಂದಿನ ಕಾರ್ಯಗಳಿಗೆ ದಿಗ್ಬಂಧನ ಹಾಕಿತು. ಏನೇ ಆದರೂ ಈ ಪುಸ್ತಕವನ್ನು ಬರೆಯಲೇ ಬೇಕೆಂಬ ಛಲ ಹುಟ್ಟಿದ್ದು ಎರಡು ವರ್ಷಗಳ ಹಿಂದೆ. ಕನ್ನಡದಲ್ಲಿ ಗಾಂಧೀಜಿಯವರನ್ನು ಕುರಿತು ಹಲವಾರು ಪುಸ್ತಕಗಳು ಒಂದಿದ್ದರೂ, ಅವರ ಜೀವಮಾನದ ಏಕ ಮಾತ್ರ ಅಧ್ಯಕ್ಷ ಪದವಿಯ ಬೆಳಗಾವಿ ಕಾಂಗ್ರೆಸ್‌ನ ಬಗ್ಗೆ ಪುಸ್ತಕಗಳು ಕಡಿಮೆ ಎಂದೇ ಹೇಳಬೇಕು.

ಹಲವಾರು ವಿಷಯಗಳ ಬಗ್ಗೆ ನಾನೇ ವಿಶ್ಲೇಷಣೆ ಮಾಡಿಕೊಂಡು ಅಂತಿಮವಾಗಿ ಒಂದು ನಿರ್ಧಾರಕ್ಕೆ ಬಂದೆ. ಡಿಸೆಂಬರ್ 26-27 - 1924 ರಲ್ಲಿ ಬೆಳಗಾವಿಯಲ್ಲಿ ನಡೆದ ಈ ಅಧಿವೇಶನದ ವರದಿ ಗೊತ್ತುವಳಿ ಭಾಷಣಗಳನ್ನು ಮಾತ್ರ ಕೊಡಬೇಕೆಂದು ನಿಶ್ಚಯಿಸಿದೆ. ಇದಕ್ಕೆ ಒಂದು ಕಾರಣವೂ ಇತ್ತು. ಅಂದಿನ ಎರಡು ದಿನದ ಅಧಿವೇಶನದ ವಿವರಗಳು ಸಾರ್ವಕಾಲಿಕ ವಿಷಯಗಳೇ ಆಗಿವೆ.


ಸ್ವಾತಂತ್ರ್ಯ ಬಂದಿದೆ ಎಂಬುದನ್ನು ಬಿಟ್ಟರೆ ಹಿಂದು-ಮುಸ್ಲಿಂ ಸೌಹಾರ್ದತೆ, ಭಾಷಾ ಸಾಮರಸ್ಯ, ಅಸ್ಪೃಶ್ಯತಾ ನಿವಾರಣೆ ಕಾಂಗ್ರೆಸ್ ಕಾರ್ಯಕರ್ತನ ಅರ್ಹತೆಗಳು ಹಿಂದಿನ ಧುರೀಣರ ಪಾರದರ್ಶಕತೆ ಇವೆಲ್ಲವೂ ಈ ಅಧಿವೇಶನ ನಡೆದು 90 ವರ್ಷಗಳಾಗಿ ಬಂದರೂ ಈಗಲೂ ಅವಶ್ಯಕ ಇದೆ.

ಈ ಪುಸ್ತಕದ ಬಗ್ಗೆ ನಾನಿನ್ನೂ ಆಲೋಚನೆಯಲ್ಲಿದ್ದಾಗ ಮೂರು ವರ್ಷಗಳ ಹಿಂದೆ ಬದಾಮಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮುಖ್ಯ ಅತಿಥಿಗಳಾಗಿದ್ದ ಹಾಗೂ ಈಗ ರಾಜ್ಯದ ಮಾಹಿತಿ, ಜೈವಿಕ ತಂತ್ರಜ್ಞಾನ (ಐ.ಟಿ.ಬಿ.ಟಿ.) ಮತ್ತು ವಿಜ್ಞಾನ-ತಂತ್ರಜ್ಞಾನ, ಅಂಕಿಸಂಖ್ಯೆ ಖಾತೆಗಳ ಸಚಿವರಾಗಿರುವ ಶ್ರೀ ಎಸ್.ಆರ್. ಪಾಟೀಲ ಅವರು ನನ್ನಲ್ಲಿಯ ಆತಂಕವನ್ನು ದೂರ ಮಾಡಿ ಬೆಂಬಲಿಸಿದರು. ಈ ಪುಸ್ತಕಕ್ಕೆ ಅಂದವಾದ ಮುಖಪುಟ ನಿರ್ಮಿಸಿದ ಪ್ರಿಯ ಮಿತ್ರ ಮತ್ತು ಹಿರಿಯ ಛಾಯಾಗ್ರಾಹಕ ಶಶಿ ಸಾಲಿ, ಹಾಗೂ ತರುಣ ಸಹೋದ್ಯೋಗಿ ಶ್ರೀ ಸುಶೀಲೇಂದ್ರ ಕುಂದರಗಿ, ಮುನ್ನುಡಿ ಬರೆದ ಭಾರತದ ಪ್ರಥಮ ಗವರ್ನರ್ ಜನರಲ್ ಆಗಿದ್ದ ಚಕ್ರವರ್ತಿ ರಾಜಗೋಪಾಲಾಚಾರಿ ಅವರ ಮನೆತನದವರಾದ ಹಿರಿಯ ಇಂಗ್ಲೀಷ ಪ್ರಾಧ್ಯಾಪಕ ಮತ್ತು ಸಾಹಿತಿ ಪ್ರೊ. ಸಿ.ವಿ. ವೇಣುಗೋಪಾಲ, ಅಕ್ಷರ ಜೋಡಣೆ ಮಾಡಿದ ಹುಬ್ಬಳ್ಳಿಯ ಭೂಮಿಕಾ ಪ್ರಿಂಟರ್ಸ್‌ನ ಶ್ರೀ ಮೃತ್ಯುಂಜಯ ಶಾಂತಪೂರಮಠ, ಪುಸ್ತಕದ ಬರವಣಿಗೆಯಲ್ಲಿ ಮಾರ್ಗದರ್ಶನ ನೀಡಿದ ಹಿರಿಯ ಪತ್ರಕರ್ತ ಶ್ರೀ ನಾರಾಯಣ ಘಳಗಿ, ನನ್ನ ಅಜ್ಜನವರ ಸಮಕಾಲೀನರಾಗಿದ್ದ ಸ್ವಾತಂತ್ರ್ಯವೀರ ರಾಮಚಂದ್ರ ವಡವಿ ಅವರ ಪುತ್ರ ನಿವೃತ್ತ ಮುಖ್ಯ ಇಂಜನೀಯರ್ ಬೆಳಗಾವಿಯ ಅಚ್ಯುತ ವಡವಿ ಅವರಿಗೆ ನನ್ನ ವಂದನೆ ಸಲ್ಲಿಸಲೇಬೇಕು.

ಜೂನ್ 2013

ಧಾರವಾಡ

ಮನೋಜ್ ಪಾಟೀಲ



ಮಹಾತ್ಮಾ ಗಾಂಧೀಜಿ ಬೆಳಗಾವಿ - 1924

ಪರಿವಿಡಿ



ಬೆಳಗಾವಿಯ ಕಾಂಗ್ರೆಸ್ಸಿನ 39ನೇ ಮಹಾಧಿವೇಶನ

ಪ್ರಾಸ್ತಾವಿಕ ವರದಿ

ಪ್ರಾಚೀನ ಭಾರತದ ರಾಜ್ಯಾಡಳಿತದಲ್ಲಿ ಕರ್ನಾಟಕ ಪ್ರಾಂತದ ಸ್ಥಾನ ವಿಶಿಷ್ಟವಾದುದು. ಭಾರತೀಯ ಸಂಸ್ಕೃತಿಗೆ ಹಾಗೂ ಅದರ ರಕ್ಷಣೆಗೆ ತನ್ನ ಕೊಡುಗೆ ಸಲ್ಲಿಸುವಲ್ಲಿ ಕರ್ನಾಟಕ ವಹಿಸಿದ ಪಾತ್ರ ಕಿರಿದೇನಲ್ಲ. ಚಾಲುಕ್ಯರ ಕಾಲದಿಂದ ಹಿಡಿದು ಎಂದಿಗೂ ಮರೆಯಲಾಗದ ಸಾಮ್ರಾಜ್ಯವೆಂದೇ ಖ್ಯಾತಿವೆತ್ತ ವೈಭವಯುತ ವಿಜಯನಗರ ಮಹಾ ಸಾಮ್ರಾಜ್ಯದ ಪತನದವರೆಗಿನ ಏಳುನೂರು ವರುಷಗಳ ಅವಧಿಯಲ್ಲಿ ಆರ್ಯ ಸಂಸ್ಕೃತಿಯನ್ನು ಅದು ನಶಿಸಿ ನಾಮಶೇಷವಾಗುವಂಥ ಸಂದರ್ಭಗಳು ಪ್ರಾಪ್ತವಾದಾಗಲೆಲ್ಲ ಸಂರಕ್ಷಿಸಿ, ಕಾಯ್ದುಕೊಂಡು ಬರುವಲ್ಲಿ ಕರ್ನಾಟಕ ಗುರುತರವಾದ ಪಾತ್ರ ವಹಿಸಿದೆಂಬುದು ನಮ್ಮೆಲ್ಲರಿಗೆ ಅಭಿಮಾನಾಸ್ಪದ. ಭಾರತದ ಉಳಿದ ಭಾಗಗಳಂತೆಯೇ ಕರ್ನಾಟಕವೂ ಸಹಜವಾಗಿಯೇ ಸಂಕಷ್ಟದ ಪ್ರಸಂಗಗಳನ್ನು ಎದುರಿಸಬೇಕಾಯಿತು. ಕಿಚ್ಚಿನೋಪಾದಿಯಲ್ಲಿ ಹೊತ್ತಿ ಉರಿದು, ಬಳಲಿ ಬೆಂಡಾದ ಜೀವನ ಚರ್ಯೆ, ನಾಡಿಗರಲ್ಲಿಯ ಅನೈಕ್ಯ ರಾಜಕೀಯ ಅಸ್ಥಿರತೆ, ಅರಾಜಕತೆ ಇವುಗಳು ಐರೋಪ್ಯರ ದುಸ್ಸಾಹಸಕ್ಕೆ ಅವಕಾಶ ನೀಡಿದವು.

ಆಂತರಿಕವಾಗಿ ಯಾವಾಗಲೂ ಸಂವರ್ಧನಶೀಲವಾಗಿದ್ದ ಧರ್ಮ, ಕಲೆ, ವಿಜ್ಞಾನ, ತಂತ್ರಜ್ಞಾನ ಹಾಗೂ ತತ್ವಜ್ಞಾನಗಳಲ್ಲಿಯ ಸೃಜನ ಶಕ್ತಿಯನ್ನು ಅಂದು ಅದು ಕುಂದುವಂತೆ ಮಾಡಿತು. ಕರ್ನಾಟಕವು ನಂತರ ಹಲವಾರು ತುಂಡುಗಳಾಗಿ ಒಡೆದು ಹೋದುದು ಈ ಅನಿಷ್ಟ ಪರಿಣಾಮಗಳನ್ನು ಇನ್ನೂ ಗಣನೆಗೆ ನಿಲುಕದಷ್ಟು ಭೀಕರಗೊಳಿಸಿತು. ಕಳೆದ ಒಂದು ದಶಕದಿಂದಷ್ಟೇ ಕರ್ನಾಟಕ ಏಕೀಕರಣದ ಆಂದೋಲನ ನಡೆಯುತ್ತಿದೆ. ಇದೇ ಕಾಲದಲ್ಲಿ

ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ತನ್ನ ಘಟನೆಗನುಗುಣವಾಗಿ ನಾಗಪುರದಲ್ಲಿ ಸೇರಿದ ಅಧಿವೇಶನದಲ್ಲಿ ಭಾಷಾವಾರು ಪ್ರಾಂತ ರಚನೆ ಕೋರುವ ಗೊತ್ತುವಳಿಯನ್ನು ಅಂಗೀಕರಿಸಿದೆ. ಹೀಗಾಗಿ 1921 ರಿಂದ ರಾಷ್ಟ್ರೀಯ ಮಹತ್ವದ ವಿದ್ಯಮಾನಗಳಲ್ಲಿ ಎಲ್ಲ ಭಾಗಗಳಂತೆಯೇ ಕನ್ನಡಿಗರೆಲ್ಲರನ್ನು ಒಳಗೊಂಡ ಕರ್ನಾಟಕವು ಪ್ರಾಂತೀಯ ಮಟ್ಟದ ಮಹತಿಯ ಸ್ಥಾನಮಾನದ ಅಂಗೀಕಾರವನ್ನು ಪಡೆದು ಕಾರ್ಯ ನಿರ್ವಹಿಸತೊಡಗಿದೆ.

ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಮೊಟ್ಟ ಮೊದಲ ಬಾರಿಗೆ 1924 ರ ಡಿಸೆಂಬರ್‌ನಲ್ಲಿ ತನ್ನ ಮಹಾಅಧಿವೇಶನವನ್ನು ಕರ್ನಾಟಕದಲ್ಲಿ ನಡೆಸಿದೆ. ಬ್ರಿಟಿಷ ಆಡಳಿತದ ಕೇವಲ ಏಳು ಜಿಲ್ಲೆಗಳ ಸ್ವಲ್ಪ ಕ್ಷೇತ್ರ, ರಾಜಕೀಯ ಜಾಗೃತಿಯ ಚಟುವಟಿಕೆಗಳಿಗೆ ಕಿಂಚಿತ್ತೂ ಅವಕಾಶವಿಲ್ಲದ ಹಲವಾರು ಬೇರೆ ಬೇರೆ ಚಿಕ್ಕ ದೊಡ್ಡ ಸಂಸ್ಥಾನಿಕರ ಆಡಳಿತಕ್ಕೊಳಪಟ್ಟ ವಿಶಾಲ ಪ್ರದೇಶ ಇವುಗಳನ್ನು ಒಳಗೊಂಡ ಕರ್ನಾಟಕವು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಮಹಾಧಿವೇಶನ ನಡೆಸುವಂತೆ ಆಮಂತ್ರಣ ನೀಡಿ, ಅಂಥ ದೊಡ್ಡ ಹೊಣೆ ಹೊತ್ತುಕೊಂಡು ನಡೆಸಿದುದು ಸಣ್ಣ ಸಾಹಸವೇನಲ್ಲ. ಆದರೂ ಈ ಕಾಂಗ್ರೆಸ್ ಅಧಿವೇಶನದ ಬಗ್ಗೆ ಎಲ್ಲೆಡೆ ದೊರೆತ ಉತ್ಸಾಹದ ಪ್ರತಿಸ್ಪಂದನ ವಿಶೇಷವಾದುದು ಅಪರಂಪಾರವಾದುದು. ಕನ್ನಡ ಭಾಷಿಕರಿರುವ ಎಲ್ಲ ಜಿಲ್ಲೆಗಳು, ಸಂಸ್ಥಾನಗಳು ಹಾಗೂ ವಿಶೇಷವಾಗಿ ಮೈಸೂರು ಸಂಸ್ಥಾನ ಆಡಳಿತವು ಅಧಿವೇಶನದ ಉದ್ದೇಶಕ್ಕಾಗಿ ದೇಣಿಗೆ ಕೋರಲಾದ ಸ್ವಾಗತ ಸಮಿತಿಯ ಮನವಿಗೆ ತುಂಬು ಹೃದಯದ ಪ್ರತಿಕ್ರಿಯೆ, ಉದಾರ ದೇಣಿಗೆ ನೀಡಿವೆ.

ಬೆಳಗಾವಿಯಲ್ಲೇ ಏಕೆ?

ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನ ಸೇರಿಸುವುದಕ್ಕೆ ಒಂದು ಸೂಕ್ತವಾದ ಸ್ಥಳವನ್ನು ಆಯ್ಕೆ ಮಾಡಲು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ 1924 ರ ಮಾರ್ಚದಲ್ಲಿ ಸಭೆ ಸೇರಿತ್ತು ಅನೇಕ ಸ್ಥಳಗಳು ಸ್ಪರ್ಧಾತ್ಮಕವಾಗಿ ಸೂಚಿಸಲ್ಪಟ್ಟರೂ ಕೊನೆಗೆ ಬೆಳಗಾವಿಯನ್ನು ಆಯ್ಕೆ ಮಾಡಲಾಯಿತು. ಬೆಳಗಾವಿ ಅಷ್ಟೇನೂ ದೊಡ್ಡ ನಗರವಲ್ಲ. ಹೆಚ್ಚು ಜನಸಂಖ್ಯೆಯನ್ನು ಹೊಂದಿದುದಲ್ಲ. ಆದರೂ ಈ ಮಹಾಧಿವೇಶನ ನಡೆಸುವುದಕ್ಕೆ ಎಲ್ಲ ಅನುಕೂಲತೆಗಳನ್ನು ಸಾಧನ - ಸಂಪನ್ಮೂಲಗಳನ್ನು ಹೊಂದಿದೆ. ಎಲ್ಲರಿಗೂ ಸಮಾಧಾನಕರವೆನಿಸುವಂತೆ ಸೌಲಭ್ಯಗಳನ್ನು ಏರ್ಪಾಟು ಮಾಡಲು ಶಕ್ತವಿದೆ. ಇದಕ್ಕೂ ಹೆಚ್ಚಾಗಿ ರಾಷ್ಟ್ರದ ಇತ್ತೀಚಿನ ರಾಜಕೀಯ ಚಟುವಟಿಕೆಗಳಲ್ಲಿ ಬೆಳಗಾವಿ ಮಹತ್ವದ ಪಾತ್ರ ವಹಿಸುತ್ತ ಬಂದಿದೆಂದು ನಾವು ಅಭಿಮಾನಪೂರ್ವಕವಾಗಿ ಆದರೆ ವಿನಮ್ರತೆಯಿಂದ ಹೇಳಬಯಸುತ್ತೇವೆ. 1916 ರಲ್ಲಿ ಹದಿನಾರನೆಯ ಮುಂಬಯಿ ಪ್ರಾಂತೀಯ ಕಾಂಗ್ರೆಸ್ ಅಧಿವೇಶನ ನಡೆದುದು ಬೆಳಗಾವಿಯಲ್ಲೇ. ಅದೇ ಕಾಲದಲ್ಲಿ ಕಾಂಗ್ರೆಸ್ಸಿನಲ್ಲಿಯ ಮಂದಗಾಮಿಗಳು ಹಾಗೂ ಉಗ್ರ ರಾಷ್ಟ್ರೀಯವಾದಿಗಳು ತಮ್ಮ ಏಕತೆಗೆ ಭದ್ರ ಬುನಾದಿ

ಹಾಕಿಕೊಂಡರು. ನಂತರ ಲಖನೌದಲ್ಲಿಯ ಧ್ವಜದ ಮಹಾಧಿವೇಶನದಲ್ಲಿ ಎರಡೂ ಗುಂಪುಗಳೂ ಕಾಂಗ್ರೆಸ್ಸಿನ ಒಂದೇ ಸೂರಡಿ ಬೆರೆತು ಕಾರ್ಯ ಮಾಡತೊಡಗಿದವು. ಲೋಕಮಾನ್ಯ ಬಾಳಗಂಗಾಧರ ಟಿಳಕರು 1916 ರಲ್ಲಿ ಭಾರತದ ಹೋಮ್‌ರೂಲ್‌ಲೀಗ್ ಸ್ಥಾಪಿಸಿದುದು ಬೆಳಗಾವಿಯಲ್ಲೇ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಈಗಾಗಲೇ ಪ್ರಸ್ತಾಪಿತವಾದ ತನ್ನ ಸಭೆಯಲ್ಲಿ ಸ್ವಾಗತ ಸಮಿತಿಯನ್ನು ರಚಿಸಿತ್ತು. ಮರುದಿನವೇ ಆ ಸಮಿತಿಯು ಸಭೆ ಸೇರಿ ಪದಾಧಿಕಾರಿಗಳ ನೇಮಕ ಮಾಡಿತು. ಅಗಸ್ಟದಲ್ಲಿ ಸ್ವಾಗತ ಸಮಿತಿ ಮತ್ತೆ ಸಭೆ ಸೇರಿ ಪದಾಧಿಕಾರಿಗಳ ನೇಮಕವನ್ನು ಅಂತಿಮಗೊಳಿಸಿತು. ಕಾರ್ಯಕಾರೀ ಮಂಡಳ ಹಾಗೂ ವಿವಿಧ ಉಪ ಸಮಿತಿಗಳನ್ನು ನೇಮಿಸಲಾಯಿತು. 16 ಉಪ ಸಮಿತಿಗಳು ಸ್ವಾಗತಾಧ್ಯಕ್ಷ ಸಮಿತಿಯ ಬೇರೆ ಬೇರೆ ಕಾರ್ಯಗಳ ನಿರ್ವಹಣೆಯ ಹೊಣೆಯನ್ನು ಹೊತ್ತುಕೊಂಡವು. ಸ್ವಾಗತ ಸಮಿತಿಯ ಕಾರ್ಯದರ್ಶಿ ಇವರು ಎಲ್ಲ ಉಪ ಸಮಿತಿಗಳಲ್ಲಿ ಪದನಿಮಿತ್ತ ಸದಸ್ಯರಾದರು.

39ನೇ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ

ಪರಿಶಿಷ್ಟ ಒಂದು

ಸ್ವಾಗತ ಸಮಿತಿ ಹಾಗೂ ವಿವಿಧ ಉಪಸಮಿತಿಗಳ ಸದಸ್ಯರು

ಸ್ವಾಗತಾಧ್ಯಕ್ಷರು. ಶ್ರೀಯುತ ಗಂಗಾಧರರಾವ್ ದೇಶಪಾಂಡೆ

ಉಪಾಧ್ಯಕ್ಷರು ಸರ್ವಶ್ರೀ ಡಿ.ವಿ. ಬೆಳವಿ, ರಘುನಾಥರಾವ್ ಸರಾಫ, ನೂರಂದಪ್ಪಣ್ಣಾ ಶೆಟ್ಟಿ, ವಾಮನರಾವ್ ಕಲಘಟಗಿ, ಮೌಲವಿ ಕುತುಬುದ್ದೀನ್, ರಾಮರಾವ್ ಮಾನೆ, ಜ್ಯೋತಿಬಾ ಉರ್ಫ ಭಾವೂ ಸಾಹೇಬ ಪಿರಾಳಿ, ವಿನಯ ಕಲಾಲ್, ಬಿ.ಜೋಶಿ, ನರಪಾಲ್ ವಸಾಯ, ವ್ಹಿ.ಎನ್.ಜೋಗ್, ಕಾರ್ನಾಡ ಸದಾಶಿವರಾಯರು, ಕಲ್ಯಾಣಪುರ ರಾಮು ರಾಮರಾವ್, ಹೊಸಕೊಪ್ಪ ಕೃಷ್ಣರಾವ್, ರಾಮದಾಸ ದರ್ಬಾರ್, ದಿವಾನಸಾಬ ಜಾನವೇಕರ, ನೀಲಕಂಠಪ್ಪ ಸುಗಂಧಿ, ಬಿ. ಭೀಮರಾವ್, ಜೆ.ಎ. ಸಾಲ್ಡಾನಾ.

ಪ್ರಧಾನ ಕಾರ್ಯದರ್ಶಿಗಳು : ಮಧ್ವರಾವ್ ಕೆಂಭಾವಿ, ಬಿ.ಬಿ. ಪೋತದಾರ, ಎಸ್. ಎಲ್. ಸೋಮಣ್ಣ

ಲೆಕ್ಕ ತಪಾಸಿಗರು : ಸಿದ್ದುರಾವ್ ಪೂಜಾರಿ, ಆಡಿಟರ ಕೆ.ಪಿ.ಸಿ.ಸಿ.

ಕೋಶಾಧ್ಯಕ್ಷರು : ನಾಗೇಶರಾವ್ ಹೆರೇಕರ, ವಿರುಪಾಕ್ಷ ದೇಶಪಾಂಡೆ.

1) ಹಣಕಾಸು ಸಮಿತಿ :

ಡಿ.ವ್ಹಿ. ಬೆಳವಿ (ಕಾರ್ಯದರ್ಶಿ), ಸದಸ್ಯರು ವ್ಹಿ.ಎನ್. ಜೋಗ, ವಾಸುದೇವರಾವ್ ಕಲಹಳ್ಳಿ, ರಾಮಣ್ಣ ನಾಯಕ, ಬಿ. ಭೀಮರಾವ್, ಹೊಸಕೊಪ್ಪ ಕೃಷ್ಣರಾವ್, ಕಾರ್ನಾಡ ಸದಾಶಿವರಾಯರು, ಬಿ. ನಾಗಭಟ್ಟ, ಆರ್.ಎ. ಜಾಗೀರದಾರ, ಡಾ.ಯು. ರಾಮರಾವ್, ಡಾ. ಹುಲ್ಯಾಳಕರ.

2) ಮಂಟಪ-ಅಲಂಕಾರ ಸಮಿತಿ :

ದಾದಾಸಾಹೇಬ ನರಗುಂದಕರ (ಕಾರ್ಯದರ್ಶಿ), ಸದಸ್ಯರು, ತಾತಾಚಾರ್ಯ, ಕೆ.ಎಚ್. ಮುದವೀಡುಕರ, ಕೃಷ್ಣರಾವ್ ಮಾಳಗಿ, ಎಚ್.ಜಿ. ಸಬ್‌ನೀಸ್, ಎಸ್.ಆರ್. ಪೋತದಾರ.

3) ವಸತಿ ಸಮಿತಿ :

ಎನ್.ಎಸ್. ನರಗುಂದಕರ (ಕಾರ್ಯದರ್ಶಿ), ಸದಸ್ಯರು, ಎ.ಬಿ. ಕಂಕಣವಾಡಿ, ಎಚ್.ನಾರಾಯಣರಾವ್, ಗೋವಿಂದರಾವ್ ಮಾಸೂರ, ರಾಜಾರಾಮ ಪಂತ ಕೇಳಕರ, ಜಿ.ಎನ್. ಠಾಣೇದಾರ, ವಿಠಲರಾವ್ ಜೋಶಿ,

4) ನೀರು ಪೂರೈಕೆ ಸಮಿತಿ :

ಅನಂತರಾವ್ ಕಲಮದಾನಿ (ಕಾರ್ಯದರ್ಶಿ), ಸದಸ್ಯರು, ವಾಮನರಾವ್ ಘಾತರಘೇಕರ, ವಿಶ್ವನಾಥರಾವ್ ನಾತು, ಜಿ.ಡಿ. ತಿಸ್ನೈಕರ.

5) ಭೋಜನೋಪಹಾರ ಸಮಿತಿ :

ವಾಮನರಾವ್ ಕಾನಡೆ (ಕಾರ್ಯದರ್ಶಿ), ಸದಸ್ಯರು, ಕೆ.ಎಸ್. ದೇಶಪಾಂಡೆ, ಹನುಮಂತರಾವ್ ದೇಶಪಾಂಡೆ, ಅನಂತರಾವ್ ಜಾಲಿಹಾಳ, ಶ್ರೀನಿವಾಸರಾವ್ ಮುಗುಳಿ, ವಾಯ್.ವ್ಹಿ. ಧಾರವಾಡಕರ, ನಾರಾಯಣರಾವ್ ದಾತಾರ, ಬಾಳಕೃಷ್ಣರಾವ್ ಹಿಡಕಲ್, ನಾರಾಯಣ ಗೋವಿಂದ ನಾಯಕ, ನೂರುಂದಪ್ಪಣ್ಣಾ ಶೆಟ್ಟಿ, ತವನಪ್ಪ ಅವಲಕ್ಕಿ, ವಾಮನಕಾಕಾ ಸಂಕೇಶ್ವರ, ಬಳವಂತರಾವ್ ನಾತು, ಗಂಗಾಧರ ಅನಂತ ಹುಕ್ಕೇರಿ.

6) ದೀಪಗಳ ವ್ಯವಸ್ಥೆ ಸಮಿತಿ :

ವ್ಹಿ. ವಾಯ್. ಗಾವಡೆ (ಕಾರ್ಯದರ್ಶಿ), ಸದಸ್ಯರು, ಶಂಕರರಾವ್ ಪರೂಳಕರ, ನಿಂಗಪ್ಪ ಚವ್ಹಾಣ, ಜಿ.ವಿ. ಯಾಳಗಿ.

7) ಸ್ಟೇಶನ್ ಹಾಗೂ ವಾಹನ ಮಾಪಾರ್ಟು ಸಮಿತಿ :

ಡಾ. ಗಿಂಡೆ (ಕಾರ್ಯದರ್ಶಿ), ಸದಸ್ಯರು, ಬಾಪೂಸಾಹೇಬ ಛತ್ರೆ, ಎಸ್.ಡಿ. ಮರಾಠೆ, ಬಿ.ಎಸ್. ದಾತಾರ, ಸಹಸ್ರ ಬುದ್ಧೆ.

8) ಸ್ವಯಂ ಸೇವಕ ಸಮಿತಿ :

ಡಾ. ನಾ.ಸು. ಹರ್ಡಿಕರ (ಕಾರ್ಯದರ್ಶಿ), ಸದಸ್ಯರು, ಕಾರ್ನಾಡು ಸದಾಶಿವರಾಯರು, ರಾಮರಾವ್ ಶೇವಡೆ, ಡಿ. ಆರ್. ಠಾಕೂರ, ಎಸ್. ಕೊಪ್ಪಳ, ಆರ್.ಕೆ. ಜೋಗಳೇಕರ.

9) ನೈರ್ಮಲ್ಯ ಸಮಿತಿ :

ಡಾ. ಕೊಳಕರ (ಕಾರ್ಯದರ್ಶಿ) ಸದಸ್ಯರು, ವ್ಹಿ.ಎಂ. ಬಾಕ್ರಾ

10) ವೈದ್ಯಕೀಯ ಸಮಿತಿ :

ಡಾ. ಸವಣೂರ (ಕಾರ್ಯದರ್ಶಿ) ಸದಸ್ಯರು, ಬಾಕ್ರೆ, ಹುಯಿಲಗೋಳ, ಉಮಚಗಿ, ರಾನಡೆ, ಜಠಾರ, ಶಿರಹಟ್ಟಿ

11) ಪ್ರದರ್ಶನ ಸಮಿತಿ :

ಎಚ್.ಎಸ್. ಕೌಜಲಗಿ (ಕಾರ್ಯದರ್ಶಿ), ಸದಸ್ಯರು, ಎನ್.ಆರ್. ಕೆಂಭಾವಿ, ಹೊಸಕೊಪ್ಪ ಕೃಷ್ಣರಾವ್, ವ್ಹಿ ಎಸ್. ಕೊಣ್ಣೂರ, ಡಾ. ಸವಣೂರ, ಎನ್. ಎಚ್. ಡಂಬಳ, ವಾಮನರಾವ್, ದೇಸಾಯಿ ಬಿದರಿ, ಫಾತರ್‌ಫೇಕರ, ಶಂಕರರಾವ್ ಶಿರಗಾಂವಕರ.

12) ತಿಕೀಟುಗಳ ಸಮಿತಿ :

ರಾಜಾರಾಮ ಸಂತ ಕೀಳಕರ (ಕಾರ್ಯದರ್ಶಿ) ಸದಸ್ಯರು, ಡಾ. ವ್ಹಿ. ಎನ್. ಠಾಣೇದಾರ, ಶ್ರೀನಿವಾಸರಾವ್ ದೇಶಪಾಂಡೆ, ಕೆ.ಜಿ. ಕುರುಂದರವಾಡಕರ, ವ್ಹಿ.ಬಿ. ದೇಶಪಾಂಡೆ, ಜಿ.ಜಿ. ಗುತ್ತಲ, ಉಲ್ಲಾಳ ಸಂಜೀವರಾವ್ ಸವಣೂರ, ಜಿ.ವ್ಹಿ. ಯಾಳಗಿ, ಆರ್.ಎಸ್. ನಾಯಕ.

13) ಸಂಗೀತ ಸಮಿತಿ :

ಕೆ.ಎಚ್. ಮುದವೀಡಕರ (ಕಾರ್ಯದರ್ಶಿ), ಸದಸ್ಯರು, ಟಿ.ವ್ಹಿ. ರಾಮಸ್ವಾಮಿ ಅಯ್ಯಂಗಾರ, ಟಿ.ತಾತಾಚಾರ್ಯ, ಸದಾಶಿವರಾವ್ ಗರೂಡ.

14) ಪ್ರಚಾರ ಸಮಿತಿ :

ಡಿ.ಕೆ. ಭಾರದ್ವಾಜ್ (ಕಾರ್ಯದರ್ಶಿ), ಸದಸ್ಯರು, ಕೆ.ಎಚ್. ಮುದವೀಡಕರ, ಪಿ.

ಶ್ರೀನಿವಾಸ ಉಪಾಧ್ಯಾಯ, ಟಿ.ಬಿ. ಪುರೋಹಿತ, ನಾರಾಯಣರಾವ್ ದಾತಾರ, ಕೃಷ್ಣಾಜಿ ಹರಿ ದೀಕ್ಷಿತ, ಮಂಗಳ ವೇಢೇಕರ, ಎಸ್. ಆರ್. ಪೋತದಾರ

15) ಉಗ್ರಾಣ ಸಮಿತಿ :

ವಾಮನರಾವ್ ಕಲಘಟಗಿ (ಕಾರ್ಯದರ್ಶಿ), ಸದಸ್ಯರು, ಗೋವಿಂದಪ್ಪ ಕುಷ್ಟಗಿ, ರಾಮರಾವ್ ಶೇವಡೆ, ಗೋವಿಂದರಾವ್ ಹನುಮಶೇಟ, ಎಲ್.ವ್ಹಿ. ದೇಶಪಾಂಡೆ, ಜಿ.ವ್ಹಿ. ಪಾಟಣೇಕರ, ಮುಕುಂದ ತುಕ್ಕಪ್ಪ ಪಾಟೀಲ, ಬಿ.ಆರ್. ಕೆಂಭಾವಿ, ಪಿ. ಭೀಮರಾವ್, ಡಿ.ಸಿ. ಕೊಲ್ಲಾಪೂರೆ, ಲಕ್ಷ್ಮೀದಾಸ ಹಿರಜೀಕೋಠ, ಉರ್ಫ ಕಾಕುಶೇಠ, ನರಸಿಂಗಸಾ ಶಾಲಗಾರ, ವಾಯ್. ಎನ್. ಕಾಮತ, ರಾಮರಾವ್ ಮಾನೆ, ವ್ಹಿ. ಎಂ. ಬಾಕ್ರೆ, ನರಸಿಂಗರಾವ್ ದೇಸಾಯಿ, ಪರಪ್ಪಣ್ಣ ಕಿತ್ತೂರ.

16) ಕಾರ್ಯ ಸಮಿತಿ :

ಜಿ.ಪಿ.ದೇಶಪಾಂಡೆ (ಕಾರ್ಯದರ್ಶಿ), ಸದಸ್ಯರು, ಕೃಷ್ಣರಾವ್ ಯಾಳಗಿ, ಲಕ್ಷ್ಮೀದಾಸ ಹಿರಜೀಸೇಠ, ಗಜಾನನರಾವ್ ಶಿವ ಕಾಮತ, ವಿ.ವಾಯ್ ಗಾವಡೆ, ಗೋಪಾಳರಾವ್ ದೇಶಪಾಂಡೆ, ಎಸ್.ಎನ್. ಸಾವುಂತ, ಶಂಕರರಾವ್ ಶಶಿತಾಳ, ಶಂಕರರರಾವ್ ಪರೋಳಕರ, ಭೀರಾಜಿ ಮಹಾದೇವ ಶೆಟ್ಟಿ, ಖೇಮಣ್ಣಾ ಗೋಡಸೆ, ಬಂಡೋರಾಮ ಚಂದ್ರ ಕುಲಕರ್ಣಿ.

ಪರಿಶಿಷ್ಟ ಎರಡು

ಅಧಿವೇಶನದ ವಿಷಯ ನಿಯಾಮಕ ಸಮಿತಿಯಲ್ಲಿ ಭಾಗವಹಿಸಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರು ಹಾಗೂ ನೇತಾರರು.

ಪದನಿಮಿತ್ತ ಸದಸ್ಯರು : ಮಹಾತ್ಮಾ ಗಾಂಧೀಜಿ, ಚಿತ್ತರಂಜನದಾಸ, ಪಂ. ಮೋತಿಲಾಲ ನೆಹರು, ಲಾಲಾ ಲಜಪತರಾಯ್, ಮೌಲಾನಾ ಅಬ್ದುಲ್ ಕಲಾಮ್ ಆಜಾದ, ಮೌಲಾನಾ ಮೊಹಮ್ಮದ್ ಅಲಿ, ಸೇಠ ಕೀವಾ ಶಂಕರ, ಜಗಜೀವನ ಝುವೇರಿ, ಜಮ್ನಾಲಾಲ ಬಜಾಜ, ಶೋಯಬ್ ಕುರೇಶಿ, ಬಿ. ಎಫ್, ಭರೂಚಾ, ಪಂ. ಜವಾಹರಲಾಲ ನೆಹರು, ಕರ್ನಾಟಕದಿಂದ ವ್ಹಿ.ಎನ್. ಜೋಗ, ಎಚ್. ನಾರಾಯಣರಾವ್, ಎಂ. ಆರ್. ಕೆಂಭಾವಿ, ಬಿ. ಭೀಮರಾವ್ ಜಲಿ, ಆರ್.ಕೆ. ಶೇವಡೆ, ಎಸ್. ಎನ್. ಎಂ. ರಝುಮಿ, ಎಂ. ಆರ್. ಕಬ್ಬೂರ, ಡಾ. ವ್ಹಿ. ಎಸ್. ಉಮಚಗಿ, ಡಾ. ನಾ.ಸು. ಹರ್ಡಿಕರ

ಪರಿಶಿಷ್ಟ ಮೂರು

ಅಧಿವೇಶನಕ್ಕೆ ಕರ್ನಾಟಕದಿಂದ ಅಂದರೆ ಕನ್ನಡ ಭಾಷಿಕ ಪ್ರದೇಶಗಳಿಂದ ಬಂದು ಭಾಗವಹಿಸಿದ ಚುನಾಯಿತ ಪ್ರತಿನಿಧಿಗಳು 230 ಮಂದಿ. ಇವರಷ್ಟೇ ಅಲ್ಲದೇ 320 ಕನ್ನಡಿಗರು ಅಧಿಕೃತ ಸದಸ್ಯರಾಗಿ ಭಾಗವಹಿಸಿದ್ದರು.

ಅಜಮೀರ, ಮೇವಾಡ, ಆಂಧ್ರ, ಆಸಾಮ, ಬಿಹಾರ, ಬಂಗಾಲ, ಮುಂಬಯಿ, ಬ್ರಹ್ಮದೇಶ, ಮಧ್ಯಪ್ರಾಂತ ಹಿಂದಿ ಹಾಗೂ ಮರಾಠಿ ವಿಭಾಗ, ದಿಲ್ಲಿ, ಗುಜರಾಥ, ಕೇರಳ, ತಮಿಳ್ನಾಡ, ಮಹಾರಾಷ್ಟ್ರ, ಪಂಜಾಬ, ಸಿಂಧ, ಸಂಯುಕ್ತ ಪ್ರಾಂತ, ಉತ್ಕಲ ಇವುಗಳ ಪ್ರತಿನಿಧಿಗಳು ಸೇರಿ ಒಟ್ಟು 6234 ಚುನಾಯಿತ ಪ್ರತಿನಿಧಿಗಳು, 1844 ಇತರ ಪ್ರತಿನಿಧಿಗಳು ಭಾಗವಹಿಸಿದ್ದರು.

ಏರ್ಪಾಡುಗಳು

ಬೆಳಗಾವಿ ನಗರದ ಹೊರಗಡೆ ನಿಸರ್ಗ ರಮ್ಯವಾದ 80 ಎಕರೆ ವಿಶಾಲ ಭೂ ಪ್ರದೇಶವನ್ನು ಅಧಿವೇಶನಕ್ಕೆಂದು ಸ್ವಾಗತ ಸಮಿತಿಯು ಆಯ್ಕೆ ಮಾಡಿತು. ಒಂದೆಡೆ ನಿಸರ್ಗ ರಮಣೀಯ ವಾತಾವರಣ, ಗ್ರಾಮೀಣ ಸುಂದರ ಪರಿಸರ, ಇನ್ನೊಂದೆಡೆ ಆಧುನಿಕ ನಗರ ಜೀವನದ ಎಲ್ಲ ಸಾಧನ ಅನುಕೂಲತೆಗಳ ಲಭ್ಯತೆ ಹೀಗೆ ಎಲ್ಲವನ್ನು ಹೊಂದಿದ ಅಧಿವೇಶನದ ಈ ಪರಿಸರಕ್ಕೆ ಕರ್ನಾಟಕದ ಮಹಾ ಸಾಮ್ರಾಜ್ಯವನ್ನು ಸ್ಮರಣೆಗೆ ತಂದುಕೊಟ್ಟು ಅಭಿಮಾನ ಉತ್ಸಾಹಗಳನ್ನು ಚಿಮ್ಮುವಂತೆ ಮಾಡುವ **ವಿಜಯ ನಗರ** ಎಂಬ ಸಾರ್ಥಕ ಐತಿಹಾಸಿಕ ಮಹತ್ವದ ಹೆಸರಿನ್ನಿರಿಸಲಾಯಿತು. ಈ ವಿಜಯನಗರದಲ್ಲಿ ಸ್ವಾಗತ ಸಮಿತಿ ಇವೆಲ್ಲ ಏರ್ಪಾಟುಗಳನ್ನು ಮಾಡಿತ್ತು.

1. ಬೃಹತ್ ಸಭಾ ಮಂಟಪ :

ಕಾಕಿನಾಡಾದಲ್ಲಿ ಜರುಗಿದ ಕಾಂಗ್ರೆಸ್ ಮಹಾಧಿವೇಶನಕ್ಕಾಗಿಯೆಂದೇ ಅಲ್ಲಿಯ ಸ್ವಾಗತ ಸಮಿತಿಯು ಕಲಕತ್ತೆಯ ಮೆಸರ್ಸ್ ಎ.ಎನ್. ಮುಖರ್ಜಿಯವರಿಂದ ಮಾಡಿಸಿದ್ದ ನಂತರ, ಕಾಂಗ್ರೆಸ್ ಅಧಿವೇಶನಗಳಿಗೋಸ್ಕರ ವೆಂದೇ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಿಂದ ಖರೀದಿಸಲಾದ ಬೃಹತ್ ಖಾದಿ ಬಟ್ಟೆಯ ಸಭಾ ಮಂಟಪವನ್ನು ನಿಯೋಜಿತ ಬೆಳಗಾವಿ ಮಹಾಧಿವೇಶನದ ಸ್ವಾಗತ ಸಮಿತಿ ಬಾಡಿಗೆಗೆ ಪಡೆದುಕೊಂಡಿತ್ತು. ಖಾದಿ ಬಟ್ಟೆಗಳನ್ನೇ ಬಳಸಿ ನಿರ್ಮಿಸಲಾದ ಈ ಬೃಹತ್ ಸಭಾ ಮಂಟಪವನ್ನು ಅತ್ಯಂತ ಸುಂದರವಾಗಿ ಅಲಂಕೃತಗೊಳಿಸಲಾಗಿತ್ತು. ವೇದಿಕೆಯ ಬಳಿ ಮಧ್ಯದಲ್ಲಿ ರಾಷ್ಟ್ರ ಸೇವೆಯಲ್ಲೇ ಹೆಸರು ಗಳಿಸಿದ ಲೋಕಮಾನ್ಯ ಬಾಳಗಂಗಾಧರ ಟಿಳಕ ಹಾಗೂ ಮಹಾತ್ಮಾ ಗಾಂಧೀಜಿಯವರ ಪೂರ್ಣ

ದೇಹಾಕೃತಿಯ ಬೃಹತ್ ಭಾವ ಚಿತ್ರಗಳನ್ನು ನಿಲ್ಲಿಸಲಾಗಿತ್ತು. ಸುತ್ತಲೂ ಎಲ್ಲ ಬದಿಗಳಲ್ಲಿ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿರಿಸಿ ಪ್ರಸಿದ್ಧರಾಗಿರುವ ಅನೇಕ ದೇಶಭಕ್ತರ ಚಿತ್ರಗಳನ್ನು ಪ್ರದರ್ಶಿಸಲಾಗಿತ್ತು. ಕಳೆದ ಮೂರು ವರ್ಷಗಳಿಂದ ನಡೆದು ಬಂದ ಕ್ರಮವನ್ನು ಅನುಸರಿಸಿ ಸಂದರ್ಶಕರನ್ನು ಹೊರತು ಪಡಿಸಿ ಎಲ್ಲ ಪ್ರತಿನಿಧಿಗಳಿಗೆ ಕುಳಿತುಕೊಳ್ಳಲು ನೆಲದ ಮೇಲೆ ಚಾಪಿ ಕಂಬಳಿಗಳನ್ನು ಹಾಸಲಾಗಿತ್ತು. ಸಂದರ್ಶಕರಿಗಾಗಿ ಸಭಾ ಮಂಟಪದಲ್ಲಿ ಕೂಡ್ರಲು ಎಲ್ಲೆಡೆ ಕಟ್ಟಿಗೆ ಫಳಿಗಳನ್ನು ವ್ಯವಸ್ಥೆಗೊಳಿಸಲಾಗಿತ್ತು.

ಸಭಾ ಮಂಟಪದ ಎದುರು, ಮಧ್ಯದಲ್ಲಿ ಅಮೃತ ಶಿಲೆಗಳಿಂದ ಸುಂದರವಾದ ಕಾರಂಜಿಯನ್ನು ನಿರ್ಮಿಸಿದ್ದು ಅದರಲ್ಲಿಂದ ನೀರು ಯಾವಾಗಲೂ ಚಿಂದವಾಗಿ ಪುಟಿಯುತ್ತ ಎಲ್ಲರ ಕಣ್ಮನಗಳನ್ನು ತಣಿಸುತ್ತ ಸ್ವಾಗತ ಕೋರುತ್ತಿತ್ತು.

2. ಗೋಪುರ

ಸಭಾ ಮಂಟಪದ ಮುಖ್ಯ ಪ್ರವೇಶ ದ್ವಾರವು ವಿಶಿಷ್ಟ ರೀತಿಯಲ್ಲಿ ಅಲಂಕೃತವಾಗಿ ಎಲ್ಲರ ಮನ ಸೆಳೆದಿತ್ತು. ಮುಂಬಯಿಯಲ್ಲಿ ಶ್ರೀನಿವಾಸ್ ಆ್ಯಂಡ್ ಕಂಪನಿ ಹೆಸರಿನಲ್ಲಿ ವ್ಯವಹಾರ ನಡೆಸುತ್ತಿರುವ ಕರ್ನಾಟಕದ ಪ್ರತಿಭಾನ್ವಿತ ಯುವ ಕಲಾವಿದರಿಂದ ಅದರ ವಿನ್ಯಾಸ ರೂಪಿಸಲ್ಪಟ್ಟು ನಿರ್ಮಿಸಲಾದ ಅದು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪೆಯ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ಮಹಾದ್ವಾರದ ಮಾದರಿಯದಿತ್ತು. ರಾತ್ರಿಯಲ್ಲಿ ಈ ಗೋಪುರ ವರ್ಣಮಯ ವಿದ್ಯುದ್ದೀಪಗಳಿಂದ ಅಲಂಕೃತವಾಗಿ ಅಂದವಾಗಿ ಬೆಳಗುತ್ತಿತ್ತು.

3. ವಿಷಯ ನಿಯಾಮಕ ಸಮಿತಿಯ ಸಭಾಗೃಹ :

ಹದಿನಾಲ್ಕು ಸಾವಿರ ಚೌರಸ್ ಫೂಟುಗಳ ವಿಶಾಲ ಬಯಲಿನಲ್ಲಿ ಅಷ್ಟ ಕೋನಾಕೃತಿಯ ಈ ವಿಶಾಲ ಸಭಾಗೃಹವನ್ನು ಮುಖ್ಯ ಸಭಾಗೃಹದ ಸನಿಹದಲ್ಲೆ ನಿರ್ಮಿಸಲಾಗಿತ್ತು. ವಿಷಯ ನಿಯಾಮಕ ಸಮಿತಿಯ ಕಾರ್ಯ ಕಲಾಪಗಳನ್ನು ವೀಕ್ಷಿಸಬಯಸುವ ಆಸಕ್ತ ಸಂದರ್ಶಕರಿಗೂ ಅಸಮಾಧಾನವಾಗದ ರೀತಿಯಲ್ಲಿ ಅವರೆಲ್ಲರಿಗೂ ಸ್ಥಳಾವಕಾಶ ಒದಗಿಸಲಾಗಿತ್ತು. ಕಾಂಗ್ರೆಸ್ ಮೈದಾನದಲ್ಲಿ ಅಧಿವೇಶನದ ಅಂಗವಾಗಿ ನಡೆಯುತ್ತಿದ್ದ ಬೇರೆ ಬೇರೆ ಸಮಾವೇಶಗಳಿಗೂ ಈ ಸಭಾ ಮಂಟಪದಲ್ಲಿ ಅವಕಾಶ ನೀಡಲಾಗಿತ್ತು. ಅವುಗಳಿಗಾಗಿ ಎಲ್ಲ ಏರ್ಪಾಟುಗಳನ್ನು ಮಾಡಲಾಗಿತ್ತು.

4. ಕೇಂದ್ರ ಕಾರ್ಯಾಲಯಗಳು :

ವಿಷಯ ನಿಯಾಮಕ ಸಮಿತಿಯ ಸಭಾಗೃಹಕ್ಕೆ ಹೊಂದಿಕೊಂಡೇ ನಿರ್ಮಿಸಲಾದ

ಚತುಷ್ಕೋನಾಕೃತಿಯ ವಿಶಾಲ ಮಂಟಪದಲ್ಲಿ ಅಂಚೆ, ತಂತಿ ರವಾನೆ, ಬ್ಯಾಂಕ್ ಸೇವೆಗಳನ್ನು ಒಳಗೊಂಡಂತೆಯೇ ಸ್ವಾಗತ ಸಮಿತಿಯ ವಿವಿಧ ಕಚೇರಿಗಳು ಕಾರ್ಯನಿರತವಾಗಿದ್ದವು.

5. ಖಾದಿ ಅರಮನೆ :

ವಿಷಯ ನಿಯಾಮಕ ಸಮಿತಿಯ ಸಭಾಗೃಹಕ್ಕೆ ಹೊಂದಿಕೊಂಡೇ ಮಹಾಧಿವೇಶನದ ಸರ್ವಾಧ್ಯಕ್ಷರ ಸಲುವಾಗಿ ಖಾದೀ ಅರಮನೆ ನಿರ್ಮಿಸಲಾಗಿತ್ತು. ಚಿಕ್ಕ ಹಾಗೂ ಸಣ್ಣ ರೀತಿಯಲ್ಲಿ ನಿರ್ಮಿತವಾಗಿದ್ದ ಅದು ತನ್ನ ವಿಶಿಷ್ಟ ಅಲಂಕಾರಗಳಿಂದಾಗಿ ಅರಮನೆ ಎಂಬ ಸಾರ್ಥಕ ನಾಮದಿಂದ ಗುರುತಿಸಲ್ಪಟ್ಟಿತ್ತು. ಆದರೆ ವೆಚ್ಚದ ದೃಷ್ಟಿಯಿಂದ ಅದು ಒಂದು ಕುಟೀರವೇ ಸರಿ!

6. ಆಸ್ಪತ್ರೆ ಹಾಗೂ ವೈದ್ಯಕೀಯ ನೆರವು :

ಅಧಿವೇಶನದ ಸರ್ವಾಧ್ಯಕ್ಷರ ಶಿಬಿರದಿಂದ ಪಶ್ಚಿಮಕ್ಕೆ ಸ್ವಲ್ಪ ಅಂತರದಲ್ಲಿ ಶಾಂತಪೂರ್ಣ ಸ್ಥಳದಲ್ಲಿ ಆಸ್ಪತ್ರೆಯನ್ನು ವ್ಯವಸ್ಥೆಗೊಳಿಸಲಾಗಿದ್ದು, ಅಲ್ಲಿ ವೈದ್ಯಕೀಯ ತಜ್ಞರುಗಳು ಸೇವೆ ಸಲ್ಲಿಸಲು ಸದಾ ಸಿದ್ಧರಾಗಿರುತ್ತಿದ್ದರು. ಇಷ್ಟೇ ಅಲ್ಲದೇ ಅನೇಕ ತಜ್ಞ ಡಾಕ್ಟರರ ಮಾರ್ಗದರ್ಶನದಲ್ಲಿ ಪ್ರತಿನಿಧಿ ಹಾಗೂ ಸಂದರ್ಶಕರಿಗೋಸ್ಕರ ಒಂದು ಉಚಿತ ಆಸ್ಪತ್ರೆಯನ್ನು ವ್ಯವಸ್ಥೆಗೊಳಿಸಲಾಗಿತ್ತು.

6. ನೂಲುವ ನೆಲೆ

ನೂಲು ತೆಗೆಯ ಬಯಸುವ ಪ್ರತಿನಿಧಿಗಳ ಅನುಕೂಲಕ್ಕಾಗಿ ಚರಖಾ ಹಾಗೂ ಇತರ ಸಾಧನಗಳಿಂದ ಪರಿಪೂರ್ಣವಾದ ಸಭಾಗೃಹವನ್ನು ಒದಗಿಸಲಾಗಿತ್ತು. ಇಲ್ಲಿಯೇ ನೂಲುವ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನಗಳೊಂದಿಗೆ ಸನ್ಮಾನಿಸಲಾಯಿತು. ಮಾಯಾಲಾಂದ್ರಗಳ ಮೂಲಕ ಆಂಗ್ಲ ಪ್ರಭುತ್ವ ಪೂರ್ವದ ಭಾರತದ ಸುಸಮೃದ್ಧಿ, ಖಾದಿ ಆಂದೋಲನದ ಮಹತ್ವ ಹಾಗೂ ವೈಭವಪೂರ್ಣ ಗತಕಾಲದ ಮರುಸೃಷ್ಟಿ ಮೊದಲಾದವುಗಳನ್ನು ಕುರಿತು ಚಿತ್ರ ಪ್ರದರ್ಶನ ಹಾಗೂ ಚೈತನ್ಯದಾಯಕ ವ್ಯಾಖ್ಯೆಗಳನ್ನು ಇಲ್ಲಿ ವಿಶಾಲ ಜನ ಸಮೂಹಕ್ಕಾಗಿ ಏರ್ಪಾಡು ಮಾಡಿದ್ದರು ಕಲಕತ್ತೆಯ ಖಾದಿ ಪ್ರತಿಷ್ಠಾನದ ಶ್ರೀ ಸತೀಶಚಂದ್ರ ದಾಸಗುಪ್ತ.

8. ಮನರಂಜನಾ ಗೃಹ :

ಸಂಗೀತ ಹಾಗೂ ವಾದ್ಯೋಪಕರಣಾದಿಗಳ ಕಾರ್ಯಕ್ರಮ ನೃತ್ಯನಾಟಕಾದಿ ಮನರಂಜನ ಕಾರ್ಯಕ್ರಮಗಳಿಗೋಸ್ಕರ ನೂಲುವ ಮನೆಗೆ ಸನಿಹದಲ್ಲೇ ಆಧುನಿಕ ಥೇಟರಿನ ಎಲ್ಲ ವ್ಯವಸ್ಥೆಗಳುಳ್ಳ ವೇದಿಕೆ ಹಾಗೂ ಸಭಾಗೃಹ ನಿರ್ಮಿಸಲಾಗಿತ್ತು. ಕನ್ನಡ

ಸಂಗೀತ, ರಾಗ, ತಾಳ ಮೇಳಗಳಿಗೆ ಅಗ್ರ ಪ್ರಾಶಸ್ತ್ಯ ನೀಡಲಾಗಿದ್ದು ಸುವಿಖ್ಯಾತ ವೀಣೆ ಶೇಷಣ್ಣನವರನ್ನು ಒಳಗೊಂಡಂತೆಯೇ ಅನೇಕ ಸುಪ್ರಸಿದ್ಧ ಗಾಯಕರು ಹಾಗೂ ವಾದ್ಯ ವಾದನ ಪಟುಗಳು ಜನರನ್ನು ತಮ್ಮ ಚಿತ್ತಾಕರ್ಷಕ ಕಾರ್ಯಕ್ರಮ ನೀಡಿ ರಂಜಿಸುತ್ತಿದ್ದರು.

9. ವಸತಿ ವ್ಯವಸ್ಥೆ :

ಪ್ರತಿನಿಧಿಗಳಿಗೆ ಸ್ವಾಗತ ಸಮಿತಿಯ ಸದಸ್ಯರುಗಳಿಗೆ, ಹಾಗೂ ಸಂದರ್ಶಕರಿಗೆ ಖಾದಿ ಅಥವಾ ಬಿದರಿನ ಚಾಪೆಗಳಿಂದ ನಿರ್ಮಿಸಲಾದ ಬ್ಲಾಕ್‌ಗಳನ್ನು ಒದಗಿಸಲಾಗಿತ್ತು ಪ್ರತಿಯೊಂದು ಕೊಠಡಿಯಲ್ಲಿ ಆರು ಜನರಿಗೆ ವಸತಿ ಅವಕಾಶವುಳ್ಳ ಹನ್ನೆರಡು ಕೊಠಡಿಗಳನ್ನು ಒಳಗೊಂಡ ಒಟ್ಟು 72 ಬ್ಲಾಕುಗಳನ್ನು ನಿರ್ಮಿಸಲಾಗಿತ್ತು. ಅವುಗಳ ಪೈಕಿ ಮೂವತ್ತು ಬ್ಲಾಕುಗಳು ಸಂಪೂರ್ಣ ಖಾದಿ ಬಟ್ಟೆಯಿಂದ ನಿರ್ಮಿತವಿದ್ದವು. ಇವುಗಳಷ್ಟೇ ಅಲ್ಲದೇ ಪ್ರತ್ಯೇಕ ಅಡುಗೆ ಮನೆ, ಕಕ್ಕಸು, ಬಚ್ಚಲು ನಿರಂತರ ನೀರು ಪೂರೈಕೆ ಏರ್ಪಾಟುಗಳನ್ನು ಒಳಗೊಂಡ 70 ವಿಶೇಷ ಕುಟೀರಗಳು ಇದ್ದವು.

10. ಭೋಜನ - ಉಪಾಹಾರದ ಏರ್ಪಾಟು :

ಮಧ್ಯವರ್ತಿಯಾದ ಒಂದು ದೊಡ್ಡ ಸಾಮಾನ್ಯ ಅಡುಗೆ ಮನೆ ನಿರ್ಮಿಸಲಾಗಿತ್ತು. ಅಲ್ಲಿ ಕರ್ನಾಟಕ ಮಾದರಿಯ ಭೋಜನೋಪಹಾರ ಸಿದ್ಧಗೊಳ್ಳುತ್ತಿತ್ತು 500X100 ಚೌರಸ ಫೂಟು ವಿಶಾಲವಾದ ಭೋಜನ ಗೃಹ ನಿರ್ಮಿಸಲಾಗಿತ್ತು. ಬೇರೆ ಬೇರೆ ಪ್ರಾಂತಗಳವರಿಗಾಗಿ ಅವರದೇ ಆದ ಆಹಾರ ಸಿದ್ಧಪಡಿಸುವಂಥ ಪ್ರತ್ಯೇಕ ಅಡುಗೆ ಮನೆಗಳನ್ನು ಏರ್ಪಾಟು ಮಾಡಲಾಗಿತ್ತು. ಅಡುಗೆ ಮನೆಗಳಿಗೆ ಹೊಂದಿಯೇ ಖರೀದಿಸಲಾದ ದರದಲ್ಲೆ ಕಿರಾಣಿ ಸಾಮಾನುಗಳನ್ನು ಒದಗಿಸುವ ಲಾಭ ಗಳಿಕೆ ಹಾಗೂ ಹಾನಿ ರಹಿತ ಯೋಗ್ಯ ದರದ ಅಂಗಡಿಯೂ ಇತ್ತು.

11. ನೀರು ಪೂರೈಕೆ :

ಬೆಳಗಾವಿ ನಗರವು ಯಾವುದೇ ರೀತಿಯ ನೀರು ಪೂರೈಕೆ ವ್ಯವಸ್ಥೆಯನ್ನು ಹೊಂದಿರಲಿಲ್ಲವಾದ್ದರಿಂದ ಕಾಂಗ್ರೆಸ್ ಮಹಾಧಿವೇಶನದ ಸ್ಥಳಕ್ಕೆ ನೀರು ಪೂರೈಕೆ ಮಾಡುವ ವಿಶೇಷ ಏರ್ಪಾಟನ್ನು ಮಾಡಬೇಕಾಯಿತು 50 X50 ಚೌರಸ ಫೂಟು ವಿಸ್ತೀರ್ಣದ ಸುಮಾರು 40 ಅಡಿ ಆಳದ ಒಂದು ದೊಡ್ಡ ಭಾವಿಯನ್ನು ತೋಡಿಸಿ ನಿರಂತರ ಅನಿರ್ಬಂಧ ನೀರು ಪೂರೈಕೆಯಾಗುವಂತೆ ಕ್ರಮಗಳನ್ನು ಕೈಕೊಳ್ಳಲಾಯಿತು. ಬಾವಿಯಲ್ಲಿ ಸ್ಟೀಮ್ ಪಂಪಗಳನ್ನು ಜೋಡಣೆ ಮಾಡಿ 30 ಸಾವಿರ ಗ್ಯಾಲನ್ ಸಂಗ್ರಹ ಸಾಮರ್ಥ್ಯದ ಟ್ಯಾಂಕ್‌ಗಳಲ್ಲಿ ಆ ನೀರನ್ನು ಸಂಗ್ರಹಿಸಿ ಮಹಾಧಿವೇಶನದ ಸ್ಥಳ ವಿಜಯನಗರದಾದ್ಯಂತ ನಲ್ಲಿಗಳ ಮೂಲಕ ನೀರನ್ನು ಪೂರೈಸಲಾಗಿತ್ತು. ಅದುವೇ ಈಗಲೂ ಇರುವ ಕಾಂಗ್ರೆಸ್ ಭಾವಿ.

12. ಆರೋಗ್ಯ ರಕ್ಷಣೆ ಹಾಗೂ ನೈರ್ಮಲ್ಯ ವ್ಯವಸ್ಥೆ :

ಹಿಂದಿನ ಅನೇಕ ವರ್ಷಗಳಲ್ಲಿಯಂತೆ ಕಕ್ಕಸ ಮಾಡುವುದಕ್ಕಾಗಿ ತಗ್ಗು, ಇಂಗು ಬಚ್ಚಲ ಇಂಗು ಶೌಚಾಲಯಗಳನ್ನು ನಿರ್ಮಿಸಲಾಗಿತ್ತು. ನಗರ ಪಾಲಿಕೆ ಸಿಬ್ಬಂದಿ ಹಾಗೂ ಸೇವಾ ಸಮರ್ಪಿತ ಸ್ವಯಂ ಸೇವಕರುಗಳು ಶ್ರೀ ಡಿ.ಬಿ. ಕಾಲೇಲಕರ ಮತ್ತು ಶ್ರೀ ವಾಮನರಾವ ದೇಸಾಯಿ ಬಿದರಿ ಮೇಲ್ವಿಚಾರಣೆಯಲ್ಲಿ ಕಕ್ಕಸುಗಳನ್ನು ಸ್ವಚ್ಛ ಮಾಡುವ ಸೇವೆ ಸಲ್ಲಿಸಿದರು. ಸೇವಾ ಸಮರ್ಪಿತ ಸ್ವಯಂ ಸೇವಕರವರಾದುದರಿಂದ ಕಕ್ಕಸುಗಳ ಚರಂಡಿ, ಬಚ್ಚಲು ನಿರ್ಮಲೀಕರಣ ವ್ಯವಸ್ಥಿತವಾಗಿ ನಡೆಯುತ್ತಿತ್ತು. ಸ್ವಯಂ ಸೇವಕರು ಈ ಕೆಲಸದಲ್ಲಿ ಸ್ವತಃ ತೊಡಗಿಸಿಕೊಳ್ಳದಿದ್ದಲ್ಲಿ ಇದು ಅಶಕ್ಯವೇ ಆಗುತ್ತಿತ್ತು.

13. ವಿದ್ಯುದ್ದೀಪಗಳ ವ್ಯವಸ್ಥೆ :

ವಿದ್ಯುದ್ದೀಪಗಳ ವಿಶೇಷ ವ್ಯವಸ್ಥೆ ಮಾಡಲಾಗಿತ್ತು ಸ್ವದೇಶೀ ಹಾಗೂ ಕೈಗಾರಿಕೆ ಪ್ರದರ್ಶನಕ್ಕೆ ವಿದ್ಯುದ್ದೀಪಗಳ ವಿಶೇಷ ನಿಯೋಜನ ಮಾಡಲಾಗಿತ್ತು. ಮುಖ್ಯ ಸಭಾ ಮಂಟಪ, ವಿಷಯ ನಿಯಾಮಕ ಸಮಿತಿ, ಸಭಾಗೃಹ, ವಿವಿಧ ಕಾರ್ಯಾಲಯ, ಸ್ವಯಂ ಸೇವಕರ ಬಿಡಾರ, ಸರ್ವಾಧ್ಯಕ್ಷರ ವಸತಿ ಇವುಗಳಿಗೆ ವಿದ್ಯುದ್ದೀಪಗಳನ್ನು ಒದಗಿಸಲಾಗಿತ್ತು. ಸರ್ವಾಧ್ಯಕ್ಷರ ವಸತಿಯಲ್ಲಿ ಪೆಟ್ರೋಮ್ಯಾಕ್ಸ್ ದೀಪಗಳನ್ನು ಸಹ ಇರಿಸಲಾಗಿತ್ತು. ಅಡುಗೆ ಮನೆ, ಭೋಜನಾಲಯ, ಇವುಗಳಲ್ಲಿ ಹಾಗೂ ಬೀದಿಗಳಿಗುಂಟ ವಿದ್ಯುದ್ದೀಪ ಹಾಗೂ ಪೆಟ್ರೋಮ್ಯಾಕ್ಸ್ ದೀಪಗಳನ್ನು ವ್ಯವಸ್ಥೆಗೊಳಿಸಲಾಗಿತ್ತು. ಸಾರ್ವಜನಿಕ ಸಂದಣಿಯ ಸ್ಥಳಗಳಲ್ಲಿ ಕಿಟ್ಸನ್ ಲೈಟ್ಸ, ಪ್ರತಿನಿಧಿಗಳಿರುವೆಡೆಯಲ್ಲಿ ಡಿಯೆಟ್ಜ ಲಾಂದ್ರ, ಲ್ಯಾಂಪ್ ಗಳನ್ನಿರಿಸಲಾಗಿತ್ತು.

14. ಸ್ವಯಂ ಸೇವಕರು

ಸ್ವಯಂಸೇವಕರ ಸಂಘಟನೆ ಬೆಳಗಾವಿ ಕಾಂಗ್ರೆಸ್ಸಿನ ಒಂದು ವಿಶೇಷ. ಎಪ್ರಿಲ್ ತಿಂಗಳ ಆರಂಭದಲ್ಲೇ ಡಾ॥ ನಾರಾಯಣ ಸುಬ್ಬರಾವ ಹರ್ಡೀಕರ ಇವರು ಕಾಂಗ್ರೆಸ್ ಅಧಿವೇಶನಕ್ಕಾಗಿಯೇ ಸ್ವಯಂಸೇವಕರನ್ನು ತರಬೇತುಗೊಳಿಸುವುದನ್ನು ಕೈಗೊಂಡರು. ಹಣದ ಕೊರತೆಯ ಕಾರಣದಿಂದಾಗಿ ಈ ಯೋಜನೆ ಅಂಶಿಕವಾಗಿ ಕಾರ್ಯಗತಗೊಂಡಿತ್ತು. ಸ್ವಯಂ ಸೇವಕರ ಒಟ್ಟು ಸಂಖ್ಯೆ 1156, ಅವರಲ್ಲಿ 817 ಸಹಾಯಕರು, 141 ಸಹಾಯಕಿಯರಿದ್ದರು. 198 ಸ್ಕೌಟ್ಸ್‌ಗಳ ಸೇವೆ ಪಡೆಯಲಾಯಿತು. ಇವರೆಲ್ಲರೂ ಕರ್ನಾಟಕದ ವಿವಿಧ ಸ್ಥಳಗಳಲ್ಲಿಂದ, ಆಂಧ್ರ, ಮಹಾರಾಷ್ಟ್ರ ಹಾಗೂ ಮುಂಬಯಿ ಪ್ರಾಂತಗಳಿಂದ ಬಂದ ಕನ್ನಡಿಗರಾಗಿದ್ದರು. ಇವರಲ್ಲಿಯ 354 ಸಹಾಯಕರು, ಸ್ವಯಂ ಸೇವಕರ ಪೂರ್ಣಾವಧಿ ತರಬೇತಿ ಶಿಬಿರಗಳಲ್ಲಿ ಇದ್ದು ತರಬೇತಿ ಪಡೆದುಕೊಂಡವರಿದ್ದರು. ಅಧಿವೇಶನಕ್ಕೋಸುಗವೇ

ತರಬೇತಾಗಿದ್ದರು. ಹೀಗೆ ಕ್ರಮ ಬದ್ಧ ತರಬೇತಿ ಪಡೆದ ಅನೇಕರು ಬೇರೆ ಬೇರೆ ಸ್ವಯಂ ಸೇವಕರಿಗೆ ತರಬೇತಿ ವರ್ಗಗಳನ್ನು ನಡೆಸಿ ತರಬೇತಿ ನೀಡಿದ್ದರು. ಜನ ಸಂದಣಿಯ ನಿಯಂತ್ರಣ, ಶಾಂತಿ ಪಾಲನೆ, ರಸ್ತೆ ಸಾರಿಗೆ ನಿಯಂತ್ರಣ, ರಾತ್ರಿಯಲ್ಲಿ ಪಹರೆ, ಅಧಿವೇಶನದುದ್ದಕ್ಕೂ ಕಾವಲು ಹಾಗೂ ಶಾಂತಿ ಪಾಲನೆ ಮೊದಲಾದ ಕರ್ತವ್ಯಗಳಲ್ಲಿ ಅವರು ಸದಾ ತತ್ಪರರಾಗಿರುತ್ತಿದ್ದರು. ಸಮರ್ಥ ನಾಯಕರ ನೇತೃತ್ವದಲ್ಲಿ ಅತ್ಯುತ್ತಮ ರೀತಿಯಿಂದ ಕಾರ್ಯ ನಿರ್ವಹಿಸಿದರು.

15. ರಾಷ್ಟ್ರಧ್ವಜ :

ವಿಶಾಲವಾದ ಚೌಕೋನಾಕೃತಿಯ ಶಿಬಿರದಲ್ಲಿ ಸ್ವಯಂ ಸೇವಕರಿಗೆ ವಸತಿಯ ಏರ್ಪಾಡು ಮಾಡಲಾಗಿತ್ತು. ಮಧ್ಯದಲ್ಲಿ ಸೇನಾಪತಿಗೆ ಟೆಂಟ್ ನಿರ್ಮಿಸಲಾಗಿತ್ತು. ಈ ಶಿಬಿರಕ್ಕೆ ಹೊಂದಿಯೇ ವಿಶಾಲವಾದ ಬಯಲಿನಲ್ಲಿ ಎತ್ತರವಾದ ಧ್ವಜ ಸ್ಥಂಭ ನಿಲ್ಲಿಸಿ ಮೇಲ್ಗಡೆ ಶುದ್ಧ ಖಾದಿಯ ಚರಖಾ ಸಹಿತ ರಾಷ್ಟ್ರ ಧ್ವಜವನ್ನು ಪ್ರತಿದಿನವೂ ಕಲಾಪಗಳ ಆರಂಭಕ್ಕೆ ಮೊದಲು ಆರೋಹಿಸಲಾಗುತ್ತಿತ್ತು. ನಂತರ ವಂದನೆ ಸಲ್ಲಿಸಲಾಗುತ್ತಿತ್ತು. ಸಂಜೆ ಮತ್ತೊಮ್ಮೆ ವಂದನೆ ಸಲ್ಲಿಸಿ ಧ್ವಜಾರೋಹಣ ಮಾಡಲಾಗುತ್ತಿತ್ತು. ಧ್ವಜಾರೋಹಣ ಹಾಗೂ ಅವರೋಹಣ ಸಂದರ್ಭದಲ್ಲಿ ಖಾಕಿ ಅರ್ಧ ಚಣ್ಣ, ಬಿಳಿ ಅಂಗಿ ಈ ಗಣವೇಷಧಾರಿ ಸ್ವಯಂ ಸೇವಕರು, ಸಹಾಯಕರು ಅದೇ ರೀತಿ ತ್ರಿವರ್ಣದ ಅಂಚುಳ್ಳ ಕಪ್ಪು ಸೀರೆಗಳನ್ನುಟ್ಟ ಸ್ವಯಂಸೇವಿಕೆ, ಸಹಾಯಕರು, ಸ್ಕಾರ್ಫಗಳನ್ನು ತೊಟ್ಟ ಸ್ಕೌಟು ಬಾಲಕರು ಬಾಲಿಕೆಯರು ರಾಷ್ಟ್ರಧ್ವಜಕ್ಕೆ ಪ್ರಣಾಮ ಸಲ್ಲಿಸುತ್ತಿದ್ದರು. ಅಶ್ವಾರೋಹಿ ಸ್ವಯಂ ಸೇವಕ ಗಣ್ಯರು ಆಕರ್ಷಿಸುತ್ತಿದ್ದರು. ಪ್ರತಿ ದಿನ ಬೆಳಿಗ್ಗೆ ನಡೆಯುತ್ತಿದ್ದ ರಾಷ್ಟ್ರಧ್ವಜರೋಹಣ ಹಾಗೂ ಸಂಜೆಯಲ್ಲಿಯ ಧ್ವಜಾವತರಣ ಕಾಂಗ್ರೆಸ್ ಸ್ವಯಂ ಸೇವಕರ ಇತಿಹಾಸದಲ್ಲೇ ವಿನೂತನ ಉತ್ಸಾಹಪೂರ್ಣ ಸಮಾರಂಭವಾಗಿತ್ತು.

16. ಸ್ವದೇಶೀ ಪ್ರದರ್ಶನ :

ಸ್ವದೇಶೀ ಪ್ರದರ್ಶನವನ್ನು 350X200 ಚೌರಸ ಫೂಟುಗಳ ವಿಶೇಷ ಟೆಂಟನಲ್ಲಿ ಏಪಾಡಿಸಲಾಗಿತ್ತು.

ಅ) ವಸ್ತು ಸಂಗ್ರಹಾಲಯ ಮ್ಯೂಜಿಯಂ (ಬ) ಪ್ರಾತ್ಯಕ್ಷಿಕೆ (ಕ) ವ್ಯಾಪಾರ (ಡ) ಆಯುರ್ವೇದಿಯ ಹೀಗೆ ನಾಲ್ಕು ವಿಭಾಗಗಳನ್ನು ಅದು ಹೊಂದಿತ್ತು.

ಅ) ವಸ್ತು ಸಂಗ್ರಹಾಲಯದಲ್ಲಿ ವಿವಿಧ ಭಾರತೀಯ ಕಲೆ ಹಾಗೂ ಕೈಗಾರಿಕೆ ವಸ್ತುಗಳನ್ನು ಪ್ರದರ್ಶಿಸಲು ಅನುವು ಮಾಡಿಕೊಡಲಾಗಿತ್ತು. ಕೃಷಿಗೆ ಸಂಬಂಧಿಸಿದ ಸುಂದರವಾದ

ಅನೇಕ ವಸ್ತುಗಳನ್ನು ವಿವಿಧ ಕೈಗಾರಿಕೋತ್ಪನ್ನಗಳನ್ನು ಮೈಸೂರ ಸರಕಾರ ಪ್ರದರ್ಶಿಸಿ ಸಂಸ್ಥಾನದಲ್ಲಿಯ ಉದ್ದಿಮೆ ಚಟುವಟಿಕೆಗಳ ವಿಕಾಸವನ್ನು ಬಿಂಬಿಸಲು ಯತ್ನಿಸಿತ್ತು.

ಬ) ಪ್ರಾತ್ಯಕ್ಷಿಕೆ ವಿಭಾಗದಲ್ಲಿ ಅರಳೆಯ ಜಿನ್ನಿಂಗ್ ಮೊದಲುಗೊಂಡು ಚರ್ಖಾದ ಮೇಲೆ ನೂಲುವಿಕೆ, ಕೈ ನೂಲಿನಿಂದ ಕೈಮಗ್ಗದಲ್ಲಿ ಬಟ್ಟೆ ನೇಯುವುದನ್ನು ತೋರಿಸಲಾಗಿತ್ತು.


ಕ) ಭಾರತದ ಉದ್ದಿಮೆ ಕೈಗಾರಿಕೆಗಳಿಂದ ಉತ್ಪಾದಿತವಾದ ಹಲವಾರು ವಸ್ತುಗಳನ್ನು ಮಾರಾಟ ವಿಭಾಗದಲ್ಲಿ ಮಾರಲಾಗುತ್ತಿತ್ತು.

ಡ) ಆಯುರ್ವೇದಿಯ ವಿಭಾಗದಲ್ಲಿ ಭಾರತೀಯ ವೈದ್ಯಕೀಯ ಪದ್ಧತಿಯಲ್ಲಿ ಗಿಡಮೂಲಿಕೆಗಳಿಂದ ಸಿದ್ಧಪಡಿಸಲಾದ ಔಷಧಿಗಳನ್ನು ಚಿಕಿತ್ಸಾ ಕ್ರಮಗಳನ್ನು ಪ್ರದರ್ಶಿಸಲಾಗಿತ್ತಲ್ಲದೇ ಆಯುರ್ವೇದಿಯ ಚಿಕಿತ್ಸೆ ನೀಡಲಾಗುತ್ತಿತ್ತು.

ಇತರ ಸಂಸ್ಥೆಗಳ ಸಹಕಾರ

ಕಾಂಗ್ರೆಸ್ ಅಧಿವೇಶನದ ಸ್ಥಳದ ಬಳಿ ಒಂದು ತಾತ್ಪೂರ್ತಿಕ ರೈಲು ನಿಲ್ದಾಣ ಸ್ಥಾಪಿಸುವಂತೆ ಸ್ವಾಗತ ಸಮಿತಿ ಕೇಳಿಕೊಂಡಿದ್ದಕ್ಕೆ ಮದ್ರಾಸ ಹಾಗೂ ಸದರ್ನ್ ಮರಾಠಾ ಎಂ ಆ್ಯಂಡ್ ಎಸ್.ಎಂ. ರೇಲ್ವೆ ಸಮ್ಮತಿಸಿ ವಿಜಯನಗರ ರೈಲು ನಿಲ್ದಾಣ ಸ್ಥಾಪಿಸಲು ನೆರವಾಯಿತು. ಇಷ್ಟೇ ಅಲ್ಲದೇ ಸ್ವಾಗತ ಸಮಿತಿಗೆ ಎಲ್ಲ ರೀತಿಯಿಂದ ಸಹಕರಿಸುವ ಭರವಸೆ ನೀಡಿತು. ಕೊನೆಯದಾಗಿ ಅಂದರೆ ಅತಿ ಮಹತ್ವದ ವಿಷಯವೆಂದರೆ ಉತ್ಸಾಹಪೂರ್ಣ ಸಹಕಾರ ನೀಡಿದ ಬೆಳಗಾವಿ ನಗರ ಪಾಲಿಕೆ ಹಾಗೂ ಅದರ ಅಧಿಕಾರಿಗಳಿಗೆ ನಾವು ಚಿರಋಣಿ ಎಂದು ಹೇಳಬಯಸುವದಾಗಿದೆ. ಅವರಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು. ಇವರೆಲ್ಲರ ಸಹಾಯ ಸಹಕಾರಗಳಿಲ್ಲದೇ ಹೋಗಿದ್ದರೆ ನಾವು ಇಷ್ಟೊಂದು ಮಹಾಸಾಧನೆಗೈಯ್ಯುತ್ತಿರಲೇ ಇಲ್ಲ. ಇವರೆಲ್ಲರುಗಳಿಗೆ ಸ್ವಾಗತ ಸಮಿತಿಯ ಹೃತ್ಪೂರ್ವಕ ಕೃತಜ್ಞತೆಗಳು. ಬೆಳಗಾವಿಯಲ್ಲಿ ಕಾಂಗ್ರೆಸ್ಸಿನ ಸಂವಿಧಾನಕ್ಕೆ ಮಾಡಲಾದ ತಿದ್ದುಪಡಿ ಕೈ ಸೇರಬೇಕಾದುದರಿಂದ ಈ ವರದಿಯನ್ನು ದಿನಾಂಕ 28 ಎಪ್ರಿಲ್ 1925 ಮೊದಲು ಸಲ್ಲಿಸಲು ಸಾಧ್ಯವಾಗದ್ದಕ್ಕೆ ಕ್ಷಮೆ ಕೋರುತ್ತೇವೆ. ನಮ್ಮ ನಿಯಂತ್ರಣಕ್ಕೆ ಮೀರಿದ ಹಲವಾರು ಕಾರಣಗಳಿಂದಾಗಿ ಆಗಿರುವ ಈ ವಿಳಂಬಕ್ಕೆ ನಾವು ವಿಷಾದಿಸುತ್ತೇವೆ.

ಬೆಳಗಾವಿ 20 ಮೇ 1925 ಎಂ. ಆರ್. ಕೆಂಭಾವಿ ಪ್ರಧಾನ ಕಾರ್ಯದರ್ಶಿ



ಗಾಂಧೀಜಿ : ಬೆಳಗಾವಿ ನೆನಪುಗಳು

ಹಲವಾರು ನೆನಹುಗಳು, ಮನಸ್ಸಿನ ಮೇಲೆ ಬೀರಲಾದ ಪ್ರಭಾವಗಳು ಅಭಿವ್ಯಕ್ತನೆಗೆ ಹಾತೊರೆಯತ್ತಿರುವಾಗ ಅವುಗಳನ್ನೆಲ್ಲಾ ಕ್ರೋಢೀಕರಿಸಿ ಮುಂದಿರಿಸುವುದು ತುಂಬಾ ಕಠಿಣ ಕೆಲಸ. ಬೆಳಗಾವಿಯಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನದ ಬಗೆಗೆ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಲ್ಲಿ ನಾನೂ ಅದೇ ರೀತಿಯ ಕಠಿಣತೆ ಅಥವಾ ತೊಂದರೆಯನ್ನು ಅನುಭವಿಸುತ್ತಲಿದ್ದೇನೆ. ಆದರೆ ನನ್ನ ಭಾವನೆಗಳನ್ನು ವ್ಯಕ್ತ ಪಡಿಸಲು ಪ್ರಯತ್ನಿಸುತ್ತೇನೆ.

ಗಂಗಾಧರರಾವ್ ದೇಶಪಾಂಡೆ ಹಾಗೂ ಅವರ ಕಾರ್ಯಕರ್ತರ ಸಮೂಹ ತಮ್ಮ ಸಾಧನೆಯ ಮೇರುವನ್ನೇ ತಲುಪಿದ್ದಾರೆ. ಅವರ ವಿಜಯ ನಗರವು ಸ್ವರಾಜ್ಯದ ಸಿದ್ಧಿಯಿನ್ನು ಆಗದೇ ಇದ್ದರೂ ಖಚಿತವಾಗಿ ಕಾಂಗ್ರೆಸ್ ಸಂಸ್ಥೆಯ ಅಪೂರ್ವ ಸಾಧನೆಯೇ ಸರಿ. ಪ್ರತಿಯೊಂದು ಕ್ರಿಯೆಯೂ ಸುನಿಯೋಜಿತ ಹಾಗೂ ಪರಿಪೂರ್ಣವಿತ್ತು. ಡಾ|| ಹರ್ಡೀಕರರ ಸ್ವಯಂಸೇವಕರು ಎಲ್ಲರ ಮನ ಗೆದ್ದ ಕಾರ್ಯಚತುರ ಹಾಗೂ ದಕ್ಷ ಕಾರ್ಯಕರ್ತರು. ರಸ್ತೆಗಳೆಲ್ಲ ವಿಶಾಲವಿದ್ದು ಅವುಗಳನ್ನು ಚೆನ್ನಾಗಿ, ಸುವ್ಯವಸ್ಥಿತವಾಗಿರಿಸಲಾಗಿತ್ತು. ತಾತ್ಕಾಲಿಕ ಅಂಗಡಿ, ಮುಂಗಟ್ಟುಗಳಿಗೆ ಅನುಕೂಲವಾಗುವ ರೀತಿಯಲ್ಲಿ, ಸಾವಿರಾರು ವೀಕ್ಷಕರಿಗೆ ಸುಲಭವಾಗಿ ನಿರಾತಂಕವಾಗಿ ಸಂಚರಿಸಲು ಸಾಧ್ಯವಾಗುವಂತೆ ರಸ್ತೆಗಳನ್ನು ಇನ್ನಷ್ಟು ವಿಶಾಲಗೊಳಿಸಬಹುದಿತ್ತು. ವಿದ್ಯುದ್ದೀಪಗಳ ವ್ಯವಸ್ಥೆ ಪರಿಪೂರ್ಣವಿತ್ತು. ಅತ್ಯಂತ ವಿಶಾಲವಾದ ಸಭಾ ಮಂಟಪ, ಹಾಗೂ ಮಂಟಪದ ಎದುರುಗಡೆ ಪ್ರವೇಶ ದ್ವಾರದೆದುರು ಅಮೃತ ಶಿಲೆಯಲ್ಲಿ ನಿರ್ಮಿಸಲಾದ ಪುಟವ ಕಾರಂಜಿ ಮಂಟಪದಲ್ಲಿ ಪ್ರವೇಶಿಸುವವರನ್ನು

ಸ್ವಾಗತಿಸುವಂತಿತ್ತು. ಸಭಾ ಮಂಟಪವು ಹದಿನೇಳು ಸಾವಿರಕ್ಕೆ ಕಡಿಮೆಯಿಲ್ಲದಷ್ಟು ಜನರನ್ನು ಹಿಡಿಸುವ ಸಾಮರ್ಥ್ಯದ್ದಿದ್ದಿರಬಹುದು. ನೈರ್ಮಲ್ಯ ವ್ಯವಸ್ಥೆ ಬಹಳ ಚೆನ್ನಾಗಿತ್ತಾದರೂ ಇನ್ನಷ್ಟು ವೈಜ್ಞಾನಿಕ ಹಾಗೂ ಉತ್ತಮಗೊಳಿಸಬಹುದಿತ್ತೇನೋ. ಬಳಕೆ ಮಾಡಲ್ಪಟ್ಟ ನೀರನ್ನು ಹರಿದು ಹೋಗುವಂತೆ ಮಾಡಲಾದ ವ್ಯವಸ್ಥೆ ಇನ್ನೂ ಹಿಂದಿನ ಕಾಲದಲ್ಲಿಯಂತೆಯೇ ಉಳಿದುಕೊಂಡಿತ್ತು. 1925 ರಲ್ಲಿ ನಡೆಯಲಿರುವ ಮುಂದಿನ ಅಧಿವೇಶನದ ಸ್ಥಳವಾದ ಕಾನಪುರದ ಜನರು ಶಿಬಿರದಲ್ಲಿ ಕೈಕೊಳ್ಳಬೇಕಾದ ನೈರ್ಮಲ್ಯ ವ್ಯವಸ್ಥೆ ಕ್ರಮ - ವಿಧಾನಗಳ ಬಗ್ಗೆ ಈಗಿನಿಂದಲೇ ಅಧ್ಯಯನ ಕೈಕೊಂಡು ಸೂಕ್ತ ಕ್ರಮಗಳನ್ನು ಯೋಜಿಸಬೇಕಲ್ಲದೇ ಅತ್ಯಂತ ಮಹತ್ವದ್ದಾದ ಇಂಥ ಕ್ರಮಗಳನ್ನು ಯೋಜಿಸಲು ಅಧಿವೇಶನ ಸನ್ನಿಹಿತವಾದಾಗಲೇ ಅವಸರಪಡುವುದು ಬೇಡವೆಂದು ಮೊದಲೇ ಸೂಚಿಸಬಯಸುತ್ತೇನೆ.

ಕಾಂಗ್ರೆಸ್ ಅಧಿವೇಶನದ ಸ್ಥಳದಲ್ಲಿಯ ಎಲ್ಲರಿಗೂ ಗೋಚರವಾದಂಥ ಎಲ್ಲ ಪರಿಪೂರ್ಣ ವ್ಯವಸ್ಥೆಗಳ ಬಗ್ಗೆ ಗಂಗಾಧರ ದೇಶಪಾಂಡೆಯವರಿಗೆ ಮುಕ್ತ ರೀತಿಯಲ್ಲಿ ಪ್ರಶಂಸೆಗಳನ್ನು ಸಲ್ಲಿಸುವೆ. ಆದರೂ ಪಕ್ಷದ ವರಿಷ್ಠರಿಗೆ, ಉನ್ನತ ವ್ಯಕ್ತಿಗಳಿಗೆ ಐಷಾರಾಮೀ ಏರ್ಪಾಟುಗಳನ್ನು ವ್ಯವಸ್ಥೆಗೊಳಿಸುವ ಪಾರಂಪರಿಕ ಪದ್ಧತಿಯ ಅನುಕರಣೆಯ ಮೋಹ ಕಳೆದುಕೊಳ್ಳಲು ಅವರಿಗೆ ಸಾಧ್ಯವಾಗಿಲ್ಲ. ಅಧ್ಯಕ್ಷರ ನಿವಾಸವನ್ನೇ ತೆಗೆದುಕೊಳ್ಳಿ. ಖಾದಿ ಕುಟೀರವೊಂದನ್ನು ಮಾತ್ರ ನಾನು ಬಯಸಿದ್ದೆ. ಆದರೆ ಖಾದಿ ಅರಮನೆಯನ್ನು ನನಗಾಗಿ ನಿರ್ಮಿಸುವ ಮೂಲಕ ನನಗೆ ಅವಮಾನಪಡಿಸಲಾಗಿದೆ! ಅಧ್ಯಕ್ಷರ ನಿವಾಸದಲ್ಲಿ ಕುಳಿತುಕೊಳ್ಳಲು ವಿಶಾಲವಾದ ಸ್ಥಳವಿರುವುದು ಅತ್ಯಗತ್ಯ. ಯಾಕೆಂದರೆ ಅಧ್ಯಕ್ಷರ ಬಳಿಗೆ ಬರುವ ಜನ ಹೆಚ್ಚು. ನನ್ನ ಬಗೆಗೆ ಆದರ ಹಾಗೂ ಪ್ರಶಂಸೆಯುಳ್ಳ ಜನಸಂದಣಿ ನೂಕು ನುಗ್ಗಲು ಅಧಿಕಗೊಂಡು ಸಮಸ್ಯೆ ಉದ್ಭವವಾಗಬಾರದೆಂದು ಈ ಖಾದಿ ಅರಮನೆಯ ಸುತ್ತ ರಕ್ಷಣೆಯ ಬೇಲಿ ಹಾಗೂ ಕಾವಲು ಸಹ ಅಗತ್ಯವೇ.

ಆದರೆ ನಾನೇ ಈ ನಿವಾಸದ ನಿರ್ಮಾಣದ ಕಂತ್ರಾಟದಾರನಾಗಿದ್ದ ಪಕ್ಷದಲ್ಲಿ ನಿಶ್ಚಿತವಾಗಿ ಅರ್ಧ ವೆಚ್ಚದಲ್ಲಿ ಈ ನಿವಾಸ ನಿರ್ಮಿಸುತ್ತಿದ್ದೆ. ಹೀಗೆ ದುಂದು ವೆಚ್ಚ ಅನಗತ್ಯವಾಗಿ ಮಾಡಲಾಗಿದೆಂಬುದರ ಒಂದು ಉದಾಹರಣೆ ಮಾತ್ರ ಇದು. ವಿಷಯ ನಿಯಾಮಕ ಸಮಿತಿ ಸದಸ್ಯರಿಗೆ ಹಾಗೂ ಇತರ ಗಣ್ಯರಿಗೆ ಒದಗಿಸಲಾದ ಊಟ, ಉಪಹಾರಗಳ ಮೇಲೆ ಸಹ ಅನವಶ್ಯಕವಾಗಿ ಅತ್ಯಧಿಕ ಖರ್ಚು ಮಾಡಲಾಗಿದೆ. ಉಪಾಹಾರದ ಪ್ರಮಾಣವೂ ಅಳತೆ ಮೀರಿದ್ದಾಗಿತ್ತು. ಇದಕ್ಕಾಗಿ ನಾನು ಯಾರನ್ನೂ ದೂಷಿಸುವುದಿಲ್ಲ. ಉದಾರ

ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ 1156 ಸ್ವಯಂ ಸೇವಕರು ಕಾರ್ಯ ನಿರ್ವಹಿಸಿದ್ದರು. ಇದರಲ್ಲಿ 817 ಸಹಾಯಕರು (ಪುರುಷರು) 141 ಸಹಾಯಕಿಯರು (ಸ್ತ್ರೀಯರು) ಉಳಿದವರು ಮೇಲ್ವಿಚಾರಕ ಜನ

ಹೃದಯಿಗಳಾದುದರಿಂದ ನೀವು ಕೈಬಿಟ್ಟು ಖರ್ಚು ಮಾಡಿರುವಿರಿ. ಹೀಗೆ ಮಾಡುವಲ್ಲಿ ನಿಮ್ಮದು ಸದುದ್ದೇಶವೇ ಆಗಿದೆ. ನಲವತ್ತು ವರ್ಷಗಳ ಪರಂಪರೆಯನ್ನು ಒಮ್ಮೆಲೆ ಬದಲಿಸಲಿಕ್ಕಾಗದು. ಆದ್ದರಿಂದ ಈ ವಿಷಯದಲ್ಲಿ ಟೀಕೆಯನ್ನು ಯಾರೂ ಕೇಳಬಯಸುವುದಿಲ್ಲ. 1921 ರಲ್ಲಿ ವಲ್ಲಭಭಾಯಿಯವರಿಗೆ ನಾನು ಇಂಥದೇ ಸಲಹೆ ನೀಡಿದಾಗ ಅತ್ಯಂತ ಸಾದಾ ಹಾಗೂ ಸರಳತನ ಅನುಸರಿಸಲೆಂದು ಅಧಿಕ ವೆಚ್ಚದ ಮಿತಿಯಿಳಿಸಿ ನನ್ನ ಪ್ರಿಯ ಗುಜರಾಥ ಪ್ರಾಂತ ಜಿಪುಣಾಗ್ರೇಸರವೆಂಬ ಆರೋಪ ಹೊರಲು ತಾವು ಸಿದ್ಧರಿಲ್ಲವೆಂದು ಮೊದಲಿಗೆಯೇ ಖಡಾಖಂಡಿತವಾಗಿ ಹೇಳಿ ಬಿಟ್ಟಿದ್ದರು. ಹಲವಾರು ಸಾವಿರ ರೂ.ಗಳ ವೆಚ್ಚದಿಂದ ಒಂದು ಭವ್ಯ ತಾತ್ಕಾಲಿಕ ಕಾರಂಜಿ ನಿರ್ಮಿಸುವುದನ್ನು ಬಿಟ್ಟರೆ ಜಿಪುಣತನವೆಂದು ಅದನ್ನು ಪರಿಗಣಿಸಲಾಗದು ಎಂದು ಅವರನ್ನು ಒಪ್ಪಿಸಲು ನನಗೆ ಸಾಧ್ಯವಾಗಿರಲಿಲ್ಲ. ಅವರು ಏನನ್ನೇ ಮಾಡಿದರೂ ಅವರ ನಂತರದವರು ಅದನ್ನೇ ಅನುಸರಿಸುವಂತಾಗುತ್ತದೆ ಎಂದೂ ಹೇಳಿ ಅವರನ್ನು ಹಿಂದಕ್ಕೆ ಜಗ್ಗಲೆತ್ನಿಸಿದ್ದೆ. ಆದರೆ ವಲ್ಲಭಭಾಯಿಯವರು ತಮ್ಮನ್ನು ಜಿಪುಣನೆಂದು ಕರೆಯಿಸಿಕೊಳ್ಳಲು ಸಿದ್ಧರಾಗಲಿಲ್ಲ. ಕಾನಪುರದವರು ಈ ದಿಶೆಯಲ್ಲಿ ಹೊಸ ಮಾರ್ಗ ತುಳಿಯಲಿ. ಕಾನಪುರದವರು ಹೀಗೆ ಜಿಪುಣತನ ತೋರಬಹುದಾದರೂ ಅದುವೇ ಮುಂಬರುವ ವರ್ಷಗಳಲ್ಲಿ ದುಂದುವೆಚ್ಚವೇ ಎನಿಸೀತು. ವಲ್ಲಭಭಾಯಿ ನಂತರ ಕೆಲ ಸಂಗತಿಗಳನ್ನು ಒಪ್ಪಿಕೊಳ್ಳಲಾರರು. ಆದರೆ ನನಗನಿಸಿದುದನ್ನು ನಾನು ಉಲ್ಲೇಖಿಸದೇ ಇರಲಾರೆ.

ಕಾಂಗ್ರೆಸ್ಸು ಭಾರತದ ಸಾರಸರ್ವಸ್ವವೇ ಎನಿಸಿರುವ ಅತ್ಯಂತ ಕಠಿಣ ಪರಿಶ್ರಮ ಮಾಡುವ ಬಡವ ದುಡಿಮೆದಾರರನ್ನು ಪ್ರತಿನಿಧಿಸುತ್ತಿದೆಂಬುದನ್ನು ನಾವು ಸದಾ ನೆನಪಿನಲ್ಲಿಡೋಣ. ಅವರ ಜೀವನದೊಂದಿಗೆ ಹೊಂದಾಣಿಕೆ ರೀತಿಯಲ್ಲಿ ನಮ್ಮ ಖರ್ಚು ವೆಚ್ಚಗಳಿರಬೇಕು. ಅದಕ್ಷತೆ ಹಾಗೂ ಜಿಪುಣತನಕ್ಕೆ ಅವಕಾಶ ಕೊಡದ ಹಾಗೆಯೇ ನಾವು ಹೆಚ್ಚು ಮಿತವ್ಯಯಿಯಾಗಲೇಬೇಕು.

ನನ್ನ ಅಭಿಪ್ರಾಯದಲ್ಲಿ ವಸತಿ ಹಾಗೂ ಊಟೋಪಾಹಾರಗಳಿಗಾಗಿ ಹಣ ಆಚರಣೆ ಮಾಡಿರುವುದು ತುಂಬಾ ಹೆಚ್ಚು. ಸ್ವಾಮಿ ಶ್ರದ್ಧಾನಂದಜೀಯವರ ಪುಸ್ತಕದಲ್ಲಿಂದ ಪಾಠ ಕಲಿತುಕೊಳ್ಳುವದನ್ನಾದರೂ ನಾವು ಮಾಡಬೇಕು. 1916 ರಲ್ಲಿ ಅವರು ಗುರುಕುಲದ ವಾರ್ಷಿಕೋತ್ಸವಕ್ಕೆ ಬಂದ ಅತಿಥಿಗಳಿಗಾಗಿ ಹುಲ್ಲಿನ ಕುಟಿರಗಳನ್ನು ನಿರ್ಮಿಸಿದ್ದರು. ತಲಾ ಎರಡು ಸಾವಿರ ರೂಗಳಂತೆ ಖರ್ಚು ಮಾಡಿ ಅವರು ಈ ಕುಟೀರಗಳನ್ನು ನಿರ್ಮಿಸಿದ್ದ ರೆಂಬುದನ್ನು ನಾನು ತಿಳಿದುಕೊಂಡಿದ್ದೇನೆ. ನೆಲದ ಮೇಲೆ ಉಪಾಹಾರಗ್ರಹಗಳನ್ನು ನಿರ್ಮಿಸಲು ಕಂತ್ರಾಟದಾರರನ್ನು ಅವರು ಆಹ್ವಾನಿಸಿದ್ದರು. ವಸತಿ ವ್ಯವಸ್ಥೆಗಾಗಿ ಅವರು ಶುಲ್ಕವನ್ನೇ ಇಟ್ಟಿರಲಿಲ್ಲ. ಅಲ್ಲಿನ ವಸತಿಗಳ ಸಂಬಂಧದಲ್ಲಿ ಅವರು ಭಾಡಿಗೆ ವಸೂಲು

ಮಾಡಿರಲಿಲ್ಲ, ಅಲ್ಲಿಯ ವ್ಯವಸ್ಥೆಗಳ ಬಗ್ಗೆ ಯಾರೂ ದೂರಿರಲಿಲ್ಲ. ಜನರ ನಿರೀಕ್ಷೆಯೇನು ಎಂಬುದನ್ನು ಅವರು ಅರಿತಿದ್ದರು. ಸುಮಾರು 40 ಸಾವಿರ ಜನರಿಗೆ ಗುರುಕುಲದ ನೆಲದ ಮೇಲೆ ನಿರ್ಮಿಸಲಾದ ಹುಲ್ಲಿನ ಕುಟೀರಗಳಲ್ಲಿ ವಸತಿ ಕಲ್ಪಿಸಲಾಗಿತ್ತು. ಸ್ವಲ್ಪವೂ ತೊಂದರೆಯೆನಿಸದೇ ಎಲ್ಲರೂ ಬೇರೆ ಏನನ್ನೂ ಖರ್ಚು ಮಾಡದೇ ಅವುಗಳಲ್ಲಿ ಆರಾಮಾಗಿದ್ದರು. ಅಲ್ಲದೇ ಪ್ರತಿಯೊಬ್ಬ ಸಂದರ್ಶಕನೂ ವಿಶೇಷವಾಗಿ ಹೆಚ್ಚಿನ ಖರ್ಚೆಂಬುದನ್ನು ಮಾಡದೆ ಕಡಿಮೆ ವೆಚ್ಚದಲ್ಲಿ ಸುಖವಾಗಿದ್ದುದ್ದೊಂದು ಇನ್ನೂ ಒಂದು ವಿಶೇಷ.

ಶ್ರದ್ಧಾನಂದ ಸ್ವಾಮಿಗಳ ಯೋಜನೆಯನ್ನು ಇಡೀಯಾಗಿ ಅನುಸರಿಸಬೇಕೆಂದೇನೂ ನಾನು ಹೇಳುತ್ತಿಲ್ಲ, ಆದರೆ ಕಡಿಮೆ ವೆಚ್ಚದಲ್ಲಿ ಹೆಚ್ಚು ಉತ್ತಮ ಹಾಗೂ ಅಧಿಕ ಸೌಲಭ್ಯಗಳುಳ್ಳ ಯೋಜನೆಗಳನ್ನು ಹಾಕುವುದು ಅತ್ಯಗತ್ಯ ಎಂದಿಷ್ಟೇ ಹೇಳುತ್ತೇನೆ. ಪ್ರತಿನಿಧಿ ಶುಲ್ಕವನ್ನು ಹತ್ತು ರೂ.ಗಳಿಂದ ಕೇವಲ ಒಂದು ರೂ.ಗೆ ಇಳಿಸಿದುದು ತುಂಬಾ ಸ್ತುತ್ಯ. ವಸತಿ ಹಾಗೂ ಉಟೋಪಾಹಾರಗಳ ದರ ಹೀಗೆ ಕಡಿಮೆಗೊಳಿಸುವುದು ಹೆಚ್ಚು ಸ್ವಾಗತಾರ್ಹ.

ಕಾಂಗ್ರೆಸ್ ಅಧಿವೇಶನದ ಪ್ರತಿಯೊಬ್ಬ ಸಂದರ್ಶಕನಿಂದ ಚಿಕ್ಕ ಪ್ರವೇಶ ಶುಲ್ಕ ಪಡೆಯುವುದು ಆದಾಯದ ಒಂದು ಮೂಲವೆಂದಾದೀತು. ಸಂದರ್ಶಕರು ಮನರಂಜನೆಯ ಜೊತೆಗೆ ಸದ್ಬೋಧೆ, ಮಾರ್ಗದರ್ಶನ ಹಾಗೂ ರಾಷ್ಟ್ರೀಯ ಸಂದೇಶವನ್ನು ಪಡೆದುಕೊಳ್ಳಲು ಸಾಧ್ಯವೆನಿಸುವ ಒಂದು ವಾರ್ಷಿಕ ಸಮಾವೇಶದ ಸ್ವರೂಪ ಕಾಂಗ್ರೆಸ್ ಅಧಿವೇಶನಕ್ಕೆ ಬರಲಿಕ್ಕೇ ಬೇಕು. ಕಾಂಗ್ರೆಸ್ ಅಧಿವೇಶನದ ಕಾರ್ಯಕಲಾಪಗಳು ತಮ್ಮ ಸುತ್ತ ನೆರೆದ ಎಲ್ಲರಲ್ಲಿ ಪ್ರಕ್ರಿಯಾತ್ಮಕತೆಯನ್ನು ಉಂಟು ಮಾಡುವಲ್ಲಿ ಫಲಿತವಾಗತಕ್ಕದ್ದು. ಈ ವರ್ಷ ನಡೆದಂತೆ ಸಮರ್ಪಕ ಸಮಯದಲ್ಲೇ ಅಧಿವೇಶನ ನಡೆಯಬೇಕು. ಅದಕ್ಕಾಗಿ ಶ್ರದ್ಧೆಯಿಂದ ಎಲ್ಲ ಕಾರ್ಯಾಚರಣೆ ಸಾಗತಕ್ಕದ್ದು.

ಬೇರೆ ಎಲ್ಲ ಸಮಾವೇಶಗಳೂ ಒಂದೇ ಒಂದು ವಾರದಲ್ಲಿ ನಡೆದು ಹೋಗುವುದರಿಂದ ರಾಷ್ಟ್ರೀಯ ಉದ್ದೇಶ ಸಾಧನೆಯೇನಾದರೂ ಆದೀತೆಂದು ನನಗೆ ಖಾತ್ರಿಯಿಲ್ಲ. ಆದ್ದರಿಂದ ಕಾಂಗ್ರೆಸ್ ಸಪ್ತಾಹದ ಅವಧಿಯಲ್ಲಿ ಕಾಂಗ್ರೆಸ್‌ಗೆ ನೆರವಾಗಬಲ್ಲ, ಅದರ ಬಲ ಸಂವರ್ಧನೆ ಮಾಡಬಲ್ಲ ಸಮಾವೇಶಗಳಷ್ಟನ್ನೇ ಸಂಘಟಿಸುವುದು ಯೋಗ್ಯವೆಂಬುದು ನನ್ನ ಅಭಿಮತ. ಕಾಂಗ್ರೆಸ್ ಅಧ್ಯಕ್ಷ ಹಾಗೂ ಆತನ ಸಹಚರರು ಅಥವಾ ಸಂಪುಟ ಸದಸ್ಯರು ಕಾಂಗ್ರೆಸ್‌ನ ಕಾರ್ಯವನ್ನು ಬಿಟ್ಟು ಬೇರೆ ಯಾವುದರ ಕಡೆಗೂ ಗಮನ ಹರಿಸಲೇ ಕೂಡದು. ಅಧ್ಯಕ್ಷನಾಗಿ

ಕಾಂಗ್ರೆಸ್ ಅಧಿವೇಶನಕ್ಕೆ ಒಟ್ಟು ಊಟದ ಖರ್ಚು 28,317 ರೂಪಾಯಿ 7 ಆಣೆ 6 ಪೈ ಬಂದಿತ್ತು. ಇದರಲ್ಲಿ 2548 ರೂ. ಅಕ್ಕಿ, 1291 ಗೋಧಿ 5596 ರೂ. 14 ಆಣೆ, ತುಪ್ಪ 791 ರೂ., ತೊಗರಿಬೇಳೆ, ತರಕಾರಿಗೆ 4403 ರೂ. ಆರು ಆಣೆ 9 ಪೈಸೆ ಖರ್ಚು ಮಾಡಲಾಗಿತ್ತು.

ನಿರ್ವಹಿಸಲು ವಹಿಸಲಾದ ಕಾರ್ಯವನ್ನು ಬಿಟ್ಟು ಬೇರೆಯದನ್ನು ಮಾಡುವುದು ಇರುತ್ತಿಲ್ಲವಾಗಿದ್ದರೆ ನಾನು ಇನ್ನೂ ಹೆಚ್ಚು ಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಿತ್ತು. ನನಗೆ ಹೆಚ್ಚಿನ ಚಿಂತನೆಗೆ ಸಮಯವೇ ಉಳಿದಿರಲಿಲ್ಲ. ಸಮಾವೇಶವನ್ನು ಯಶಸ್ವಿಗೊಳಿಸುವಂಥ ಅಗತ್ಯದ ಶಿಫಾರಸುಗಳನ್ನು ಸೂಚನೆಗಳನ್ನು ರೂಪಿಸುವುದು ನನಗೆ ಅಸಾಧ್ಯವಾಗಿಬಿಟ್ಟಿತು. ಬೇರೆ ಬೇರೆ ಸಮಾವೇಶಗಳ ಸಂಘಟಕರು ತಮ್ಮ ತಮ್ಮ ಕಾರ್ಯ ನಿರ್ವಹಣೆಯನ್ನು ಗಂಭೀರವಾಗಿ ಪರಿಗಣಿಸಿರಲೇ ಇಲ್ಲ. ಅವರು ಏನೋ ತಮ್ಮ ತಮ್ಮ ಸಮಾವೇಶಗಳನ್ನು ಈ ಸಂದರ್ಭದಲ್ಲಿ ಸಂಘಟಿಸಬೇಕು ಎಂಬ ಪದ್ಧತಿಗೆ ಕಟ್ಟುಬಿದ್ದು ಆ ರೀತಿ ಮಾಡಿದರು. ಕಾರ್ಯಕರ್ತರಿಗೆ ತಮ್ಮ ಶಕ್ತಿಯನ್ನು ಪ್ರತಿ ವರ್ಷ ಈ ರೀತಿ ಹ್ರಾಸ ಮಾಡಿಕೊಳ್ಳದಿರಲು ನಾನು ಬಿನ್ನವಿಸುತ್ತೇನೆ.


ಸ್ಥಳೀಯ ಕಲಾ ಕೌಶಲ ಹಾಗೂ ಉದ್ಯಮಗಳ ಪ್ರದರ್ಶನ ವರ್ಷದಿಂದ ವರ್ಷಕ್ಕೆ ವಿಕಸಿತಗೊಳ್ಳುತ್ತಲೇ ಇರಬೇಕು. ಸಂಗೀತ ಕಾರ್ಯಕ್ರಮಗಳನ್ನು ಸಾವಿರಾರು ಜನರು ಸವಿದು ಆನಂದಿಸಿರಲೇಬೇಕು. ನಮ್ಮ ಮಹಾನ್ ರಾಷ್ಟ್ರೀಯ ಪರಂಪರೆಯ ಉದ್ಯಮಗಳ ವಿನಾಶದ ಆಘಾತಕರ ಶೋಚನೀಯ ಇತಿಹಾಸವನ್ನು ಕಣ್ಮುಂದೆ ತಂದು ನಿಲ್ಲಿಸಿದ ಮಾಯಾಲಾಂದ್ರ ಪ್ರದರ್ಶನ ಅಥವಾ ಸಂಜೆ ರಾತ್ರಿ ಕಾಲದ ಉಪನ್ಯಾಸಗಳು ರಂಜನೀಯ, ಉದ್ಬೋಧಕ ಹಾಗೂ ಕಾರ್ಯ ತತ್ಪರತೆ ಉಂಟು ಮಾಡುವಂಥವೆನಿಸಿದವು. ಈ ಉಪನ್ಯಾಸಗಳನ್ನು ಅತ್ಯಂತ ಯೋಜನಾ ಬದ್ಧವಾಗಿ ವಿಚಾರೋದ್ದೀಪಕ ರೀತಿಯಲ್ಲಿ ಸಂಘಟಿಸಿದ್ದಕ್ಕೆ ಸತೀಶ ಬಾಬೂ ಅವರಿಗೆ ಧನ್ಯವಾದಗಳು ನೂಲುವ ಸ್ಪರ್ಧೆ ಕಾಂಗ್ರೆಸ್ ಅಧಿವೇಶನಗಳಲ್ಲಿ ಒಂದು ಕಾಯಂ ಯೋಜನೆಯಾಗಲೇಬೇಕು. ಈ ಸ್ಪರ್ಧೆಯ ಲೋಕಪ್ರಿಯತೆ, ಭಾಗವಹಿಸಿದ್ದ ಉತ್ಸಾಹೀ ಸ್ಪರ್ಧಾಳುಗಳ ಸಂಖ್ಯಾಧಿಕ್ಯ ಸ್ಪರ್ಧೆಯ ಕೊನೆಯಲ್ಲಿ ಕಂಡು ಬಂದ ಒಳ್ಳೇ ಫಲಶ್ರುತಿ, ಉದಾರ ದಾನಿಗಳ ಹೆಚ್ಚಳ ಇವೆಲ್ಲ ತುಂಬಾ ಸಂತಸ ನೀಡಿದವು. ನೂಲುವ ಆಂದೋಲನವು ಮಹಿಳೆಯರನ್ನು ತಮ್ಮ ಏಕಾಕಿತನ ನಿಷ್ಕ್ರಿಯತೆಗಳಿಂದ ಹೊರಗೆ ತಂದಿದೆ. ಹನ್ನೊಂದು ಪಾರಿತೋಷಕ ವಿಜೇತರಲ್ಲಿ ನಾಲ್ವರು ಮಹಿಳೆಯರಿದ್ದಾರೆ. ಯಾವುದೇ ವಿಶ್ವವಿದ್ಯಾಲಯದ ಪದವಿಯೂ ನೀಡದ ಆತ್ಮಗೌರವ ಹಾಗೂ ಆತ್ಮವಿಶ್ವಾಸವನ್ನು ಮಹಿಳೆಯರಿಗೆ ಇದು ತಂದು ಕೊಟ್ಟಿದೆ. ಪುರುಷರಂತೆಯೇ ತಮ್ಮ ಕ್ರಿಯಾಶೀಲತೆಯೂ ಅನಿವಾರ್ಯ, ತಾವು ಕೂಡ ಈ ಕೆಲಸ ಮಾಡಿ ಸಹಕರಿಸಬಹುದು. ಮತ್ತು ಪುರುಷರಿಗಿಂತಲೂ ಹೆಚ್ಚು ಸಹಜ ರೀತಿಯಲ್ಲಿ ಇದನ್ನು ಮಾಡಲು ಸಾಧ್ಯವೆಂಬುದನ್ನು ಮಹಿಳೆಯರು ಅರಿತುಕೊಳ್ಳತೊಡಗಿದ್ದಾರೆ.

ನನ್ನ ನೆನಹು ಹಾಗೂ ಅಭಿಪ್ರಾಯಗಳ ಪ್ರಕಟಣೆಗೆ ಕೊನೆ ಹೇಳುವ ಮುನ್ನ ಒಂದು ವಿಷಯವನ್ನು ನಾನು ಪ್ರಸ್ತಾಪಿಸದೇ ಇರಲಾರೆ. ಕಾಂಗ್ರೆಸ್ ಅಧಿವೇಶನದ ಶಿಬಿರಗಳಲ್ಲಿ ಸುಮಾರು ಎಪ್ಪತ್ತೈದು ಸ್ವಯಂ ಸೇವಕರು, ಹೆಚ್ಚಾಗಿ ಬ್ರಾಹ್ಮಣ ಸ್ವಯಂ ಸೇವಕರು ನೈರ್ಮಲ್ಯ

ಚಟುವಟಿಕೆಗಳಲ್ಲಿ ನಿರತರಿದ್ದರು. ನಗರ ಪಾಲಿಕೆಯ ಭಂಗೀ ಜನರ ಸೇವೆಗಳನ್ನು ಪಡೆಯಲಾಗಿತ್ತಾದರೂ ಅವರೊಂದಿಗೆ ನಮ್ಮ ಸ್ವಯಂಸೇವಕರೂ ಕೆಲಸ ಮಾಡುವಂತೆ ಯೋಜಿಸಿದ್ದು ಸೂಕ್ತ. ನೈರ್ಮಲ್ಯ ಪಥಕಗಳ ಸಂಘಟನೆ ಮೇಲ್ವಿಚಾರಣೆ ಹೊಣೆ ಹೊತ್ತಿದ್ದ ಕಾಕಾ ಕಾಲೇಕರರು ನಮ್ಮ ಸ್ವಯಂ ಸೇವಕರನ್ನು ಈ ಕೆಲಸದಲ್ಲಿ ತೊಡಗಿಸದೇ ಹೋಗಿದ್ದರೆ ಇಷ್ಟೊಂದು ತೃಪ್ತಿಕರವಾಗಿ ನೈರ್ಮಲ್ಯ ವ್ಯವಸ್ಥೆ ನಿರ್ವಹಿಸಲ್ಪಡುತ್ತಿರಲಿಲ್ಲ ಎಂದು ನನಗೆ ತಿಳಿಸಿದರು. ಎಲ್ಲ ಸ್ವಯಂ ಸೇವಕರೂ ಮನಃಪೂರ್ವಕ ಹಾಗೂ ತನ್ಮಯತೆಯಿಂದ ಕೆಲಸ ಮಾಡಿದ್ದಾರೆ. ಸಾಮಾನ್ಯವಾಗಿ ಕೆಲವೇ ಜನರು ಮಾಡುವಂಥ ಭಂಗೀ ಕೆಲಸವನ್ನು ಎಲ್ಲರೂ ಮನಃಪೂರ್ವಕ ನಿರ್ವಹಿಸಿದ್ದಾರೆ. ಯಾರೂ ತಮ್ಮ ಹೊಣೆ ಹಾರಿಸಿಕೊಳ್ಳುವ ಮೈ ಉಳಿಸಿಕೊಳ್ಳುವುದನ್ನು ಮಾಡಿಲ್ಲ. ಸ್ವಯಂ ಸೇವಕರ ತರಬೇತಿ ಜೊತೆಗೆ ನೈರ್ಮಲ್ಯ ವ್ಯವಸ್ಥೆಯ ಕಾರ್ಯ ನಿರ್ವಹಣೆ ನಿಜವಾಗಿಯೂ ಅಡಿಪಾಯವೆನಿಸತಕ್ಕದ್ದು.

ಮಹಾತ್ಮಾ ಗಾಂಧೀಜಿ

(ಯಂಗ್ ಇಂಡಿಯಾ 01.01.1925 ಸಂಚಿಕೆಯಿಂದ)



ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ 39ನೇ ಮಹಾಧಿವೇಶನದ ವಿಷಯ ನಿಯಾಮಕ ಸಮಿತಿಯಲ್ಲಿ ಅಂಗೀಕೃತ ಗೊತ್ತುವಳಿಗಳು

ಮೊದಲ ದಿನ (26.12.1924)

1. ಶ್ರದ್ಧಾಂಜಲಿ ಠರಾವು

ಬಿ. ಅಮ್ಮನ್, ಸರ್ ಅಶುತೋಷ ಚೌಧರಿ, ಸರ್ ಅಶುತೋಷ ಮುಖರ್ಜಿ, ಶ್ರೀ ಭೂಪೇಂದ್ರನಾಥ ಬಸು, ಡಾ॥ ಸುಬ್ರಹ್ಮಣ್ಯ ಅಯ್ಯರ್, ಶ್ರೀ ದಲಬಹಾದ್ದೂರ ಗಿರಿ, ಶ್ರೀ ಗೋವಿಂದ ವೆಂಕಟೇಶ ಯಾಳಗಿ, ಶ್ರೀ ವಾಮನರಾವ್ ಮೊಹರೀರ್, ಶ್ರೀ ಟಿ.ವ್ಹಿ. ಗೋಪಾಲಸ್ವಾಮಿ ಮುದಲಿಯಾರ್, ಶ್ರೀ ಸಿ.ವ್ಹಿ ಶಿವಮ್, ಲಾಲಾ ಕನ್ಹೈಯ್ಯಾಲಾಲಜೀ ಹಾಗೂ ದಕ್ಷಿಣ ಆಫ್ರಿಕೆಯಲ್ಲಿಯ ಶ್ರೀ ರುಸ್ತುಮಜೀ, ಜೀವನಜೀ, ಘೋರಖೋಡು, ಶ್ರೀ ಪಿ.ಕೆ. ನಾಯ್ಡು ಇವರುಗಳ ನಿಧನಕ್ಕಾಗಿ ಈ ಕಾಂಗ್ರೆಸ್ ಮಹಾಧಿವೇಶನವು ತನ್ನ ತೀವ್ರ ದುಃಖವನ್ನು ವ್ಯಕ್ತ ಪಡಿಸುತ್ತದೆ. ದಿವಂಗತರಿಗೆ ತನ್ನ ಗೌರವ ಸಮರ್ಪಿಸುತ್ತ ಅವರ ಪರಿವಾರದವರ ದುಃಖದಲ್ಲಿ ಪಾಲುಗೊಳ್ಳುತ್ತದೆ ಹಾಗೂ ಅವರಿಗೆ ಸಾಂತ್ವನ ಹೇಳುತ್ತದೆ. ಮಹಾಧಿವೇಶನದ ಸರ್ವಾಧ್ಯಕ್ಷ ಮಹಾತ್ಮಾ ಗಾಂಧೀಜಿಯವರಿಂದ ಸೂಚಿತ ಗೊತ್ತುವಳಿ ಸರ್ವಾನುಮತದಿಂದ ಅಂಗೀಕೃತ.

ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಸಲುವಾಗಿ ಸೇರಿಸಲಾಗಿದ್ದ ಹಣ 2 ಲಕ್ಷ 20 ಸಾವಿರ 829 ರೂ. ಐದು ಆಣೆ. ಇದರಲ್ಲಿ ಸ್ವಾಗತ ಸಮಿತಿ ಸದಸ್ಯರ ಶುಲ್ಕವೇ 1 ಲಕ್ಷ 49 ಸಾವಿರ 120 ರೂ. ಆಗಿತ್ತು. ಪ್ರತಿನಿಧಿಗಳ ಶುಲ್ಕದಿಂದ 18,280 ರೂ. ಸಂಗ್ರಹಿಸಲಾಗಿತ್ತು. ಅಧಿವೇಶನ ನೋಡಲು ಬಂದ ಜನರಿಂದ ಸಂಗ್ರಹ ಆಗಿದ್ದು 29390 ರೂ. ವಿವಿಧ ಪ್ರದರ್ಶನಗಳಿಗೆ ಬಂದ ಜನತೆಯಿಂದ ಪಡೆದ ಪ್ರವೇಶ ಶುಲ್ಕ 11601 ರೂ. ಇವು ಆದಾಯದ ಪ್ರಮುಖ ಮೂಲಗಳು.

2. ರಾಜಿ ಒಡಂಬಡಿಕೆ, ಹಾಗೂ ಸಾರ್ವತ್ರಿಕ ನೂಲುವಿಕೆ

ಕೈ ನೂಲು ವಂತಿಗೆ

ಅ. ಮಹಾತ್ಮಾ ಗಾಂಧಿ ಒಂದೆಡೆ ಹಾಗೂ ಇನ್ನೊಂದೆಡೆ ಸ್ವರಾಜ್ಯ ಪಕ್ಷದ ಪತಿಯಿಂದ ಕಾರ್ಯಶೀಲರಾದ ದೇಶಬಂಧು ಸಿ. ಆರ್. ದಾಸ್ ಪಂಡಿತ ಮೋತಿಲಾಲ ನೆಹರು ಮತ್ತಿತ್ತರರು ಇವರ ನಡುವೆ ಆದ ಈ ಒಡಂಬಡಿಕೆಯನ್ನು ಕಾಂಗ್ರೆಸ್ಸು ಅನುಮೋದಿಸಿ ಅಂಗೀಕರಿಸುತ್ತದೆ.

ರಾಜಿ ಒಡಂಬಡಿಕೆ

ಭಾರತದಲ್ಲಿಯ ಎಲ್ಲ ಪಕ್ಷಗಳ ಗುರಿ ಸ್ವರಾಜ್ಯವೊಂದೇ ಆಗಿರುವುದಾದರೂ ಬೇರೆ ಬೇರೆ ಗುಂಪುಗಳು ಪರಸ್ಪರರಿಗೆ ವಿರುದ್ಧವಾಗಿ ಕಾರ್ಯ ಮಾಡುವ ರೀತಿಯಲ್ಲಿ ಕೆಲಸ ನಡೆಸುತ್ತಿರುವುದರಿಂದ ದೇಶವು ತನ್ನ ಗುರಿ ಸಾಧನೆಯಲ್ಲಿ ಭಿನ್ನ ಭಿನ್ನವಾಗಿ ಒಡೆದು ಹೋದಂತೆ ಕಾಣುತ್ತದೆ. ಈ ರೀತಿಯ ಪರಸ್ಪರ ವಿರೋಧಿ ಚಟುವಟಿಕೆಗಳು ಸ್ವರಾಜ್ಯ ಸಾಧನೆಯಲ್ಲಿ ರಾಷ್ಟ್ರದ ಕಾರ್ಯ ಪ್ರಗತಿಯಲ್ಲಿ ಆತಂಕವೊಡ್ಡುತ್ತಿವೆ. ಈ ಎಲ್ಲ ಪಕ್ಷಗಳನ್ನು ಗುಂಪುಗಳನ್ನು ಕಾಂಗ್ರೆಸ್ಸಿನಲ್ಲಿ ಒಂದೇ ವೇದಿಕೆಯ ಮೇಲೆ ತರುವುದು ಎಲ್ಲರ ಉತ್ಕಟ ಇಚ್ಛೆಯಾಗಿದೆ. ಕಾಂಗ್ರೆಸ್ಸೇ ಹೀಗೆ ಎರಡು ವಿಚಾರಗಳ ಬಣಗಳಲ್ಲಿ ವಿಭಜಿಸಲ್ಪಟ್ಟುದರಿಂದ ರಾಷ್ಟ್ರ ಕಾರ್ಯಕ್ಕೆ ಅಪಾಯವಾಗಿ ಪರಿಣಮಿಸುತ್ತಿದೆ. ಹೀಗಾಗಿ ಎಲ್ಲರಿಗೂ ಸಾಮಾನ್ಯವಾಗಿರುವಂಥ ಉದ್ದೇಶಗಳ ಈಡೇರಿಕೆಗಾಗಿ ಈ ಎಲ್ಲ ಬೇರೆ ಬೇರೆ ಪಕ್ಷಗಳು ಮತ್ತೆ ಒಂದುಗೂಡಬೇಕೆಂಬುದು ಎಲ್ಲರ ಬಯಕೆಯಾಗಿದೆ. ಬಂಗಾಲದಲ್ಲಿ ಸ್ಥಳೀಯ ಸರಕಾರವು ಗವರ್ನರ್ ಜನರಲ್ಲನ ಮಂಜೂರಿಯನ್ನು ಪಡೆದು ನಡೆಸಿರುವ ದಮನಕಾರಿ ನೀತಿಯ ಕ್ರಿಯೆಗಳು ಕ್ರಮಗಳು ನಿಜವಾಗಿ ಯಾವುದೇ ಹಿಂಸಾಚಾರದಲ್ಲಿ ನಿರತರಾದವರ ವಿರುದ್ಧವಿರದೇ ಸಂವಿಧಾನಾತ್ಮಕವಾಗಿ ವ್ಯವಸ್ಥಿತ ಕಾಯ್ದೆ ಚೌಕಟ್ಟಿಗೆ ಒಳಪಟ್ಟು ಕ್ರಿಯಾಶೀಲವಾಗಿರುವಂಥ ಸ್ವರಾಜ್ಯ ಪಕ್ಷದವರ ವಿರುದ್ಧವೇ ನಡೆದಿರುವಂಥವುಗಳಾಗಿವೆ. ಆದ್ದರಿಂದ ಅಲ್ಲಿಯ ಸರಕಾರದ ದಮನಕಾರೀ ನೀತಿ ಹಾಗೂ ಕ್ರಿಯೆಗಳ ವಿರುದ್ಧ ಇಡೀ ರಾಷ್ಟ್ರವು ಒಮ್ಮುಖವಾಗಿ, ಸಂಘಟಿತವಾಗಿ ತನ್ನ ಏಕತ್ರಿತ ಬಲಾಢ್ಯ ಶಕ್ತಿ ಪ್ರದರ್ಶಿಸುವುದು ಅತ್ಯಗತ್ಯವೆನಿಸಿದೆ. ಇದಕ್ಕಾಗಿ ಎಲ್ಲ ಪಕ್ಷಗಳ ಬೆಂಬಲ ಸಹಕಾರಗಳನ್ನು ಕೋರಲಾಗುತ್ತಿದೆ. ಆದ್ದರಿಂದ ಕೆಳಗೆ ಸಹಿ ಮಾಡಿರುವ ನಾವೆಲ್ಲರೂ ಬೆಳಗಾವಿಯ ಈ ಕಾಂಗ್ರೆಸ್ ಅಧಿವೇಶನದಲ್ಲಿ ಎಲ್ಲ ಪಕ್ಷಗಳು ಎಲ್ಲ ಗುಂಪುಗಳು ಹಾಗೂ ಕಾಂಗ್ರೆಸ್ಸು ಈ ನಿರ್ಣಯವನ್ನು ಅಂಗೀಕರಿಸಬೇಕೆಂದು ಆಗ್ರಹಿಸುತ್ತ ನಿರ್ಣಯ ಮಂಡಿಸುತ್ತಿದ್ದೇವೆ.

ಭಾರತದ ಹೊರಗಡೆ ನಿರ್ಮಿಸಲಾಗುತ್ತಿರುವ ವಿದೇಶಿಯ ಬಟ್ಟೆಯ ಬಳಕೆಗೆ ಹಾಗೂ ಧರಿಸುವುದರ ಬಹಿಷ್ಕಾರಕ್ಕೆ ಸಂಬಂಧಿಸಿದ್ದನ್ನು ಹೊರತು ಪಡಿಸಿ ಕಾಂಗ್ರೆಸ್ಸು ಅಸಹಕಾರ ಆಂದೋಲನದ ತನ್ನ ರಾಷ್ಟ್ರವ್ಯಾಪಿ ಕಾರ್ಯಕ್ರಮವನ್ನು ಸದ್ಯಕ್ಕೆ ಸ್ಥಗಿತಗೊಳಿಸತಕ್ಕದ್ದು.

ಕಾಂಗ್ರೆಸ್ಸಿನ ಬೇರೆ ಬೇರೆ ವಿಭಾಗಗಳ ಚಟುವಟಿಕೆಗಳನ್ನು ಕಾಂಗ್ರೆಸ್ಸಿನೊಳಗಡೆಯೇ ಇರುವಂಥ ಬೇರೆ ಬೇರೆ ವಿಭಾಗಗಳವರು ಅಗತ್ಯತೆಗನುಸಾರ ಕೂಡಲೇ ನಿರ್ವಹಿಸಬೇಕು. ಕೈಯಿಂದ ನೂಲು ತೆಗೆಯುವ ಕೈಮಗ್ಗಗಳಲ್ಲಿ ನೇಯುವ ತತ್ಸಂಬಂಧದ ಎಲ್ಲ ಕೆಲಸಗಳನ್ನು ಕಾಂಗ್ರೆಸ್ಸಿಗರು ತಪ್ಪದೇ ನಿರ್ವಹಿಸಬೇಕು. ಈ ಕೆಲಸಗಳ ನಿರ್ವಹಣೆ ಹಾಗೂ ನೂಲುವ ನೇಯ್ಗೆ ಮಾಡುವ ಹಾಗೂ ಹೀಗೆ ತಯಾರಿಸಲಾದ ಖಾದಿ ಬಟ್ಟೆಯನ್ನೇ ಧರಿಸುವ ಕುರಿತು ಕಾಂಗ್ರೆಸ್ಸಿಗರು ಪ್ರಚಾರ ಮಾಡಬೇಕು. ವಿವಿಧ ಸಮಾಜಗಳವರ ನಡುವೆ, ವಿಶೇಷವಾಗಿ ಹಿಂದು-ಮುಸ್ಲಿಂಮರ ನಡುವೆ ಸೌಹಾರ್ದಯುತ ಸಂಬಂಧ ವರ್ಧಿಸಲು ಪ್ರಯತ್ನಿಸಬೇಕು. ಹಿಂದುಗಳಲ್ಲಿರುವ ಅಸ್ಪೃಶ್ಯತೆಯ ನಿವಾರಣೆಗೆ ಕಾಂಗ್ರೆಸ್ಸಿನ ಎಲ್ಲ ವಿಭಾಗಗಳವರೂ ಪ್ರಯತ್ನಿಸಬೇಕು. ಕೇಂದ್ರ ಹಾಗೂ ಪ್ರಾಂತೀಯ ಶಾಸನ ಮಂಡಳಗಳಿಗೆ ಸಂಬಂಧಿಸಿದ ಎಲ್ಲ ಕಾರ್ಯಗಳನ್ನು ಕಾಂಗ್ರೆಸ್ ಪರವಾಗಿ ಕಾಂಗ್ರೆಸ್ಸಿನ ಅವಿಭಾಜ್ಯ ಅಂಗವೆನ್ನುವ ರೀತಿಯಲ್ಲಿ ಸ್ವರಾಜ್ಯ ಪಕ್ಷದವರು ಕೈಕೊಳ್ಳಬೇಕು. ಇದಕ್ಕಾಗಿ ಸ್ವರಾಜ್ಯ ಪಕ್ಷವು ತನ್ನ ನಿಯಮಾವಳಿಗಳನ್ನು ರೂಪಿಸಿ ತನ್ನ ಸಾಧನ ಸಂಪತ್ತಿಯನ್ನೇ ಬಳಸಿ ಕಾರ್ಯ ಮಾಡಬೇಕು.

ಭಾರತದಾದ್ಯಂತ ಪ್ರತಿಯೊಬ್ಬರೂ ನೂಲು ತೆಗೆಯದೆ ಹೋದರೆ ಹಾಗೂ ಆ ರೀತಿ ನೂಲಲಾದ ಕೈ ನೂಲಿನ ದಾರಗಳಿಂದ ಕೈಮಗ್ಗಗಳ ಮೇಲೆ ಖಾದಿ ಬಟ್ಟೆಯ ನೇಯ್ಗೆ ನಡೆಯದೆ ಹೋದರೆ ಭಾರತದ ಸಮಸ್ತ ಜನತೆಗೆ ಬೇಕಾಗುವಷ್ಟು ಸ್ವದೇಶಿ ಅಥವಾ ಖಾದಿ ಬಟ್ಟೆಯನ್ನು ಎಲ್ಲರ ಉಡುಪುಗಳ ತಯಾರಿಕೆಗೆ ಪೂರೈಸಲು ಕಠಿಣವಾಗುತ್ತದೆ. ಹಾಗೂ ಸ್ವದೇಶಿ ಬಟ್ಟೆಯ ವಿಷಯದಲ್ಲಿ ಸ್ವಾವಲಂಬನ ಅಸಾಧ್ಯವಾಗುತ್ತದೆ, ಎಂಬುದು ಅನುಭವದಿಂದ ಸಿದ್ಧವಾದ ಮಾತಾಗಿದೆ. ಇಷ್ಟೇ ಅಲ್ಲದೇ ನೂಲುವಿಕೆಯ ಮಾಧ್ಯಮದಿಂದ ಭಾರತದ ಸಮಸ್ತ ಜನರು, ಮಹಿಳೆಯರು ಹಾಗೂ ಕಾಂಗ್ರೆಸ್ಸಿಗರ ನಡುವಿನ ಆತ್ಮೀಯ ಸಂಪರ್ಕ ಹಾಗೂ ಸಂಬಂಧಗಳು ವೃದ್ಧಿಗೊಳ್ಳುತ್ತವೆ. ಆದ್ದರಿಂದ ಸಾರ್ವತ್ರಿಕವಾಗಿ ನೂಲುವದನ್ನು ಕೈಮಗ್ಗದ ನೇಯ್ಗೆಯನ್ನು ತನ್ಮೂಲಕ ಉತ್ಪಾದಿತವಾದ ಉತ್ಪನ್ನಗಳನ್ನೇ, ಖಾದಿ ಬಟ್ಟೆಯನ್ನೇ ಉಪಯೋಗಿಸಬೇಕೆಂಬ ವ್ಯಾಪಕ ಪ್ರಚಾರ ನಡೆಯಬೇಕು. ಕಾಂಗ್ರೆಸ್ ಸಂವಿಧಾನದ ಏಳನೇ ವಿಧಿ ರದ್ದುಪಡಿಸಿ ಅದರ ಬದಲು ಮುಂದೆ ಉಲ್ಲೇಖಿಸಲಾಗುತ್ತಿರುವದನ್ನು ಸೇರ್ಪಡೆ ಮಾಡಬೇಕು.

1) ಕೈ ನೂಲು ಬಳಸದ ಹಾಗೂ ಕೈ ಮಗ್ಗಗಳಲ್ಲಿ ನೇಯ್ಗೆಯಾಗದಿರುವ ಬಟ್ಟೆ ಅಥವಾ ಖಾದಿಯನ್ನು ಧರಿಸದಿರುವ ಹಾಗೂ ಹದಿನೆಂಟು ವರ್ಷಗಳಾಗದ ಯಾವುದೇ ವ್ಯಕ್ತಿಯು

ಕಾಂಗ್ರೆಸ್ ಸಮಿತಿಯ ಅಥವಾ ಸಂಘಟನೆಯ ಸದಸ್ಯನಾಗಿರಲು ಸಾಧ್ಯವಿಲ್ಲ. ಕಾಂಗ್ರೆಸ್ಸಿನ ಅಥವಾ ಕಾಂಗ್ರೆಸ್ ಸಂಘಟಿಸುವ ಯಾವುದೇ ಸಭೆ, ಸಮಾರಂಭ, ಕಾರ್ಯಕ್ರಮಗಳಲ್ಲಿ ಅಂಥವರು ಭಾಗವಹಿಸಲು ಸಾಧ್ಯವಿಲ್ಲ. ಅದೇ ರೀತಿ ಪ್ರತಿ ತಿಂಗಳೂ ಸ್ವತ: ಕೈಯಿಂದ ನೂತ ಎರಡು ಸಾವಿರ ಯಾರ್ಡಿನಷ್ಟು ಕೈ ನೂಲನ್ನು ಸದಸ್ಯತ್ವ ವಂತಿಗೆಯಾಗಿ ಸಲ್ಲಿಸಲೇಬೇಕು. ಅನಾರೋಗ್ಯದ ಕಾರಣದಿಂದ ಅಥವಾ ಬೇರಾವುದೇ ಕಾರಣಕ್ಕಾಗಿ ಸ್ವತ: ನೂಲನ್ನು ತೆಗೆಯಲು ಸಾಧ್ಯವಾಗದೇ ಹೋದರೆ ಬೇರೆಯವರು ಸ್ವತ: ನೂತಿರುವ ಇಷ್ಟೇ ಪ್ರಮಾಣದ ಕೈ ನೂಲನ್ನು ಅಂಥವರಿಂದ ಪಡೆದಾದರೂ ಸಲ್ಲಿಸಲೇಬೇಕು. ಹೀಗೆ ಕೈ ನೂಲಿನ ವಂತಿಗೆ ಕೊಡುಗೆ ಸಲ್ಲಿಸದೇ ಹೋದಲ್ಲಿ ಅಂಥವರಿಗೆ ಹಾಗೂ ಅಂಥವಳಿಗೆ ಸಹ ಕಾಂಗ್ರೆಸ್ಸಿನ ಯಾವುದೇ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಾಧ್ಯವಿಲ್ಲ.

2) ಇಂಥದೊಂದು ರಾಜಿ ಒಡಂಬಡಿಕೆಯು ಕಾಂಗ್ರೆಸ್ಸಿನಲ್ಲಿಯ ಎರಡೂ ಬಣಗಳ ನಡುವೆ ಐಕ್ಯವುಂಟು ಮಾಡಲು ಹಾಗೂ ಇತರ ರಾಜಕೀಯ ಸಂಘಟನೆಗಳವರಿಗೆ ಕಾಂಗ್ರೆಸ್ಸಿನಲ್ಲಿ ಬಂದು ಸೇರಿಕೊಳ್ಳುವದಕ್ಕೆ ಸಾಧ್ಯವಾಗಲು ಸಹಾಯಕವಾಗುವದೆಂದು ಕಾಂಗ್ರೆಸ್ಸು ಆಶಿಸುತ್ತದೆ. ಸರಕಾರದ ಹೊಸ ಸುಗ್ರೀವಾಜ್ಞೆ ಅಥವಾ 1818 ರ 3 ನೇ ನಿಯಂತ್ರಣ ನಿಯಮದನ್ವಯ ಬಂಧಿಸಲ್ಪಟ್ಟ ಸ್ವರಾಜ್ಯ ಪಕ್ಷದವರನ್ನು ಹಾಗೂ ಬಂಧಿತ ಇತರರನ್ನು ಕಾಂಗ್ರೆಸ್ಸು ಮನಸಾರೆ ಅಭಿನಂದಿಸುತ್ತದೆ. ಭಾರತೀಯರು ತಮ್ಮ ಸ್ಥಾನಮಾನ, ಪ್ರತಿಷ್ಠೆ ಹಾಗೂ ಸ್ವಾತಂತ್ರ್ಯವನ್ನು ವ್ಯಕ್ತಪಡಿಸುವಂಥ ಶಕ್ತಿ ಸಾಮರ್ಥ್ಯಗಳನ್ನು ಸ್ವತ: ಹೊಂದುವತನಕ ಸರಕಾರದ ಈ ರೀತಿಯ ದಬ್ಬಾಳಿಕೆ, ಬಂಧನ ಸಹಿಸುವದು ಅನಿವಾರ್ಯವೆನಿಸುತ್ತವೆ. ವಿದೇಶಿ ಬಟ್ಟೆಗಳ ಬಳಕೆಯನ್ನು ಸಂಪೂರ್ಣ ನಿಲ್ಲಿಸುವತನಕ ಭಾರತೀಯರಿಗೆ ಇಂಥ ಶಕ್ತಿ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಅಥವಾ ಹೊಂದಲು ಸಾಧ್ಯವಾಗದೆಂಬುದೇ ಕಾಂಗ್ರೆಸ್ಸಿನ ನಿಲುವು ಅಥವಾ ಅಭಿಮತ. ಆದ್ದರಿಂದ ಈ ಮಹಾನ್ ರಾಷ್ಟ್ರೀಯ ಉದ್ದೇಶ ಸಾಧಿಸುವ ದೃಢ ನಿರ್ಧಾರ ಹಾಗೂ ಕಾತುರತೆಯನ್ನು ವ್ಯಕ್ತಪಡಿಸುವ ಒಂದು ಸಂಕೇತವೆಂಬ ದೃಷ್ಠಿಯಿಂದ ಪ್ರತಿಯೊಬ್ಬರೂ ಕೈನೂಲು ತೆಗೆಯುವದಕ್ಕೆ ಬದ್ದರಾಗಬೇಕಲ್ಲದೇ ಎಲ್ಲರೂ ಕಾಂಗ್ರೆಸ್ಸಿನಲ್ಲಿ ಸೇರಬೇಕೆಂಬುದು ಜನರಿಗೆ ಬಿನ್ನವಿಸಲಾ ಗುತ್ತದೆ.

3. ಪ್ರತಿಯೊಬ್ಬ ಭಾರತೀಯ ಪುರುಷ ಹಾಗೂ ಮಹಿಳೆ ವಿದೇಶಿಯ ಬಟ್ಟೆಗಳ ಬಳಕೆಯಿಲ್ಲವನ್ನೂ ಸಂಪೂರ್ಣ ಬಹಿಷ್ಕರಿಸಿ ಕೈ ನೂಲಿನಿಂದ ಸಿದ್ಧಪಡಿಸಲಾದ ಕೈಮಗ್ಗದ ಮೇಲೆಯೇ ನೇಯ್ಗೆ ಮಾಡಲಾದ ಖಾದಿಯನ್ನೇ ಧರಿಸತಕ್ಕದ್ದು. ಮಿಕ್ಕೆಲ್ಲ ಬಟ್ಟೆಗಳನ್ನು ಬಹಿಷ್ಕರಿಸತಕ್ಕದ್ದು ಎಂದು ಕಾಂಗ್ರೆಸ್ಸು ನಿರೀಕ್ಷಿಸುತ್ತದೆ.

ಅಧಿವೇಶನದ ಪ್ರತಿನಿಧಿ ಶುಲ್ಕ ಒಂದು ರೂಪಾಯಿ ಇತ್ತು. ಇದನ್ನು ಹತ್ತು ರೂಪಾಯಿಯಿಂದ ಒಂದು ರೂಪಾಯಿಗೆ ಇಳಿಸಿದ್ದಕ್ಕೆ ಗಾಂಧೀಜಿ ಸಂತಸ ವ್ಯಕ್ತ ಪಡಿಸಿದ್ದರು.

ಈ ಉದ್ದೇಶ ಸಾಧನೆಯಲ್ಲಿ ಸ್ವಲ್ಪ ವಿಳಂಬವಾಗದಿರಲು ಎಲ್ಲ ಕಾಂಗ್ರೆಸ್ ಸದಸ್ಯರು ಚರಖಾದ ಮೇಲೆ ಸ್ವತಃ ನೂಲು ತೆಗೆಯಲೇಬೇಕು. ಚರಖಾದ ಮೇಲೆ ನೂಲುವುದನ್ನು ಪ್ರಚಾರ ಮಾಡಲೇಬೇಕು. ಅದೇ ರೀತಿ ಕೈಮಗ್ಗದ ಮೇಲೆ ಇದೇ ನೂಲನ್ನು ಬಳಸಿ ನೇಯ್ಗೆ ಹಾಗೂ ಖಾದಿ ಬಟ್ಟೆ ತಯಾರಿಕೆ ಬಳಕೆ ಹಾಗೂ ಮಾರಾಟ ಇವುಗಳನ್ನು ಪ್ರಚಾರ ಮಾಡಬೇಕು.

4. ಎಲ್ಲ ಸಂಸ್ಥಾನಿಕರು, ರಾಜಕುಮಾರರು, ರಾಜಕುಮಾರಿಯರು, ಭಾರತದ ಶ್ರೀಮಂತ ವರ್ಗದವರು, ಕಾಂಗ್ರೆಸ್ಸಿನಲ್ಲಿ ಸದಸ್ಯತ್ವ ಅಥವಾ ಪ್ರಾತಿನಿಧ್ಯ ಹೊಂದದವರೂ ಬೇರೆ ರಾಜಕೀಯ ಪಕ್ಷಗಳವರು, ಬೇರೆ ಸಂಘಟನೆಗಳವರು ನಗರ ಪಾಲಿಕೆ, ಸ್ಥಳೀಯ ಸಂಸ್ಥೆ ಮಂಡಳಿ, ಪಂಚಾಯತಿ ಅಥವಾ ಅಂತಹ ಸಂಸ್ಥೆಗಳಲ್ಲಿ ಸದಸ್ಯರಾಗಿರುವವರು ಚರಖಾದ ಮೇಲೆ ನೂಲುವುದರ ಪ್ರಚಾರ ಮಾಡಲು, ಸ್ವತಃ ಕೈನೂಲು ತೆಗೆಯುವುದಕ್ಕೆ ತೊಡಗಲು ಸ್ವತಃ ಕೈಮಗ್ಗದ ಮೇಲೆ ತಯಾರಾದ ಖಾದಿ ಬಟ್ಟೆ ಧರಿಸಲು, ಪ್ರಚಾರ ಮಾಡಲು ಹಾಗೂ ಕಲಾತ್ಮಕ ರೀತಿಯ ಅಂಥ ಉತ್ಕೃಷ್ಟ ಖಾದಿ ತಯಾರಿಕೆಗೆ ಅಂಥ ಕುಶಲ ಕರ್ಮಿಗಳಿಗೆ ಉದಾರ ಪ್ರೋತ್ಸಾಹ ನೀಡಬೇಕೆಂದು ಕಾಂಗ್ರೆಸ್ಸು ಕೇಳಿಕೊಳ್ಳುತ್ತದೆ.

5. ಅದೇ ರೀತಿ ವಿದೇಶೀಯ ಬಟ್ಟೆ ಹಾಗೂ ಗಿರಣಿ ನೂಲಿನ ವ್ಯಾಪಾರದಲ್ಲಿ ತೊಡಗಿರುವ ವರ್ತಕರು ರಾಷ್ಟ್ರೀಯ ಹಿತವನ್ನು ಗಮನಿಸಿ ಗಿರಣಿ ಬಟ್ಟೆ, ಗಿರಣಿ ನೂಲು, ವಿದೇಶೀ ಬಟ್ಟೆ, ವಿದೇಶೀಯ ನೂಲಿನ ಆಯಾತವನ್ನು ಸಂಪೂರ್ಣವಾಗಿ ಕೊನೆಗೊಳಿಸಿ, ರಾಷ್ಟ್ರೀಯ ಕುಟಿರೋದ್ಯೋಗಕ್ಕೆ ನೆರವಾಗಲು ಖಾದಿಯ ವ್ಯಾಪಾರ ಕೈಕೊಳ್ಳಬೇಕೆಂದೂ ಕಾಂಗ್ರೆಸ್ಸು ವಿನಂತಿಸುತ್ತದೆ.

6. ಖಾದಿಯಂತೆಯೇ ತೋರುವ ಗಿರಣಿಗಳಲ್ಲಿ ಉತ್ಪಾದಿತವಾದ ಬೇರೆ ಬೇರೆ ಬಟ್ಟೆ, ನೂಲಿನ ಗಿರಣಿಗಳಲ್ಲಿ ಸಿದ್ಧವಾದ ನೂಲಿನಿಂದ ಮಗ್ಗಗಳಲ್ಲಿ ನೇಯ್ಗೆ ಮಾಡಲಾದ ಬಟ್ಟೆಗಳನ್ನೇ ಖಾದಿ ಬಟ್ಟೆ ಎಂದು ಗಿರಣಿಗಳ ಒಡೆಯರು ಹಾಗೂ ಇತರ ಬಟ್ಟೆ ತಯಾರಕರು ಮಾರುಕಟ್ಟೆಯಲ್ಲಿ ಮಾರಾಟಕ್ಕೆ ಬಿಡುಗಡೆ ಮಾಡುತ್ತಿರುವದನ್ನು ಕಾಂಗ್ರೆಸ್ಸು ಗಮನಿಸಿದೆ. ಕಾಂಗ್ರೆಸ್ಸು ಅಂತಹ ಗಿರಣಿ ಮಾಲಿಕರಿಗೆ ಹಾಗೂ ಬಟ್ಟೆ ಉತ್ಪಾದಕರಿಗೆ ವರ್ತಕರಿಗೆ ಸೂಕ್ತವಲ್ಲದ ಇಂಥ ಅಕ್ರಮವನ್ನು ಇನ್ನು ಮುಂದುವರಿಸುವುದು ಬೇಡ. ಭಾರತದ ಪರಂಪರಾಗತ ಕುಟಿರೋದ್ಯೋಗಗಳನ್ನು ಬೆಂಬಲಿಸುವುದನ್ನು ಎಲ್ಲರೂ ರೂಢಿಸಿಕೊಳ್ಳಬೇಕಲ್ಲದೇ ವಿಶೇಷವಾಗಿ ಕಾಂಗ್ರೆಸ್ಸಿನ ಪ್ರಭಾವಕ್ಕೆ ಒಳಗಾಗದ ಪ್ರದೇಶಗಳಲ್ಲಿ ನಡೆದಿರುವ ವಿದೇಶೀಯ ನೂಲು, ಬಟ್ಟೆ ಗಿರಣಿಯಲ್ಲಿಯ ಉತ್ಪಾದಿತ ಬಟ್ಟೆ ನೂಲುಗಳ ಆಯಾತವನ್ನು ಇನ್ನು ಮುಂದೆ ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಕಾಂಗ್ರೆಸ್ಸು ವಿನಂತಿಸುತ್ತದೆ.

7. ಹಿಂದು, ಮುಸ್ಲಿಂ ಹಾಗೂ ಬೇರೆ ಧರ್ಮಗಳ ಧುರೀಣರು, ಪೀಠಾಧಿಪತಿಗಳು ಎಲ್ಲ ಧಾರ್ಮಿಕ ಸಮಾವೇಶಗಳಲ್ಲಿ ಖಾದಿಯ ಬಳಕೆಯ ಪ್ರಚಾರ ಹಾಗೂ ವಿದೇಶೀಯ ಬಟ್ಟೆಗಳ ಗಿರಣಿ ಬಟ್ಟೆಗಳ ಬಹಿಷ್ಕಾರವನ್ನು ಕುರಿತು ಬೋಧಿಸತಕ್ಕದ್ದೆಂದು ಕಾಂಗ್ರೆಸ್ಸು ಮನವಿ ಮಾಡುತ್ತದೆ.

ಬಿ. ಕಾಂಗ್ರೆಸ್ಸಿನ ಸಂವಿಧಾನದ ಸದ್ಯದ ಏಳನೇ ಕಲಮನ್ನು ರದ್ದು ಪಡಿಸಿ ಅದರ ಸ್ಥಳದಲ್ಲಿ ಹೀಗೆ ಸೇರಿಸಬೇಕೆಂದು ಕಾಂಗ್ರೆಸ್ಸು ತೀರ್ಮಾನಿಸುತ್ತದೆ.

1. ನಾಲ್ಕನೇ ವಿಧಿ ಅಥವಾ ನಿಯಮದಡಿ ಅನರ್ಹಗೊಳಿಸದೇ ಇರುವ ಯಾವುದೇ ವ್ಯಕ್ತಿಯು ಪ್ರಾಂತೀಯ ಕಾಂಗ್ರೆಸ್ ಸಮಿತಿಯಿಂದ ನಿಯಂತ್ರಿಸಲ್ಪಡುವ ಯಾವುದೇ ಪ್ರಾಥಮಿಕ ಸಂಘಟನೆಗೆ ಸದಸ್ಯನಾಗುವ ಹಕ್ಕನ್ನು ಹೊಂದಿರುತ್ತಾನೆ. ಕೈಯಿಂದ ಚರಖಾದ ಮೇಲೆ ನೂಲು ತೆಗೆದು ಅಂಥ ನೂಲಿನಿಂದ ನೇಯ್ಗೆ ಮಾಡಲ್ಪಟ್ಟ ಖಾದಿಯನ್ನೇ ಧರಿಸುವವ ಹಾಗೂ ಧರಿಸುವವಳಷ್ಟೇ ಯಾವುದೇ ಕಾಂಗ್ರೆಸ್ ಸಮಿತಿ ಸದಸ್ಯನಾಗಿರಬಹುದು. ರಾಜಕೀಯ ಹಾಗೂ ಕಾಂಗ್ರೆಸ್ ಸಭೆಗಳಲ್ಲಿ ಸಮಾರಂಭಗಳಲ್ಲಿ ಇಂಥ ಖಾದಿಧಾರಿಯಷ್ಟೇ ಭಾಗವಹಿಸಲು ಅರ್ಹನೆನಿಸುತ್ತಾನೆ ಎಂಬ ನಿಯಮ ಎಲ್ಲಾ ಸದಸ್ಯರಿಗೂ ಅನ್ವಯವಾಗುತ್ತದೆ. ಸ್ವತಃ ಚರಖಾದ ಮೇಲೆ ನೂತು ವಾರ್ಷಿಕ 20 ಸಾವಿರ ಯಾರ್ಡ ಕೈನೂಲನ್ನು ವಂತಿಗೆಯಾಗಿ ಸಲ್ಲಿಸುವುದು ಪ್ರತಿಯೊಬ್ಬ ಸದಸ್ಯನಿಗೂ ಕಡ್ಡಾಯವಾಗಿರುತ್ತದೆ. ಅನಾರೋಗ್ಯದ ನಿಮಿತ್ತ ಅಥವಾ ಬೇರೆ ಕಾರಣಗಳಿಗಾಗಿ ಈ ರೀತಿ ಕೈ ನೂಲನ್ನು ಒಪ್ಪಿಸುವುದು ಸಾಧ್ಯವಿಲ್ಲವಾದರೆ ಅಥವಾ ಇನ್ನಾವುದೇ ಕಾರಣಕ್ಕೆ ಅಸಾಧ್ಯವೆನಿಸುವುದಾದರೆ ಅಂಥವರು ಬೇರೆಯವರಿಂದ ಚರಖಾದಿಂದ ನೂಲಲ್ಪಟ್ಟ ಅಷ್ಟೇ ಪ್ರಮಾಣದ ಕೈ ನೂಲನ್ನು ಪಡೆದು ವಂತಿಗೆಯಾಗಿ ಒಪ್ಪಿಸಿ ಈ ವಿಧಿಯ ಅಗತ್ಯತೆ ಪೂರೈಸಬಹುದಾಗಿದೆ. ಒಬ್ಬರೇ ವ್ಯಕ್ತಿ ಎರಡು ಕಾಂಗ್ರೆಸ್ ಸಂಘಟನೆಗಳಿಗೆ ಏಕ ಕಾಲಕ್ಕೆ ಸದಸ್ಯನಾಗಿರಲು ಸಾಧ್ಯವಿಲ್ಲ.

2. ಸದಸ್ಯನಾಗಬೇಕಾದ ಅವಧಿಯು ಪ್ರತಿವರ್ಷ ಜನೆವರಿ 1 ರಿಂದ ಡಿಸೆಂಬರ್ 31 ರ ವರೆಗಿರುತ್ತದೆ. ಸದಸ್ಯತ್ವ ವಂತಿಗೆಯನ್ನು ಮುಂಗಡವಾಗಿ ಇಲ್ಲವೇ ಮಾಸಿಕ ಕಂತುಗಳಲ್ಲಿ ಸಲ್ಲಿಸಬಹುದು. ಅದೇ ರೀತಿ ಕೈಯಿಂದ ನೂತ ನೂಲನ್ನು ಮಾಸಿಕ 2000 ಯಾರ್ಡ ಪ್ರಮಾಣದಲ್ಲಿ ಮುಂಗಡ ಸಲ್ಲಿಸಿ ಬಿಡಬಹುದಾಗಿದೆ. ಯಾವುದೇ ವರ್ಷದಲ್ಲಿ ನಡುವೆಯೇ ಸದಸ್ಯರಾಗುವವರು ವಂತಿಗೆ ಹಣ ಹಾಗೂ ಕೈ ನೂಲನ್ನು ಇಡೀ ವರ್ಷಕ್ಕೆ ಆಗುವ ಪ್ರಮಾಣದಷ್ಟೇ ಸಲ್ಲಿಸುವುದು ಅತ್ಯಗತ್ಯ.

ಕಾಂಗ್ರೆಸ್ ಬಾವಿ ಎಂದು ಈಗ ಕರೆಯುವ ಬಾವಿಗೆ ಆಗ 4370 ರೂ. ಖರ್ಚು ಮಾಡಲಾಗಿತ್ತು.

ಮಧ್ಯಂತರ ವ್ಯವಸ್ಥೆ

1925 ರ ಅವಧಿಗೆ ಇಡೀ ವರ್ಷಕ್ಕೆ ಸಲ್ಲಿಸಬೇಕಾದ ನೂಲು 20 ಸಾವಿರ ಯಾರ್ಡ ಅಷ್ಟೇ. ಆದರೆ ಮಾರ್ಚ 1 ರೊಳಗೆ ಅದನ್ನು ಒಟ್ಟಿಗೆ ಅಥವಾ ಕಂತುಗಳಲ್ಲಿ ಸಲ್ಲಿಸಬೇಕು.

3. ಸ್ವತಃ ಕೈಯಿಂದ ನೂಲಲಾದ ನೂಲಿನ ವಂತಿಗೆ ಹಾಗೂ ಸದಸ್ಯತ್ವದ ವಂತಿಗೆ ಹಣ ಈ ಎರಡನ್ನು ಸಲ್ಲಿಸದಿರುವವರಿಗೆ ಅಥವಾ ಈ ಸದಸ್ಯತ್ವ ವಂತಿಗೆ ಬಾಕಿ ಉಳಿಸಿಕೊಂಡವರಿಗೆ ಕಾಂಗ್ರೆಸ್ ಪಕ್ಷದ ಯಾವುದೇ ಸಭೆ ಸಮಾರಂಭ, ಸಮಿತಿಯ ಉಪ ಸಮಿತಿಗಳ ಚುನಾವಣೆಯಲ್ಲಿ ಭಾಗವಹಿಸುವ ಮತದಾನ ಮಾಡುವ ಅಧಿಕಾರವಿರದು. ಯಾವುದೇ ಸದಸ್ಯನು ಸದಸ್ಯೆಯು ಈ ವಂತಿಗೆಯ ಬಾಕಿಯನ್ನು ಹಾಗೂ ಆಗಿನ ಚಾಲ್ತಿ ತಿಂಗಳಲ್ಲಿಯ ವಂತಿಗೆಯನ್ನು ಪೂರ್ಣ ಕಟ್ಟಿದ ತಕ್ಷಣ ಸದಸ್ಯತ್ವದ ಎಲ್ಲ ಅಧಿಕಾರಗಳನ್ನು ಮತಾಧಿಕಾರವನ್ನು ಹೊಂದಿರಲು ಅರ್ಹತೆ ಪಡೆಯುತ್ತಾರೆ.

ಪ್ರತಿಯೊಂದು ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಗೆ ಈ ವಿಧಿ ಅಥವಾ ನಿಯಮದ ಪ್ರಕಾರ ಪ್ರತಿ ತಿಂಗಳು ಸದಸ್ಯರ ವಂತಿಗೆ ಹಾಗೂ ಕೈನೂಲು ವಂತಿಗೆಯನ್ನು ತಪ್ಪದೇ ಕಳುಹಿಸತಕ್ಕದ್ದು. ವಂತಿಗೆಯ ಪ್ರತಿಶತ ಹತ್ತರಷ್ಟು ಕೈನೂಲನ್ನು ಇಲ್ಲವೇ ಅದರ ಮೌಲ್ಯವನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಸಲ್ಲಿಸತಕ್ಕದ್ದು.

5. ಏಳನೇಯ ವಿಧಿ (ಇ) ಹಾಗೂ ಒಂಬತ್ತನೆಯ ವಿಧಿ (ಬಿ) ಇವುಗಳನ್ನು ಪ್ರಸಕ್ತ ಸಂವಿಧಾನದಿಂದ ತೆಗೆದು ಹಾಕಬೇಕು ಎಂದು ನಿರ್ಣಯಿಸಲಾಗಿದೆ.

ದೇಶಬಂಧು ಚಿತ್ತರಂಜನ ದಾಸರು ಇಂಗ್ಲೀಷನಲ್ಲಿ ಈ ಗೊತ್ತುವಳಿಯನ್ನು ಮಂಡಿಸಿದರು. ಶ್ರೀ ಎಸ್.ವ್ಹಿ. ಕೌಜಲಗಿಯವರು ಕನ್ನಡ ಹಾಗೂ ಇಂಗ್ಲೀಷನಲ್ಲಿ ಎನ್.ಸಿ. ಕೇಳಕರರು ಮರಾಠಿಯಲ್ಲಿ ಎಂ.ವ್ಹಿ ಅಭ್ಯಂಕರ ಹಾಗೂ ಪಂಡಿತ ಮೋತಿಲಾಲ ನೆಹರು ಇವರು ಇಂಗ್ಲೀಷಿನಲ್ಲಿ ಅನುಮೋದನೆ ನೀಡಿ ಗೊತ್ತುವಳಿಯನ್ನು ಸಮರ್ಥಿಸಿದರು. ಮೌಲಾನಾ ಹಸ್ರತ ಮೋಹಾನಿ, ಅಜಾದ ಸೋಭಾನಿ ಇವರು ಉರ್ದುದಲ್ಲಿ ಸ್ವಾಮಿ ಗೋವಿಂದಾನಂದರು ಇಂಗ್ಲೀಷಿನಲ್ಲಿ ಗೊತ್ತುವಳಿಯನ್ನು ವಿರೋಧಿಸಿದರು.

ಗೊತ್ತುವಳಿ ನಂತರ ಬಹುಮತದಿಂದ ಅಂಗೀಕೃತವಾಯಿತು.



ಎರಡನೇ ದಿನ (27.12.1924)

3. ಶ್ರದ್ಧಾಂಜಲಿ ಠರಾವು

ಮಹಾಧಿವೇಶನದ ಸಭಾಧ್ಯಕ್ಷರಾದ ಮಹಾತ್ಮಾ ಗಾಂಧೀಜಿಯವರು ಶ್ರೀ ಜಿ.ಎಂ. ಭುರ್‌ಗ್ರಿಯವರ ನಿಧನದ ಬಗ್ಗೆ ದುಃಖ ವ್ಯಕ್ತಪಡಿಸಿ ಅವರ ಆತ್ಮಕ್ಕೆ ಶಾಂತಿ ಕೋರುವ ಹಾಗೂ ಕುಟುಂಬದವರ ದುಃಖದಲ್ಲಿ ಪಾಲುಗೊಳ್ಳುವ ಠರಾವನ್ನು ಮಂಡಿಸಿದರು. ಗೊತ್ತುವಳಿಯು ಅಂಗೀಕೃತವಾಯಿತು.

4. ಸೇವಾ ಪ್ರಶಂಸೆಯ ಠರಾವು

ಶ್ರೀಮತಿ ಸರೋಜಿನಿ ನಾಯಡು ಅವರು ಸಾಗರೋತ್ತರ ಭಾರತೀಯರ ಹಿತಕ್ಕಾಗಿ ಸಲ್ಲಿಸಿದ ಅಪಾರ ಸೇವೆಯನ್ನು ಕುರಿತು ಕಾಂಗ್ರೆಸ್ಸು ತನ್ನ ಅಪಾರ ಪ್ರಶಂಸೆಯನ್ನು ವ್ಯಕ್ತಪಡಿಸುತ್ತದೆ. ಶ್ರೀಮತಿ ಸರೋಜಿನಿಯವರು ಸಾಗರೋತ್ತರ ಭಾರತೀಯರ ಶ್ರೇಯೋಭಿವೃದ್ಧಿಗಾಗಿ ತುಂಬಾ ಶ್ರದ್ಧೆಯಿಂದ ಚೈತನ್ಯಯುತರಾಗಿ ಸೇವೆ ಸಲ್ಲಿಸಿ ಅವರೆಲ್ಲರ ಮನಸ್ಸನ್ನು ಗೆದ್ದುದಷ್ಟೇ ಅಲ್ಲದೇ ತಮ್ಮ ಪ್ರಭಾವಿಯಾದ ಹಾಗೂ ಎಲ್ಲರ ಮನ ಗೆಲ್ಲುವ ವಿಶೇಷ ವಾಕ್ಚಾತುರ್ಯ ಹಾಗೂ ಸ್ಪಷ್ಟತೆಯ ಮೂಲಕ ಐರೋಪ್ಯರು ಸಹ ತಮ್ಮ ಮಾತುಗಳನ್ನು ಕೇಳುವಂತೆ ಮಾಡಿದ್ದಾರೆ. ಸಾಗರೋತ್ತರ ಭಾರತೀಯರ ಬಗ್ಗೆ ಅವರಲ್ಲಿಯೂ ಅನುಕಂಪ ಹುಟ್ಟುವಂತೆ ಮಾಡಿದ್ದಾರೆ. ಅವರು ಈ ವಿಶೇಷ ಸಾಧನೆಗೈದುದನ್ನು ಕಾಂಗ್ರೆಸ್ಸು ಲಕ್ಷಕ್ಕೆ ತಂದುಕೊಂಡು ತನ್ನ ಮೆಚ್ಚುಗೆ ಸೂಚಿಸುತ್ತದೆ ಎಂಬ ಇನ್ನೊಂದು ಗೊತ್ತುವಳಿಯನ್ನು ಅಧ್ಯಕ್ಷರೇ ಮಂಡಿಸಿದರು.

ಅದೇ ರೀತಿ ಕೆನ್ಯಾದಲ್ಲಿಯ ಭಾರತ ನಿವಾಸಿಗಳಿಗೆ ಸರ್ವಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಶ್ರೀ ವಝೆ ಹಾಗೂ ಪಂಡಿತ ಬನಾರಸೀದಾಸ ಚತುರ್ವೇದಿಯವರು ಸಲ್ಲಿಸಿದ ಸೇವೆಯನ್ನು ಕಾಂಗ್ರೆಸ್ಸು ಮೆಚ್ಚಿದೆಂದು ಗಾಂಧೀಜಿ ಗೊತ್ತುವಳಿಯಲ್ಲಿ ಉಲ್ಲೇಖಿಸಿದರು.

5. ಬ್ರಹ್ಮದೇಶದ ಜನರ ಬಗ್ಗೆ ಸಹಾನುಭೂತಿ

ಹಲವಾರು ಸಂಕಟ, ತೊಂದರೆಗಳಲ್ಲಿ ಸಿಲುಕಿರುವ ಬ್ರಹ್ಮ ದೇಶದ ಜನರ ಬಗ್ಗೆ ಕಾಂಗ್ರೆಸ್ಸು ತನ್ನ ತೀವ್ರ ಸಹಾನುಭೂತಿ ವ್ಯಕ್ತ ಪಡಿಸುತ್ತದೆಯಲ್ಲದೇ ಆಡಳಿತದ ದಬ್ಬಾಳಿಕೆಯಿಂದ ಅವರನ್ನು ಹತ್ತಿಕ್ಕುವುದಾಗಲೀ ಅವರ ಧ್ವನಿ ಅಡಗಿಸುವದಕ್ಕಾಗಲೀ ಸಾಧ್ಯವಿಲ್ಲವೆಂದು ತನ್ನ ಅಚಲ ವಿಶ್ವಾಸ ವ್ಯಕ್ತ ಪಡಿಸುತ್ತದೆ.

ಅಲ್ಲಿಯ ಕೆಲ ಭಾರತೀಯ ನಿವಾಸಿಗಳು ಮತೀಯ ಪ್ರಾತಿನಿಧ್ಯ ಕೇಳುತ್ತಿರುವುದರ ಬಗ್ಗೆ ಕಾಂಗ್ರೆಸ್ಸು ತನ್ನ ಖೇದ ವ್ಯಕ್ತ ಪಡಿಸುತ್ತ ತಾತ್ವಿಕವಾಗಿ ತುಂಬಾ ಕೆಟ್ಟದಾದ ಪ್ರತ್ಯೇಕತಾ ವಾದ ಇದು ಆಗಿದ್ದು ಇಂಥ ಬೇಡಿಕೆಯನ್ನು ಅಲ್ಲಿಯ ಭಾರತೀಯರು ಯಾವಾಗಲೂ ಮುಂದಿರಿಸದಿರಲಿ ಎಂದು ಕೇಳಿಕೊಳ್ಳುತ್ತದೆ.

ಶ್ರೀ ಎಸ್.ಎ.ಎಸ್. ತಯ್ಯಬ್ಜೀಯವರು ಹಿಂದೀಯಲ್ಲಿ ಮಂಡಿಸಿದ ಈ ಸೂಚನೆಯನ್ನು ಶ್ರೀ ವ್ಹಿ ಮದನಜಿತ ಅವರು ಇಂಗ್ಲೀಷನಲ್ಲಿ ಅನುಮೋದಿಸಿದರು. ಶ್ರೀ ಎಸ್. ಶ್ರೀನಿವಾಸ ಆಯ್ಯಂಗಾರರು ಸೂಚನೆಯನ್ನು ಇಂಗ್ಲೀಷಿನಲ್ಲಿ ಸಮರ್ಥಿಸಿ ಮಾತನಾಡಿದರು.

6. ಕೋಹಟ್ ಹಾಗೂ ಗುಲಬರ್ಗಾ ಕುರಿತು ಠರಾವು

ಹಿಂದು - ಮುಸ್ಲಿಮರ ನಡುವಣ ದ್ವೇಷ ಹಾಗೂ ಘರ್ಷಣೆಯನ್ನು ಕುರಿತು ಮತ್ತು ಭಾರತದ ವಿವಿಧ ಭಾಗಗಳಲ್ಲಿ ನಡೆದ ದೊಂಬಿಗಳ ಬಗ್ಗೆ ಕಾಂಗ್ರೆಸ್ಸು ತನ್ನ ತೀವ್ರ ವಿಷಾದ ವ್ಯಕ್ತ ಪಡಿಸುತ್ತದೆ. ಅನೇಕರ ಸಾವು, ದೇವಾಲಯಗಳನ್ನು ಒಳಗೊಂಡಂತೆಯೇ ಸಂಬಂಧಿಸಿದ ಆಸ್ತಿ ಪಾಸ್ತಿಗಳ ಅಪಾರ ಹಾನಿಯುಂಟಾಗಿರುವ ಕೋಹಟ್‌ದಲ್ಲಿಯ ಇತ್ತೀಚಿನ ದೊಂಬಿಗಳ ಬಗ್ಗೆ ಕಾಂಗ್ರೆಸ್ಸು ತೀವ್ರ ಖೇದ ವ್ಯಕ್ತ ಪಡಿಸುತ್ತ ಜನರ ಪ್ರಾಣ ಹಾಗೂ ಆಸ್ತಿ ಪಾಸ್ತಿಗಳ ರಕ್ಷಣೆಯ ಪ್ರಾಥಮಿಕ ಕರ್ತವ್ಯವನ್ನು ನಿರ್ವಹಿಸುವಲ್ಲಿ ಅಲ್ಲಿಯ ಸ್ಥಳೀಯ ಆಡಳಿತವು ಸಂಪೂರ್ಣ ವಿಫಲಗೊಂಡಿದೆಂದು ಅಭಿಪ್ರಾಯ ಪಡುತ್ತದೆ. ಕೋಹಟ್‌ದಿಂದ ಹಿಂದು ಜನರು ಶಹರ ಬಿಟ್ಟು ಹೊರಗಡೆ ಪಲಾಯನ ಮಾಡಬೇಕಾದ ಅಸುರಕ್ಷಿತ ದುಸ್ಥಿತಿಗೆ ದಯನೀಯ ಪರಿಸ್ಥಿತಿಗೆ ತಲುಪಿದುದರ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತ ಪಡಿಸುತ್ತ ಕೋಹತದ ಮುಸಲ್ಮಾನರು ಹಿಂದೂ ಜನರ ಪ್ರಾಣ ಹಾಗೂ ಆಸ್ತಿ ಪಾಸ್ತಿಗಳ ಸಂಪೂರ್ಣ

ರಕ್ಷಣೆಯ ಭರವಸೆ ನೀಡಿ ಗೌರವಾನ್ವಿತ ಸ್ನೇಹಿತರಿಗೆ ಪ್ರೀತಿಯ ನೆರೆ ಹೊರೆಯವರಿಗೆ ಕರೆಯುವ ರೀತಿಯಲ್ಲಿ ನಗರಕ್ಕೆ ಮರಳುವಂತೆ ನಿರಾಶ್ರಿತ ಹಿಂದುಗಳಿಗೆ ಆಮಂತ್ರಿಸಬೇಕೆಂದು ಬಿನ್ನವಿಸುತ್ತದೆ. ಕೋಹತದ ಮುಸಲ್ಮಾನರಿಂದ ಇಂಥ ಗೌರವಯುತ ಆಮಂತ್ರಣ ಬಾರದ ಹೊರತು ಹಾಗೂ ಹಿಂದು - ಮುಸಲ್ಮಾನ ನೇತಾರರು ಸಲಹೆ ನೀಡುವವರೆಗೆ ಹಿಂದು ನಿರಾಶ್ರಿತರು ಕೋಹತಕ್ಕೆ ಮರಳಕೂಡದೆಂದು ಕಾಂಗ್ರೆಸ್ಸು ಸಲಹೆ ನೀಡುತ್ತದೆ. ಹಿಂದುಗಳಾಗಲೀ, ಮುಸಲ್ಮಾನರಾಗಲಿ ಯಾರೇ ಆದರೂ ಕೋಹತದ ದುರಂತದ ಬಗ್ಗೆ ಭಾರತ ಸರಕಾರದ ಅಥವಾ ಇತರರ ತೀರ್ಮಾನಗಳನ್ನು ಒಪ್ಪಿಕೊಳ್ಳುವುದು ಬೇಡ. ಈ ದುರ್ದೈವೀ ಘಟನೆಯನ್ನು ಕುರಿತಂತೆ ಐಕ್ಯ ಪರಿಷತ್ತಿನಿಂದ ನೇಮಕಗೊಂಡ ಮಂಡಳಿ ಅಥವಾ ಇತರ ಪ್ರಾತಿನಿಧಿಕ ಸಮಿತಿಯು ಅಧ್ಯಯನ ನಡೆಸಿ ತನ್ನ ನಿರ್ಣಯಗಳನ್ನು ಸಾರುವತನಕ ಭಾರತ ಸರಕಾರ ಹಾಗೂ ಇತರರ ನಿರ್ಣಯಗಳನ್ನು ಕುರಿತು ಅಭಿಪ್ರಾಯವನ್ನು ಸ್ಥಗಿತವಿರಿಸಬೇಕೆಂದು ಕೋರುತ್ತದೆ.

ಗುಲಬರ್ಗಾ ದೊಂಬಿಗಳಲ್ಲಿ ಹಾನಿಗೊಳಗಾದವರ ಬಗ್ಗೆಯೂ ಖೇದವನ್ನು ಗಲಭೆ ಪೀಡಿತರಿಗಾಗಿ ತೀವ್ರ ಸಹಾನುಭೂತಿ ವ್ಯಕ್ತ ಪಡಿಸುತ್ತಿದೆ. ಆ ನಗರದಲ್ಲಿಯ ಪೂಜಾ ಸ್ಥಳಗಳಿಗೆ ಅಪವಿತ್ರತೆಯುಂಟು ಮಾಡಿದುದನ್ನು ಖಂಡಿಸುತ್ತದೆ.

ಪಂಡಿತ ಮೋತಿಲಾಲ ನೆಹ್ರು ಅವರು ಇಂಗ್ಲೀಷನಲ್ಲಿ ಮಂಡಿಸಿದ ಈ ಗೊತ್ತುವಳಿಯನ್ನು ಮೌಲಾನಾ ಶೌಕತ ಅಲಿಯವರು ಉರ್ದುದಲ್ಲಿ ಅನುಮೋದಿಸಿದರು. ಲಾಲಾ ಲಜಪತರಾಯರು ಇಂಗ್ಲೀಷನಲ್ಲಿ ಮೌಲಾನಾ ಜಾಫರ್ ಅಲಿ ಉರ್ದುದಲ್ಲಿ ಶ್ರೀ ಕೆ.ಎಚ್. ಮುದವೀಡಕರರು ಕನ್ನಡದಲ್ಲಿ ಸಮರ್ಥಿಸಿದರು.

7. ಅಸ್ಪೃಶ್ಯತೆ

ಅಸ್ಪೃಶ್ಯತೆ ನಿವಾರಣೆ ವಿಷಯದಲ್ಲಿ ಹಿಂದುಗಳ ಚಿಂತನೆಯಲ್ಲಿ ಬಹಳಷ್ಟು ಪ್ರಗತಿಯಾಗಿರುವುದನ್ನು ಕಾಂಗ್ರೆಸ್ಸು ಅತ್ಯಂತ ಸಂತೃಪ್ತಿ ಸಮಾಧಾನದಿಂದ ಗಮನಿಸುತ್ತದೆ ಯಾದರೂ ಇನ್ನೂ ಸಾಧಿಸಬೇಕಾದುದು ಬಹಳಷ್ಟಿದೆಯಾದ್ದರಿಂದ ಕಾಂಗ್ರೆಸ್ ಸಂಘಟನೆ ಗಳಲ್ಲಿರುವ ಹಿಂದು ಸದಸ್ಯರು ಇನ್ನೂ ಅಧಿಕ ಪ್ರಯತ್ನ ಮಾಡಬೇಕಾಗಿದೆಯೆಂದು ಅಭಿಪ್ರಾಯ ಪಡುತ್ತಿದೆ. ಪ್ರಾಂತೀಯ ಕಾಂಗ್ರೆಸ್ ಸಮಿತಿಗಳಲ್ಲಿಯ ಹಿಂದೂ ಸದಸ್ಯರು ದೀನ ದಲಿತರ ಹತ್ತಿಕ್ಕಲ್ಪಟ್ಟ ವರ್ಗಗಳವರ ಬೇಕು ಬೇಡಗಳ ವಿಷಯದಲ್ಲಿ ವಿಶೇಷ ಲಕ್ಷ ಪೂರೈಸಿ ಅವರ ಬೇಡಿಕೆಗಳ ಈಡೇರಿಕೆಗೆ ಪ್ರಯತ್ನಿಸಬೇಕು. ಪೂಜಾ ಸ್ಥಳಗಳಲ್ಲಿ ಅವರಿಗೆ

ಕಾಂಗ್ರೆಸ್ ಅಧ್ಯಕ್ಷ ಮಹಾತ್ಮಾ ಗಾಂಧೀಜಿ ಹಾಗೂ ಅವರ ಪರಿವಾರದ
ಒಟ್ಟಾರೆ ಖರ್ಚು 324 ರೂ. ಆಗಿತ್ತು!

ಮುಕ್ತ ಹಾಗೂ ಅನಿರ್ಬಂಧ ಪ್ರವೇಶ ಶೈಕ್ಷಣಿಕ ಸವಲತ್ತು ಅವಕಾಶ ಹಾಗೂ ಅವರ ಇಂಥ ಬೇಡಿಕೆಗಳ ಈಡೇರಿಕೆಗಳಿಗೆ ಪ್ರಯತ್ನಿಸಬೇಕು. ಸವರ್ಣೀಯ ಹಿಂದುಗಳಿಗೆ ಸಂಪೂರ್ಣ ಮುಕ್ತವಾಗಿರುವಂತೆ ರಸ್ತೆಗಳಲ್ಲಿ ಅಸ್ಪೃಶ್ಯರಿಗೂ ನಡೆದಾಡುವ ಹಕ್ಕು ಸ್ವಾತಂತ್ರ್ಯಗಳಿರಬೇಕೆಂಬುದಕ್ಕಾಗಿ ವೈಕಮದಲ್ಲಿ ಸತ್ಯಾಗ್ರಹಿಗಳು ತಾಳ್ಮೆ, ಸಹನೆ, ಧೈರ್ಯದಿಂದ ಅಹಿಂಸಾತ್ಮಕವಾಗಿ ಸತ್ಯಾಗ್ರಹ ನಡೆಸಿರುವುದನ್ನು ಕುರಿತು ಕಾಂಗ್ರೆಸ್ಸು ಸಂತಸ ವ್ಯಕ್ತ ಪಡಿಸುತ್ತ ಆ ಸತ್ಯಾಗ್ರಹಿಗಳೆಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ. ಅತ್ಯಂತ ಪಾಂಡಿತ್ಯಪೂರ್ಣ ಹಾಗೂ ಪ್ರಗತಿಪರವೆಂದೇ ಹೆಸರುವಾಸಿಯಾದ ತ್ರಾವಣಕೋರ ಸಂಸ್ಥಾನದ ಆಡಳಿತವು ಕೂಡಲೇ ವೈಕಮ್ ಸತ್ಯಾಗ್ರಹಿಗಳ ಬೇಡಿಕೆಗಳನ್ನು ಮಾನ್ಯ ಮಾಡಿ ರಸ್ತೆಗಳಲ್ಲಿ ಸ್ವತಂತ್ರವಾಗಿ ಸಂಚರಿಸುವ ಹಕ್ಕು ಅಧಿಕಾರಗಳನ್ನು ನೀಡಬೇಕು. ಅವರ ಬೇಡಿಕೆಗಳನ್ನೆಲ್ಲವನ್ನು ಮಾನ್ಯ ಮಾಡಬೇಕೆಂದು ಕಾಂಗ್ರೆಸ್ಸು ಕೇಳಿಕೊಳ್ಳುತ್ತದೆ ಮತ್ತು ಸಂಸ್ಥಾನಾಡಳಿತ ಹಾಗೆ ಮಾಡುವುದೆಂದು ಆಶಿಸುತ್ತದೆ.

ಈ ಗೊತ್ತುವಳಿಯನ್ನು ಶ್ರೀ ಎಲ್.ಬಿ. ಭೋಪಟಕರರು ಮರಾಠಿಯಲ್ಲಿ ಮಂಡಿಸಿದರು. ಶೈಲೇಶನಾಥ ಬಿಷ್ಟರು ಇಂಗ್ಲೀಷಿನಲ್ಲಿ ಅನುಮೋದಿಸಿದರು. ಹಿಂದೀಯಲ್ಲಿ ಸರದಾರ ಕಿಶನ್‌ಸಿಂಗ್, ಕನ್ನಡದಲ್ಲಿ ಶ್ರೀ ಇ.ವ್ಹಿ ರಾಮಸ್ವಾಮಿ ನಾಯಕರ್ (ಇವರೇ ನಂತರ ಪೆರಿಯಾರ್ ರಾಮಸ್ವಾಮಿ ಎಂದು ಹೆಸರು ವಾಸಿಯಾಗಿ ತಮಿಳುನಾಡಿನಲ್ಲಿ ದ್ರವಿಡ ಮುನ್ನೇತ್ರ ಕಳಗಮ್ ಹುಟ್ಟುಹಾಕಿದವರು.) ಸಂಸ್ಕೃತದಲ್ಲಿ ಪಂಡಿತ ಕಾವ್ಯಕಂಠಮ್ ಗಣಪತಿಶಾಸ್ತ್ರಿಗಳು (ಇವರು ಮಹರ್ಷಿ ರಮಣರು ಅರವಿಂದರ ಶಿಷ್ಯರಾಗಿ ಮಂತ್ರದೃಷ್ಟಾರರೆಂಬ ಖ್ಯಾತಿ ಪಡೆದರು) ತೆಲಗುವಿನಲ್ಲಿ ಶ್ರೀ ವೇದಾಂತಮ್ ಶಂಭುಶಾಸ್ತ್ರಿ ಮರಾಠಿಯಲ್ಲಿ ಪಂ. ಮಹಾದೇವ ಶಾಸ್ತ್ರಿ ದಿವೇಕರರು ಗೊತ್ತುವಳಿಯನ್ನು ಸಮರ್ಥಿಸಿದರು.

8. ಸಾಗರೋತ್ತರ ಭಾರತೀಯರು

ಭಾರತ ಸರಕಾರ ಹಾಗೂ ಆಂಗ್ಲ ಪ್ರಭುತ್ವ ಇವೆರಡರಲ್ಲಿಯೂ ಪುನಃ ಪುನಃ ತಮ್ಮ ನಿಷ್ಠೆ ಹಾಗೂ ವಿಶ್ವಾಸವನ್ನು ವ್ಯಕ್ತ ಪಡಿಸುತ್ತಲೇ ಇರುವ ಸಾಗರೋತ್ತರ ಭಾರತೀಯ ನಿವಾಸಿಗಳ ಹಿತ ರಕ್ಷಣೆಯನ್ನು ಸರಕಾರಗಳು ಕಡೆಗಣಿಸುತ್ತಿರುವ ಬಗ್ಗೆ ಹಾಗೂ ಅವರ ಹಿತರಕ್ಷಣೆ ಮಾಡುವುದರಲ್ಲಿ ವಿಫಲವಾಗುತ್ತಿರುವುದರ ಬಗ್ಗೆ ಕಾಂಗ್ರೆಸ್ಸು ತೀವ್ರ ಅಸಮಾಧಾನ ಹಾಗೂ ವಿಷಾದ ವ್ಯಕ್ತ ಮಾಡುತ್ತದೆ. ಅಲ್ಲಿಯ ಭಾರತೀಯರು ಅನುಭವಿಸುತ್ತಿರುವ ಸಂಕಷ್ಟ, ನೋವು, ದಬ್ಬಾಳಿಕೆಯ ಬಗ್ಗೆ ಕಾಂಗ್ರೆಸ್ಸು ಸಂಪೂರ್ಣ ಸಹಾನುಭೂತಿ ವ್ಯಕ್ತ ಪಡಿಸುತ್ತಿದೆಯಾದರೂ ಭಾರತ ಸ್ವತಃ ಸ್ವರಾಜ್ಯ ಪಡೆಯುವತನಕ ಪರಿಣಾಮಕಾರಿಯಾಗಿ ಯಾವುದೇ ನೆರವು ನೀಡಲು ಶಕ್ಯವಿಲ್ಲವಾಗಿದೆ ಎಂದು ಖೇದ ಪಡುತ್ತದೆ.

ದಕ್ಷಿಣ ಆಫ್ರಿಕೆ ಒಕ್ಕೂಟದ ಗವರ್ನರ್ ಜನರಲ್ಲರು ಸುಗ್ರೀವಾಜ್ಞೆ ಹೊರಡಿಸಿ ಅಲ್ಲಿಯ ಭಾರತೀಯ ನಿವಾಸಿಗಳಿಗೆ ಅವರೆಲ್ಲರೂ ಶಾಶ್ವತವಾಗಿ ಅಲ್ಲಿಗೆ ವಲಸೆಯಾದ ಪ್ರಜೆಗಳೆಂದು ಘೋಷಿಸಿಗೊಂಡಿರುವುರಾದರೂ ನಾತಾಳ ಪ್ರಾಂತೀಯ ವಿಧಾನ ಮಂಡಳ ಹಾಗೂ ನಗರ ಪಾಲಿಕೆಗಳಿಗೆ ಸ್ಪರ್ಧಿಸುವ, ಹಾಗೂ ಮತ ನೀಡುವ ಅಧಿಕಾರಗಳನ್ನು ನಿರಾಕರಿಸಿದುದೆಂದು ಹೇಳುತ್ತ ಕಾಂಗ್ರೆಸ್ಸು ಈ ವಿದ್ಯಮಾನಗಳನ್ನು ಬಲವಾಗಿ ಖಂಡಿಸುತ್ತದೆ.

ಭಾರತ ನಿವಾಸಿಗಳಿಂದ ಹೀಗೆ ಮತಾಧಿಕಾರಗಳನ್ನು ಕಿತ್ತುಕೊಂಡಿರುವ ಅಲ್ಲಿಯ ಸುಗ್ರೀವಾಜ್ಞೆ ಮೂಲಕದ ಕ್ರಮ ಭಾರೀ ಅನ್ಯಾಯದ್ದಷ್ಟೇ ಅಲ್ಲದೇ ಭಾರತೀಯರೊಂದಿಗೆ ಒಕ್ಕೂಟ ಸರಕಾರ ಮಾಡಿಕೊಂಡ ಒಡಂಬಡಿಕೆ ಹಾಗೂ ನಾತಾಳ ಸರಕಾರದ ಘೋಷಣೆಗಳ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಕಾಂಗ್ರೆಸ್ಸು ವ್ಯಕ್ತ ಪಡಿಸುತ್ತದೆ.

ಕೆನ್ಯಾದಲ್ಲಿಯ ತಥಾಕಥಿತ ಭಾರತ ವಲಸೆಗಾರರನ್ನು ಕುರಿತಂತೆ ಅಲ್ಲಿಯ ಸರಕಾರ ಸ್ವಾಭಾವಿಕ ನ್ಯಾಯವನ್ನು ನಿರಾಕರಿಸಿದೆಯಲ್ಲದೇ ವಿಶ್ವಾಸಘಾತ ಮಾಡುತ್ತದೆಯಲ್ಲದೇ ಬೇರೇನೂ ಅಲ್ಲವೆಂದು ಹೇಳಬಯಸುತ್ತಿದೆ.

ಶ್ರೀಮತಿ ಸರೋಜಿನಿ ನಾಯಡು ಅವರು ಮಂಡಿಸಿದ ಈ ಗೊತ್ತುವಳಿಯನ್ನು ಶ್ರೀ ಆರ್.ಕೆ. ಷಣ್ಮುಖಂ ಚೆಟ್ಟಿ ಅನುಮೋದಿಸಿದರು

9. ಅಕಾಲಿ ಆಂದೋಲನ

ಧೈರ್ಯಯುತರಾಗಿ ತುಂಬಾ ತಾಳ್ಮೆ ಹಾಗೂ ಸಹನೆಯಿಂದ ಗುರುದ್ವಾರಗಳ ಸುಧಾರಣೆಗಾಗಿ ಆಂದೋಲನ ನಡೆಸುತ್ತಿರುವ ಅಕಾಲಿಗಳನ್ನು ಕಾಂಗ್ರೆಸ್ಸು ಹೃತ್ಪೂರ್ವಕ ಅಭಿನಂದಿಸುತ್ತ ಅಕಾಲಿಗಳ ಈ ಧೈರ್ಯಯುತ ಉದಾತ್ತ ಹೋರಾಟವನ್ನು ದಮನ ಮಾಡಲು ಪಂಜಾಬ ಸರಕಾರವು ತೆಗೆದುಕೊಳ್ಳುತ್ತಿರುವ ವಿಚ್ಛಿದ್ರಕಾರಿ ತಂತ್ರ, ನೀತಿ ಕ್ರಮಗಳನ್ನು ಮೀರಿ ಅಕಾಲಿಗಳ ಭಾವನೆ ವಿಜಯಶಾಲಿಯಾಗಿ ನಿಲ್ಲಲಿದೆ ಎಂದು ಹೇಳ ಬಯಸುತ್ತದೆ.

ನಾಭಾದ ಜೈಲುಗಳಲ್ಲಿ ನೂರಾರು ಬಂಧಿತ ಅಕಾಲಿ ಹೋರಾಟಗಾರರು ಭಾರೀ ಹಿಂಸೆ, ದಮನ ಹಾಗೂ ಯಾತನೆ ಅನುಭವಿಸಿ ಸಾವನ್ನಪ್ಪಿದ ಬಗ್ಗೆ ಕಾಂಗ್ರೆಸ್ಸು, ತನ್ನ ತೀವ್ರ ಸಂತಾಪ ಹಾಗೂ ಕ್ರೋಧವನ್ನು ವ್ಯಕ್ತ ಪಡಿಸುತ್ತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಿಂದ ನೇಮಕಗೊಂಡ ಅಕಾಲಿ ಹೋರಾಟಗಾರರ ಮೇಲಿನ ದಮನಗಳ ವಿಚಾರಣೆ ಸಮಿತಿಗೆ ಸಂದರ್ಶಿಸಲು ಹಾಗೂ ಸತ್ಯ ಪರಿಸ್ಥಿತಿಯ ಅಧ್ಯಯನ ಮಾಡಲು ಅನುಮತಿ ನೀಡಬೇಕೆಂದು ಕೇಳಿಕೊಳ್ಳುತ್ತದೆ. ನಾಭಾ ಜೈಲುಗಳಲ್ಲಿ ಅಕಾಲಿ ಹೋರಾಟದ ಬಂಧಿತರು ಗಣನೀಯ

ಪ್ರಮಾಣದಲ್ಲಿ ದೊಡ್ಡ ಸಂಖ್ಯೆಯಲ್ಲಿ ಸತ್ತಿರುವುದೇ ಅಲ್ಲಿಯ ಅಧಿಕಾರಿಗಳ ಅಮಾನುಷ ದಬ್ಬಾಳಿಕೆಗೆ ಸಾಕ್ಷ್ಯವೆನಿಸಿದೆ ಎಂದು ಕಾಂಗ್ರೆಸ್ಸು ಅಭಿಪ್ರಾಯ ಪಡುತ್ತದೆ.

ಹೀಗೆ ದಬ್ಬಾಳಿಕೆಗೆ ಈಡಾಗಿ ಸಾವನ್ನಪ್ಪಿರುವ ಬಂಧಿತರ ಪರಿವಾರದವರಿಗೆ ಕಾಂಗ್ರೆಸ್ಸು ತನ್ನ ಗೌರವಯುತ ಸಾಂತ್ವನ ಹೇಳ ಬಯಸುತ್ತದೆ.

ಶ್ರೀ ಟಿ. ಪ್ರಕಾಶಮ್‌ರಿಂದ ಸೂಚಿತವಾದ ಈ ಗೊತ್ತುವಳಿಯನ್ನು ಸರದಾರ ಮಂಗಲಸಿಂಗರು ಅನುಮೋದಿಸಿದರು.

10. ರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳು

ರಾಷ್ಟ್ರದ ಭವಿಷ್ಯ ಯುವ ಜನಾಂಗದ ಮೇಲೆಯೇ ಅವಲಂಬಿಸಿದೆ ಎಂಬುದು ಕಾಂಗ್ರೆಸ್ಸಿನ ಬಲವಾದ ಅಭಿಮತ. ಆದ್ದರಿಂದ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳು ಎಲ್ಲ ರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳನ್ನು ಚೈತನ್ಯಯುತವಾಗಿರಿಸಲು ಸರ್ವ ಪ್ರಯತ್ನಗಳನ್ನು ಮಾಡಬೇಕೆಂದು ಕಾಂಗ್ರೆಸ್ಸು ಇಚ್ಛಿಸುತ್ತಿದೆ. ಕಾಂಗ್ರೆಸ್ಸು ಸದ್ಯಕ್ಕೆ ಚಾಲ್ತಿಯಲ್ಲಿರುವ ರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳು ಅಧಿಕಾರಯುಕ್ತ ಕ್ರಿಯಾಶೀಲವಾಗುವಂತೆ ಪರಿಶ್ರಮಿಸಬೇಕಲ್ಲದೇ ಹೊಸ ಸಂಸ್ಥೆಗಳನ್ನು ಆರಂಭಿಸಬೇಕು. ಯಾವುದೇ ಭಾರತೀಯ ಭಾಷೆಯು ಶಿಕ್ಷಣದ ಬೋಧ ಮಾಧ್ಯಮವಾಗಿರತಕ್ಕದ್ದು. ಹಿಂದು ಮುಸ್ಲಿಂ ಐಕ್ಯ ಸಂವರ್ಧನೆಗೆ ಸದಾ ಕಾರ್ಯತತ್ಪರವಿರಬೇಕು. ಅಸ್ಪೃಶ್ಯರಿಗೆ ಶಿಕ್ಷಣ, ಅಸ್ಪೃಶ್ಯತಾ ನಿವಾರಣೆ, ಸ್ವತಃ ಚರಖಾದ ಮೇಲೆ ಕೈನೂಲು ತೆಗೆಯುವಿಕೆ, ಖಾದಿ ಬಟ್ಟೆಗಳ ತಯಾರಿಕೆ, ಶಾರೀರಿಕ ಶಿಕ್ಷಣ, ಆತ್ಮ ಸಂರಕ್ಷಣೆಯ ಕಡ್ಡಾಯದ ಶಿಕ್ಷಣ ಇವಿಷ್ಟನ್ನು ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳು ಒಳಗೊಂಡಿರಲೇಬೇಕು. ಎಲ್ಲ ಶಿಕ್ಷಕರು ಹಾಗೂ 12 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳು ಶಾಲೆಯ ಪ್ರತಿ ದಿನದ ಕಾರ್ಯಾವಧಿಯಲ್ಲಿ ಕನಿಷ್ಟ ಅರ್ಧ ಗಂಟೆಯಾದರೂ ನೂಲಲೇಬೇಕು. ಖಾದಿ ಬಟ್ಟೆಗಳನ್ನೇ ಎಲ್ಲ ಶಿಕ್ಷಕರು, ಶಿಕ್ಷಕಿಯರು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಧರಿಸತಕ್ಕದ್ದು. ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳು ಇವೆಲ್ಲ ಅಂಶಗಳನ್ನು ಒಳಗೊಂಡಿರಲೇಬೇಕು ಎಂಬ ಗೊತ್ತುವಳಿಯನ್ನು ಅಧ್ಯಕ್ಷತೆ ವಹಿಸಿದ್ದ ಮಹಾತ್ಮಾ ಗಾಂಧೀಜಿಯವರೇ ಮಂಡಿಸಿದರು.

11. ರಾಷ್ಟ್ರೀಯ ಸೇವೆಗೆ ಸಂಬಳ

ರಾಷ್ಟ್ರೀಯ ಸೇವೆಗಳಲ್ಲಿ ಪಾಲುಗೊಂಡು ಸೇವೆ ಸಲ್ಲಿಸುತ್ತಿರುವ ಅನೇಕರು ತಾವು ಸಲ್ಲಿಸುತ್ತಿರುವ ಸೇವೆಗಳಿಗೆ ಪ್ರತಿಯಾಗಿ ಸಂಬಳವನ್ನೇ ಸ್ವೀಕರಿಸುತ್ತಿಲ್ಲವೆಂಬುದು ಕಾಂಗ್ರೆಸ್ಸಿನ ಗಮನಕ್ಕೆ ಬಂದಿದೆ. ಆದರೆ ರಾಷ್ಟ್ರೀಯ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುವ ಇಂಥ ನಿರಪೇಕ್ಷ ಬುದ್ಧಿಯ ಸುಯೋಗ್ಯ ವ್ಯಕ್ತಿಗಳು ತಮ್ಮ ಸೇವೆಗೆ ಪ್ರತಿಫಲ ಅಥವಾ ಸಂಬಳವನ್ನು

ಪಡೆಯಬೇಕೆಂದು ಕಾಂಗ್ರೆಸ್ಸು ಬಯಸುತ್ತದೆ. ದೇಶಭಕ್ತ ಪುರುಷರು, ಮಹಿಳೆಯರು ತಮ್ಮ ಇಂಥ ದೇಶಾಭಿಮಾನಪೂರಿತ ಸೇವೆಗಳಿಗೆ ಪ್ರತಿಯಾಗಿ ಜೀವನ ನಿರ್ವಹಣೆ ವೆಚ್ಚದ ರೀತಿಯಲ್ಲಿ ಕಿಂಚಿತ್ ಸಂಬಳ ಪಡೆದುಕೊಳ್ಳಲೇಬೇಕು ಹಾಗೂ ಶ್ರದ್ಧೆಯಿಂದ ಇತರ ಸೇವೆಗಳಿಗೆ ಬದಲು ಕಡಿಮೆ ಸಂಬಳ ಪಡೆದು ರಾಷ್ಟ್ರೀಯ ಸೇವೆ ಸಲ್ಲಿಸುವುದು ಸಹ ದೇಶಭಕ್ತಿಯೇ ಆಗಿರುತ್ತದೆ. ಈ ಗೊತ್ತುವಳಿ ಅಧ್ಯಕ್ಷರಿಂದಲೇ ಸೂಚಿತವಾಗಿ ಅಂಗೀಕೃತ ವಾಯಿತು.

12. ಸಂವಿಧಾನ ತಿದ್ದುಪಡಿ

ಕಾಂಗ್ರೆಸ್ಸಿನ ಸಂವಿಧಾನ ತಿದ್ದುಪಡಿಯ ಈ ಗೊತ್ತುವಳಿಯನ್ನು ಅಧ್ಯಕ್ಷ ಮಹಾತ್ಮಾ ಗಾಂಧೀಜಿಯವರೇ ಮಂಡಿಸಿದರು

ಪ್ರತಿನಿಧಿ ಶುಲ್ಕ : ಹನ್ನೊಂದನೆ ವಿಧಿಯಲ್ಲಿರುವ ಹತ್ತು ರೂ. ಪ್ರತಿನಿಧಿ ಶುಲ್ಕವನ್ನು ರೂ. 1 ಕ್ಕೆ ಬದಲಿಸಬೇಕು.

ಇಪ್ಪತ್ತೊಂರನೇ ವಿಧಿಯಲ್ಲಿ ಮೊದಲ ವಾಕ್ಯದಲ್ಲಿ ಕಾಂಗ್ರೆಸ್ಸು ಎಲ್ಲ ಹಣದ ವ್ಯವಹಾರವನ್ನು ನಿರ್ವಹಿಸಿ ಸರಿಯಾದ ಲೆಕ್ಕ ಪತ್ರವಿಡುವುದು ಎಂದಿರುವಲ್ಲಿ ಕಾಂಗ್ರೆಸ್ ಶಬ್ದದ ಜೊತೆಗೆ ಕೋಶಾಧಿಕಾರಿಗಳೆಂದೂ ಹಣದ ವ್ಯವಹಾರ ನಿರ್ವಹಣೆಕಾರ ಹಾಗೂ ಲೆಕ್ಕಪತ್ರ ನಿರ್ವಾಹಕರೆಂದು ಸೇರಿಸತಕ್ಕದ್ದು. ಅಖಿಲ ಭಾರತ ಕಾಂಗ್ರೆಸ್ ಸಮಿತಿ ಕಾರ್ಯಾಲಯದ ನಿರ್ವಹಣೆ ಪ್ರಧಾನ ಕಾರ್ಯದರ್ಶಿಗಳ ಹೊಣೆಯಾಗಿರುತ್ತದೆ. ಕಾಂಗ್ರೆಸ್ ಅಧಿವೇಶನಗಳ ಕಲಾಪಗಳ ವರದಿಯನ್ನು ಪ್ರಧಾನ ಕಾರ್ಯದರ್ಶಿಗಳೇ ಸ್ವಾಗತ ಸಮಿತಿಯ ಸಹಕಾರದಿಂದ ಸಿದ್ಧಪಡಿಸಿ ಪ್ರಕಟಿಸುವ ಅಧಿಕಾರ ಹೊಂದಿರುತ್ತಾರೆ. ಇಂಥ ವರದಿಗಳು ಶಕ್ಯವಾದಷ್ಟು ಬೇಗನೇ ಅಧಿವೇಶನಗಳು ಕೊನೆಗೊಂಡ ನಂತರ ಕನಿಷ್ಟ ನಾಲ್ಕು ತಿಂಗಳೊಳಗಾಗಿ ಸಿದ್ಧ ಮಾಡಲ್ಪಟ್ಟು ಪ್ರಕಟವಾಗಿ ಮಾರಾಟಕ್ಕೆ ಬಿಡುಗಡೆ ಮಾಡಲ್ಪಡಬೇಕು.

ಈ ವಿಧಿಯ ಕೊನೆಗೆ ಮುಂದಿನ ಕಾಂಗ್ರೆಸ್ ವರದಿ ಪ್ರಕಟ ಮಾಡುವ ಬಗ್ಗೆಯೂ ಉಲ್ಲೇಖವಿರಲಿ.

13. ಮದ್ಯಪಾನ, ಅಫೀಮು ಹಾಗೂ ಮತ್ತಿತರ ಮಾದಕಗಳ ಸೇವೆನೆ ಕುರಿತ ಗೊತ್ತುವಳಿ

ಅಧ್ಯಕ್ಷ ಮಹಾತ್ಮಾ ಗಾಂಧೀಜಿಯವರೇ ಈ ಗೊತ್ತುವಳಿಯನ್ನು ಸ್ವತಃ ಮಂಡಿಸಿದರು.

1921 ರಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮದ್ಯಪಾನ ಹಾಗೂ ಅಫೀಮಿನಂತಹ

ಮಾದಕಗಳ ಸೇವನೆ ವಿರುದ್ಧ ನಡೆಸಿದ ಚಳುವಳಿಯು ಕೊಂಚ ಹಿನ್ನಡೆ ಅನುಭವಿಸಿದೆಯಾದರೂ ಕಾಂಗ್ರೆಸ್ಸು ಈ ಆಂದೋಲನದ ಬಗ್ಗೆ ತೀವ್ರ ಸಂತೃಪ್ತಿಯನ್ನು ವ್ಯಕ್ತ ಪಡಿಸುತ್ತದೆ. ದೇಶದ ಹಲವಾರು ಭಾಗಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಇನ್ನೂ ಹೆಚ್ಚಿನ ಉತ್ಸಾಹ ಹಾಗೂ ದೃಢ ನಿರ್ಧಾರದಿಂದ ಈ ಆಂದೋಲನ ಮುಂದುವರಿಸುತ್ತಿರುವುದರ ಬಗ್ಗೆ ತೀವ್ರ ಸಮಾಧಾನ ವ್ಯಕ್ತ ಪಡಿಸುತ್ತಿದೆ. ಮದ್ಯಪಾನ ಬಲವಾಗಿ ಅಂಟಿಕೊಂಡಿರುವವರನ್ನು ಇಂಥ ಶಾಪದಿಂದ ಮುಕ್ತಗೊಳಿಸಲು ಹಾಗೂ ದುಶ್ಚಟಗಳಿಂದ ಮುಕ್ತವಾಗಿಸಲು ಕಾರ್ಯಕರ್ತರು ತಮ್ಮ ಶಾಂತಿಯುತ ಪ್ರಯತ್ನ ಹಾಗೂ ಆಂದೋಲನಗಳಿಂದ ಯಶಸ್ವಿಯಾಗುವರೆಂದು ಕಾಂಗ್ರೆಸ್ಸು ಆಶಿಸುತ್ತದೆ.


ಸರಕಾರಕ್ಕೆ ಅಧಿಕ ಆದಾಯ ಬರಲೆಂಬ ಉದ್ದೇಶದಿಂದ ಮದ್ಯಪಾನ, ಮಾರಾಟವನ್ನು ಪ್ರೋತ್ಸಾಹಿಸುವ ಭಾರತ ಸರಕಾರದ ನೀತಿಯು ಜನತೆಯ ನೈತಿಕ ಮಟ್ಟ ಹಾಗೂ ಕಲ್ಯಾಣ ವರ್ಧನೆಗೆ ಅಪಾಯ ಹಾಗೂ ಆಘಾತವುಂಟು ಮಾಡುತ್ತಿದೆ ಎಂದು ಕಾಂಗ್ರೆಸ್ಸು ಅಭಿಪ್ರಾಯ ಪಡುತ್ತದೆ. ಆದ್ದರಿಂದ ಸರಕಾರವೇ ಸ್ವತಃ ಮದ್ಯಪಾನ ಹಾಗೂ ಮಾದಕಗಳ ವ್ಯಾಪಾರ, ಸೇವನೆಗಳನ್ನು ನಿಷೇಧಿಸುವುದಾದರೆ ಸ್ವಾಗತಾರ್ಹವೆಂದು ಹೇಳಬಯಸುತ್ತದೆ.

ಕಾನೂನಿನಿಂದ ಅಫೀಮು ಹಾಗೂ ಮಾದಕಗಳ ನಿಯಂತ್ರಣ ಮಾತ್ರ ಮಾಡುತ್ತಿರುವ ಭಾರತ ಸರಕಾರದ ಸೀಮಿತ ಕ್ರಮ ಕೇವಲ ಭಾರತದ ಜನತೆಯಷ್ಟೇ ಅಲ್ಲದೇ ಇಡೀ ಜಗತ್ತಿನ ಜನರ ನೈತಿಕ ಮಟ್ಟ ಕಲ್ಯಾಣಗಳನ್ನು ಧ್ವಂಸಗೊಳಿಸುವಂತಿದೆ. ವೈದ್ಯಕೀಯ ಹಾಗೂ ವೈಜ್ಞಾನಿಕ ಉದ್ದೇಶಗಳಿಗೆ ಅಗತ್ಯವಿರುವಷ್ಟೇ ಅಫು ಬೆಳೆಯುವಂತೆ ನಿಯಂತ್ರಿಸಿ ಇತಿಮಿತಿಯನ್ನು ಮೀರಿ ಬೆಳೆಯುವುದನ್ನು ನಿರ್ಬಂಧಿಸಬೇಕು.

15. ಶ್ರೀ ಶೋಯೆಬ್ ಕುರೇಶಿ, ಶ್ರೀ ಬಾರ್‌ಜೋರಜಿ ಪ್ರೇಮಜೀ ಭರೂಚಾ, ಹಾಗೂ ಶ್ರೀ ಜವಾಹರಲಾಲ ನೆಹರು ಈ ಮೂವರನ್ನು ಕಾರ್ಯದರ್ಶಿಗಳೆಂದೂ ಸೇಠ ರೇವಾಶಂಕರ ಜಗಜೀವನ ಝುವೇರಿ, ಶ್ರೀ ಜಮನಾಲಾಲ ಬಜಾಜ ಇವರನ್ನು ಕೋಶಾಧಿಕಾರಿಗಳೆಂದು ನೇಮಿಸುವುದನ್ನು ಸಹ, ಅಧ್ಯಕ್ಷರು ಹದಿನಾಲ್ಕನೆಯ ಗೊತ್ತುವಳಿಯನ್ನಾಗಿ ಮಂಡಿಸಿದರು.

16. ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಮುಂದಿನ ಮಹಾ ಅಧಿವೇಶನವನ್ನು ಕಾನಪುರದಲ್ಲಿ ಸೇರಿಸಬೇಕೆಂದು 15ನೇ ಸೂಚನೆಯೂ ಅಧ್ಯಕ್ಷರಿಂದ ಮಂಡಿಸಲ್ಪಟ್ಟಿತು ನಂತರ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಕೂಡಲೇ ಸಭೆ ಸೇರಿ ಇದೇ ನಿರ್ಣಯ ತೆಗೆದುಕೊಂಡಿತು.

17. 1925 ನೇ ಇಸವಿಗೆ ಅಡಿಟರ್ ಲೆಕ್ಕಪತ್ರ ತಪಾಸಿಗರನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿ ನೇಮಿಸಬೇಕೆಂದು 15ನೇಯ ಕೊನೆಯ ಗೊತ್ತುವಳಿಯನ್ನು ಅಧ್ಯಕ್ಷರೇ ಮಂಡಿಸಿದರು.



ಬಹಿರಂಗ ಅಧಿವೇಶನ

26 ಹಾಗೂ 27 ಡಿಸೆಂಬರ್ 1924 ರ ಕಲಾಪಗಳು

ಆರಂಭದ ದಿನ

ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ 39 ನೇ ಮಹಾಧಿವೇಶನವೂ 26 ಡಿಸೆಂಬರ್ 1924 ಶುಕ್ರವಾರದಂದು ಬೆಳಗಾವಿಯಲ್ಲಿ ಜರುಗಿತು. ಕಳೆದ ವರ್ಷ 1923 ರಲ್ಲಿ ಕಾಕಿನಾಡಾದಲ್ಲಿ ಜರುಗಿದ್ದ ಅಧಿವೇಶನಕ್ಕಾಗಿ ಸಿದ್ಧಪಡಿಸಲಾಗಿದ್ದ ಅತ್ಯಂತ ವೈಭವಯುತ, ಆಕರ್ಷಕ ವಿಶಾಲ ಮಂಟಪದಲ್ಲಿ ನಡೆಯಿತು. ಈ ಅಧಿವೇಶನವು ಅತ್ಯಂತ ವಿಶಿಷ್ಟ ಹಾಗೂ ಅವಿಸ್ಮರಣೀಯ ಘಟನೆ, ಅನೇಕ ರೀತಿ ಆಹ್ವಾನಗಳನ್ನು ಒಡ್ಡಿದ ಭಾರೀ ಕಷ್ಟ ಪರಂಪರೆಗಳ ನಡುವೆಯೂ ಈ ಅಧಿವೇಶನವು ಅಲ್ಪಾವಧಿಯಲ್ಲೇ ಅರ್ಥವತ್ತಾಗಿ ಕಲಾಪಗಳನ್ನು ನಡೆಸಿ ಐತಿಹಾಸಿಕ ಮಹಾತ್ವಪೂರ್ಣವೆನಿಸಿತು.

ಮಹಾತ್ಮಾ ಗಾಂಧೀಜಿಯವರು ಸೆರೆಮನೆಯಿಂದ ಬಿಡುಗಡೆ ಹೊಂದಿದ ಬಳಿಕ ರಾಷ್ಟ್ರದಾದ್ಯಂತದ ಸಮಸ್ತ ಜನರೂ ಕಾಂಗ್ರೆಸ್ಸಿನ ಒಳಗಡೆ ಹಾಗೂ ರಾಷ್ಟ್ರವ್ಯಾಪಿಯಾಗಿ ಒಗ್ಗಟ್ಟು, ಸಂಘಟನೆ ಬಲಗೊಳ್ಳುವುದಕ್ಕೋಸ್ಕರ ಅವರ ಧುರೀಣತ್ವದ ಕಡೆಗೆ ಆಶಾತುರರಾಗಿ ನೋಡತೊಡಗಿರುವರು. ಗಾಂಧೀಜಿಯವರು ರಾಷ್ಟ್ರದ ಪರಿಸ್ಥಿತಿಯ ಅಧ್ಯಯನ ಮಾಡಿ ಕಾಕಿನಾಡಾ ಕಾಂಗ್ರೆಸ್ಸು ಒಗ್ಗಟ್ಟು ಹಾಗೂ ಏಕತೆಗೋಸ್ಕರ ಹಾಕಿದ ಭದ್ರ ಬುನಾದಿಯನ್ನು ಇನ್ನಷ್ಟು ಗಟ್ಟಿಗೊಳಿಸಲು ರಾಷ್ಟ್ರವ್ಯಾಪಿ ಸಂಘಟನೆ ಹಾಗೂ ಏಕತೆ, ಬಲಸಂವರ್ಧನೆಗಾಗಿ ತಮ್ಮ ಕಾರ್ಯತಂತ್ರ ರೂಪಿಸಿದರು. ಅವರ ವಿರಳಾತಿವಿರಳ ಜಾಣ್ಮೆ ಕಾರ್ಯ ಕುಶಲಯುಕ್ತ

ಕಾರ್ಯತಂತ್ರ ದಿವ್ಯ ವ್ಯಕ್ತಿತ್ವ ಎಲ್ಲರ ಮನಗೆಲ್ಲುವ ಒಲಿಸಿಕೊಳ್ಳುವ ಚತುರತೆ, ಹೃದಯ ಸ್ಪರ್ಶಿ ಮಾತುಕತೆಯ ಮೋಡಿ, ಖಾಸಗಿ ಸಮಾವೇಶಗಳಿರಲಿ ಅಥವಾ ಸಮಿತಿಗಳ ಸಭೆಗಳಿರಲಿ ಅವುಗಳಲ್ಲಿಯ ನಿರ್ಭೀತ ನೇರ ವಿಷಯ ಮಂಡನೆ, ಇವುಗಳಿಂದಾಗಿ ಬಹಿರಂಗ ಅಧಿವೇಶನ ಸುಲಭವಾಗಿ ನಡೆದು ಸೂಕ್ತ ನಿರ್ಣಯ ತೆಗೆದುಕೊಳ್ಳಲು ಸಾಧ್ಯವಾಯಿತು. ಹೀಗಾಗಿ ಬದಲಾವಣೆ ಬೇಡವೆಂದವರ ಹಾಗೂ ಪ್ರಗತಿಪರ ಸ್ವರಾಜ್ಯ ಪಕ್ಷಗಳವರ ನಡುವಣ ಸಂಬಂಧ ಗಟ್ಟಿಗೊಳಿಸಲು, ಉಭಯತರಲ್ಲಿಯ ಪರಸ್ಪರ ಸಂಶಯದ ಭಾವನೆ, ವಿರೋಧಗಳನ್ನು ನಿರ್ನಾಮಗೊಳಿಸುವಲ್ಲಿ ಹಾಗೂ ಎಲ್ಲರಲ್ಲಿ ಒಗ್ಗಟ್ಟು ಮೂಡಿಸುವಲ್ಲಿ ಅಧಿವೇಶನ ಅದ್ಭುತ ಯಶಸ್ಸನ್ನು ಸಾಧಿಸಿತು. ಇಲ್ಲಿಯವರೆಗೆ ಅಶಕ್ಯ ಕೋಟಿಯೆಂದೆನಿಸಿದಂಥ ಬೆಳವಣಿಗೆ ಸಾಧ್ಯವಾದದ್ದೆಂದರೆ ಉದಾರ ಮತವಾದಿಗಳು ಇತರ ಭಿನ್ನಮತೀಯರು ಕಾಂಗ್ರೆಸ್ಸಿಗೆ ಮರಳುವಂತಾದುದು ಹಣ ನೀಡುವಿಕೆಯಿಂದ ಕಾಂಗ್ರೆಸ್ ಪಕ್ಷದ ಸದಸ್ಯತ್ವ ದೃಢಗೊಳಿಸುವುದರ ಬದಲಿಗೆ ಪ್ರತಿಯೊಬ್ಬ ಸದಸ್ಯನೂ ಸ್ವತಃ ಚರಖಾದಿಂದ ನಿಗದಿತ ಪ್ರಮಾಣದಲ್ಲಿ ನೂಲು ತೆಗೆದು ತನ್ನ ವಂತಿಗೆಯಾಗಿ ಕೊಡಲೇಬೇಕೆಂಬ ನಿಯಮವು ಜಗತ್ತಿನ ರಾಜಕೀಯ ಇತಿಹಾಸದಲ್ಲೇ ವಿಶಿಷ್ಟವಾದುದು. ಎಲ್ಲರೂ ಈ ನಿಯಮವನ್ನು ಒಗ್ಗಟ್ಟಿನ ಗುರಿ ಸಾಧನೆಯ ಸಲುವಾಗಿ ಒಪ್ಪಿಕೊಂಡರು.

ಕಾಂಗ್ರೆಸ್ ಮಹಾಧಿವೇಶನದ ಮಂಟಪವು ಹಸಿರು ಮುರಿಯುವ ಹೂಗಿಡಗಳಿಂದ, ರಾಷ್ಟ್ರಾಭಿಮಾನ, ಸ್ವಾತಂತ್ರ್ಯ, ಸ್ವಾಯತ್ತತೆಯನ್ನು ಪ್ರಜ್ವಲಿಸುವ ರೀತಿಯಲ್ಲಿ ಹಾರಿಸಲಾದ ರಾಷ್ಟ್ರಧ್ವಜ, ಸಂಸ್ಕೃತ, ಇಂಗ್ಲೀಷ ಹಾಗೂ ಕನ್ನಡದಲ್ಲಿ ಘೋಷಣೆಗಳನ್ನು ಬರೆಯಲಾದ ಫಲಕ ಭಿತ್ತಿ ಘೋಷಣೆಗಳಿಂದ ವಿಶೇಷ ಅಲಂಕಾರಗೊಂಡಿತ್ತು. ಹಿಂದಿನ ಎಲ್ಲ ಅಧಿವೇಶನಗಳಲ್ಲಿಯಂತೆ, ಸಾಮಾನ್ಯವಾದ ರಾಷ್ಟ್ರೀಯ ಶೈಲಿಯಲ್ಲಿ ಆಸನಗಳ ವ್ಯವಸ್ಥೆ ಮಾಡಲಾಗಿತ್ತು. ಸಭಾ ಮಂಟಪದ ಪಶ್ಚಿಮ ಭಾಗದಲ್ಲಿ ನಟ್ಟ ನಡುವೆ ಬೃಹತ್ ವ್ಯಾಸಪೀಠ ನಿರ್ಮಿಸಲಾಗಿತ್ತು. ಖಾದಿ ಬಟ್ಟೆ, ಚಾಪಿಗಳಿಂದ ಆವರಣ ನಿರ್ಮಿಸಲಾಗಿತ್ತಲ್ಲದೆ ನೆಲದ ಮೇಲೆ ಅವುಗಳನ್ನು ಹಾಸಲಾಗಿತ್ತು. ಸರ್ವಾಧ್ಯಕ್ಷರ ಆಸನದ ಹಿಂದುಗಡೆ ಮಧ್ಯದಲ್ಲಿ ಲೋಕಮಾನ್ಯ ಬಾಳಗಂಗಾಧರ ಟಿಳಕರ ಪೂರ್ಣ ದೇಹಾಕೃತಿ ಚಿತ್ರವನ್ನು ಭವ್ಯವಾಗಿ ನಿಲ್ಲಿಸಲಾಗಿತ್ತು. ಎರಡೂ ಬದಿಗಳಲ್ಲಿ ಮಹಾತ್ಮಾಜೀಯವರ ಪೂರ್ಣ ದೇಹಾಕೃತಿ ಚಿತ್ರಣಗಳನ್ನು ನಿಲ್ಲಿಸಲಾಗಿತ್ತು. ಶಿಷ್ಯರ ಸಮೇತ ವಿದ್ಯಾರಣ್ಯ, ಪ್ರಳಯಕರ್ತ ಶಿವ, ಸೃಷ್ಟಿಕರ್ತ ಬ್ರಹ್ಮ ಹಾಗೂ ಪಾಲನ - ಪ್ರಗತಿ ಸೂಚಕ ವಿಷ್ಣು ಇವರ ಭಾವಚಿತ್ರಗಳನ್ನು ಮಂಟಪದ ಪ್ರವೇಶದ್ವಾರದಲ್ಲಿ ಪ್ರದರ್ಶಿಸಿ ಅಲಂಕರಿಸಲಾಗಿತ್ತು. ಈ ಭಾವಚಿತ್ರಗಳ ಮುಂದೆ ನಂದಿ ಹಾಗೂ ಸೊಂಡಿಲುಗಳನ್ನೆತ್ತಿ ಸ್ವಾಗತ ಕೋರುವ ಗಜರಾಜನ ಪ್ರತಿಮೆಗಳನ್ನು ನಿಲ್ಲಿಸಲಾಗಿತ್ತು. ಎರಡೂ ಬದಿಗಳಲ್ಲಿ ಕರ್ನಾಟಕ ಮಾತಾಕೀ ಜೈ ಎಂಬ ಜಯಘೋಷಗಳನ್ನು ಕನ್ನಡದಲ್ಲಿ

ಬರೆಯಲಾಗಿತ್ತು. ಮೈಸೂರ ಮಹಾರಾಜರು, ಹಿಂದಿನ ಮತ್ತು ಇಂದಿನ ಅನೇಕ ನೇತಾರರ ಭಾವಚಿತ್ರಗಳನ್ನು ಸಹ ಪ್ರದರ್ಶಿಸಲಾಗಿತ್ತು ,ಚರಖಾದ ಮೇಲೆ ನೂಲುತ್ತಿದ್ದ ಖ್ಯಾತ ವಿಜ್ಞಾನಿ ಸರ್ ಪಿ.ಸಿ. ರೇ ಅವರ ಭಾವಚಿತ್ರ ಎಲ್ಲರ ಮನ ಸೆಳೆದಿತ್ತು. ಮಂಟಪದ ಬಲಭಾಗದಲ್ಲಿ ಮಹಿಳೆಯರು ಆಸೀನರಾಗಿರುತ್ತಿದ್ದರು. ಮತ್ತು ಖಾಕಿ ಚೊಣ್ಣ, ಬಿಳಿಯಂಗಿ ಗಣವೇಷ ಧರಿಸಿದ ಸ್ವಯಂಸೇವಕರು, ಕಲಾದಗಿಯ ಕರಿ ಬಣ್ಣದ ಸೀರೆಯಲ್ಲಿ ಸ್ವಯಂಸೇವಕಿಯರು ಮಿಂಚುತ್ತಿದ್ದರು. ಎರಡೂ ಬದಿಗಳಲ್ಲಿ ಎ.ಆಯ್.ಸಿ.ಸಿ. ಸದಸ್ಯರು ಸ್ವಾಗತ ಸಮಿತಿ ಸದಸ್ಯರು, ಗಣ್ಯ ಮಾನ್ಯರು ಪ್ರತಿಷ್ಠಿತರು ಆಸೀನರಾಗಿರುತ್ತಿದ್ದರು. ಪ್ರತಿನಿಧಿಗಳು ಬೇರೆ ಬೇರೆ ಕಡೆಗಳಲ್ಲಿ ನೆಲದ ಮೇಲೆ ವೇದಿಕೆಯ ಸುತ್ತ ಮುತ್ತ ಕುಳಿತಿರುತ್ತಿದ್ದರು. ಗ್ಯಾಲರಿಯಲ್ಲಿ ಸಂದರ್ಶಕರು ಸುತ್ತಾಗಿ ಕುಳಿತಿರುತ್ತಿದ್ದರು.

ಅಧಿವೇಶನದ ಆರಂಭಕ್ಕೆ ನಿಗದಿ ಪಡಿಸಲಾದ ವೇಳೆಗೆ ಮೊದಲು ಮೂರು ಗಂಟೆ ಸ್ವಾತಂತ್ರ್ಯ ದೇವತೆಯ ಮಂದಿರವನ್ನು ನೆನಪಿಗೆ ತಂದುಕೊಡುವುದರ ಸೂಚಕವಾಗಿ ನಿರ್ಮಿಸಲಾದ 70 ಅಡಿ ಎತ್ತರದ ಭವ್ಯ ವಿರೂಪಾಕ್ಷೇಶ್ವರ ಗೋಪುರದ ಕೆಳಗೆ ಜನರು ಪ್ರವಾಹೋಪಾದಿಯಲ್ಲಿ ಉತ್ಸಾಹದಿಂದ ಧುಮಿಕಿ ನೆರೆಯ ತೊಡಗಿದರು. ಮಧ್ಯಾಹ್ನ 2 ಗಂಟೆಯ ತನಕ ಗೋಪುರದ ದ್ವಾರ ತೆಗೆಯುವ ವರೆಗೆ ಜನಸಂದಣಿ ಅಪಾರವಾಗಿ ಹೆಚ್ಚ ತೊಡಗಿತು. ಸ್ವಯಂ ಸೇವಕ, ಸ್ವಯಂ ಸೇವಕಿಯರು, ಕಾಂಗ್ರೆಸ್ ಪದಾಧಿಕಾರಿಗಳು, ನೇತಾರರು ಸ್ವತಃ ಮುಂದಾಗಿ ಅವರನ್ನು ವ್ಯವಸ್ಥಿತವಾಗಿ ನಿಯಂತ್ರಿಸುವಲ್ಲಿ ಯಶಸ್ವಿಯಾದರು. ಮಧ್ಯಾಹ್ನ 2 ರಷ್ಟೊತ್ತಿಗೆ ಇಡೀ ಸಭಾ ಮಂಟಪ ಪ್ರತಿನಿಧಿಗಳಿಂದ ಸ್ವಾಗತ ಸಮಿತಿ ಸದಸ್ಯರಿಂದ, ಸಂದರ್ಶಕರಿಂದ ತುಂಬಿ ಹೋಗಿತ್ತು.

ಮೂರು ಗಂಟೆಯಾಗುವುದಕ್ಕೆ ಕೆಲವೇ ನಿಮಿಷ ಮೊದಲಿಗೆ ಮಹಾಧಿವೇಶನದ ಸರ್ವಾಧ್ಯಕ್ಷ ಮಹಾತ್ಮಾ ಗಾಂಧೀಜಿಯವರ ಭವ್ಯ ಮೆರವಣಿಗೆಯು ಗೋಪುರದೊಳಗೆ ಹಾಯ್ದು ಒಳಗೆ ಪ್ರವೇಶಿಸಿದಂತೆಯೇ ಇಕ್ಕೆಲಗಳಲ್ಲಿ ನಿಂತುಕೊಂಡು ಬರಮಾಡಿಕೊಂಡ ಜನಸ್ತೋಮದ ಜಯಕಾರದ ಘೋಷಣೆಯ ಧ್ವನಿಯು ದುಮುದುಮಿಸಿತು. ಅದು ರಂಜನೀಯ ಕಾರಂಜಿಯನ್ನು ಸುತ್ತು ಹಾಕುತ್ತಿದ್ದಂತೆಯೇ ಹೂವು ಹಸಿರೆಲೆಗಳ ಮಧ್ಯೆ ಕರ್ನಾಟಕ ಮಾತಾಕೀ ಜೈ, ಲೋಕ ಮಾನ್ಯ ಟಿಳಕಕೀ ಜೈ, ಮಹಾತ್ಮಾ ಗಾಂಧೀಜೀ ಕೀ ಜೈ ಘೋಷಣೆಗಳು ಕಾಣಿಸಿಕೊಂಡವು. ಹೊರಗಡೆಯಲ್ಲಿಯ ಜನಸ್ತೋಮದ ಘೋಷಣೆಗಳು ಕಿವಿಗಳು ಗಡಚಿಕ್ಕುವಂತೆ ಕೇಳಿ ಬರುವ ಮೂಲಕ ಪ್ರತಿನಿಧಿಗಳಿಗೆ ಸರ್ವಾಧ್ಯಕ್ಷರನ್ನು ಸೂಕ್ತ ರೀತಿಯಲ್ಲಿ ಎದ್ದು ನಿಂತು ಸ್ವಾಗತಿಸಬೇಕೆಂಬುದನ್ನು ಸೂಚಿಸಿದವು. ಮೆರವಣಿಗೆಯು ದ್ವಾರದ ಬಳಿ ನಿಲ್ಲಿಸಲಾದ ದ್ವಾರ ಪಾಲಕ ಪ್ರತಿಮೆ ಹಾಗೂ ದೇವತೆಗಳ ಪುತ್ಥಳಿಗಳ ಬಳಿ ಸಮೀಪಿಸುತ್ತಿದ್ದಂತೆಯೇ ಸ್ವರಾಜ್ಯ ಧ್ವಜವು ಹಾರಾಡುತ್ತ ಮುಂದೆ ಸಾಗಿದಂತೆಯೇ ಉತ್ಸಾಹಿ

ಜನರೆಲ್ಲರೂ ಎದ್ದು ನಿಂತು ಮಹಾತ್ಮಾ ಗಾಂಧೀಜೀ ಕೀ ಜೈ, ವಂದೇ ಮಾತರಂ, ಅಲ್ಲಾಹೋ ಅಕಬರ್ ಘೋಷಣೆಗಳನ್ನು ಗಗನ ಚುಂಬಿಸುವಂತೆ ಜೋರಾಗಿ ಕೂಗಿ ಸ್ವಾಗತಿಸಿದರು. ಸೇವಾದಲದ ಸೇನಾಪತಿ ಡಾ॥ ಹರ್ಡಿಕರರ ಸಮರ್ಥ ನೇತೃತ್ವದಲ್ಲಿ ಮೆರವಣಿಗೆಯಲ್ಲಿ ಭಾಗವಹಿಸಿದ ಎಲ್ಲರೂ ಪಥ ಕ್ರಮಣಗೀತ ಧ್ವನಿಗೆ ತಕ್ಕಂತೆ ಹೆಜ್ಜೆಗಳನ್ನು ಹಾಕುತ್ತ ಇಬ್ಬಿಬ್ಬರು ಒಟ್ಟಿಗೆ ಇರುವಂತೆ ಸಾಲಾಗಿ ಬಂದು ಶಿಸ್ತಿನಿಂದ ಮಂಟಪ ಪ್ರವೇಶಿಸಿದರು. ಲಂಡ ಪಂಚೆಯುಟ್ಟ ಸರ್ವಾಧ್ಯಕ್ಷ ಮಹಾತ್ಮಾ ಗಾಂಧೀಜಿಯವರೊಬ್ಬರೇ ಮೆರವಣಿಗೆಯಲ್ಲಿ ಪ್ರತ್ಯೇಕವಾಗಿ ಮುಂದುಗಡೆ ನಡೆಯುತ್ತಿದ್ದರೆ ಅವರ ಹಿಂದೆ ಮಿಕ್ಕೆಲ್ಲ ಕಾಂಗ್ರೆಸ ನೇತಾರರು ಶಿಸ್ತಿನಿಂದ ಇಬ್ಬಿಬ್ಬರು ಒಂದೆಡೆಯಿರುವಂತೆ ಸಾಲಿನಲ್ಲಿ ನಡೆದಿದ್ದರು. ದೇಶಬಂಧು ಚಿತ್ತರಂಜನದಾಸ, ಡಾ॥ ಸೈಫುದ್ದೀನ್ ಕಿಚಲೂ, ಶ್ರೀ ಗಂಗಾಧರರಾವ್ ದೇಶಪಾಂಡೆ , ಪಂಡಿತ ಮದನ ಮೋಹನ ಮಾಳವೀಯ, ಲಾಲಾ ಲಜಪತರಾಯ್, ಮೌಲಾನಾ ಶೌಕತ್ ಅಲಿ, ಮೌಲಾನಾ ಮಹಮ್ಮದ ಅಲಿ, ಶ್ರೀಮತಿ ಸರೋಜಿನಿ ನಾಯಿಡು, ಮೌಲಾನಾ ಅಬ್ದುಲ್ ಕಲಾಂ ಅಜಾದ, ಪಂ. ಮೋತಿಲಾಲ ನೆಹ್ರು, ಶ್ರೀ ಸಿ. ರಾಜಗೋಪಾಲಾಚಾರಿ, ವಿಠ್ಠಲ ಪಟೇಲ, ಟಿ. ಪ್ರಕಾಶಂ, ಬಾಬು ರಾಜೇಂದ್ರ ಪ್ರಸಾದ, ಕೆ. ವೆಂಕಟಪ್ಪಯ್ಯ ಪಂತಲು, ಜಮ್ನಾಲಾಲ ಬಜಾಜ್, ಡಾ॥ ಮುಂಜೆ, ಎ. ರಾಮಸ್ವಾಮಿ ಅಯ್ಯಂಗಾರ, ಪಂ. ಜವಾಹರಲಾಲ ನೆಹ್ರು ಮೊದಲಾದ ಪ್ರಮುಖ ಧುರೀಣರು ಹೀಗೆ ನಡೆದು ಬಂದರು. ಎನ್.ಸಿ. ಕೇಳಕರ, ಮೌಲಾನಾ ಹಸರತ್ ಮೊಹಾನಿ, ಬಿ. ಶಿವರಾವ್, ಬಾಬು ಶಿವಪ್ರಸಾದ ಗುಪ್ತಾ, ಜನಾಬ್ ಯಾಕೂಬ್ ಹಸನ್, ಎಸ್ ಸತ್ಯಮೂರ್ತಿ ಪುರುಷೋತ್ತಮದಾಸ ಟಂಡನ್, ಪಂ. ಸುಂದರಮ್‌ಲಾಲ್, ಶಂಕರಮ್, ಬ್ಯಾಂಕರ್ ಎಸ್. ಶ್ರೀನಿವಾಸ ಅಯ್ಯಂಗಾರ, ಡಾ॥ ಮಹಮ್ಮದ ಜಮ್ನಾದಾಸ ಮೆಹ್ತಾ, ಡಾ॥ ಯು. ರಾಮರಾವ್, ಶ್ರೀನಿವಾಸ ಕೌಜಲಗಿ, ಸಿ.ಆರ್. ರೆಡ್ಡಿ, ಅಸಫ್ ಅಲಿ, ಶ್ರೀಮತಿ ಮಹಮ್ಮದ ಅಲಿ, ಕುಮಾರಿ ಗುಲ್ನಾರ್ ಮಹಮ್ಮದ ಅಲಿ, ಸ್ವಾಮೀ ಶ್ರದ್ಧಾನಂದ, ಜಿ. ಸರದಾರ ಮಂಗಲಸಿಂಗ್, ಸಿ.ಬಿ. ವೆಂಕಟರಮಣ ಅಯ್ಯಂಗಾರ ಇವರು ನಡೆದು ಬಂದ ಇತರ ಪ್ರಮುಖ ಧುರೀಣರು.

ಸ್ವಾಗತಾಧ್ಯಕ್ಷ ಗಂಗಾಧರರಾವ್ ದೇಶಪಾಂಡೆಯವರು ಅಧಿವೇಶನದ ಸರ್ವಾಧ್ಯಕ್ಷ ಮಹಾತ್ಮಾ ಮೋಹನದಾಸ ಕರಮಚಂದ ಗಾಂಧೀಜಿಯವರನ್ನು ವೇದಿಕೆಯ ಮೇಲೆ ತುಂಬು ಹೃದಯದಿಂದ ಸ್ವಾಗತಿಸಿ ಮಾಲಾರ್ಪಣೆ ಮಾಡಿದರು. ಇತರ ಧುರೀಣರಿಗೂ ಮಾಲಾರ್ಪಣೆ ಮಾಡಿದರು. ಅಧ್ಯಕ್ಷರ ಬಲಬದಿಗೆ ಲಾಲಾ ಲಜಪತರಾಯ, ಶ್ರೀಮತಿ ಸರೋಜಿನಿ ದೇವಿ ನಾಯ್ಡು ಎಡಬದಿಗೆ ಪಂ. ಮದನಮೋಹನ ಮಾಳವೀಯ, ದೇಶಬಂಧು ಚಿತ್ತರಂಜನದಾಸ, ಎದುರಿನ ಭಾಗದಲ್ಲಿ ಮೌಲಾನಾ ಮಹಮ್ಮದ ಅಲಿ, ಮೌಲಾನಾ ಶೌಕತ್ ಅಲಿ ತಮ್ಮ

ಆಸನಗಳಲ್ಲಿ ಆಸೀನರಾದರು. ಸರಿಯಾಗಿ 3 ಗಂಟೆಗೆ ಸ್ವಯಂ ಸೇವಕರು ಸುಜಲಾಂ ಸುಫಲಾಮ್ ಮಲಜಯ ಶೀತಲಾಂ ಮಾತೃವಂದನೆಯ ಪ್ರಾರ್ಥನೆ ಹಾಡಿದರು. ನಂತರ ಎರಡು ಕನ್ನಡ ಸ್ವಾಗತ ಗೀತೆ ಹಾಡಲು ಅವಕಾಶ ನೀಡಲಾಯಿತು.

ಸ್ವಾಗತ ಗೀತೆ

(ಶ್ರೀ ರಾಗ ಝಂಪೇತಾಳ)

ಸ್ವಾಗತವು ಸ್ವಾಗತವು ಸಕಲ ಜನಸಂಕುಲಕೆ ।
ಸ್ವಾಗತವ ಗೈದು ಶಿರಬಾಗುವೆವು ಬುಧಗಣಕೆ ॥ಪ॥

ಬೆಳಗು ಬರೆ ಬಿಸಜನಿಯ । ಗೆಳೆಯನುದಿಸುವನೆಂದು
ತಿಳುಹಿಸಲು ಮೊದಲುಲಿದು । ನಲಿವ ಖಗಕುಲದಂತೆ॥
ಮುಳುಗಿರುವ ಸ್ವಾತಂತ್ರ್ಯ। ನಳಿನ ಸಖನುದಯವನು॥
ಇಳೆಗೆಲ್ಲ ತಿಳುಹಿಸಲು। ಕಲೆತು ಉಲಿಯುವ ತಮಗೆ॥
ಸ್ವಾಗತವು ॥1॥

ಪಾರತಂತ್ರ್ಯದ ಬಲೆಗೆ। ಸೇರಿ ಮರುಗುತಲಿರುವ।
ಭಾರತಾಂಬೆಯ ಭಯವ। ದೂರ ಮಾಡುವೆವೆನುತೆ॥
ಚಾರು ಸತ್ಯಾಗ್ರಹದ।ಚೂರಿಯಿಂ ಚರಚರನೆ।
ತೋರ ಬಲೆಯನು ಹರಿವ। ಧೀರನರವೀರರಿಗೆ ॥
ಸ್ವಾಗತವು ॥2॥

ಯೋಗಭೂಮಿಗೆ ಹಿಡಿದ। ರೋಗವನು ಹಿಂಗಿಸಲು।
ಸಾಗಿಸುತೆ ಪುಸಿಪೊಲೆಯ। ಬಾಗಿ ನನ್ನಿಗೆ ತಲೆಯ॥
ತ್ಯಾಗವ್ರತವನೆ ತಳೆದು। ಭೋಗವೆಲ್ಲವ ಕಳೆದು।
ಯೋಗಿಗಳ ತೆರ ಮೆರೆವ। ತ್ಯಾಗಮೂರುತಿಗಳಿಗೆ॥
ಸ್ವಾಗತವು ॥3॥

ತ್ರಿಳಿವಿನಾಗರವೆನಿಸಿ। ತಳೆದು ಸುಖಸಂಪದವ।
ಬೆಳೆದ ಸಾಮ್ರಾಜ್ಯದಿಂ। ಹೊಳೆದ ಕನ್ನಡದೇವಿ॥
ಕಳೆದ ಸಿರಿಯನು ಮರಳಿ। ಗಳಿಸಲ್ಕೆ ಕರೆಯಿಸಿರೆ।
ಬೆಳಗಾವಿಯೊಳು ಕಲೆತು। ಕುಳಿತ ಬಲವಂತರಿಗೆ॥
ಸ್ವಾಗತವು ॥4॥

ಬಡವ ಹಿಡಿಯವಲಕ್ಕಿ। ಕೊಡಲು ಪ್ರೇಮದಲಂದು।
ಗಡನೆ ತೃಪ್ತಿಯ ತಳೆದ ಪೊಡವಿಯೊಡೆಯನ ತೆರದಿ॥
ಪಿಡಿವನಿಯೊಲಿರುವ ಈ। ಬಡವರಾತಿಥ್ಯವನು।
ಕಡಲಿನಂದದಿ ಕಂಡು। ಪಡೆಯುವುದು ತಣಿವನ್ನು॥
ಸ್ವಾಗತವು ॥5॥

★ ''ಕವಿಭೂಷಣ'' ಬೆಟಗೇರಿ ಕೃಷ್ಣ ಶರ್ಮ

ಭಾರತದ ರಾಷ್ಟ್ರಗೀತೆ

(ರಾಗ ಮುಖಾರಿ ಝಂಪೇತಾಳ)

ನಮ್ಮದೈ! ನಮ್ಮದೀ ಭರತಭೂಮಿ ॥ಪ॥

ಹೆರವರಂ ನಂಬದಲೆ ಜಗದೀಶ್ವರಂ ತಾನೆ।
ಧರಿಸಿ ನಾನಾವತಾರಂಗಳನ್ನು॥
ಕರೆವ ಸರ್ವಸ್ವಮಂ ಧರೆಯ ಸಂರಕ್ಷಿಸುವ।
ತೆರವ ಕಲಿಸಿದ ಪೂರ್ವಪಾಠಶಾಲೆ॥ ನಮ್ಮದೈ! ॥1॥

ಉಚ್ಚ ತತ್ವಾರ್ಥಗಳನಾಚರಿಸಿ ಲೋಕವನು।
ಎಚ್ಚರಿಸಿ ದೇವರಿಚ್ಛಾಜ್ಯೋತಿಯಂ॥
ಅಚ್ಚಳಿಯದೊಲುಗೈದ ಋಷಿ ಪದವೀಧರರು।
ಸ್ವೇಚ್ಛೆಯಿಂ ನೆಲೆಗೈದ ಸುಕ್ಷೇತ್ರವು॥ ನಮ್ಮದೈ! ॥2॥

ಪದವೀಧರಪೇಳ್ವ ಪದ್ಧತಿಗಳನು ಬಿಡದೆ।
ಸದಭಿಮಾನೈಕ್ಯ-ಶೌರ್ಯೋತ್ಸಾಹದಿಂ॥
ಉದಿತ ಸುಸ್ಫೂರ್ತಿಯಿಂದೆಮ್ಮ ಪೂರ್ವಜರಿರ್ದ।
ಮುದದ ಭಾಗ್ಯದ ನಿಧಿಯ ಮಂದಿರವಿದು॥ ನಮ್ಮದೈ! ॥3॥
ದೇವಋಷಿಪೂರ್ವಜರುದಾತ್ತವೃತ್ತಿ ಪ್ರಭಾ-।
ಭಾವನಾಮೃತವೃಷ್ಟಿಯಿಂ ಬೆಳೆಯುವ॥
ಭಾವಿಸುಖಸಾಮ್ರಾಜ್ಯವೆಂಬ ಸತ್ಫಲಗಳನು।
ಈವ ಸರ್ವೋತ್ಕೃಷ್ಟ ನಂದನವನಂ ॥4॥

★ ''ಶಾಂತಕವಿ'' ಸಕ್ಕರಿ ಬಾಳಾಚಾರ್ಯರು



ದೇಶಪಾಂಡೆಯವರ ಸ್ವಾಗತ ಭಾಷಣ

ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀಯುತ ಗಂಗಾಧರರಾವ್ ಬಾಳಕೃಷ್ಣ ದೇಶಪಾಂಡೆಯವರು ಪ್ರತಿನಿಧಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಕನ್ನಡದಲ್ಲಿ ಚಿಕ್ಕ ಭಾಷಣ ಮಾಡಿದರು. ಅವರ ಇಂಗ್ಲೀಷ ಭಾಷಣವನ್ನು ಓದಿದಂತೆ ಎಂದು ಪರಿಗಣಿಸಲಾಯಿತು. ಇಂಗ್ಲೀಷಿನಲ್ಲಿಯ ಅವರ ಮುದ್ರಿತ ಭಾಷಣದ ಪೂರ್ತಿ ಪಾಠ ಈ ರೀತಿಯಿದೆ.

ಪ್ರತಿನಿಧಿ ಸೋದರ ಸೋದರಿಯರೇ, ಹಾಗೂ ಮಹನೀಯರೇ, ಮಹಿಳೆಯರೇ, ಕರ್ನಾಟಕ ಪ್ರಾಂತದ ವಿನೂತನ ಜಾಗೃತ ಜನತೆಯ ಪರವಾಗಿ ನಿಮ್ಮೆಲ್ಲರನ್ನೂ ಈ ಚಿಕ್ಕ ಕೃಷಿ ನಗರ ಬೆಳಗಾವಿಯಲ್ಲಿ ನಡೆಯುತ್ತಿರುವ ಭಾರತ ರಾಷ್ಟ್ರೀಯ ಕಾಂಗ್ರೆಸ್ ಮಹಾಧಿವೇಶನಕ್ಕೆ ಸ್ವಾಗತಾಧ್ಯಕ್ಷನಾಗಿ ಹೃತ್ಪೂರ್ವಕ ಬರಮಾಡಿಕೊಳ್ಳುವ ಸುವರ್ಣ ಸಂಧಿ ನನಗೆ ಪ್ರಾಪ್ತವಾಗಿರುವುದನ್ನು ನನ್ನ ಜೀವನದಲ್ಲೇ ಅತ್ಯಂತ ಮಹತ್ವದ ಕ್ಷಣ, ನನಗೆ ದೊರೆತ ಅದ್ಭುತ ಅವಕಾಶವೆಂದು ನಾನು ಬಗೆಯುತ್ತೇನೆ. ಈ ಅದ್ಭುತ ಪ್ರಸಂಗದಲ್ಲಿ ನನ್ನ ಭಾವನೆಗಳನ್ನು ಸಂಪೂರ್ಣವಾಗಿ ವ್ಯಕ್ತಪಡಿಸಲು ನಾನು ಅಸಮರ್ಥನೆಂಬ ನನ್ನ ಅಳುಕನ್ನು ಸಹ ಇದೇ ಕಾಲಕ್ಕೆ ವ್ಯಕ್ತಪಡಿಸದಿರಲಾರೆ. ನೀವು ನಮ್ಮ ಆಮಂತ್ರಣವನ್ನು ಸ್ವೀಕರಿಸಿ ಇಷ್ಟೊಂದು ಭಾರೀ ಬೃಹತ್ ಹೊಣೆಗಾರಿಕೆಗಳನ್ನು ನಿರ್ವಹಿಸಲು ನಮಗೆ ಅವಕಾಶ ನೀಡಿರುವುದು ನೀವು ನಮ್ಮ ಮೇಲೆ ಧಾರೆಯೆರೆದ ವಿಶ್ವಾಸಪೂರ್ಣ ಮಹಾಕೃಪೆಯಿಂದೇ ನಾವೆಲ್ಲ ಭಾವಿಸುತ್ತೇವೆ. ದೇಶದ ಇತರ ಮಹಾನಗರಗಳಲ್ಲಿ ಸಹಜವಾಗಿಯೇ ಲಭ್ಯವಿರುವ ಏನೆಲ್ಲ ಅನುಕೂಲತೆಗಳಲ್ಲಿ ಒಂದು ಕೂಡ ಇಲ್ಲದಿರುವ ನಮ್ಮ ಈ ಚಿಕ್ಕ ನಗರದಲ್ಲಿ ಅವುಗಳನ್ನೆಲ್ಲ ಒದಗಿಸಲು ನಮ್ಮಲ್ಲಿಯ ಸಾಕಷ್ಟು ಸಂಪನ್ಮೂಲಗಳ ಅಲಭ್ಯತೆಯ ಕಾರಣದಿಂದ

ಸಾಧ್ಯವಾಗಿಲ್ಲ. ಒಂದು ದೃಷ್ಟಿಯಿಂದ ನಾವು ತಮ್ಮೆಲ್ಲರಿಗಾಗಿ ಮಾಡಿದ ಸರ್ವ ಸಿದ್ಧತೆಗಳು ಅಪೂರ್ಣವೆಂದೇ ನಮಗನಿಸುತ್ತದೆ. ಬೇರೆ ಬೇರೆ ಮಹಾನಗರಗಳಲ್ಲಿ ನಿಮಗೆ ಲಭ್ಯವಾಗಬಹುದಾಗಿರುವ ಸೌಲಭ್ಯಗಳನ್ನು ಅನುಕೂಲತೆಗಳನ್ನು ನಿಮಗೆ ಒದಗಿಸಲು ನಮಗೆ ಸಾಧ್ಯವಾಗಿಲ್ಲ ಎಂದು ನಾನು ಪ್ರಾಂಜಲವಾಗಿ ಒಪ್ಪಿಕೊಳ್ಳಲೇಬೇಕು. ನಮಗೆ ಲಭ್ಯವಿರುವ ಸೀಮಿತ ಸಂಪನ್ಮೂಲಗಳ ಸಾಧನ ಹಾಗೂ ನಮಗೆ ಎಲ್ಲ ಅನುಕೂಲತೆಗಳನ್ನು ಏರ್ಪಾಟುಗಳನ್ನು ಮಾಡಲು ನಮ್ಮ ಬಳಿಯಿರುವ ಶಕ್ತಿಸಾಮರ್ಥ್ಯಗಳಿಗಿಂತಲೂ, ಕಾಂಗ್ರೆಸ್ಸಿನ ಬಗೆಗೆ ನಮ್ಮಲ್ಲಿ ಬೇರೂರಿರುವ ಅಚಲ ಪ್ರೇಮ ಅಚಲ ವಿಶ್ವಾಸ ಹಾಗೂ ಅಮಿತೋತ್ಸಾಹ ಮತ್ತು ಕರ್ನಾಟಕ ಅಥವಾ ಕನ್ನಡ ಭಾಷಿಕರುಳ್ಳ ಪ್ರದೇಶಕ್ಕೆ ಪ್ರತ್ಯೇಕ ಪ್ರಾಂತವೆಂದು ನೀಡಲಾದ ಮನ್ನಣೆಯು ಅಧಿಕಗೊಳಿಸಿದ ನಮ್ಮಲ್ಲಿಯ ಸ್ಫೂರ್ತಿ, ಅಭಿಮಾನಗಳೇ ಹೆಚ್ಚು. ಹೀಗಾಗಿ ಕಾಕಿನಾಡದಲ್ಲಿ ಜರುಗಿ ಹೋದ ಮಹಾಧಿವೇಶನದ ಕಾಲಕ್ಕೆ ಮುಂದಿನ ಮಹಾಧಿವೇಶನ ಸೇರಿಸುವಂತೆ ನಿಮ್ಮನ್ನು ನಿಮಂತ್ರಿಸುವ ಧೈರ್ಯ ನಮಗೆ ಪ್ರಾಪ್ತವಾದದ್ದು. ನಮ್ಮಲ್ಲಿಯ ನಮ್ಮಿಂದ ಒದಗಿಸಲಾದ ಏರ್ಪಾಟುಗಳಲ್ಲಿಯ ಅಸಂಖ್ಯ ಕೊರತೆಗಳನ್ನು ಕ್ಷಮಿಸಬೇಕೆಂದೂ ವಿನಯಪೂರ್ವಕ ಕೇಳಿಕೊಳ್ಳುತ್ತೇನೆ.

36 ಸಾವಿರಕ್ಕಿಂತ ಜನಸಂಖ್ಯೆ ಹೆಚ್ಚಿರದ ಕೇವಲ ರೈತಾಪಿ ವರ್ಗ ಕೃಷಿ ಕಾರ್ಮಿಕರಿಂದಲೇ ತುಂಬಿರುವ ಬೆಳಗಾವಿಯಂಥ ಅತ್ಯಂತ ಚಿಕ್ಕ ನಗರವೊಂದರಲ್ಲಿ ಕಾಂಗ್ರೆಸ್ಸಿನ ಮಹಾಧಿವೇಶನ ಧೈರ್ಯದಿಂದ ಸಂಘಟಿಸಲ್ಪಟ್ಟಿದ್ದು ಕಾಂಗ್ರೆಸ್ಸಿನ ಇತಿಹಾಸದಲ್ಲೇ ಮೊಟ್ಟಮೊದಲ ಪ್ರಸಂಗ. ಒಂದು ವೇಳೆ ದೈವಾನುಗ್ರಹದಿಂದ ಈ ಅಧಿವೇಶನವು ಪ್ರಚಂಡ ಯಶಸ್ಸಿನ ಕಿರೀಟ ಧಾರಣೆ ಮಾಡಿ ವಿಜೃಂಭಿಸಿದ್ದಾದರೆ ಮುಂದೆ ಬೇರೆ ಚಿಕ್ಕ ಗ್ರಾಮೀಣ ಪ್ರದೇಶಗಳೂ ಕಾಂಗ್ರೆಸ್ ಅಧಿವೇಶನ ಸಂಪನ್ನಗೊಳಿಸಲು ಮುಂದೆ ಬರುವ ಧೈರ್ಯ ಮಾಡುವವೆಂಬ ವಿಶ್ವಾಸ ನನಗಿದೆ. ಅದರಿಂದ ಕಾಂಗ್ರೆಸ್ಸಿನ ಆಂದೋಲನವು ಕೇವಲ ಉಳ್ಳವರ ಅಥವಾ ಸಂಪದ್ಭರಿತ ಶ್ರೀಮಂತ ಸಮಾಜಕ್ಕೆ ಮಹಾನಗರಗಳಿಗೆ ಹಾಗೂ ಮಹಾನ್ ಚಿಂತಕರಿಗೆ ಬುದ್ಧಿಜೀವಿಗಳಿಗೆ ಅಷ್ಟೇ ಸೀಮಿತವಾಗಿರದೇ ಅದು ಇಡೀ ರಾಷ್ಟ್ರದ ಸಮಸ್ತ ಜನತೆಯ ಪ್ರಚಂಡ ಇಚ್ಛಾಶಕ್ತಿಯೆಂಬುದು ಇಂಥದರಿಂದ ವ್ಯಕ್ತವಾಗುತ್ತದೆ.

ಮೊಟ್ಟ ಮೊದಲ ಬಾರಿಗೆ ಕರ್ನಾಟಕವು ಅರ್ಥಾತ್ ಕನ್ನಡ ಭಾಷಿಕರೇ ಅಧಿಕ ಸಂಖ್ಯೆಯಲ್ಲಿರುವ ಸಮಗ್ರ ಕನ್ನಡ ಪ್ರದೇಶವು ಒಂದು ಪ್ರಾಂತವೆಂಬ ಮನ್ನಣೆ ಮಹತಿಯನ್ನು ಕಾಂಗ್ರೆಸ್‌ದಿಂದ ಪಡೆದಿರುವ ಈ ಸಂದರ್ಭದಲ್ಲಿ ಕನ್ನಡ ನಾಡಿನ ಮಹಾನತೆ, ಗತ ವೈಭವ ಇವುಗಳನ್ನು ತಮಗೆ ಬಿಂಬಿಸಿ ಹೇಳುವ ಪ್ರಬಲ ಇಚ್ಛೆನನ್ನದು. ಆದರೆ ಸಮಯಾವಕಾಶ ಅತಿ ವಿರಳವಿರುವುದರಿಂದ ನಾನು ಸಾಧಾರಣ ರೀತಿಯಲ್ಲಿ ಸಂಕ್ಷಿಪ್ತವಾಗಿ ಮಾತ್ರ ತಮಗೆ ನಿವೇದಿಸುವ ಅನಿವಾರ್ಯತೆ ಹಾಗೂ ಒತ್ತಡಕ್ಕೆ ಮಣಿಯಬೇಕಾಗಿದೆ. ಕರ್ನಾಟಕ ಅಥವಾ

ಕನ್ನಡ ಪ್ರದೇಶವು ಹಲವಾರು ಆಡಳಿತಗಳಲ್ಲಿ ಹರಿದು ಹಂಚಿ ಹೋದುದರಿಂದ ನಾವು ದೀರ್ಘ ಕಾಲದಿಂದಲೂ ಅತಿ ಹೆಚ್ಚು ನೋವು, ಹಿಂಸೆಯನ್ನು ಅನುಭವಿಸುತ್ತ ಬಂದವರು. ಗತಿಸಿ ಹೋದ ವಿದ್ಯಮಾನಗಳ ನೋಂದಣಿಕಾರರು, ಉಲ್ಲೇಖಿನ ಪಟುಗಳು ಹೀಗೆ ಕನ್ನಡ ನಾಡು ಹಾಗೂ ಜನತೆ ಛಿದ್ರ ವಿಚ್ಛಿದ್ರಗೊಂಡಿರುವುದಕ್ಕೆ ಸಮರ್ಥನೆಗಳನ್ನು ಕೊಡಬಹುದು. ಆದರೆ ಕನ್ನಡಿಗರ ಸಮ್ಮತಿಯಿಲ್ಲದೆ ಅವರ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಹೀಗೆ ಕನ್ನಡನಾಡು ತುಂಡು ತುಂಡು ಮಾಡಲ್ಪಟ್ಟಿದೆ ಎಂಬುದನ್ನು ಮಾತ್ರ ನಿರಾಕರಿಸಲು ಯಾರಿಗೂ ಸಾಧ್ಯವೇ ಇಲ್ಲ.

ಒಂದೇ ಆದ ಕನ್ನಡ ನುಡಿ, ಕನ್ನಡ ಸಂಸ್ಕೃತಿ, ಪರಂಪರೆಗಳನ್ನು ಹೊಂದಿದ ಕನ್ನಡಿಗರು ಎಲ್ಲೇ ಇದ್ದರೂ ಅವರೆಲ್ಲರೂ ಒಂದೇ ಆದ ಘಟಕ. ಒಂದೇ ನಾಡಿನವರು, ಕರ್ನಾಟಕಸ್ಥರು. ಪ್ರಾಚೀನ ಭಾರತದ ರಾಜಕೀಯ ವ್ಯವಸ್ಥೆಯಲ್ಲೂ ಅವರು ಒಂದೇ ಜನಾಂಗವಾಗಿದ್ದರು. ಆಧುನಿಕ ಇತಿಹಾಸದಲ್ಲಿಯೂ ಅಖಂಡ ಕರ್ನಾಟಕವಾಗಿದ್ದಾಗ ಎಂದಿಗೂ ಮರೆಯಲಾರದ ಸಾಮ್ರಾಜ್ಯವೆಂದೇ ಖ್ಯಾತವಾದ ವಿಜಯನಗರ ಸಾಮ್ರಾಜ್ಯದ ಅಧಿಪತ್ಯದಲ್ಲಿ ಕನ್ನಡಿಗರು ಒಂದಾಗಿದ್ದಾಗ ಕರ್ನಾಟಕ ತನ್ನ ಸಾಂಸ್ಕೃತಿಕ ಪ್ರತಿಭೆ ಹಾಗೂ ರಾಜಕೀಯ ಶಕ್ತಿಯನ್ನು ಅದ್ಭುತವಾಗಿ ಪ್ರದರ್ಶಿಸಿದುದನ್ನು ನಾವು ಕಾಣುತ್ತೇವೆ. ನಮ್ಮ ಸಂಸ್ಕೃತಿಯ ಸುವರ್ಣಯುಗವೇ ಅದಾಗಿತ್ತು. ಕವಿಗಳು, ತತ್ವಜ್ಞಾನಿಗಳು, ದಾರ್ಶನಿಕರು, ಸಮರ್ಥ ಆಡಳಿತಗಾರರು, ಧರ್ಮ ಸುಧಾರಕರು, ಎಂಜನೀಯರರು, ವಿನ್ಯಾಸಕಾರರು, ಶಿಲ್ಪಿಗಳು, ಮೊದಲಾದವರು, ಕರ್ನಾಟಕ ಸಂಸ್ಕೃತಿಯ ಪರಂಪರೆಯ ವಿಶೇಷತೆಯನ್ನು ಮೆರೆದಿದ್ದಾರೆ. ನಮ್ಮಲ್ಲಿಯ ತತ್ವಜ್ಞಾನದ ಪ್ರೌಢಿಮೆಯು ಆಗಿನ ರಾಷ್ಟ್ರೀಯ ಸಂಪರ್ಕ ಭಾಷೆ ಸಂಸ್ಕೃತದ ಮೂಲಕ ಉತ್ತರ ಭಾರತದ ಮೇಲೆ ತನ್ನ ಶಾಶ್ವತ ಪ್ರಭಾವ ಬೀರಿದೆ. ಈಗ ನಾವು ಅದೇ ರೀತಿ ಉತ್ತರ ಭಾರತದ ಮೇಲೆ ನಮ್ಮ ಪ್ರಭಾವ ಬೀರಬೇಕೆಂದರೆ ಈಗ ನಾವೆಲ್ಲ ಒಪ್ಪಿಕೊಂಡಿರುವ ರಾಷ್ಟ್ರ ಭಾಷೆ ಹಿಂದೀ ಅಂದರೆ ಹಿಂದುಸ್ತಾನೀ ಮೂಲಕವೇ ಕಾರ್ಯಗೈಯಬೇಕಾಗಿರುವುದೆಂದು ಅನುಷಂಗಿಕವಾಗಿ ಹೇಳಬಯಸುತ್ತೇನೆ.

ಭಾರತದ ಉಳಿದ ಭಾಗಗಳಂತೆಯೇ ಕರ್ನಾಟಕವೂ ಅತ್ಯಂತ ಕಠಿಣ ಪರಿಸ್ಥಿತಿಯನ್ನು ಅನುಭವಿಸಬೇಕಾಯಿತು. ಆದರೆ ಅಲ್ಪಾವಧಿಯದೇ ಆದರೂ ಕರ್ನಾಟಕವು ಕಿಚ್ಚಿನಲ್ಲಿ ಉರಿದು ಹೋಗುವಂಥ ಅತ್ಯಂತ ಅಪಾಯಕಾರೀ ಪರಿಸ್ಥಿತಿಯಲ್ಲಿ ಹಾಯ್ದು ಹೋಗಿದೆ. ಅನೈಕ್ಯ ರಾಜಕೀಯವಾಗಿ ಅರಾಜಕತೆಯ ವಾತಾವರಣ ಇವುಗಳು ಐರೋಪ್ಯರ ಸಾಹಸದ

ಅಧಿವೇಶನದಲ್ಲಿ ಔಷಧಿಗಾಗಿ ಒಟ್ಟು 545 ರೂ. 4 ಆಣೆ 6 ಪೈ ವೆಚ್ಚ ಮಾಡಲಾಗಿತ್ತು. ಈ ಪೈಕಿ ಆಯುರ್ವೇದ ಔಷಧಿಗಾಗಿ 146 ರೂ 14 ಆಣೆ ಹೋಮಿಯೋಪಥಿ ಔಷಧಿಗೆ 30 ರೂ. 6 ಆಣೆ ಹಾಗೂ ಅಲೋಪಥಿಕ್ ಔಷಧಿಗೆ 304 ರೂ. 13 ಆಣೆ ವೆಚ್ಚ ಬಂದಿತ್ತು.

ಮುನ್ನಡೆಗೆ ಅವಕಾಶ ಕಲ್ಪಿಸಿದುವು ಮತ್ತು ಆಂತರಿಕವಾಗಿ ನಾವು ಧರ್ಮ, ಶ್ರದ್ಧೆ ಕಲೆ, ವಿಜ್ಞಾನ ಹಾಗೂ ತತ್ವಜ್ಞಾನ ಕ್ಷೇತ್ರಗಳಲ್ಲಿ ಸೃಜನಶೀಲತೆಯನ್ನೇ ಕಳೆದುಕೊಂಡು ಬಡವಾಗಬೇಕಾಯಿತು. ಭಾರತದ ಬೇರೆ ಯಾವ ಪ್ರಾಂತಗಳೂ ಅನುಭವಿಸದಿರುವಂಥ ರೀತಿಯಲ್ಲಿ ನಾವು ನಮ್ಮ ನಾಡು ಹಲವಾರು ತುಂಡುಗಳಲ್ಲಿ ಒಡೆದು ಹೋದುದರ ಪ್ರಯುಕ್ತ ಅನೇಕ ಪಟ್ಟು ದ್ವಿಗುಣಿತವಾದ ಸಂಕಟಗಳನ್ನು ಅನುಭವಿಸಿದೆವು. ಅನೇಕ ಭಾಗಗಳಲ್ಲಿ ನಮ್ಮ ನಾಡು ಒಡೆಯಲ್ಪಟ್ಟುದಷ್ಟೇ ನಮ್ಮ ಸಂಕಷ್ಟವಲ್ಲದೇ ಧರ್ಮ, ಜಾತಿ, ಮತ, ಪಂಥ, ವೈಚಾರಿಕ ಭಿನ್ನತೆಗಳೂ ಒಂದು ಕನ್ನಡ ಪ್ರಾಂತವಾಗಿ ನಾವು ಸಮೃದ್ಧಗೊಳ್ಳುವುದಕ್ಕೆ ಅಡೆತಡೆಯುಂಟಾದವು. ಸಮೃದ್ಧಿ ಹೊಂದುವುದಕ್ಕೆ ನಾವು ಆಂತರಿಕ ಶಕ್ತಿ ಸಾಮರ್ಥ್ಯಗಳನ್ನು ಹೊಂದಿದವರಾಗಿದ್ದೆವಾದರೂ ನಮ್ಮ ಶಕ್ತಿ ಸಾಮರ್ಥ್ಯಗಳನ್ನು ಕ್ರೋಢಿಕರಿಸಿ ಸಂಯೋಜಿಸುವಂಥ ಸಂಘಟನೆಯೇ ನಮ್ಮ ಬಳಿ ಇಲ್ಲವಾಗಿತ್ತು. ಭಾರತದ ಇತರ ಭಾಗಗಳಂತೆಯೇ ನಮ್ಮ ಈ ಕರ್ನಾಟಕ ಪ್ರಾಂತವೂ ಎಂಜನೀಯರಿಂಗ್ ಪರಿಣತಿ, ಕಾನೂನು ನಿಷ್ಣಾತತೆ, ಆಡಳಿತದ ಅದ್ಭುತ ಶಕ್ತಿ ಸಾಮರ್ಥ್ಯ ಇವುಗಳೆಲ್ಲದರಲ್ಲಿ ಹೆಮ್ಮೆ ಪಡುವಂಥ ಸಾಧನೆಗಳನ್ನು ಮಾಡಿದೆ. ವ್ಯವಸಾಯ ಮಾಡುವ ರೈತಾಪಿ ವರ್ಗ ತನ್ನ ಭೂಮಿಯ ಬಗ್ಗೆ ಅಪಾರ ಅಭಿಮಾನ ಹೊಂದಿ ಕೃಷಿಯಲ್ಲಿ ತೀವ್ರ ಆಸಕ್ತಿ ಪರಿಣತಿ, ಪ್ರತ್ಯಕ್ಷ ಅನುಭವ ಹಾಗೂ ದೇವರಲ್ಲಿಯ ನಂಬುಗೆ ಇವುಗಳ ಮೂಲಕ ವ್ಯವಸಾಯದಲ್ಲಿ ಪ್ರಗತಿ ಸಾಧಿಸುತ್ತಲೇ ಬಂದಿದೆ. ಈಗ ಕಾಂಗ್ರೆಸ್ ಪಕ್ಷ ನಮ್ಮ ಕರ್ನಾಟಕದ ಪುನಾರಚನೆ ಹಾಗೂ ಪುನರ್ಘಟನೆಗೆ ಅವಕಾಶ ಕಲ್ಪಿಸಿಕೊಟ್ಟುದಕ್ಕಾಗಿ ನಾವು ದೇವರಲ್ಲಿ ಕೃತಜ್ಞತೆ ಸಲ್ಲಿಸಬಯಸುತ್ತೇವೆ. ಕಾಂಗ್ರೆಸ್ಸಿನ ಈ ಕ್ರಮದಿಂದಾಗಿ ನಾವು ಬಹಳ ಆಳವಾಗಿದ್ದ ನಿರಾಶೆಯಿಂದ ಮೇಲೆದ್ದು ಉಜ್ವಲ ಭವಿಷ್ಯದತ್ತ ಸಾಗುವುದು ಖಚಿತವೆಂಬ ಭರವಸೆ ನಮ್ಮಲ್ಲಿ ಮೂಡಿದೆ. ಕಾಂಗ್ರೆಸ್ಸು ನಮ್ಮೆಲ್ಲರನ್ನು ಭೌಗೋಲಿಕವಾಗಿ ಒಗ್ಗೂಡಿಸಿದೆಯಷ್ಟೇ ಅಲ್ಲದೇ ನಮ್ಮೊಳಗೆ ಸ್ವಾತಂತ್ರ್ಯದ ಮನೋಭಾವವನ್ನು ಸಂವರ್ಧಿಸಿದೆ. ಅಹಿಂಸೆಯ ತತ್ವವು ಕರ್ನಾಟಕದಲ್ಲಿ ಎಲ್ಲ ಧರ್ಮ ಮತ, ಪಂಥ ಪಕ್ಷಗಳನ್ನು ಸಹ ಒಗ್ಗೂಡಿಸಿ ಐಕ್ಯ ಭಾವನೆ ಬಲಗೊಳಿಸಿದೆ. ಜೈನರು, ಲಿಂಗಾಯತರು, ಬ್ರಾಹ್ಮಣ, ಬ್ರಾಹ್ಮಣೇತರರು, ಹಿಂದು ಹಾಗೂ ಮುಸಲ್ಮಾನರು ಈಗ ಪರಸ್ಪರರನ್ನು ಅರ್ಥ ಮಾಡಿಕೊಂಡು ಸಹಬಾಳುವೆಯನ್ನು ರೂಢಿಸಿಕೊಳ್ಳುತ್ತೇವಾದರೆ, ಸ್ನೇಹ ಹಾಗೂ ಸೋದರತೆಯ ಕರ್ತವ್ಯ ಹಾಗೂ ಹೊಣೆಗಾರಿಕೆ ಅರಿತುಕೊಂಡು ಚೈತನ್ಯಯುತ ಬಾಳುವೆ ನಡೆಸುತ್ತ ಸ್ವರಾಜ್ಯದ ಧ್ವಜದಡಿ ಒಂದಾಗುತ್ತಲಿದ್ದೇವೆ.

ಬ್ರಾಹ್ಮಣ - ಬ್ರಾಹ್ಮಣೇತರರ ನಡುವಿನ ಭೇದವು ಎಷ್ಟೊಂದು ಸೂಕ್ಷ್ಮ ಹಂತ ತಲುಪಿತ್ತೆಂದರೆ ಅದರ ಬಗ್ಗೆ ಏನಾದರೂ ಮಾತಾಡುವುದೆಂದರೆ ಹೇಳುವುದೆಂದರೆ ಎಲ್ಲಿ ತಪ್ಪು ತಿಳುವಳಿಕೆಯಾಗುತ್ತದೋ ಎಂದು ಭಯ ಪಡುತ್ತಿದ್ದೆವು. ಆದರೆ ದೇವರ ಕೃಪೆಯಿಂದ

ಈಗ ಆ ಹಂತ ಮುಗಿದು ಹೋಗಿದೆ. ಮಹಾತ್ಮಾಜೀಯವರ ಪ್ರಭಾವದಡಿ ನಾವೆಲ್ಲರೂ ಒಳಗಾಗಿ ಪರಸ್ಪರರಲ್ಲಿಯ ಅನೇಕ ಅಂಶಗಳನ್ನು ಪ್ರಶಂಸಿಸುವ ಮೆಚ್ಚಿಕೊಳ್ಳುವ ಸ್ಥಿತಿಗೆ ಬಂದು ತಲುಪಿದ್ದೇವೆ. ಈ ಸಮಸ್ಯೆಗೆ ಸೂಕ್ತ ಪರಿಹಾರ ಕಂಡು ಕೊಳ್ಳುವುದು ಬ್ರಾಹ್ಮಣರ ಕೈಯಲ್ಲಿದೆ ಎಂದು ನನ್ನ ದೃಢವಾದ ಅಭಿಮತ, ಹೆಚ್ಚಿನ ಪ್ರಮಾಣದಲ್ಲಿ ತ್ಯಾಗ ಮಾಡುವುದು ಬ್ರಾಹ್ಮಣ ಧರ್ಮದ ಆದರ್ಶವೂ ಆಗಿದೆ. ಪ್ರೇಮ ಹಾಗೂ ಐಕ್ಯಕ್ಕೋಸ್ಕರ ಎಷ್ಟರ ಮಟ್ಟಿಗೆ ನಾವು ತ್ಯಾಗ ಮಾಡಬಹುದೆಂಬುದನ್ನು ಮಹಾತ್ಮಾಜಿಯವರೇ ನಮಗೆ ತೋರಿಸಿಕೊಟ್ಟು ಮಾದರಿಯಾಗಿ ನಿಂತಿದ್ದಾರೆ. ಒಮ್ಮೆ ಇದನ್ನು ಒಪ್ಪಿಕೊಂಡ ಬಳಿಕ ಸ್ವರಾಜ್ಯ ಪಡೆದುಕೊಳ್ಳುವುದರ ಹೊರತು ನಾವು ಬದುಕಿರಲು ಸಾಧ್ಯವೇ ಇಲ್ಲವೆನ್ನುವಂತಾಗುತ್ತದೆ. ಸ್ವರಾಜ್ಯಕ್ಕೆ ಅಗತ್ಯ ಹಾಗೂ ಅನಿವಾರ್ಯವೆನಿಸುವ ಐಕ್ಯ ಅಥವಾ ಏಕತೆಯನ್ನು ಸಾಧಿಸುವುದಕ್ಕೆ ಯಾವುದೇ ರೀತಿಯ ತ್ಯಾಗವೂ ನಮಗೆ ದೊಡ್ಡದೆನಿಸದು.

ಸಾಮ್ರಾಜ್ಯಶಾಹಿ ಅಧಿಕಾರ ಶಾಹಿಯ ವಿರುದ್ಧ ಹೋರಾಟ ನಡೆಸಲು ನಮ್ಮ ಕಾರ್ಯ ಸೂತ್ರಗಳೇನೇ ಇರಲಿ, ಭಾರತದ ಐಕ್ಯ ಹಾಗೂ ಬಲಸಂವರ್ಧನೆ ಹೊಂದುವುದಕ್ಕೆ ಮಾತ್ರ ಎಲ್ಲರಿಗೂ ಸಾಮಾನ್ಯವಾದ ಕಾರ್ಯಕ್ರಮವೊಂದಿದೆ.

ಗಾಂಧೀಜಿಯವರು ನಮ್ಮೆದುರಿಗಿರಿಸಿದ ತ್ರಿವಿಧ ವಿಧಾಯಕ ಕಾರ್ಯಕ್ರಮವೊಂದೇ ನಮ್ಮೆಲ್ಲರನ್ನು ನಮ್ಮೆಲ್ಲರ ಶಕ್ತಿ ಸಾಮರ್ಥ್ಯಗಳನ್ನು ಸಮಗ್ರವಾಗಿ ಒಗ್ಗೂಡಿಸಲು ಸರ್ವ ಶಕ್ತವಾಗಿದೆ. ನಮ್ಮ ಪ್ರಾಂತದಲ್ಲಿ ಒಂದೆರಡೇ ಕ್ವಚಿತ್ತಾದ ಘಟನೆಗಳನ್ನು ಬಿಟ್ಟರೆ ಹಿಂದು ಮುಸ್ಲಿಂ ಸಮಸ್ಯೆ ಎಂಬುದೇ ಇಲ್ಲ. ಉಭಯತರ ಸ್ನೇಹ ಸಂಬಂಧಗಳು ಸೌಹಾರ್ದಯುತವೇ ಆಗಿವೆ.

ದುರ್ದೈವದಿಂದ ಅಸ್ಪೃಶ್ಯತೆಯ ಭಾವನೆ ಸ್ವಲ್ಪವುಳಿದುಕೊಂಡಿದೆಯಾದರೂ ಉತ್ತಮ ವಿಚಾರಗಳ ಚಿಂತನೆಯ ಪ್ರಭಾವದಡಿ ಅದು ಸಹ ತೀವ್ರಗತಿಯಲ್ಲಿ ಅಳಿದು ಹೋಗುತ್ತಲಿದೆ. ಅಸ್ಪೃಶ್ಯರೆಂದು ಪರಿಗಣಿಸಲ್ಪಡುತ್ತಿದ್ದವರು ನಮ್ಮ ಪ್ರಾಂತದಲ್ಲಿ ಈಗ ಸಾರ್ವಜನಿಕ ಸಭೆ, ಸಮಾವೇಶಗಳಲ್ಲಿ, ಸಾರ್ವತ್ರಿಕ ಸಂಸ್ಥೆಗಳೊಳಗೆ, ರಾಷ್ಟ್ರೀಯ ಶಾಲೆಗಳಲ್ಲಿ ಇತರ ಹಿಂದುಗಳೊಂದಿಗೆ ಯಾವುದೇ ಭೇದ ಭಾವಕ್ಕೆ ಆಸ್ಪದವಿಲ್ಲದೇ ಪ್ರೀತಿಯಿಂದ ಸ್ನೇಹದಿಂದ ಬೆರೆಯುತ್ತಿದ್ದಾರೆ ಆದರೂ ಅವರ ಶೈಕ್ಷಣಿಕ ವಿಕಾಸ ಸಾಧಿಸಲು ಹಾಗೂ ಸಮಾಜದಲ್ಲಿಯ ಕೀಳಾಗಿ ಕಾಣಲಾಗುತ್ತಿರುವುದನ್ನು ಹೋಗಲಾಡಿಸಲು ಇನ್ನೂ ಬಹಳಷ್ಟು ಕಾರ್ಯ ಮಾಡಬೇಕಾಗಿದೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ.

ನಾವು ಮುಟ್ಟಬೇಕಾಗಿರುವ ಗುರಿ ಸಾಧನೆಯ ದೃಷ್ಟಿಯಿಂದ ಕಾಂಗ್ರೆಸ್ ಸಂಸ್ಥೆಯಲ್ಲಿ ಹಾಗೂ ಖಾದಿ ಬಳಕೆಯಲ್ಲಿ ಸಾಕಷ್ಟು ಸಾಧನೆ ಮಾಡಿದ್ದೇವೆಂದು ನಾನು

ಹೇಳಲಾರೆನಾದರೂ ಖಾದಿಯ ಉತ್ಪಾದನೆಯಲ್ಲಿ ಕರ್ನಾಟಕವು ತೀವ್ರ ಪ್ರಗತಿ ಸಾಧಿಸಿದ ರಾಜ್ಯಗಳಲ್ಲೊಂದೆಂದು ಅಭಿಮಾನಪೂರ್ವಕವಾಗಿ ಹೇಳಬಯಸುತ್ತೇನೆ. ನಮ್ಮ ಪ್ರಾಂತದ ಮಾಸಿಕ ಖಾದಿಯ ಉತ್ಪಾದನೆ 44 ಸಾವಿರ ಪೌಂಡುಗಳನ್ನು ಮೀರಿದೆ. 22400 ಚರಖಾಗಳು ಪ್ರತಿದಿನವೂ ತಿರುಗಿಸಲ್ಪಟ್ಟು ಕೈನೂಲಿನ ಉತ್ಪಾದನೆ ಆಗುತ್ತಲಿದೆ. ಸುಮಾರು ಆರು ನೂರು ಮಂದಿ ಪ್ರತಿ ದಿನವೂ ಚರಖಾ ತಿರುಗಿಸುತ್ತ ಕೈನೂಲು ತೆಗೆದು ಮಾಸಿಕ ಎರಡು ಸಾವಿರ ಯಾರ್ಡ ನೂಲಿನ ವಂತಿಗೆ ಸಲ್ಲಿಸುವವರಾಗಿರುತ್ತಾರೆ. ಕಾಂಗ್ರೆಸ್ಸಿಗೆ ಸಲ್ಲಿಸುವ ವಂತಿಗೆಯನ್ನಷ್ಟೇ ಎಂದು ಪರಿಗಣಿಸದೇ ಹೋದಲ್ಲಿ ಕೈನೂಲಿನ ಉತ್ಪಾದನೆ ಇನ್ನಷ್ಟು ಹೆಚ್ಚಿನದಾಗುವುದು. ಸಾರ್ವಜನಿಕರಲ್ಲೂ ಬಹಳಷ್ಟು ಜನರು ಖಾದೀ ಆಂದೋಲನವು ಸಹಸ್ರಾವಧಿ ಶ್ರಮಿಕರ ಸಮೂಹಕ್ಕೆ ವರದಾನವೆಂಬುದನ್ನು ಹೇಗಾದರೂ ಅರಿತುಕೊಂಡಿರುವರೆಂದು ಅನಿಸುತ್ತದೆ. ಇದುವೇ ಖಾದಿ ಆಂದೋಲನ. ಬಡ ಜನರು ಬದುಕಿ ಬಾಳುವುದಕ್ಕೆ ಜೀವನಾಡಿಯಾಗಿರುತ್ತದೆ. ಬೇರೆ ಬೇರೆ ವರ್ಗಗಳವರ ನಡುವೆ ಸ್ನೇಹ, ಪ್ರೇಮದ ಮೂಲಕ ಒಗ್ಗಟ್ಟನ್ನು ಉಂಟು ಮಾಡಲು ಖಾದೀ ಆಂದೋಲನ ಅತ್ಯಂತ ಯೋಗ್ಯ ಸಾಧನವೆಂಬುದನ್ನು ಬಹಳಷ್ಟು ಕಾರ್ಯಕರ್ತರು ಅರ್ಥ ಮಾಡಿಕೊಂಡಿದ್ದಾರೆ. ನಮ್ಮ ರಾಷ್ಟ್ರಧ್ವಜವು ಹಾಗೂ ಅದನ್ನು ತಯಾರಿಸಲು ಬಳಕೆ ಮಾಡಲಾದ ನಮ್ಮ ಉರುಟು ಖಾದಿ ಬಟ್ಟೆಯು ಅದರಲ್ಲಿಯ ವಿವಿಧ ಬಣ್ಣಗಳಿಗಿಂತಲೂ ಹೆಚ್ಚಾಗಿ ಐಕ್ಯ ಪ್ರತಿನಿಧಿಸುತ್ತದೆಂದು ಹೇಳಬಯಸುತ್ತೇನೆ.

ದುರ್ದೈವದಿಂದ ಕಾಂಗ್ರೆಸ್ ಪಕ್ಷದೊಳಗೆ ಭಿನ್ನಮತಗಳುಂಟಾಗಿ ಇಡೀ ದೇಶದಲ್ಲಿ ಕಿಂಕರ್ತವ್ಯ ಮೂಢತೆ ಹಾಗೂ ವೈಚಾರಿಕ ಗೊಂದಲವುಂಟಾಗುವುದಕ್ಕೆ ಕಾರಣವಾಯಿತು. ಆದರೆ ಇದು ಬಹಳ ದಿನ ಉಳಿಯಲು ಸಾಧ್ಯವಿಲ್ಲ. ಹೀಗೆ ದೀರ್ಘಕಾಲ ಉಳಿಯಲೂ ಬಾರದು. ನಮ್ಮ ಶಕ್ತಿ ಸಾಮರ್ಥ್ಯಗಳು ಅನೈಕ್ಯಗೊಂಡಿದ್ದುವು. ಕೆಲ ಮಟ್ಟಿಗೆ ಛಿದ್ರ ವಿಚ್ಛಿದ್ರವಾಗಿದ್ದುವೇ ಹೊರತು ನಾಶಗೊಂಡಿರಲಿಲ್ಲ; ಹ್ರಾಸವಾಗಿರಲಿಲ್ಲ. ನಾವು ಅದೇ ಹುಚ್ಚುತನಕ್ಕೆ ಮತ್ತೆ ಎಳಸದೇ ಹೋದರೆ ಇತ್ತೀಚಿನ ವರ್ಷಗಳಲ್ಲಿ ನಾವು ಗೈದಿರುವ ಸಾಧನೆಗಳನ್ನು ನಾಶಗೊಳಿಸಿಕೊಳ್ಳುವುದಕ್ಕೆ ಮುಂದಾಗದೇ ಹೋದರೆ ನಾವು ಎಲ್ಲ ಅಸಮಾಧಾನ, ಅಸಂತೋಷ, ಅತೃಪ್ತಿ ಹಾಗೂ ತಪ್ಪು ತಿಳವಳಿಕೆಗಳನ್ನು ನೀಗಿ ಮತ್ತೆ ಬಲಾಢ್ಯರಾಗಿ ನಿಲ್ಲುವೆವೆಂಬ ವಿಶ್ವಾಸ ನನ್ನಲ್ಲಿದೆ. ನಾವು ಮತ್ತೆ ಒಂದಾಗಿ ಹುರಿಗೊಳಿಸಲಾದ ಹಗ್ಗದಂತೆ ಒಗ್ಗಟ್ಟಿನಿಂದ ಬಲಾಢ್ಯರಾಗಿ ಅಖಂಡ ಭಾರತವನ್ನು ಬಲಪಡಿಸೋಣ ಮುನ್ನಡೆಸೋಣ.

ಈ ಕಾರ್ಯ ಸುಲಭವಾದುದೇನಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಇದು ಅಸಾಧ್ಯವಲ್ಲವೆಂಬುದನ್ನೂ ಒಪ್ಪುತ್ತೇನೆ. ಭಾರತೀಯರೆಲ್ಲ ಒಂದೆಂಬ ಕೌಟುಂಬಿಕ ಪ್ರೇಮ

ಹಾಗೂ ಬಾಂಧವ್ಯದ ಪರಿಣಾಮವಾಗಿಯೇ ಭಾರತ ಯಾವಾಗಲೂ ಅನೇಕ ವಿಪತ್ಪರಂಪರೆಗಳನ್ನೆಲ್ಲ ದಾಟಿ ಭದ್ರವಾಗಿ, ಬಲಾಢ್ಯವಾಗಿ ನಿಂತಿದೆ. ಅದೇ ಬಾಂಧವ್ಯ ಭಾವನೆಯ ಮೂಲಕ ನಾವು ನಮ್ಮೊಳಗಿನ ದ್ವೇಷ, ಅಪನಂಬಿಕೆಗಳನ್ನು ಅಳಿಸಿ ಹಾಕೋಣ. ವಿದೇಶೀಯರ ಆಳರಸರು ನಮ್ಮ ಮೇಲೆ ನಡೆಸುತ್ತಿರುವ ದಬ್ಬಾಳಿಕೆಗಳು ಸಹ ನಮ್ಮನ್ನು ಒಗ್ಗೂಡಿಸಿ ಬೆಸೆಯುವಂಥ ದೊಡ್ಡ ಸಾಧನಗಳೇ ಆಗಿವೆ.

ಬಂಗಾಲದಲ್ಲಿ ಅಲ್ಲಿಯ ಶಾಸನವು ಜಾರಿಗೊಳಿಸಿದ ರಕ್ಕಸತನದ ಕ್ರೂರ ಸುಗ್ರೀವಾಜ್ಞೆ ಸಂಬಂಧಿಸಿದಂತೆ ಅದು ನಮ್ಮ ಮೇಲೆ ಮಾಡಲಾದ ಅಪ್ರತ್ಯಕ್ಷ ವರದಾನವೆಂದೇ ಬಗೆಯಲು ನನ್ನ ಮನಸ್ಸು ಬಯಸುತ್ತದೆ. ಬಂಗಾಲವು ಅಲ್ಲಿಯ ಸರಕಾರದ ದಬ್ಬಾಳಿಕೆಯ ವಿರುದ್ಧ ಅಧಿಕಾರ ಶಾಹಿಯ ವಿರುದ್ಧ ಮತ್ತೊಮ್ಮೆ ಹೋರಾಡಿ ಧೈರ್ಯ ಶೌರ್ಯ ಪ್ರದರ್ಶಿಸಿ ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ. ಅವರು ನಡೆಸಿದ ಹೋರಾಟ, ಅನುಭವಿಸಿದ ಕ್ರೂರ ದಬ್ಬಾಳಿಕೆ ವ್ಯರ್ಥವೇನೂ ಆಗದು. ಇಡೀ ಭರತ ಖಂಡದ ಎಲ್ಲ ಭಾಗಗಳ ಸಮಸ್ತರ ಸಹಾನುಭೂತಿ ಅನುಕಂಪ ಬೆಂಬಲ ಅವರಿಗೆ ಲಭಿಸಿದೆ.

ಸ್ನೇಹಿತರೇ, ನಮ್ಮ ದೇಶ ಈಗ ಸಂಕ್ರಮಣ ಕಾಲದಲ್ಲಿದೆ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿದೆ. ಅದ್ಭುತವಾದ ಒಳ್ಳೇ ಅವಕಾಶಗಳು ಹಾಗೆಯೇ ಪ್ರಚಂಡ ಅಹ್ವಾನಗಳು ನಮ್ಮ ಮುಂದಿವೆ. ನಮ್ಮ ಮುಂದಿರುವ ಉತ್ತಮ ಅವಕಾಶಗಳು ಅನಂತ. ಆದರೆ ನಾವು ದಾಟಿ ಮುಂದೆ ಹೋಗಬೇಕಾದ ಕಂದರಗಳು ಬಹಳ ಆಳ. ಅಸಂಖ್ಯ ಹಾಗೂ ಭಾರೀ ಪ್ರಚಂಡ ವಂಚನೀಯ. ನಮಗೀಗ ಸುಕಾಲವೂ ಸದವಕಾಶವೂ ಅಹುದು. ಕಠಿಣ ಸಮಯವೂ ಅಹುದು. ಇದು ಜ್ಞಾನಯುಗ. ಹಾಗೆಯೇ ಅಂಧಕಾರ, ಮೌಢ್ಯ ಅಂಧಶ್ರದ್ಧೆಗಳ ಕಾಲವೂ ಸಹ. ಹಲವಾರು ಸಂದೇಹ, ಸಂಶಯಗಳು ನಮ್ಮನ್ನು ಕಾಡುವ ದಿನಗಳಿವು.

ನೀವೆಲ್ಲ ವಿಚಾರ ವಿಮರ್ಶೆ ಮಾಡಿ ಬಗೆಹರಿಸಬೇಕಾದ ದೊಡ್ಡ ರಾಜಕೀಯ ಸಮಸ್ಯೆಗಳನ್ನು ಕುರಿತು ಯಾವುದೇ ಅಭಿಪ್ರಾಯ ವ್ಯಕ್ತ ಪಡಿಸಲು ನಾನು ಬಯಸುತ್ತಿಲ್ಲ. ವೈಜ್ಞಾನಿಕವಾಗಿ ಪರಿಹಾರಗಳನ್ನು ಕಂಡು ಹಿಡಿಯುವ ಸಮಸ್ಯೆಗಳು ಇವು ಆಗಿರದೇ ಪ್ರಬಲ ಇಚ್ಛಾಶಕ್ತಿಯ ಮೂಲಕ ಬಗೆಹರಿಸಿಕೊಳ್ಳುವಂಥವಿವು ಎಂದು ನಾನು ಯಾವಾಗಿನಿಂದಲೂ ಭಾವಿಸುತ್ತ ಬಂದವನಾಗಿದ್ದೇನೆ. ನಮ್ಮ ಇಡೀ ಜನಾಂಗ ಶಕ್ತಿ ಸಂಪನ್ನತೆಯ ಭಾವನೆಯಿಂದ ಜಾಗೃತಗೊಂಡು ಎದ್ದು ನಿಂತು ಸ್ವರಾಜ್ಯ ಪಡೆದುಕೊಳ್ಳುವ ಪ್ರಚಂಡ ಇಚ್ಛಾಶಕ್ತಿ

ಅಧಿವೇಶನ ನಡೆದಿದ್ದು ಡಿಸೆಂಬರ್ 26 ಹಾಗೂ 27, 1924 ರಂದು. ಸ್ವಾಗತ ಸಮಿತಿ ಎಲ್ಲ ಲೆಕ್ಕ ಪತ್ರಗಳು ಪರಿಶೋಧಕರಿಂದ ಪರಿಶೀಲಿಸಿ 31.05.1925 ರಂದು ಸರ್ಟಿಫಿಕೇಟ್ ಪಡೆಯಲಾಯಿತು. ಹಾಗೂ ಇದರ ವಿವರಗಳನ್ನು ಗಾಂಧೀಜಿಗೂ ಕಳಿಸಲಾಯಿತು.

ಮಹಾಧಿವೇಶನದ ಅಧ್ಯಕ್ಷ ಸಂತ ಸದೃಶ ಲಂಡ ಪಂಜೆಯುಟ್ಟ ಮಹಾತ್ಮಾ ಗಾಂಧೀಜಿಯವರು ಕೈಯಲ್ಲಿ ಖಾದಿ ಬಟ್ಟೆ ಹಿಡಿದುಕೊಂಡು ಪ್ರಚಂಡ ಜಯಘೋಷಗಳ ಗಡಚಿಕ್ಕುವ ಧ್ವನಿಯ ಮಧ್ಯೆ ವೇದಿಕೆಯಿಂದ ಅಧ್ಯಕ್ಷ ಪೀಠದ ಬಳಿಗೆ ನಡೆದರು. ಸಾಕಷ್ಟು ಎತ್ತರವಾದ ಸ್ಟೂಲನ್ನೇರಿ ಕುಳಿತು ಭಾಷಣ ಪ್ರಾರಂಭಿಸುವುದಕ್ಕೆ ಮೊದಲು ತಮ್ಮ ಗಡಿಯಾರವನ್ನು ತಮ್ಮ ಮುಂದಿರಿಸಿಕೊಂಡರು. ನಂತರ ಸ್ವಾಗತಾಧ್ಯಕ್ಷ ಶ್ರೀ ಗಂಗಾಧರರಾವ್ ದೇಶಪಾಂಡೆಯವರು ಕರ್ನಾಟಕದ ಪರಿಚಯ ನೀಡುವ ಕರ್ನಾಟಕ ಎ ಹ್ಯಾಂಡ್‌ಬುಕ್ ಎಂಬ ಕಿರು ಹೊತ್ತಿಗೆಯನ್ನು ಶ್ರೀಗಂಧದ ಕರಂಡಕದಲ್ಲಿರಿಸಿ ಮಾನ್ಯರೇ ಇದು ನಿಮ್ಮ ಮಾಹಿತಿಗೋಸ್ಕರ ಎಂದೆನ್ನುತ್ತ ಗಾಂಧೀಜಿಯವರಿಗೆ ಸಮರ್ಪಿಸಿದರು. ಮಹಾತ್ಮಾ ಗಾಂಧೀಜಿ ಹೂನಗೆ ಬೀರಿ ಪ್ರಚಂಡ ಜಯಘೋಷಗಳ ನಿನಾದದ ಮಧ್ಯೆ ಅದನ್ನು ಸ್ವೀಕರಿಸಿದರು. ನಂತರ ಅವರು ಹಿಂದೀಯಲ್ಲಿ ತಮ್ಮ ಭಾಷಣ ಆರಂಭಿಸಿದರು. ಹತ್ತು ನಿಮಿಷ ಅವರು ಮಾಡಿದ ಹಿಂದೀ ಭಾಷಣದ ಕನ್ನಡಾನುವಾದ ಹೀಗಿದೆ.

1924 ಡಿಸೆಂಬರ್ 26 ನೇ ದಿನ ಕಾಂಗ್ರೆಸ್ ಅಧಿವೇಶನದ ಬಹಿರಂಗ ಅಧಿವೇಶನದ ಆರಂಭದ ದಿನ. ಈ ದಿವಸ ಮಧ್ಯಾಹ್ನ 3 ಗಂಟೆಗೆ ಬಾಲಿಕೆಯರ ವಂದೇ ಮಾತರಮ್ ಹಾಗೂ ಕರ್ನಾಟಕ ಗಾನದೊಂದಿಗೆ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಮಹೋತ್ಸವ ಆರಂಭವಾಯಿತು. ಮಂಗಲಾ ಚರಣಾತ್ಮಕವಾದ ಗೀತೆಗಳಾದ ಬಳಿಕ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಗಂಗಾಧರರಾವ್ ದೇಶಪಾಂಡೆಯವರು ಕನ್ನಡ ಭಾಷೆಯಲ್ಲಿ ತಮ್ಮ ಸ್ವಾಗತ ಪರ ಭಾಷಣ ಮಾಡಿದರು. ಅವರ ಭಾಷಣದ ಓಜಸ್ಸು, ತೇಜಸ್ಸು ಹಾಗೂ ಮನೋಹರತೆಯು ಸುತ್ತಲಿಂದಲೂ ಕೇಳಿಬಂದ ಕಿವಿಗಳು ಗಡಚಿಕ್ಕುವ ಪ್ರಚಂಡ ಕರತಾಡನ ಧ್ವನಿಯಿಂದಲೇ ವಿದಿತವಾಗುವಂತಿತ್ತು. ತದನಂತರ ಕಾಂಗ್ರೆಸ್ ಅಧಿವೇಶನದ ಸರ್ವಾಧ್ಯಕ್ಷ ಮಹಾತ್ಮಾ ಗಾಂಧೀಜಿಯವರು ಭಾಷಣವನ್ನು ಮಾಡಲು ಎದ್ದು ನಂತರ ಪೀಠದ ಮೇಲೆ ಆಸೀನರಾಗುತ್ತಿದ್ದಂತೆಯೇ ಜಯಕಾರದ ಧ್ವನಿಯಿಂದ ಮಂಟಪ ದುಮುದುಮಿಸಿತ್ತು. ಸ್ವಾಗತಾಧ್ಯಕ್ಷ ಗಂಗಾಧರರಾವ್ ದೇಶಪಾಂಡೆಯವರು ಕರ್ನಾಟಕದ ಇತಿಹಾಸದ ಸಂಕ್ಷಿಪ್ತ ವಿವರಣೆ ಪುಸ್ತಿಕೆಯನ್ನು ಗಂಧದ ಕರಂಡಕದಲ್ಲಿಟ್ಟು ಸಮರ್ಪಿಸಿದ ಬಳಿಕ ಮಹಾತ್ಮಾ ಗಾಂಧೀಜಿಯವರು ಭಾಷಣವನ್ನು ಆರಂಭಿಸುತ್ತ

ಸೋದರ ಶ್ರೀ ಗಂಗಾಧರರಾಯರೇ, ಹಾಗೂ ಬಂಧು-ಭಗಿನಿಯರೇ, ನನಗೆ ಈ ಅತ್ಯುನ್ನತ ಸ್ಥಾನವನ್ನು ನೀಡಿರುವವರೇ ತಾವು. ನಾನು ಈ ಉನ್ನತ ಪೀಠದಿಂದ ಏನನ್ನು ಹೇಳಬಯಸಿರುವೆನೋ ಅದೆಲ್ಲವನ್ನು ಪ್ರಿಯ ಬಂಧು ಭಗಿನಿಯರಾದ ನೀವೆಲ್ಲರೂ ತಿಳಿದವರೇ ಆಗಿರುವುದರಿಂದ ನಾನೀಗ ನಿಮ್ಮ ಮುಂದೆ ಬಹುದೊಡ್ಡ ಭಾಷಣವನ್ನು ಬಿಗಿಯ ಬಯಸುತ್ತಿಲ್ಲ. ನಿಮ್ಮ ಕೈಗಳಲ್ಲಿ ನನ್ನ ಭಾಷಣದ ಹಿಂದೀ, ಇಂಗ್ಲೀಷ, ಕನ್ನಡ ಹಾಗೂ ಮರಾಠಿ

ಅನುವಾದದ ಮುದ್ರಿತ ಪ್ರತಿಗಳಿವೆ. ನಿನ್ನೆ ಸಂಜೆಯಷ್ಟೊತ್ತಿಗೆ ಈ ಎಲ್ಲ ಪ್ರತಿಗಳು ಪ್ರತಿನಿಧಿಗಳ ಕೈಸೇರಲೆಂದು ನಾನು ಗಂಗಾಧರರಾಯರಿಗೆ ಬಿನ್ನವಿಸಿದ್ದೆ. ಅವುಗಳು ಈಗಾಗಲೇ ನಿಮ್ಮ ಕೈ ಸೇರಿರುವುದರಿಂದ ನೀವೆಲ್ಲರೂ ಲಕ್ಷಪೂರ್ವಕ ಅವುಗಳನ್ನು ಓದಿಕೊಂಡಿರಬಹುದೆಂದು ಆಶಿಸುತ್ತೇನೆ.

1920-21 ರಲ್ಲಿ ನಾವು ಏನನ್ನೂ ಸಾಧಿಸಬೇಕೆಂದುಕೊಂಡಿದ್ದೆವೋ ಅದನ್ನು ಸಾಧಿಸಲಾಗಿರಲಿಲ್ಲ. ಅದರ ಬದಲು ಮತಭೇದ, ವೈರ ಇವುಗಳೇ ಹೆಚ್ಚಾದವು. ಹಿಂದು-ಮುಸಲ್ಮಾನರು ಪರಸ್ಪರರನ್ನು ವೈರಿಗಳೆಂದು ತಿಳಿದು ಪರಸ್ಪರ ಕದನಕ್ಕಿಳಿಯತೊಡಗಿದರು. ಸ್ವರಾಜ್ಯವನ್ನು ಪಡೆದುಕೊಳ್ಳುವುದಕ್ಕೆ ಅನುಸರಿಸುವ ರೀತಿಯಿದಲ್ಲವೆಂದು ತಿಳಿಸಿ ಹೇಳುವ ಅಗತ್ಯವಿಲ್ಲ. ನಾವು ಹಿಂದುಗಳು ಅಸ್ಪೃಶ್ಯರನ್ನು ತಿರಸ್ಕಾರದಿಂದ ಕಾಣುತ್ತೇವೆ. ಅವರನ್ನು ಸ್ಪರ್ಶ ಮಾಡುವುದು ಸಹ ಪಾಪವೆಂದು ಬಗೆಯುತ್ತಿದ್ದೇವೆ. ಅವರನ್ನು ಅಶುದ್ಧರೆಂದು ತಿಳಿಯುತ್ತೇವೆ. ಆದರೆ ದೇವರೆದುರು ಹಾಗೂ ಈಶ್ವರನ ಸಮ್ಮುಖದಲ್ಲಿ ನಾವು ಹೀಗೆ ಭಾರೀ ಅಪರಾಧವನ್ನೇ ಮಾಡುತ್ತಿರುವೆವು. ಮೂರ್ನಾಲ್ಕು ವರ್ಷಗಳ ಅವಧಿಯಲ್ಲಿ ದೇಶದಲ್ಲಿಯ ಎಲ್ಲ ದೊಡ್ಡವರು, ಸಣ್ಣವರು ಹಿರಿ-ಕಿರಿಯರು ಚರಖಾದ ಮೇಲೆ ಕೈನೂಲು ತೆಗೆಯುವಂತಾಗಬೇಕೆಂಬುದು ನಮ್ಮ ಗುರಿ. ಕಾಂಗ್ರೆಸ್ಸಿನಲ್ಲಿ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ, ಚರಖಾದ ಮೇಲೆ ನೂಲುವ ಮೂಲಕವೇ ನಾವು ಸ್ವರಾಜ್ಯಗಳಿಸಲಿದ್ದೇವೆ ಎಂದೇ ಹೇಳುತ್ತ ಬಂದಿದ್ದೇವೆ. ಪುಣೆಗೆ ಹೋದಾಗ ನಾವು ಅಲ್ಲಿಯ ಆಂದೋಲನದಲ್ಲಿ ಲೋಕಮಾನ್ಯ ಬಾಳ ಗಂಗಾಧರ ಟಿಳಕರು ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು ಅಧಿಕಾರವೆಂದು ಅರ್ಧಶ್ಲೋಕದಲ್ಲಿ ಹೇಳಿದುದನ್ನು ಉಲ್ಲೇಖಿಸಿ ಆ ಶ್ಲೋಕದರ್ಧವನ್ನು ಪೂರ್ಣಗೊಳಿಸಲು ಬಂದವ ನಾನೆಂದೂ ಹೇಳಿದ್ದೆ. ಅಲ್ಲಿಯ ಜನರೂ ಹಾಗೆಯೇ ವ್ಯಕ್ತಪಡಿಸಿದ್ದರು. ನಾನು ಸಹ ಅದನ್ನು ಒಪ್ಪಿಕೊಂಡಿದ್ದೇನೆ ಎಂದು ಹೇಳಿದ್ದೇ ಈಗಲೂ ನಾನು ಅದನ್ನು ಪುನರುಚ್ಚರಿಸುತ್ತಿದ್ದೇನೆ. ಸ್ವರಾಜ್ಯ ಬೇಕಿದ್ದರೆ ಅದಕ್ಕೆ ಚರಖಾ ಮೇಲೆ ನೂಲವುದೊಂದೇ ಹಾದಿ. ಕೈನೂಲು ತೆಗೆಯುವಿಕೆ ಹಾಗೂ ಖಾದಿ ಉತ್ಪಾದನೆ ಧಾರಣೆಯು ನಾವು ಅನುಸರಿಸಲೇಬೇಕಾದ ಮಾರ್ಗ. ನೀವು ಸಹ ಇದನ್ನು ತಿಳಿದುಕೊಂಡಿರುವಿರಿ. ಆದರೆ ಈ ಮಾರ್ಗದಲ್ಲಿ ನೀವು ನಡೆಯುತ್ತಿಲ್ಲವೆಂಬುದೇ ಖೇದ ಎಂಬುದು ನನಗೆ ಗೊತ್ತು. ಇದನ್ನು ಬಿಟ್ಟು ಹೆಚ್ಚಿಗೆ ನನಗೇನೂ ತಿಳಿದಿಲ್ಲ. ಬೇರೆ ಏನನ್ನೂ ನಾನು ಯೋಚಿಸುತ್ತಲೂ ಇಲ್ಲ. ಆದ್ದರಿಂದಲೇ ನಿಮ್ಮ ಮುಂದೆ ನಾನು ಬಂದು ನಿಂತು ಕೆಲವು ಮಾತುಗಳನ್ನು ಹೇಳುವುದಕ್ಕೆ ಅಷ್ಟೇನೂ ಮಹತ್ವವಿಲ್ಲ. ಅದನ್ನು ವ್ಯರ್ಥ ಕಾಲಹರಣವೆಂದೇ ಬಗೆಯುತ್ತೇನೆ. ಹೀಗೆ ಮಾಡುವುದು ನನ್ನ ಹಾಗೂ ನಿಮ್ಮ ಇಬ್ಬರ ಅತ್ಯಮೂಲ್ಯವಾದ ಕಾಲಹರಣವಾಗುವುದೆಂದೇ ನನ್ನ ಅನಿಸಿಕೆ. ನಾನು ಹೀಗೆ ಮಾಡಬಯಸುವುದಿಲ್ಲ.

ಯಾಕೆಂದರೆ ನಾನು ಕೇವಲ ಆ ದೇವರ, ಆ ಖುದಾನ ಗುಲಾಮನಾಗಿ, ದಾಸನಾಗಿ ಕೆಲಸ ನಿರ್ವಹಿಸುವವನೆಂದೇ ತಿಳಿದಿದ್ದೇನೆ. ಹೀಗೆಯೇ ಮಾಡುತ್ತ ಹೋಗುವುದರಿಂದ ಸ್ವರಾಜ್ಯ ಸಿಗಲು ಸಾಧ್ಯವೇ ಇಲ್ಲ. ಮೌಲಾನಾ ಮಹಮ್ಮದ ಅಲಿಯವರು ಪತ್ನಿ ಬೇಗಮ ಸಾಹಿಬಾ ಅವರು ಕಾಂಗ್ರೆಸ್ಸಿನಲ್ಲಿ ಬಂದಾಗಲೆಲ್ಲ ತಮಗೆ ಒಂದು ವಾರದ ಮಟ್ಟಿಗೆ ಸ್ವರಾಜ್ಯ ಲಭಿಸಿದಂತೆಯೇ ಭಾವನೆಯುಂಟಾಗುತ್ತಿದೆಂದು ಹೇಳಿದುದುಂಟು. ಇದರರ್ಥ ನಾವು ಸ್ವರಾಜ್ಯದ ನಾಟಕವಾಡುತ್ತಿದ್ದೇವೆಂದೋ? ನಾಟಕದಲ್ಲಿ ಹರಿಶ್ಚಂದ್ರನನ್ನು ನಾವೆಲ್ಲ ನೋಡುವುದುಂಟು. ಆದರೆ ಆತನಲ್ಲಿ ನಿಜವಾಗಿಯೂ ಸತ್ಯ ಹರಿಶ್ಚಂದ್ರನಿರುವುದೇ ಇಲ್ಲ. ಅಂದರೆ ಆತನು ಹರಿಶ್ಚಂದ್ರನ ಅಭಿನಯವನ್ನು ಮಾತ್ರ ಮಾಡುತ್ತಾನೆಯೇ ಹೊರತೂ ಸ್ವತಃ ಹರಿಶ್ಚಂದ್ರ ಆಗಿರಲು ಸಾಧ್ಯವಿಲ್ಲ. ಅದೇ ರೀತಿ ಸ್ವರಾಜ್ಯ ಪ್ರಾಪ್ತಿಯೂ ಸಹ. ನಮ್ಮದೊಂದು ಅಂಥ ನಾಟಕ ಮಾತ್ರವಾಗಿ ನಡೆಯುತ್ತಿದೆ. ಆದ್ದರಿಂದ ಇಲ್ಲಿಯವರೆಗೆ ಸಾಧಿಸಲಾರದುದನ್ನು ಈ ಅಧಿವೇಶನದೊಂದಿಗೆ ಸಾಧಿಸಲು ತೊಡಗುವುದಕ್ಕೆ ಇದು ಒಳ್ಳೇ ಸದವಕಾಶವೆಂದೇ ಭಾವಿಸಿ ಕಾರ್ಯತತ್ಪರಾಗೋಣವೆಂದು ಮಾತ್ರ ತಮಗೆ ನಿವೇದಿಸಬಯಸುತ್ತೇನೆ.

ಆದ್ದರಿಂದಲೇ ದೇಶಬಂಧು ಚಿತ್ತರಂಜನದಾಸರು ಮಂಡಿಸುವ ಸೂಚನೆಯನ್ನು ನೀವು ಒಪ್ಪಲಿ ಒಪ್ಪದಿರಲಿ ಅಂಗೀಕರಿಸಬೇಕೆಂದು ನಾನು ಹೇಳುತ್ತಿಲ್ಲ. ನಿಮ್ಮ ಸಮ್ಮತಿಯಿರುವುದಾದರೆ ಅಂಗೀಕರಿಸಿ, ಅಸಮ್ಮತವೆನಸುವುದಾದರೆ ತಿರಸ್ಕರಿಸಿ ಎಂದೇ ಹೇಳ ಬಯಸುತ್ತೇನೆ. ಈ ಸೂಚನೆಯಲ್ಲಿ ಹಿಂದೂ-ಮುಸ್ಲಿಂ ಐಕ್ಯದ ಮಾತಿಲ್ಲ. ಅಸ್ಪೃಶ್ಯತಾ ನಿವಾರಣೆಯನ್ನು ಉಲ್ಲೇಖಿಸಿಲ್ಲ. ಅವರ ಸೂಚನೆಯಲ್ಲಿ ಒಂದೇ ಒಂದು ಮಾತನ್ನು ಹೇಳಲಾಗಿದೆ. ಅದು ನಾವು ಚರಖಾ ತಿರುಗಿಸುತ್ತ ಕೈನೂಲನ್ನು ತೆಗೆಯುತ್ತೇವೆಂದು ಮಾತ್ರ. ಇಲ್ಲಿ ಪ್ರತಿನಿಧಿಯಾಗಿ ಬಂದಿರುವವರು ಯಾರೇ ಆಗಲಿ, ಅಸ್ಪೃಶ್ಯರಿರಲಿ, ಕ್ರೈಸ್ತರಿರಲಿ ಎಲ್ಲರೂ ಮೌಲಾನಾ ಮಹಮ್ಮದಲಿ ಹಾಗೂ ದೇಶಬಂಧು ಚಿತ್ತರಂಜನದಾಸರ ಈ ಪ್ರತಿಜ್ಞೆಗೆ ಮಾನ್ಯತೆ ನೀಡುವವರು ಬದ್ಧರಾಗಿರುವವರು ಆಗಬೇಕು. ಆದ್ದರಿಂದ ನೀವೆಲ್ಲರೂ ಈ ದೃಶ್ಯವನ್ನು ಸಾಕ್ಷಿಯಾಗಿರಿಸಿಕೊಂಡು ಏನು ಮಾಡಬೇಕೆನ್ನುವಿರೋ ಅದನ್ನೇ ಮಾಡಿ. ಹಾಗೆಯೇ ನಡೆದುಕೊಳ್ಳಿ ಒಂದು ವೇಳೆ ಈ ಮಾತು ಸರಿಯಲ್ಲ, ಗಾಂಧಿ ನಿಮ್ಮನ್ನೆಲ್ಲಾ ಆಪಾಯದಲ್ಲಿ ಸಿಲುಕಿಸುತ್ತಾನೆ. ಮೋಸ ಮಾಡುತ್ತಾನೆ ಎಂದೆನಿಸಿದರೆ ನೀವು ಇದನ್ನು ಸ್ವೀಕಾರ ಮಾಡುವುದೇ ಬೇಡ. ಇದನ್ನು ಬಿಟ್ಟು ಬಿಡಿ. ಒಂದು ವೇಳೆ ನೀವು ಈ ಪ್ರತಿಜ್ಞೆ ಸ್ವೀಕರಿಸಿದ್ದಾದರೆ ನೀವು ಈಶ್ವರನ ಹೆಸರಿನಲ್ಲಿ ಖುದಾನ ಹೆಸರಿನಲ್ಲಿ ಪ್ರತಿಜ್ಞೆ ಸ್ವೀಕರಿಸಿದಂತೆ ಎಂದೇ ನಾನು ಬಗೆಯುತ್ತೇನೆ ಮತ್ತು ಪ್ರತಿಜ್ಞೆಗೈದು ಅದರಂತೆ ನಡೆಯುವುದು ಅಥವಾ ಬಿಡುವುದನ್ನು ನಿಮ್ಮ ಆತ್ಮ ಸಾಕ್ಷಿಗೆ ಬಿಟ್ಟುಕೊಡುತ್ತೇನೆ. ಒಂದು ವೇಳೆ ನಿಮಗೆ ಇದೊಂದು ಹುಚ್ಚುತನವೆಂದೇ ಎನಿಸುವುದಾದರೆ ಇದನ್ನು ನೀವು ಒಪ್ಪುವುದೇ ಬೇಡ. ಆದರೆ ನಂತರ ಸ್ವಾತಂತ್ರ್ಯ ಗಳಿಸಲು

ಭಾರತ ಸಮರ್ಥವೇ? ಸಾಧ್ಯವೇ? ಎಂಬುದನ್ನು ನೀವು ಯೋಚಿಸಬೇಕಾದೀತು. ಪ್ರತಿಜ್ಞೆಯಂತೆ ನಡೆಯದೇ ಅದನ್ನು ಉಲ್ಲಂಘಿಸಿದವರಿಗೆ ಜಗತ್ತು ಏನೆಂದು ಕರೆಯುತ್ತದೆ? ತುಳಸೀದಾಸರು ಏನೆನ್ನುತ್ತಾರೆ ? ಬೈಬಲ್, ಗ್ರಂಥ ಸಾಹೀಬ್, ಕುರಾನ್ ಯಾವುದನ್ನೇ ಓದಿರಿ ಅಂದರೆ ನಿಮಗಿದು ಗೊತ್ತಾಗುತ್ತದೆ. ಪ್ರತಿಜ್ಞೆ ಭಂಗ ಮಾಡಿದವನು ವಂಚಕ, ಮೋಸಗಾರ, ಅಯೋಗ್ಯ, ಖೊಟ್ಟಿ ನಾಣ್ಯ, ಖೊಟ್ಟಿ ರೂಪಾಯಿ ಎಂದೇ ಅಂಥವನ ವರ್ಣನೆಯಿದೆ. ಖೊಟ್ಟಿ ನಾಣ್ಯ ಕೈಯಲ್ಲಿ ಹಿಡಿದುಕೊಂಡು ನೀವು ಅಂಗಡಿಗೆ ಹೋದರೆ ನೀವು ಸಿಕ್ಕು ಬೀಳುವಿರಿ. ಸರಕಾರ ನಿಮಗೆ ಶಿಕ್ಷೆ ವಿಧಿಸುತ್ತದೆ. ನಾನು ನಿಮಗೆ ಮನವೊಲಿಸಿಕೊಳ್ಳಲು ಅಥವಾ ಹೊಗಳಿ ಮೋಸಗೊಳಿಸಲು ಮಾತಾಡಬಯಸುತ್ತಿಲ್ಲ. ನಾನು ನಿಮ್ಮ ಭಾವನೆಗಳೊಂದಿಗೆ ಆಟವಾಡಲೂ ಬಯಸುತ್ತಿಲ್ಲ. ನನಗೆ ತಿಳಿದುದನ್ನೇ ನಿಮಗೆ ಹೇಳಲು ಬಯಸುತ್ತೇನೆ. ಕೋಟಿ ಕೋಟಿ ಭಾರತೀಯ ಬಂಧು ಭಗಿನಿಯರು ಚರಖಾ ತಿರುಗಿಸಿ ನೂಲದ ಹೊರತು, ಸ್ವತಃ ಎಲ್ಲರೂ ಖಾದೀಧಾರಿಯಾಗದ ಹೊರತು ಸ್ವರಾಜ್ಯ ಲಭಿಸುವುದೇ ಅಸಾಧ್ಯವೆಂಬುದು ನನ್ನ ದೃಢ ನಂಬುಗೆ. ಇದು ಎಲ್ಲಿಯವರೆಗೆ ಸಾಧಿಸುವುದಿಲ್ಲವೋ ಅಲ್ಲಿಯವರೆಗೆ ಭಾರತದಲ್ಲಿ ಬಡತನ, ದಯನೀಯ, ದಾರುಣ ಸ್ಥಿತಿ ಹೋಗಲಾರದು. ಎಲ್ಲಿಯವರೆಗೆ ಕೋಟ್ಯಾಂತರ ಬಡವರ ಹೊಟ್ಟೆಗೆ ರೊಟ್ಟಿ ಲಭಿಸುವುದಿಲ್ಲವೋ ಅಲ್ಲಿಯ ತನಕ ಸ್ವರಾಜ್ಯ ಲಭಿಸಲಾರದು.

ತಾವು ಸ್ವರಾಜ್ಯವನ್ನು ಬಯಸುತ್ತಿರುವಿರಾದರೆ ತಾವು ಕರಾರಿಗೊಳಪಟ್ಟು ನಡೆದುಕೊಳ್ಳಲೇಬೇಕಾಗುವುದು. ದೇಶಬಂಧು ಚಿತ್ತರಂಜನದಾಸ ಹಾಗೂ ಮೋತಿಲಾಲ ನೆಹ್ರುರೊಡನೆ ನಾನು ಈ ಕರಾರು ಮಾಡಿಕೊಂಡಿದ್ದೇನೆ. ಅದನ್ನೇ ಇಡೀ ಭಾರತದೆದುರು ಮಂಡಿಸಿದ್ದೇನೆ. ನಾವು ಕೆಲವಷ್ಟು ಬಯಸುತ್ತಿದ್ದೇವೆ. ಕೆಲವಷ್ಟನ್ನು ಅವರೂ ಬಯಸುತ್ತಿದ್ದಾರೆ. ನಮಗೆ ಬೇಕಾದುದನ್ನು ನಾವು, ಅವರಿಗೆ ಬೇಕೆನಿಸುವುದನ್ನು ಅವರು, ಈ ಕರಾರಿನನ್ವಯ ಪಡೆದುಕೊಂಡರೆ ತಪ್ಪೇನಿಲ್ಲ. ವಿಧಾನ ಮಂಡಳಗಳ ಮೂಲಕ ಏನೇನೂ ಲಭ್ಯವಾಗದು ಎಂಬುದು ನನ್ನ ಅನಿಸಿಕೆ. ಆದರೆ ಈ ಇಬ್ಬರೂ ಮಹಾ ನಾಯಕರು ವಿಧಾನ ಮಂಡಳಗಳಿಂದ ಅವುಗಳಲ್ಲಿ ಪ್ರವೇಶ ಪಡೆದು ಕಾರ್ಯ ಮಾಡುವುದರಿಂದ ಏನಾದರೂ ಸ್ವಲ್ಪ ಪ್ರಯೋಜನ ವಾಗಿಯೇ ಆಗುತ್ತದೆ ಎಂದು ಭಾವಿಸುತ್ತಾರೆ. ಅಂಥವರು ವಿಧಾನ ಮಂಡಳಗಳಲ್ಲಿರಲಿ, ಅವರೂ ದೇಶದ ದೊಡ್ಡ ನಾಯಕರು ಲಾಭ ಅಥವಾ ಪ್ರಯೋಜನ ಲಭ್ಯವನ್ನುವುದಾದರೆ ಅವರು ಅವುಗಳಲ್ಲಿ ಹೋಗಲಿ ಅವರಿಗೆ ಬೇಡವೆನ್ನಲು ನಾನೆಷ್ಟರವನು? ಅಸಹಕಾರ ಆಂದೋಲನಕಾರರೂ ಅವರನ್ನು ಅಂಗೀಕರಿಸುವರೆಂದು ಇದರರ್ಥವಲ್ಲ. ಕಾಂಗ್ರೆಸ್ಸು ಬದಲಾವಣೆ ಬಯಸುವ ಹಾಗೂ ಬಯಸದಿರುವವರಿಬ್ಬರದೂ ಇದೆ. ಯಾರೊಬ್ಬರ ಅಭಿಮತವನ್ನು ಕಾಂಗ್ರೆಸ್ ತಳ್ಳಿಹಾಕಲಾರದು. ಆದ್ದರಿಂದ ಅವರು ಕಾಂಗ್ರೆಸ್ ಮತಿಯಿಂದಲೇ ವಿಧಾನ ಮಂಡಳದ ಸದಸ್ಯರಾಗಿರುವರು.

ನಾನು ಹೇಳಿದ್ದೇ ನಿಜ. ಇತರರ ಮಾತು ಸರಿಯಲ್ಲ ಸುಳ್ಳು ಎಂಬ ಆಶಯ ಯಾರಲ್ಲೂ ಇರಕೂಡದು. ಇಂಥ ಆಗ್ರಹ ಹಾಗೂ ಹಟಗಳಿಲ್ಲದಂತೆ ಮಾಡುವುದು ಸಹ ಅಪಾಯಕಾರಕ. ಜಗತ್ತಿನಲ್ಲಿ ಎಲ್ಲಿಯವರೆಗೆ ಬುದ್ಧಿಶಕ್ತಿ, ವಿಚಾರ ಸರಣಿ ಬೇರೆ ಬೇರೆಯಾಗಿ ಇರುತ್ತವೆಯೋ ಅಲ್ಲಿಯವರೆಗೆ ಬೇರೆ ಬೇರೆ ಅಭಿಮತಗಳಿರತಕ್ಕವೆ. ಇಂಥದರಲ್ಲಿ ಪರಸ್ಪರ ಸಹನಶೀಲತೆ ಹೊಂದಬೇಕಾದುದು ಸಹ ಅಹಿಂಸೆಯ ಒಂದು ಅಂಶವೇ ಆಗಿದೆ.

ಆದರೆ ನಾನು ತಮಗೆ ಹೇಳುತ್ತಿರುವುದು ಅತಿ ಸಣ್ಣ ಮಾತು. ನೀವು ತೆಗೆದುಕೊಳ್ಳಬೇಕಾದ ಪ್ರತಿಜ್ಞೆಯಲ್ಲಿ ಚರಖಾ ನಡೆಸುವುದೇ ಮುಖ್ಯವಾದುದು. ಚರಖಾ ಶಾಸ್ತ್ರವನ್ನು ನೀವು ಒಪ್ಪುವುದಿಲ್ಲವಾದರೆ, ಖಾದಿಯನ್ನು ಒಪ್ಪಿಕೊಳ್ಳುತ್ತಿಲ್ಲವಾದರೆ, ಕೈನೂಲಿನ ವಂತಿಗೆ ಸಲ್ಲಿಕೆ ಕ್ರಮದಿಂದ ಕಾಂಗ್ರೆಸ್ಸಿನ ಶಕ್ತಿ ಕಮ್ಮಿಯಾಗುವುದೆಂದೆನಿಸಿದರೆ, ನೀವು ಇದನ್ನು ಬಿಟ್ಟುಬಿಡಿ.

ಸೋದರರೇ, ನಾನು ನನ್ನ ಹರಕು ಮುರುಕ ಹಿಂದೀಯಲ್ಲಿ ಹೇಳಬೇಕಾದುದನ್ನು ತಿಳಿಸಿ ಹೇಳಲು ಪ್ರಯತ್ನಿಸಿದ್ದೇನೆ. ದಕ್ಷಿಣ ಭಾರತದಿಂದ, ಕರ್ನಾಟಕದಿಂದ ಬರುವ ಅನೇಕರು ಇಂಗ್ಲೀಷಿನಲ್ಲಿ ಮಾತಾಡಿ ಎನ್ನುತ್ತಾರೆ. ಇದು ತುಂಬಾ ನೋವುಂಟು ಮಾಡುತ್ತದೆ. ಕನಿಷ್ಟ ಪಕ್ಷ ಕಾಂಗ್ರೆಸ್ಸಿನ ಸ್ವರಾಜ್ಯದ ವಿಷಯದಲ್ಲಿ ಹಿಂದೀಯಲ್ಲೇ ಮಾತಾಡೋಣ ಎಂದು ನಾನು ಭಾರತದಲ್ಲಿ ಪ್ರವೇಶಿಸಿದಾಗಿನಿಂದಲೂ ಒಂದೇ ಸವನೇ ಹೇಳುತ್ತ ಬಂದಿದ್ದೇನೆ. ಆದರೆ ದುರ್ದೈವದಿಂದ ನಮ್ಮ ಶಿಕ್ಷಣ ಪದ್ಧತಿಯಲ್ಲಿ ದೋಷವುಂಟಾಗಿದೆ. ಆಲಸ್ಯದಿಂದಾಗಿ ಅನೇಕರಿಗೆ ಹಿಂದೀ ಕಲಿಯಲಾಗಿಲ್ಲ. ಎಲ್ಲರಿಗೂ ಹಿಂದೀಯನ್ನು ಕಲಿಸಲು ಸಾಧ್ಯವಾಗುತ್ತಿಲ್ಲ. ಆದರೆ ತಮಿಳುನಾಡಿನಿಂದ ಬಂದಿರುವ ಸೋದರ, ಕರ್ನಾಟಕದಲ್ಲಿರುವ ಬಂಧುಗಳಿಗೆ ನನ್ನ ಹರಕು ಮುರುಕ ಹಿಂದೀ ಅರ್ಥವಾಗಿಯೇ ಆಗುತ್ತದೆಂಬ ವಿಶ್ವಾಸ ನನ್ನಲ್ಲಿ ಮೂಡುವಂತಾಗಬೇಕು. ಅಂದರೆ ನಾನು ಎಲ್ಲಿಗೆ ಬೇಕಲ್ಲಿಗೆ ಹೋಗುತ್ತೇನೆ. ತಿಳಿ ಹೇಳುತ್ತೇನೆ. ಆದರೆ ಹಾಗಾಗುತ್ತಿಲ್ಲವೆಂಬುದು ನನಗೆ ತಿಳಿದಿದೆ. ಒಂದು ಮಾತನ್ನು ನಾವು ಮರೆತೇ ಬಿಟ್ಟದ್ದೆ ದೇಶಬಂಧು ಚಿತ್ತರಂಜನ ದಾಸರನ್ನೇ ನಾನು ಮರೆತಿರುವೆನಲ್ಲ. ಬಂಗಾಲವೂ ಈ ಅಪರಾಧದಲ್ಲಿ (ಹಿಂದೀ ತಿಳಿಯುವುದಿಲ್ಲ ಅದು ಬೇಡ) ಎನ್ನುವುದರಲ್ಲಿ ಸಹಭಾಗಿಯಾಗಿದೆ. ರವೀಂದ್ರನಾಥ ಠಾಕೂರರು ಉತ್ತಮ ಕಾವ್ಯ ಕೃಷಿ ಮಾಡಿದ ಬಂಗಾಲಿ ಭಾಷೆಯನ್ನು ಕಲಿಯಲು ಮತ್ತು ಬಂಗಾಲಿಯಲ್ಲೇ ಬಂಗಾಲಿಗಳೊಡನೆ ಮಾತಾಡಲು ದೇವರು ನಮಗೆ ಶಕ್ತಿ ನೀಡಿದ್ದರೆ ಚೆನ್ನಾಗಿತ್ತು ಎಂದು ನನಗನ್ನಿಸುತ್ತದೆ. ಆದರೆ ನನಗೆ ಆ ಸೌಭಾಗ್ಯವಿಲ್ಲವಲ್ಲ ? ಏನು ಮಾಡಲಿ.

ಹಿಂದೀಯಲ್ಲಿ ಹೇಳಬೇಕಾದುದನ್ನು ನಾನು ಹೇಳಿ ಮುಗಿಸಿದ್ದೇನೆ. ಹಿಂದೀ ತಿಳಿದವರು ಅದನ್ನು ತಿಳಿದುಕೊಂಡಿದ್ದಾರೆ. ಗೊತ್ತುವಳಿ ಮಂಡಿಸಬಯಸುವವರು ತಾವರಿತ ಭಾಷೆಗಳಲ್ಲಿ

ಮಂಡಿಸಿ ವಿವರ ನೀಡುತ್ತಾರೆ. ಅವರಿಗೆ ಇಂಥದೇ ಭಾಷೆಯಲ್ಲಿ ಮಾತಾಡಿ ಎಂದು ಒತ್ತಾಯ ಹೇರದಿರಿ. ಪ್ರತಿನಿಧಿಗಳಿಗೆ ಅವರವರ ಭಾಷೆಗಳಲ್ಲಿ ಗೊತ್ತುವಳಿಗಳ ಪ್ರತಿಗಳು ಕೈಸೇರಲೆಂದು ನಾನು, ಜವಾಹರಲಾಲ ಹಾಗೂ ಗಂಗಾಧರರಾಯರಿಗೆ ಕೇಳಿಕೊಂಡಿದ್ದೆ. ಅವುಗಳು ನಿಮ್ಮ ಕೈಸೇರಿರಬಹುದಷ್ಟೇ ? ಎಂದು ಮಹಾತ್ಮಾಜೀ ಪ್ರಶ್ನಾರ್ಥಕ ದೃಷ್ಟಿ ಬೀರಿದಾಗ ಇಲ್ಲ, ಇಲ್ಲ ಎಂಬ ಧ್ವನಿ ಕೇಳಿಬಂದವು ಅಂಥವರು ಎಷ್ಟು ಜನ ? ಎಂದು ಮತ್ತೆ ಕೇಳಿದಾಗ ಬಹಳ ಮಂದಿ ಎಂಬ ಉತ್ತರ ಬಂತು. ಆಗ ಗಾಂಧೀಜಿ ಒಳ್ಳೇದು ಗೊತ್ತುವಳಿಯಲ್ಲಿ ಏನಿದೆ ಎಂಬುದನ್ನು ನಾನು ಹೇಳಿದ್ದೇನೆ. ನೀವು ಕೇಳಿರುವಿರಿ ಎನ್ನುತ್ತ ನಕ್ಕರು. ತಾವೆಲ್ಲರೂ ಪತ್ರಿಕೆಗಳಲ್ಲೇ ಪ್ರಕಟವಾಗುವ ಗೊತ್ತುವಳಿ ಓದಿ ತಿಳಿದುಕೊಳ್ಳಿ ಎಂದರು.

ಸ್ವರಾಜ್ಯ ಪಕ್ಷದವರು ಮತ್ತು ಅಸಹಕಾರವಾದಿಗಳು ಬದಲಾವಣೆ ಬಯಸುವವರು ಹಾಗೂ ಅದನ್ನು ಬೇಡವೆನ್ನುವವರು ಒಗ್ಗಟ್ಟನಿಂದಿರಬೇಕೆಂಬುದಿಷ್ಟೇ ಇದೆ. ನಮ್ಮ ಅಭಿಪ್ರಾಯಗಳು ಮಾತ್ರ ಬೇರೆ ಬೇರೆ ಇವೆ. ಹೃದಯದಲ್ಲಿ ಭೇದವಿಲ್ಲ. ಉಭಯತರ ಹೃದಯಗಳೊಂದೇ ತಾವು ಕೆಲವರು ಅಸಹಕಾರವಾದಿಗಳಾದರೂ ತಮ್ಮೆಲ್ಲರ ಹೃದಯದಲ್ಲಿ ದೇಶಬಂಧು ದಾಸ, ಮೋತಿಲಾಲ ನೆಹ್ರು, ಹಾಗೂ ಕೇಳಕರರ ಬಗ್ಗೆ ನನ್ನ ಬಗೆಗಿರುವಷ್ಟೇ ಆತ್ಮೀಯತೆಯಿದೆ. ಅದೇ ರೀತಿ ಸ್ವರಾಜ್ಯ ಪಕ್ಷಗಳವರಿಗೆ ನನ್ನ ಬಗೆಗೂ ಆತ್ಮೀಯತೆಯಿರಲಿಕ್ಕೇಬೇಕು. ಇದೆ. ಇನ್ನು ಹಿಂದೂ-ಮುಸ್ಲೀಮರ ಏಕತೆ ವಿಷಯ ಸನಾತನಿಗಳ ಹೃದಯದಲ್ಲಿ ಪೂಜ್ಯ ಮದನ ಮೋಹನ ಮಾಳವೀಯರ ಬಗ್ಗೆ ಎಷ್ಟೊಂದು ಆದರ, ಪ್ರೇಮಗಳಿವೆಯೋ ಅಷ್ಟೇ ಆದರ ಮೌಲಾನಾ ಮಹಮ್ಮದ ಅಲಿ, ಶೌಕತ ಅಲಿ ಬಂಧುಗಳ ವಿಷಯದಲ್ಲೂ ಇರಬೇಕು. ಅದೇ ಅಲಿ ಸೋದರರನ್ನು ಕುರಿತು ಮುಸಲ್ಮಾನರು ಆದರ ಹೊಂದಿರುವಂತೆಯೇ ಹಿಂದೂ ನೇತಾರರ ಬಗ್ಗೆ ಗೌರವ ಹೊಂದಿರತಕ್ಕದ್ದು. ತಿಳುವಳಿಕೆಯುಳ್ಳ ಪ್ರಜ್ಞಾವಂತನಾದ ಯಾವ ಮುಸಲ್ಮಾನನು ಮಾಳವೀಯರನ್ನು ವೈರಿಯೆಂದು ಭಾವಿಸಿಯಾನು ? ಗೀತಾ, ಭಾಗವತ, ರಾಮಾಯಣ ಓದಿ, ಕಲಿತದ್ದು ನಾನಿದನ್ನೇ.

ಈಗ ಗೊತ್ತುವಳಿಗಳ ಬಗ್ಗೆ ಅವುಗಳ ಮಂಡನೆ ಮಾಡುವವರು ವಿವರಿಸುತ್ತಾರೆ. ಗೊತ್ತುವಳಿಗಳನ್ನು ಓದಲೇಬೇಕೆಂದು ಹಠ ಹಿಡಿಯದಿರಿ ಎಂದು ಹೇಳಿದ ಮಹಾತ್ಮಾಜೀ ಇಂಗ್ಲೀಷಿನಲ್ಲಿಯ ಭಾಷಣ ಓದಿ ದುಃಖಸೂಚಕ ಗೊತ್ತುವಳಿಯನ್ನು ಮಂಡಿಸಿದರು.

ಬಿ. ಅಮ್ಮನ್ ಹಾಗೂ ಇತರ ಅನೇಕ ನೇತಾರರ ನಿಧನಕ್ಕೆ ದುಃಖ ವ್ಯಕ್ತಪಡಿಸಿ ಅವರ ಪರಿವಾರದವರ ದುಃಖದಲ್ಲಿ ಸಹಭಾಗಿಯಾಗಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರುವುದು ಈ ಗೊತ್ತುವಳಿಯಲ್ಲಿದೆ. ಎಲ್ಲರೂ ಕೆಲ ನಿಮಿಷ ಎದ್ದು ನಿಂತು ಮೌನ ಪ್ರಾರ್ಥನೆ ಸಲ್ಲಿಸುವಂತೆಯೇ ನೀವೆಲ್ಲ ನನ್ನೊಂದಿಗೆ ಎದ್ದು ನಿಲ್ಲಿ. ನಾನು ಕುಳಿತಂತೆಯೇ ನೀವು

ಕೂಡಬೇಕು ಎಂದು ಹೇಳುತ್ತ ಮೌನ ಪ್ರಾರ್ಥನೆಗೆ ಎದ್ದು ನಿಂತರು. ಎಲ್ಲರೂ ಅವರೊಂದಿಗೆ ಎದ್ದು ನಿಂತು ಮೌನ ಪ್ರಾರ್ಥನೆ ಸಲ್ಲಿಸಿದರು.

ಆಗ ದೇಶಬಂಧು ಚಿತ್ತರಂಜನದಾಸರು ತಮ್ಮ ಗೊತ್ತುವಳಿ ಮಂಡಿಸಲು ವ್ಯಾಸ ಪೀಠದ ಮೇಲೆ ಬಂದಂತೆಯೇ ಮಹಾತ್ಮಾಜೀಯವರು ''ದಾಸ್‌ಜೀ ನೀವೀಗ ಸ್ವಲ್ಪ ಕುಳಿತುಕೊಳ್ಳಿ'' ಎಂದು ಕೇಳಿಕೊಂಡು ಕುಳ್ಳಿರಿಸಿದರು. ''ಇದೀಗ ಮಾಲವೀಯಜೀ ಒಂದು ಸಂದೇಶ ಕಳಿಸಿದ್ದಾರೆ. ಶೋಕ ಸೂಚಕ ಗೊತ್ತುವಳಿಯಲ್ಲಿ ಲಾಲಾ ಕನ್ನೈಯ್ಯಾಲಾಲಜಿ ಲಾಹೋರಿಯವರ ಹೆಸರನ್ನೇ ಮರೆತು ಬಿಟ್ಟದ್ದೆ ಕ್ಷಮಿಸಿ. ಲಾಲಾ ಕನ್ನೈಯ್ಯಾಲಾಲಜಿ ಬಹುದೊಡ್ಡ ದೇಶಭಕ್ತರು. ಹಿರಿಯರು, ಡಾಯರ ಆಡಳತ ಕಾಲದಲ್ಲಿ ಅವರು ಮಾಡಿದ ಕಾರ್ಯ ಅನುಪಮವಾದುದು ಎಂದು ಹೇಳುತ್ತ ಲಾಲಾ ಕನ್ನೈಯ್ಯಾಲಾಲಜೀಯವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ದಾಸರು ಎರಡನೆಯ ರಾಜೀ ಒಡಂಬಡಿಕೆ ಗೊತ್ತುವಳಿ ಮಂಡಿಸಿದ ಬಳಿಕ ಮೌಲಾನಾ ಮಹಮ್ಮದ ಅಲಿ ಗೊತ್ತುವಳಿ ಸಮರ್ಥಿಸಿ ಮಾತನಾಡಿದರು. ನಂತರ ಮಹಾತ್ಮಾಜಿಯವರು ಗೊತ್ತುವಳಿ ಮಂಡಿಸಿದವರು ಹಾಗೂ ಸಮರ್ಥನೆ ನೀಡಿದವರ ಮಾತುಗಳನ್ನು ನೀವು ಕೇಳಿದಿರಿ. ಈಗ ಗೊತ್ತುವಳಿ ವಿರೋಧಿಸಿ ಮೌಲಾನಾ ಹಜರತ ಮೊಹಾನಿಯಾವರು ಮಾತಾಡುವುದನ್ನು ಕೇಳಿರಿ ಎಂದರು.



ಇಂಗ್ಲೀಷಿನಲ್ಲಿ ಗಾಂಧೀಜಿ ಭಾಷಣ

ಗಾಂಧೀಜಿಯವರು ತಮ್ಮ ಅಧ್ಯಕ್ಷೀಯ ಭಾಷಣವನ್ನು ಇಂಗ್ಲೀಷಿನಲ್ಲಿ ಮುಂದುವರಿಸುತ್ತ ''ಗೆಳೆಯರೇ ಹತ್ತು ನಿಮಿಷಗಳಿಗಿಂತ ಹೆಚ್ಚು ವೇಳೆಯನ್ನು ನಾನು ತೆಗೆದುಕೊಳ್ಳುತ್ತಿಲ್ಲ. ನಾನು ಹಿಂದೀಯಲ್ಲಿ ಹೆಚ್ಚು ಸಮಯ ಮಾತನಾಡಬಾರದೆಂದುಕೊಂಡಿದ್ದೆ. ಅರ್ಧ ಗಂಟೆಗಿಂತ ಹೆಚ್ಚು ವೇಳೆಯನ್ನು ನಾನದಕ್ಕೆ ಗೊತ್ತುಪಡಿಸಿದ್ದೆನಾದರೂ ಅದಕ್ಕಿಂತ ಹೆಚ್ಚು ಮಾತಾಡಿದ್ದೇನೆ. ಹಲವಾರು ಭಾಷೆಗಳಲ್ಲಿ ನನ್ನ ಅನುವಾದಿತ ಭಾಷಣದ ಪ್ರತಿಗಳು ನಿಮ್ಮ ಕೈ ಸೇರಿವೆಯಾದ್ದರಿಂದ ನಾನು ಅದರ ಯಾವುದೇ ಭಾಗವನ್ನು ಕೂಡ ಓದುವ ಉದ್ದೇಶ ಹೊಂದಿಲ್ಲ. ನಿಮ್ಮ ತಾಳ್ಮೆಯನ್ನು ಪರೀಕ್ಷಿಸುತ್ತಿಲ್ಲ. ಹಾಗೆ ಮಾಡುವುದು ನಿಮ್ಮ ಹಾಗೂ ನನ್ನ ವೇಳೆಯ ಅಪವ್ಯಯವೇ ಸರಿ. ಆದ್ದರಿಂದ ಓದುತ್ತಿಲ್ಲ. ನಮ್ಮ ಮುಂದಿರುವ ಕಾರ್ಯವನ್ನು ಆದಷ್ಟು ಬೇಗನೇ ಮುಗಿಸಬೇಕಾಗಿದೆ. ದೇಶಬಂಧು ದಾಸರು ಈಗ ನಿಮ್ಮೆದುರು ಮುಖ್ಯವಾದ ಗೊತ್ತುವಳಿಯನ್ನು ಮಂಡಿಸಲಿದ್ದಾರೆ. ನೀವು ಆ ಗೊತ್ತುವಳಿಯನ್ನು ತಿರಸ್ಕರಿಸಿದ್ದೇ ಆದರೆ ನಿಮ್ಮ ದಾರಿ ನಿಮಗೆ. ನಿಮಗೆ ಹಾಗೂ ದೇಶಕ್ಕೆ ಒಳ್ಳೆಯದೆನಿಸಿದ್ದನ್ನು ನೀವು ಮಾಡಬಹುದು. ನನಗೆ ಯೋಗ್ಯವೆನಿಸಿದುದನ್ನು ಚರಖಾ ಹಾಗೂ ಖಾದಿ ಕೆಲಸವನ್ನು ಮುಂದುವರಿಸಿಕೊಂಡು ಹೋಗಲು ನನಗೆ ನೀವು ಅನುಮತಿ ನೀಡಿದಂತಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ನಿಮ್ಮ ಮುಂದಿರಿಸಲಾಗುವ ಠರಾವಿನ ಬಗ್ಗೆ ಗಂಭೀರವಾಗಿ ಯೋಚಿಸಿ ಎಂದಿಷ್ಟೇ ಹೇಳಬಯಸುತ್ತೇನೆ.

ಕ್ರಾಂತಿಕಾರಿ ಪರಿವರ್ತನೆಯನ್ನು ಸಾಧಿಸುವ ಗುರಿಯನ್ನು ದೇಶದ ಮುಂದಿರಿಸಲಾಗಿದೆ. ಕಲಕತ್ತೆಯಲ್ಲಿಯ 1920 ರಲ್ಲಿ ಜರುಗಿದ ವಿಶೇಷ ಅಧಿವೇಶನದಲ್ಲಿ ಅಧ್ಯಕ್ಷಪೀಠದಿಂದ ಲಾಲಾ

ಲಜಪತರಾಯರು ಹೇಳಿದ್ದ ಕ್ರಾಂತಿ ನಡೆಯಲಿದೆ ಎಂದು ನಾನು ಭಾವಿಸುತ್ತೇನೆ. ನಾನು ತಮ್ಮೆದುರು ಮಂಡಿಸಿದ ಬದಲಾವಣೆ ಪ್ರಕ್ರಿಯೆಯು ಹಿಂದೆ ಸೂಚಿತವಾಗಿದ್ದ ಆ ಕ್ರಾಂತಿಗಿಂತಲೂ ಹೆಚ್ಚಿನದು. ಆದ್ದರಿಂದಲೇ ತಮ್ಮೆಲ್ಲರನ್ನು ಈ ನಿರ್ಣಯದ ಮೂಲಕ ಸ್ವರಾಜ್ಯ ಪ್ರಾಪ್ತಿಯತ್ತ ಹೆಚ್ಚು ಹತ್ತಿರಕ್ಕೆ ತರುತ್ತಿದ್ದೇನೆಂದು ಧೈರ್ಯದಿಂದ ಘೋಷಿಸುತ್ತಿದ್ದೇನೆ. ಯಾಕೆಂದರೆ ಗೊತ್ತುವಳಿಗಳನ್ನು ಅಂಗೀಕರಿಸಿ ನಂತರ ಅವುಗಳನ್ನು ಮರೆತುಬಿಟ್ಟು ಮುಂದೆ ಸಾಗುವ ದಿನಗಳು ಗತಿಸಿ ಹೊದಂಥವು. ಈ ಗೊತ್ತುವಳಿಯನ್ನು ದೇಶದ ಮುಂದೆ ಹಾಗೆಯೇ ಸಂದಿಗ್ಧವೆಂಬ ರೀತಿ ಮಂಡಿಸುತ್ತಿಲ್ಲ. ಪ್ರತಿಯೊಬ್ಬರೂ ಗಂಭೀರವಾಗಿ ಯೋಚಿಸಿ, ಪರಿಗಣಿಸಿ ಕ್ರಿಯಾಶೀಲರಾಗಬೇಕೆಂದೇ ಈ ಗೊತ್ತುವಳಿಯನ್ನು ಮಂಡಿಸಲಾಗುತ್ತಿದೆ. ಈ ಅಪರಾಹ್ನ ಇಲ್ಲಿ ನೆರೆದಿರುವ ಪ್ರತಿಯೊಬ್ಬ ಪುರುಷರು ಮಹಿಳೆಯರು ಗಂಭೀರವಾಗಿ ಆಲೋಚಿಸಿ ಗೊತ್ತುವಳಿಯನ್ನು ಅಂಗೀಕರಿಸಲೆಂದೇ ಮಂಡಿಸಲಾಗುತ್ತಿದೆ. ದೇಶಬಂಧು ಚಿತ್ತರಂಜನದಾಸ ಹಾಗೂ ಮೌಲಾನಾ ಮಹಮ್ಮದ ಅಲಿಯವರು ಈ ಠರಾವನ್ನು ಸ್ವೀಕರಿಸಬೇಕೆಂದು ನಿಮ್ಮನ್ನು ಕೇಳಿಕೊಳ್ಳುತ್ತಿಲ್ಲ. ಆದರೆ ನಾನು ಮಾತ್ರ ನೀವೆಲ್ಲರೂ ದೇವರನ್ನೇ ಸಾಕ್ಷ್ಯವನ್ನಾಗಿ ಹಿಡಿದು ನೀವು ಗೊತ್ತುವಳಿಯನ್ನು ಸ್ವೀಕರಿಸಲು ಕೇಳಿಕೊಳ್ಳುತ್ತಿದ್ದೇನೆ. ನೀವೆಲ್ಲರೂ ಠರಾವಿಗೆ ಮತ ನೀಡುತ್ತಿರುವಾಗ ದೇವರನ್ನೇ ಪ್ರಮಾಣವೆಂದು ಹಿಡಿದು ನಿಮ್ಮ ಬೆಂಬಲ ವ್ಯಕ್ತಪಡಿಸುತ್ತಿರುವಿರೆಂದು ನೆನಪಿನಲ್ಲಿಡಿ ಹಾಗೂ ಯೋಚಿಸಿ ಸ್ಪಷ್ಟವಾಗಿ ತಿಳಿದು ನಿಮಗೆ ಸರಿ ತೋಚುವಂತೆ ಮಾಡಿ. ಗೊತ್ತುವಳಿಯನ್ನು ಸ್ವೀಕರಿಸುವ ನೀವು ಈ ದೇಶಕ್ಕಾಗಿ, ದೇಶದಲ್ಲಿಯ ಕಡು ಬಡವರಿಗಾಗಿ ಸ್ವರಾಜ್ಯ ಪ್ರಾಪ್ತಿಗಾಗಿ ನೀವು ಒಂದು ಮಹತ್ವದ ಹೆಜ್ಜೆ ಇಡುತ್ತಿರುವಿರಿ. ಕ್ರಮ ತೆಗೆದುಕೊಳ್ಳಲಿದ್ದೀರಿ ಎಂದು ತಿಳಿಯಿರಿ. ನಿಮ್ಮ ಮನಸ್ಸಿಗೆ ಹೀಗೆ ಖಾತ್ರಿಯಾಗದೇ ಹೋದಲ್ಲಿ ನೀವು ಗೊತ್ತುವಳಿಯನ್ನು ತಿರಸ್ಕರಿಸಿರೆಂದೇ ನಾನು ಬಿನ್ನವಿಸುತ್ತೇನೆ.

ಈ ಗೊತ್ತುವಳಿಯ ಹಿಂದೆ ನಾನಿದ್ದೇನೆಂದು ತಿಳಿದು ನೀವು ಗೌರವ ಭಾವನೆಯಿಂದ ಗೊತ್ತುವಳಿಯನ್ನು ಸಮರ್ಥಿಸಿ ಅಂಗೀಕರಿಸುವ ಅಗತ್ಯವಿಲ್ಲ. ನಾನು ತಪ್ಪು ಮಾಡದೇ ಇರುವಂಥ ವ್ಯಕ್ತಿಯೇನೂ ಅಲ್ಲವೆಂದು ಹಲವಾರು ಬಾರಿ ಸ್ಪಷ್ಟಪಡಿಸಿದ್ದೇನೆ. ನನ್ನಿಂದ ಅನೇಕ ತಪ್ಪುಗಳಾಗಿವೆ. ಆಗಲಿವೆ ಎಂದು ಹಲವಾರು ಸಲ ಪುನರುಚ್ಚರಿಸುತ್ತಲೇ ಬಂದಿದ್ದೇನೆ. ನನ್ನ ಜೀವನದಲ್ಲಿ ಹಿಮಾಲಯ ಸದೃಶ ಪ್ರಮಾದಗಳನ್ನೇ ಎಸಗಿದ್ದೇನೆಂದು ಪುನಃ ಪುನಃ ಒಪ್ಪಿಕೊಂಡು ಅದಕ್ಕಾಗಿ ಪ್ರಾಯಶ್ಚಿತ್ತವನ್ನು ಗೈದಿದ್ದೇನೆ. ಯಾವುದೇ ತಪ್ಪು ಮಾಡದವನೆಂದರೆ ಪರಿಪೂರ್ಣ ವ್ಯಕ್ತಿ ಅಂಥವರು ಪ್ರಾಯಶ್ಚಿತ್ತ ಕೈಕೊಳ್ಳುವ ಆಗತ್ಯವಿರದು. ತಪ್ಪು ಮಾಡಲಾರದವನಿಗೆ ಪಶ್ಚಾತ್ತಾಪ ಪಡುವ ಅವಶ್ಯಕತೆಯೇ ಇಲ್ಲ. ನಿಮ್ಮೆಲ್ಲರಂತೆ, ನಿಮ್ಮೊಳಗಿನ ಓರ್ವನಾದ ನಾನು ಒಳ್ಳೆಯವ, ಕೆಟ್ಟವ ಎರಡೂ ಆಗಿರುವೆ. ನನ್ನ ಬಗೆಗಿನ ಆದರ ಭಾವನೆಯಿಂದ ನೀವು ಏನನ್ನೂ ಮಾಡಬೇಕಿಲ್ಲ. ದೇಶದ ಮುಂದಿನ ಸಮಸ್ಯೆಗೆ ನೀವು

ನೀವಾಗಿ, ನಿಮ್ಮ ಆತ್ಮ ಸಾಕ್ಷಿಯಾಗಿ ಪರಿಹಾರ ಕಂಡುಕೊಳ್ಳಬೇಕಾಗಿದೆ. ಉತ್ತರ ಹುಡುಕುವುದಿದೆ.

ಗೊತ್ತುವಳಿ ಗುರುತರವಾದುದು ನಿಮ್ಮಲ್ಲಿಯ ಬಹಳಷ್ಟು ಜನರು ಗೊತ್ತುವಳಿಗೆ ವಿರುದ್ಧವಾಗಿದ್ದಾರೆಂಬುದೂ ನನಗೆ ಗೊತ್ತು. ಕೈನೂಲು ತೆಗೆಯುವುದರ ಮೇಲೆ ಚರಖಾ ತಿರುಗಿಸುವುದರ ಶಕ್ತಿಯ ಮೇಲೆ ಪೂರ್ಣ ವಿಶ್ವಾಸವಿರಿಸುವುದು ಸರಿಯಲ್ಲ ಎನ್ನುವವರು ಅನೇಕರಿದ್ದಾರೆ. ಚರಖಾ ತಿರುಗಿಸಿ ಕೈನೂಲು ತೆಗೆಯುವುದೇನೋ ಒಳ್ಳೆಯದು. ಆದರೆ ಆದರಿಂದ ನಮ್ಮ ಸಮಸ್ಯೆಗಳೆಲ್ಲ ಬಗೆಹರಿಯುವವು. ಸ್ವರಾಜ್ಯ ಪ್ರಾಪ್ತಿಯಾಗಲಿದೆ ಎಂದು ನಂಬುವುದು ಕಠಿಣ. ಕಷ್ಟಸಾಧ್ಯ. ಬಹು ದೂರಗಾಮೀ ಚಿಂತನೆ ಎನ್ನುವವರೂ ಕೆಲವರಿದ್ದಾರೆ. ಕೈನೂಲು ತೆಗೆಯುವಿಕೆ, ಖಾದಿ ಆಂದೋಲನವೇನೋ ಒಳ್ಳೆಯದೇ ಆದರೂ ರಾಷ್ಟ್ರೀಯ ಉದ್ದೇಶಗಳಲ್ಲಿ ಅದನ್ನೇ ಸದಸ್ಯತ್ವದ ವಂತಿಗೆ ರೂಪದಲ್ಲಿ ಕಡ್ಡಾಯಗೊಳಿಸುವುದು ಸರಿಯೆನಿಸದೆಂಬ ಮೂರನೆಯ ಒಂದು ಅಭಿಪ್ರಾಯವೂ ಇದೆ. ಇಂಥವರೆಲ್ಲರ ಅಭಿಪ್ರಾಯಕ್ಕೆ ವ್ಯತಿರಿಕ್ತವಾದುದು ನನ್ನ ಅಭಿಮತ. ದಿನದಿಂದ ದಿನಕ್ಕೆ ಈ ದಿಶೆಯಲ್ಲಿ ನನ್ನ ನಿಲುಮೆ, ಚಿಂತನೆ ದೃಢಗೊಳ್ಳುತ್ತಲೇ ಇದೆ. ನಾನು ಇಡೀ ದಿನ ಪ್ರತಿಯೊಂದು ಗಂಟೆ ನೂಲುತ್ತಲೇ ಇರಬೇಕೆನ್ನುವವನು. ಚರಖಾ ತರುವ ಕ್ರಾಂತಿ ನಮ್ಮೆಲ್ಲರನ್ನು ಹೆಚ್ಚೆಚ್ಚು ಸ್ವರಾಜ್ಯದ ಗುರಿ ಸಾಧನೆ ಸಮೀಪಕ್ಕೆ ಒಯ್ಯುತ್ತಿದೆಂದೇ ಹೇಳಬಯಸುತ್ತೇನೆ. ಮೂವತ್ತು ಕೋಟಿ ಭಾರತೀಯರೆಲ್ಲರೂ ಚರಖಾದ ಮೇಲೆ ಕೈನೂಲು ತೆಗೆಯುತ್ತಿದ್ದಾರೆಂದುಕೊಂಡು ಚರಖಾದಿಂದ ಸ್ವರಾಜ್ಯ ಪ್ರಾಪ್ತಿಯಾಗುವುದನ್ನು ಪರಿಣಾಮವನ್ನು ಗುಣಿಸಿ ನೀವೇ ಲೆಕ್ಕ ಹಾಕಿ ತಿಳಿದುಕೊಳ್ಳಿ. ಆದರೆ ನನ್ನಲ್ಲಿ ಚೈತನ್ಯ ತಂದಿರುವ ನನ್ನ ದೃಢ ನಿಲುಮೆಯ ಜ್ವಾಲೆ ನಿಮ್ಮಲ್ಲೂ ಪ್ರಜ್ವಲಿಸಿದಾಗಲೇ ಸ್ವರಾಜ್ಯವು ಚರಖಾದಿಂದ ಹೇಗೆ ಪ್ರಾಪ್ತವಾಗುವುದು. ಕ್ರಾಂತಿ ಹೇಗೆ ಸಾಧ್ಯವಾಗುವುದು ಎಂಬುದು ನಿಮಗೆ ಖಚಿತವಾಗುವುದು. ಈಗ ನೀವು ಸ್ವತಂತ್ರವಾಗಿ ಚಿಂತನೆಗೆ ತೊಡಗಿದಾಗಲೇ ಅಂಥದೊಂದು ಸುಕಾಲ ಪ್ರಾಪ್ತ.

ನನ್ನ ಭಾಷಣದಲ್ಲಿ ಅನೇಕ ವಿಷಯಗಳ ಪ್ರಸ್ತಾಪವಿದೆ. ಶ್ರೀಮತಿ ಸರೋಜಿನಿದೇವಿ ಯವರು ಇದೊಂದು ವಿಷಯ ಪ್ರಸ್ತಾಪಿಸಲು ನನ್ನನ್ನು ಕೇಳಿಕೊಂಡಿದ್ದಾರೆ. ದಕ್ಷಿಣ ಆಫ್ರಿಕೆಯಲ್ಲಿ ಅವರು ಗೈದಿರುವ ಮಹಾ ಕಾರ್ಯ ಸಾಧನೆಯನ್ನು ಗಮನಿಸುತ್ತ ಗೌರವಿಸುತ್ತ ಈಗ ಹಿಂದು-ಮುಸ್ಲಿಂ ಏಕತೆಯ ವಿಷಯ ಪ್ರಸ್ತಾಪಿಸುತ್ತೇನೆ. ನಾನು ಈ ಸಮಸ್ಯೆ ಕುರಿತಂತೆ ತುಂಬಾ ದಣಿದು ಹೋಗಿದ್ದೇನೆ. ನನಗೆ ಸಾಕಾಗಿ ಹೋಗಿದೆ. ಹಿಂದು-ಮುಸ್ಲಿಂ ದೊಂಬಿಗಳು ಬೇಕಾದ ಹಾಗೆ ನಡೆಯುಕೊಂಡು ಹೋಗಲಿ ಎಂದು ಅವರವರ ಪಾಡಿಗೆ ಅವರನ್ನು ಬಿಟ್ಟು ಬಿಡೋಣ ಎಂದೆನ್ನುತ್ತಾರೆ ಮೌಲಾನಾ ಶೌಕತ್ ಅಲಿ. ಅವರ ದೊಡ್ಡ ತಲೆಯಲ್ಲಿಯ ದೊಡ್ಡ ವಿಚಾರವಮು. ಆದರೆ ಅವರ ತಲೆ ಅಷ್ಟೇನೂ ದೊಡ್ಡದಲ್ಲವೆಂದು ಹೇಳ ಬಯಸುತ್ತೇನೆ.

(ನಗು) ನನ್ನ ಮುಸಲ್ಮಾನ ಬಾಂಧವರು ದುಷ್ಟರು, ಕೇಡಿಗಳೂ ಆಗಿದ್ದಾರೆ ಎಂದವರು ಹಲವಾರು ಸಲ ವ್ಯಕ್ತಪಡಿಸಿದ್ದಾರೆ. ಅವರನ್ನು ನಿಯಂತ್ರಿಸುವುದೇ ಅಸಾಧ್ಯವೆನ್ನುತ್ತಾರವರು. ಅದೇ ರೀತಿ ಹಿಂದುಗಳಲ್ಲೂ ದುಷ್ಟರು, ಇರುವುದುಂಟು. ನಾವು ಉಭಯತರ ನಡುವಣ ತಂಟೆ ಬಗೆಹರಿಸಲು ಪ್ರಯತ್ನಿಸುತ್ತೇವೆ. ಹೀಗೆ ಮಾಡುವಲ್ಲಿ ಸ್ವರಾಜ್ಯದ ಗುರಿ ಸಾಧನೆ ಕೈ ತಪ್ಪಿ ಹೋಗುತ್ತಲಿದೆ. ಅವರನ್ನು ಅವರಷ್ಟಕ್ಕೆ ಬಿಡುವುದೇ ಒಳಿತು. ಹಾಗೆಯೇ ಮಾಡೋಣ ಎನ್ನಬಹುದು. ಆದರೆ ನಾನು ಹಾಗೆ ಸುಮ್ಮನಿರಲು ಹೇಗೆ ತಾನೇ ಸಾಧ್ಯ ? ಚರಖಾದಂತೆಯೇ ಹಿಂದು-ಮುಸ್ಲಿಂ ಐಕ್ಯದ ಗುರಿ ಸಾಧನೆ ನನ್ನ ಇನ್ನೊಂದು ಹುಚ್ಚು, ನನ್ನ ಮನಸ್ಸಿಗೆ ಹತ್ತಿದ ಇನ್ನೊಂದು ಮಹತ್ವದ ವಿಷಯವದು. ನಾನದನ್ನು ಹಾಗೆಯೇ ಬಿಡಲು ಅಥವಾ ಮರೆತು ಬಿಡಲು ಸಾಧ್ಯವಿಲ್ಲ. ಆ ಪುಟಾಣಿ ಹುಡಿಗೆ ಗುಲ್ನಾರ್ ಬಗ್ಗೆ ನನಗೆ ಅತಿಶಯ ಪ್ರೇಮ, ಆಸಕ್ತಿ ಇಷ್ಟೊಂದು ಪ್ರೇಮಿಸುವುದ್ಯಾಕೆ ? ಎಂದು ನೀವು ನನ್ನನ್ನು ಕೇಳಬಹುದು. ಅದಕ್ಕೊಂದು ಕಾರಣವಿದೆ ಎಂದು ನಾನು ಹೇಳುವೆ. ''ಗಾಂಧಿಯು ಓರ್ವ ಸನಾತನ ಹಿಂದು. ಆ ಪುಟಾಣಿಯೊಂದಿಗೆ ಮಾಂಸವನ್ನು ಹಂಚಿಕೊಂಡು ತಿನ್ನದವ. ಆತ ಗೋಮಾಂಸವನ್ನಂತೂ ಮುಟ್ಟುವುದೇ ಇಲ್ಲ. ಬೇಕಾದವರು ಮಾಂಸ ತಿನ್ನಬಹುದು. ಅಂಥವರಿಗೆ ಅಡ್ಡಿ ಮಾಡಲಾರ. ಸ್ವತಃ ಆತನು ಗೋಮಾತೆಯ ಪೂಜಕನೇ ಆದರೂ ಗೋಮಾಂಸ ತಿನ್ನುವವರಿಗೆ ಆತಂಕ ವೊಡ್ಡುವುದಿಲ್ಲ ಎಂದು ಗುಲ್ನಾರ ಬಾಲಿಕೆ ಮುಂದೊಂದು ದಿನ ದೊಡ್ಡವಳಾದಾಗ ನೆನಸಬಹುದು. ಅವಳು ಪ್ರೌಢಳಾಗುವಷ್ಟೊತ್ತಿಗೆ ನಾನು ಸತ್ತು ಹೋಗಿರಬಹುದು. ಅವಳು ದೊಡ್ಡವಳಾದಾಗ ನನ್ನ ಸಂದೇಶ ಬೀರಬಹುದಾಗಿದೆ. ಈಗವಳು ಪರಿಶುದ್ಧ ಮುಗ್ಧ ಜೀವಿ. ಅವಳಿಗೆ ಎಲ್ಲವೂ ಒಳ್ಳೆಯದಾಗಿಯೇ ಕಾಣುತ್ತದೆ. ಎಲ್ಲವೂ ಸರಿಯೆನಿಸುತ್ತದೆ. ಆಕೆಗೆ. ಆಕೆ ದ್ವೇಷವನ್ನರಿಯದವಳು. ಪ್ರೇಮವೊಂದೇ ಅಕೆಗೆ ಗೊತ್ತಿರುವಂಥದು. ಪ್ರೇಮದ ಪುತ್ಥಳಿಯೇ ಆಕೆ. ಆದ್ದರಿಂದಲೇ ಬಹಳಷ್ಟು ವಿಷಯಗಳಲ್ಲಿ ಇಬ್ಬರೂ ಭಿನ್ನರಿರುವಾಗಲೂ ನಾನು ಆಕೆಯನ್ನು ಸ್ವತಃ ನನ್ನ ಮಗಳೆಂದೇ ಭಾವಿಸಿ ಪ್ರೀತಿಸುತ್ತೇನೆ. ನಾನು ಈ ಕಾರಣದಿಂದಲೇ ಮುಸಲ್ಮಾನರನ್ನು ಪ್ರೀತಿಸುತ್ತಿರುವುದು ಮುಸಲ್ಮಾನರೊಂದಿಗೆ ಒಂದಾಗಿರಬಯಸುವುದು. ಗುಲ್ನಾರಗಳಿಗಾದರೋ ಅವಳ ಕುರಾನ್ ಗೋವುಗಳನ್ನು ಕೊಂದು ಮಾಂಸ ತಿನ್ನುವುದು, ಧರ್ಮಾಚರಣೆಯುಕ್ತ ಎಂದು ಕಲಿಸುತ್ತದೆ. ನನ್ನ ಧರ್ಮವಾದರೋ ನನಗೆ ಗೋಹತ್ಯೆ ಸಲ್ಲದೆಂಬುದಕ್ಕೆ ಬದ್ಧಗೊಳಿಸುತ್ತದೆ. ಗೋಹತ್ಯೆ ಮಾಡದಂತೆ ಆಕೆಯನ್ನು ತಡೆಯಲು ನಾನೆಷ್ಟರವನು ? ನಾನು ಹಾಗೆ ಅವಳನ್ನು ತಡೆದಿದ್ದಾದರೆ ನನ್ನ ಧರ್ಮವನ್ನೇ ನಾನು ನಿರಾಕರಿಸಿದಂತೆ. ಆದರೆ ನಾನಾಕೆಗೆ ಪ್ರೀತಿಯನ್ನು ಬೋಧಿಸಿ ಅವಳ ಮನವನ್ನು ಗೆಲ್ಲ ಬಯಸುವೆ. ಗೋಹತ್ಯೆ ಹಾಗೂ ಗೋಮಾಂಸ ಭಕ್ಷಣಕ್ಕೆ ಪವಿತ್ರ ಕುರಾನ್ ನಿನ್ನನ್ನು ಬದ್ಧಗೊಳಿಸುತ್ತಿಲ್ಲವೆಂದು ನಾನು ಆಕೆಗೆ ಬಿಂಬಿಸಿ ಹೇಳುತ್ತೇನೆ. ನನ್ನ ಧರ್ಮ ನನಗೆ ಗೋಹತ್ಯೆ ಅನುಮತಿಯನ್ನೇ ನೀಡುತ್ತಿಲ್ಲವಷ್ಟೇ ಅಲ್ಲ, ನನ್ನ ಕುರಾನ್ ಅಂದರೆ ನನ್ನ ಧರ್ಮಗ್ರಂಥವು ಗೋಮಾತೆಯನ್ನು ಪೂಜಿಸಲು ಆದೇಶಿಸುತ್ತದೆ. ನೀನು ಸ್ವತಃ ಗೋಪೂಜೆಯನ್ನು ಮಾಡದೇ

ಇರಬಹುದು. ಆದರೆ ನಾನು ಗೋಮಾಂಸ ತಿನ್ನದಿರುವುದನ್ನು ಹಾಗೂ ಗೋಪೂಜೆ ಮಾಡುವದನ್ನು ಸಹಿಸಿಕೊಳ್ಳಲು ಸಾಧ್ಯವಿದೆ. ನನ್ನ ಬಗೆಗಿರುವ ಸ್ನೇಹ ಆತ್ಮೀಯತೆಗೋಸ್ಕರ ನೀನು ಗೋಹತ್ಯೆಯನ್ನು ಸಹ ಬಿಟ್ಟು ಕೊಟ್ಟು ಇರಬಹುದಾಗಿದೆ ಎಂದು ಹೇಳುತ್ತೇನೆ. ಪುಟ್ಟ ಗುಲ್ನಾರ ಜೊತೆ ಪ್ರೀತಿಯಿಂದಿರುವುದರ ರಹಸ್ಯವೇ ಇದು. ಆದ್ದರಿಂದಲೇ ನಾನು ನನ್ನ ಕಿಸೆಯಲ್ಲಿ ಮೌಲಾನಾ ಶೌಕತ್ ಅಲಿಯವರ ಚಿತ್ರವಿಟ್ಟುಕೊಂಡಿರುತ್ತೇನೆ. ಮಾಳವೀಯರ ಚಿತ್ರವನ್ನೇಕೆ ಇಟ್ಟುಕೊಂಡಿಲ್ಲ ಎಂದು ನೀವು ಕೇಳಬಹುದು. ಆದರೆ ಮಾಳವೀಯರ ಕುರಿತು ನನ್ನ ಪೂಜ್ಯ ಭಾವನೆ ಸ್ವಯಂ ಸ್ಫೂರ್ತಿವಾದುದು. ಆದರೆ ನಾನು ಮುಸಲ್ಮಾನರ ಪಕ್ಷಪಾತಿ. ನಾನು ಬೇರೆಯಾಗಿ ಇರಲು ಹೇಗೆ ತಾನೇ ಸಾಧ್ಯ. ನೀವೂ ಮುಸಲ್ಮಾನರ ಪಕ್ಷಪಾತಿಯೇ ಆದಾಗ ಸಮಸ್ಯೆಗೆ ಸೂಕ್ತ ಪರಿಹಾರ ಕಂಡುಕೊಳ್ಳುವಿರಿ. ಪ್ರಶ್ನೆಗೆ ಪರಿಹಾರ ಹುಡುಕಿಕೊಳ್ಳಿ ಎಂದು ಯಾರಾದರೂ ಹೇಳಿದರೆ ಹಿಂದು ಹಾಗೂ ಮುಸಲ್ಮಾನರು ಏನು ತಾನೇ ಮಾಡಬೇಕು. ಪ್ರತಿಯೊಬ್ಬ ಹಿಂದುವೂ ಮುಸಲ್ಮಾನರ ಪಕ್ಷಪಾತಿಯಾಗಬೇಕು. ಹಾಗೂ ಪ್ರತಿಯೊಬ್ಬ ಮುಸಲ್ಮಾನನೂ ಹಿಂದುಗಳ ಪಕ್ಷಪಾತಿಯಾಗಬೇಕೆಂದೇ ನಾನು ಸೂಚಿಸುತ್ತೇನೆ. ದೇವರನ್ನು ಕಾಣಬಯಸುವ ಆತ್ಮವನ್ನು ಭೇಟಿ ಮಾಡಬಯಸುವ ಸಂತನೊಬ್ಬ ತನ್ನ ಹಾದಿಯಲ್ಲಿ ಪದಕ್ರಮಣ ಮಾಡುತ್ತಿರುತ್ತಾನೆ. ನನ್ನ ದಾರಿ ಅದೇ ಉದ್ದೇಶದ್ದು. ಆದರೆ ಬೇರೆ ತರಹದ್ದು. ಬೇರೆಯವರು ನಡೆವ ದಾರಿ ಎಂಥದು ಎಂದು ನಾನು ಕೇಳಿ ತಿಳಿದುಕೊಳ್ಳುತ್ತೇನೆ. ಹಾಗೆ ಮಾಡುವಾಗ ನಾನವರ ಪಕ್ಷಪಾತಿಯಾಗಲೇಬೇಕು. ಹೀಗೆ ಆಗುವುದೆ ನ್ಯಾಯಯುತವಾದುದು. ಮುಸಲ್ಮಾನರಿಗೆ ನೀವೂ ಹಿಂದೂ ಪಕ್ಷಪಾತಿಗಳಾಗಿ ಎಂದು ಕೇಳಿಕೊಳ್ಳುತ್ತೇನೆ.

ಉದಾರ ಮತವಾದಿಗಳ ಬಗ್ಗೆ ಕೊಂಚ ಹೇಳಬೇಕೆಂದು ಶ್ರೀಮತಿ ಸರೋಜಿನಿ ನಾಯ್ಡು ನನ್ನನ್ನು ಕೇಳಿಕೊಂಡಿದ್ದಾರೆ. ನಾನು ಅಂಥವರನ್ನು ಅರ್ಚಿಸಬಯಸುತ್ತೇನೆ. ಸ್ವರಾಜ್ಯ ಪಕ್ಷದವರಂತೆಯೇ ಉದಾರ ಮತವಾದಿಗಳೂ ಕಾಂಗ್ರೆಸ್ಸಿನಲ್ಲಿ ಬರಬೇಕೆಂದು ನಾನು ಬಯಸುತ್ತೇನೆ. ಅವರಿಗೆ ನನ್ನ ಹಾರ್ದಿಕ ಸ್ವಾಗತ. ತುಂಬು ಹೃದಯದಿಂದ ಬರಮಾಡಿಕೊಳ್ಳ ಬಯಸುತ್ತೇನೆ. ಎಲ್ಲರೂ ಒಟ್ಟಿಗೆ ಸೇರಿ ಕುಳಿತು ಚರಖಾದ ಮೇಲೆ ಕೈನೂಲು ತೆಗೆಯೊಣ. ನಾವು ಚರಖಾದ ಮೇಲೆ ಕೈನೂಲು ತೆಗೆಯಬಯಸುವುದಿಲ್ಲ ಎಂದವರು ಹೇಳುವವರಾದರೆ ನಾನೇನು ಮಾಡಲಿ. ಕಾಂಗ್ರೆಸ್ಸಿನೊಳಕ್ಕೆ ನೀವು ಬನ್ನಿ ನಂತರ ನನ್ನನ್ನೇ ಪಕ್ಷದಿಂದ ಹೊರದೂಡಿ ಎಂದಿಷ್ಟೇ ಅವರಿಗೆ ಹೇಳಬಲ್ಲೆ.

ನಾನು ನನ್ನ ಭಾಷಣಕ್ಕೆ ಕೊನೆ ಹೇಳುತ್ತಿದ್ದೇನೆ. ದೇವರನ್ನೇ ಪ್ರಮಾಣವೆಂದು ತಿಳಿದು ದೇವರ ಸಾಕ್ಷಿಯಾಗಿ ನಿರ್ಣಯಕ್ಕೆ ಬನ್ನಿ. ಮೃತ್ಯು ಬಂದರೂ ಕೂಡ ನಿರ್ಧಾರಕ್ಕೆ ಅಚಲವಾಗಿ ಅಂಟಿಕೊಳ್ಳಿ. ಚಪ್ಪಾಳೆಗಳ ಭಾರೀ ಧ್ವನಿ ಗಾಂಧೀಜಿಯವರ ಮುದ್ರಿತ ಭಾಷಣವನ್ನು ಓದಿದಂತೆಯೇ ಎಂದು ಗ್ರಹಿಸಲಾಯಿತು.



ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷೀಯ ಭಾಷಣದ ಇಂಗ್ಲೀಷನಲ್ಲಿಯ ಮುದ್ರಿತ ಪ್ರತಿಯ ಅನುವಾದ

ಬಹಳಷ್ಟು ತಪ್ಪು ತಿಳುವಳಿಕೆಯ ದಿನಗಳು ಗತಿಸಿದ ಬಳಿಕ ನನಗೆ ಇಂದು ನೀಡಿರುವ ಘನವಾದ ಗೌರವವನ್ನು ನಾನು ಸ್ವೀಕರಿಸುತ್ತಿದ್ದೇನೆ. ಕೆನ್ಯಾ ಹಾಗೂ ದಕ್ಷಿಣ ಆಫ್ರಿಕೆಯಲ್ಲಿ ಅದ್ಭುತ ಕಾರ್ಯಗೈದ ಶ್ರೀಮತಿ ಸರೋಜಿನಿ ನಾಯಡು ಅವರಿಗೆ ಈ ವಿಶಿಷ್ಟ ಗೌರವ ಸಲ್ಲಬೇಕಿತ್ತು. ಆದರೆ ಹಾಗಾಗಲಿಲ್ಲ. ದೇಶದ ಒಳಗಡೆಯ ಹಾಗೂ ಹೊರಗಡೆಯ ಅನೇಕ ಹೊಸ ಬೆಳವಣಿಗೆಗಳು ಈ ಹೊಣೆಯನ್ನು ನಾನು ಸ್ವೀಕರಿಸುವಂತೆ ಮಾಡಿವೆ. ನೀವು ನನಗೆ ನೀಡಿರುವ ಈ ಘನವಾದ ಅಧ್ಯಕ್ಷ ಪೀಠದ ಕಾರ್ಯ ನಿರ್ವಹಣೆಯನ್ನು ನ್ಯಾಯಯುತವಾಗಿ ನಿರ್ವಹಿಸಲು ನಿಮ್ಮೆಲ್ಲರ ಸಹಕಾರ, ಬೆಂಬಲ ದೊರೆಯಲಿದೆಂಬುದನ್ನು ನಾನು ಅರಿತುಕೊಂಡಿದ್ದೇನೆ.

ಮೊದಲಿಗೆ ಗತಿಸಿದ ವರ್ಷದಲ್ಲಿ ಸ್ವರ್ಗಸ್ಥರಾದ ಬಿ. ಅಮ್ಮನ್, ಸರ್ ಅಶುತೋಷ ಮುಖರ್ಜಿ, ಭೂಪೇಂದ್ರನಾಥ ಬಸು, ಡಾ|| ಸುಬ್ರಹ್ಮಣ್ಯಂ ಅಯ್ಯರ್, ದಲಬಹಾದ್ದೂರ ಗಿರಿ, ಪಿ.ಕೆ. ನಾಯಡು, ಅವರಿಗೆ ನನ್ನ ಗೌರವ ಸಲ್ಲಿಸುತ್ತ ಅವರ ಕುಟುಂಬಗಳವರಿಗೆ ಸಾಂತ್ವನ ಹೇಳಬಯಸುತ್ತೇನೆ.

ಸಿಂಹಾವಲೋಕನ

1920 ಸಪ್ಟಂಬರದಿಂದ ಕಾಂಗ್ರೆಸ್ಸು ಮುಖ್ಯವಾಗಿ ತನ್ನ ಆಂತರಿಕ ಶಕ್ತಿಯನ್ನು ಬೆಳೆಸಿಕೊಳ್ಳುತ್ತ ಬಂದುದಾಗಿದೆ. ಸಮಸ್ಯೆಗಳ ಹಾಗೂ ತೊಂದರೆಗಳ ನಿವಾರಣೆಗಾಗಿ

ಸರಕಾರವನ್ನು ಕೇಳಿಕೊಳ್ಳುವಂಥ ಗೊತ್ತುವಳಿಗಳನ್ನು ಅಂಗೀಕರಿಸುವುದನ್ನು ಅದು ನಿಲ್ಲಿಸಿಬಿಟ್ಟಂತಾಗಿದೆ. ಭಾರತದ ಮುಸಲ್ಮಾನರಿಗೆ ವಿಶ್ವಾಸಘಾತ ಮಾಡಿದುದು ಸರಕಾರದಲ್ಲಿ ವಿಶ್ವಾಸವಿರಿಸುವಂಥವರಿಗೆ ಕೊಟ್ಟ ಬಹುದೊಡ್ಡ ಪೆಟ್ಟು ಅಥವಾ ಆಘಾತವಾಗಿತ್ತು. ರೌಲೆಟ್ ಕಾಯ್ದೆ ಹಾಗೂ ಡಾಯರ್‌ನ ದಮನಕಾರಿ ಆಡಳಿತ ಇವು ಜಲಿಯನ್‌ವಾಲಾಬಾಗ ಹತ್ಯಾಕಾಂಡದ ದುರಂತದಲ್ಲಿ ಪರ್ಯವಸಾನಗೊಂಡು ಸರಕಾರದ ದಮನಕಾರೀ ಆಡಳಿತ ಪದ್ಧತಿಯ ನಿಜ ಸ್ವರೂಪವನ್ನು ಜನರು ಕಣ್ತೆರೆದು ನೋಡುವಂತೆ ಮಾಡಿದುವು. ತಿಳಿದೋ ತಿಳಿಯದೆಯೋ, ಸ್ವಯಂಸ್ಫೂರ್ತಿಯಿಂದಲೋ ಅಥವಾ ಸರಕಾರದ ಬಲವಂತದ ಕ್ರಮಗಳಿಗೆ ಮಣಿದೋ, ಜನತೆ ಸಹಕರಿಸಿದಾಗಲೇ, ಸಹಯೋಗ ನೀಡಿದಾಗಲೇ ಯಾವುದೊಂದು ವ್ಯವಸ್ಥೆ, ಅಥವಾ ಆಡಳಿತ ಕ್ರಮ ಅಸ್ತಿತ್ವದಲ್ಲಿರಲು ಸಾಧ್ಯವೆಂಬ ಜ್ಞಾನೋದಯವು ಇದರಿಂದಾಗಿದೆ. ಆದ್ದರಿಂದ ಯಾವುದೇ ಒಂದು ಬೇಡವಾದ ವ್ಯವಸ್ಥೆಯನ್ನು ಕೊನೆಗೊಳಿಸಲು ಇಲ್ಲವೇ ಸುಧಾರಿಸಲು ಜನತೆ ತನ್ನ ಸಹಕಾರ ಹಾಗೂ ಸಹಯೋಗವನ್ನು ಹಿಂತೆಗೆದುಕೊಳ್ಳುವುದರಿಂದಲೇ ಕಾರ್ಯಾರಂಭವಾದೀತು ಎಂದು ನಿರ್ಧರಿಸಲಾಯಿತು. 1920 ರಲ್ಲಿ ಕಲಕತ್ತಾದಲ್ಲಿ ಜರುಗಿದ ಕಾಂಗ್ರೆಸ್ ವಿಶೇಷ ಅಧಿವೇಶನದಲ್ಲಿ ಸರಕಾರೀ ಹುದ್ದೆ ಗೌರವಗಳಿಗೆ ಕಾನೂನುಗಳಿಗೆ ಬಹಿಷ್ಕಾರ, ನ್ಯಾಯಾಲಯ, ಶೈಕ್ಷಣಿಕ ಸಂಸ್ಥೆಗಳಿಗೆ ಬಹಿಷ್ಕಾರ, ವಿಧಾನ ಮಂಡಳಗಳ ಬಹಿಷ್ಕಾರ ಹಾಗೂ ವಿದೇಶೀ ಬಟ್ಟೆಗಳ ಬಳಕೆಯ ಬಹಿಷ್ಕಾರದ ನಿರ್ಣಯ ಅಂಗೀಕರಿಸಲಾಯಿತು. ಸಂಬಂಧಪಟ್ಟ ಎಲ್ಲ ಘಟಕಗಳಲ್ಲಿ ಹೆಚ್ಚು ಕಡಿಮೆ ಈ ಬಹಿಷ್ಕಾರ ಆಂದೋಲನ ಜರುಗಿತು. ಈ ಬಹಿಷ್ಕಾರದಲ್ಲಿ ಭಾಗವಹಿಸಿದವರು ಭಾಗವಹಿಸಲು ಶಕ್ಯವಾಗದವರು ಕಾಂಗ್ರೆಸ್ ಸಂಸ್ಥೆಯಲ್ಲಿಂದ ನಿವೃತ್ತರಾದರು ಅಥವಾ ಹೊರಗುಳಿದರು. ಅಸಹಕಾರ ಆಂದೋಲನದ ಹಿನ್ನೆಡೆಯನ್ನು ನಾನು ಇಲ್ಲಿ ವಿವರಿಸುತ್ತಿಲ್ಲ. ಯಾವುದೇ ಒಂದು ಬಹಿಷ್ಕಾರವು ಯಾವುದೊಂದು ಕ್ಷೇತ್ರದಲ್ಲೂ ಪೂರ್ಣತೆಯ ಹಂತ ತಲುಪದೇ ಹೋದರೂ ಪ್ರತಿಯೊಬ್ಬರೂ ಬಹಿಷ್ಕಾರಕ್ಕೆ ಒಳಗಾದ ಯಾವುದೇ ಸಂಸ್ಥೆ ಅಥವಾ ವ್ಯವಸ್ಥೆಯ ಘನತೆ ಗೌರವಗಳನ್ನು ತಗ್ಗಿಸುವಷ್ಟು ಪರಿಣಾಮ ಬೀರಿದರೆಂದೆನ್ನ ಬಹುದು.

ಅತ್ಯಂತ ಮಹತ್ವದ ಬಹಿಷ್ಕಾರವೆಂದರೆ ಹಿಂಸೆಯ ಬಹಿಷ್ಕಾರ ಅಥವಾ ನಿಷೇಧವಾಗಿತ್ತು. ಹಿಂಸೆ ಎಲ್ಲೆಡೆ ವಿಜೃಂಭಿಸುತ್ತಿದೆ ಹಾಗೂ ಯಶಸ್ವಿಯಾಗುತ್ತಲಿದೆ ಎಂಬ ಭಾವನೆ ಮೂಡುತ್ತಿದ್ದಂತೆಯೇ ಅಹಿಂಸೆಯು ಜನರಲ್ಲಿ ಆಳವಾಗಿ ಬೇರೂರಿಲ್ಲ ಎಂಬುದು ಸ್ಪಷ್ಟಗೋಚರವಾಗತೊಡಗಿತ್ತು. ಕೈಲಾಗದಂಥವರ ಹೇಡಿಗಳ ಅಹಿಂಸೆಯದಾಗಿದೆಯೇ ಹೊರತು ಶಕ್ತಿ ಸಂಪನ್ನರ, ಸುಸಂಸ್ಕೃತ, ಪ್ರಜ್ಞಾವಂತರ ಅಹಿಂಸೆಯಾಗಿಲ್ಲವೆಂಬುದು ಕಂಡು ಬರುತ್ತಿತ್ತು. ಅಸಹಕಾರ ಆಂದೋಲನಕ್ಕೆ ಕೈಗೂಡಿಸುವವರ ವಿರುದ್ಧ ಅದು ಪರಿಣಾಮ

ಬೀರತೊಡಗಿತ್ತು. ಇದೂ ಒಂದು ರೀತಿಯ ಅಪ್ರತ್ಯಕ್ಷ ಹಿಂಸೆಯೇ ಸರಿ. ಈ ರೀತಿ ಭೀಕರ ಪರಿಣಾಮ ಕಂಡು ಬಂದರೂ ಸಹ ಅಹಿಂಸೆಯ ಆಂದೋಲನವು ದೈಹಿಕವಾಗಿ ಹಿಂಸೆ ಸ್ಫೋಟಗೊಳ್ಳದಂತೆ ತಡೆಯಿತೆಂದು ನಾನು ಧೈರ್ಯವಾಗಿ ಹೇಳಬಲ್ಲೆ. ಒಂದು ವೇಳೆ ಅಸಹಕಾರ ಆಂದೋಲನವನ್ನು ಅಹಿಂಸಾತ್ಮಕ ವೆಂಬ ರೀತಿಯಲ್ಲಿ ಕೈಕೊಳ್ಳದೇ ಹೋಗಿದ್ದರೆ ದೈಹಿಕ ಹಿಂಸಾಚಾರ ತೀವ್ರಗೊಳ್ಳದೇ ಇರುತ್ತಿರಲಿಲ್ಲ. ಅಹಿಂಸಾತ್ಮಕ ಅಸಹಕಾರ ಆಂದೋಲನವು ಜನತೆಯಲ್ಲಿ ಅವರ ಆಂತರಿಕ ಶಕ್ತಿ ಹಾಗೂ ಆತ್ಮ ಬಲದ ಅರಿವನ್ನು ಮೂಡಿಸಲು ಸಾಧ್ಯವಾಗಿದೆ ಎಂಬುದು ನನ್ನ ದೃಢ ನಿಲುಮೆ ಹಾಗೂ ಖಚಿತವಾದ ಅನಿಸಿಕೆ. ಅಸಹನೀಯ ಕಿರುಕುಳ, ದಬ್ಬಾಳಿಕೆ ವೇದನೆಗಳನ್ನು ಅನುಭವಿಸುತ್ತ ಇರುವಂತೆಯೇ ಮನುಷ್ಯ ತನ್ನೊಳಗೆ ಸುಪ್ತವಾಗಿರುವ ಪ್ರಚಂಡ ಶಕ್ತಿಯ ಪರಿಣಾಮವನ್ನು ತೋರಿಸಬಲ್ಲ ಎಂಬುದನ್ನು ಈ ಆಂದೋಲನ ಬಹಿರಂಗ ಪಡಿಸಿದೆ. ಯಾವುದೇ ಬೇರೆ ರೀತಿಯ ಪ್ರತಿರೋಧದ ಶಕ್ತಿ ಅಥವಾ ಕ್ರಮವು ಉಂಟು ಮಾಡದ ಪ್ರಚಂಡ ಜಾಗೃತಿಯನ್ನು ಜನಸಮೂಹದಲ್ಲಿ ಇದು ಬೀರಿದೆ.

ಅಹಿಂಸಾತ್ಮಕ ಅಸಹಕಾರ ಆಂದೋಲನವು ನಮಗೆ ಸ್ವರಾಜ್ಯವನ್ನು ತಂದು ಕೊಡಲಿಲ್ಲ. ಅನೇಕ ದುಷ್ಪರಿಣಾಮಗಳೂ ಉಂಟಾದವು. ಬಹಿಷ್ಕಾರಕ್ಕೆ ಗುರಿಯಾದಂಥ ಸಂಸ್ಥೆಗಳು ಹಾಗೂ ವ್ಯವಸ್ಥೆ ಪ್ರವರ್ಧಮಾನವೂ ಆಗಿವೆ. ಆದರೂ ನನ್ನ ಅಭಿಪ್ರಾಯದಲ್ಲಿ ಅಹಿಂಸಾತ್ಮಕ ಅಸಹಕಾರ ವಿಧಾನವು ರಾಜಕೀಯ ಸ್ವಾತಂತ್ರ್ಯ ಪ್ರಾಪ್ತಿಯ ಸಾಧನವಾಗಿ ಯಾವಾಗಲೂ ಶಾಶ್ವತವಾಗಿ ನಿಲ್ಲುವಂಥದಾಗಿದೆ. ಅಹಿಂಸಾತ್ಮಕ ಅಸಹಕಾರ ಆಂದೋಲನ ಅಂಶಿಕ ಯಶಸ್ಸನ್ನು ಪಡೆದರೂ ನಮ್ಮನ್ನು ಸ್ವರಾಜ್ಯದ ಗುರಿಯತ್ತ ಸನಿಹಕ್ಕೆ ತಂದು ನಿಲ್ಲಿಸಿದೆ. ಒಂದು ಸುಯೋಗ್ಯವಾದ ಉದ್ದೇಶದ ಸಾಧನೆಗಾಗಿ ಸಾಕಷ್ಟು ನೋವು, ವೇದನೆ, ಶಿಕ್ಷೆಗಳನ್ನು ಸಹಿಸಿಕೊಳ್ಳುವ ಶಕ್ತಿಯನ್ನು ವರ್ಧಿಸಿಕೊಳ್ಳುವಲ್ಲಿ ಯಾವುದೇ ರೀತಿ ತಪ್ಪಿಲ್ಲ.

ಆಂದೋಲನಕ್ಕೆ ಕೊನೆ ಹೇಳಿದ್ದೇಕೆ ?

ಆದರೆ ಈ ಆಂದೋಲನವನ್ನು ಹಠಾತ್ತನೇ ನಿಲ್ಲಿಸಲೇಬೇಕಾದಂಥ ಅಥವಾ ಕೂಡಲೇ ಕೊನೆ ಹೇಳಲೇಬೇಕಾದಂಥ ಪರಿಸ್ಥಿತಿಗೆ ಬಂದು ಬಿಟ್ಟಿದ್ದೆವು. ಅನೇಕ ವ್ಯಕ್ತಿಗಳು ಅಸಹಕಾರ ಚಳುವಳಿಗೆ ದೃಢವಾಗಿ ಅಂಟಿಕೊಂಡವರು. ಅದರಲ್ಲಿ ವಿಶ್ವಾಸವಿರಿಸಿದವರು ಆಗಿದ್ದರೆ ಬಹಳಷ್ಟು ಮಂದಿ ಅದರಲ್ಲಿ ವಿಶ್ವಾಸ ಕಳೆದುಕೊಂಡವರಾಗಿದ್ದರು. ವಿದೇಶಿಯ ಬಟ್ಟೆಗಳ ಬಹಿಷ್ಕಾರವೊಂದನ್ನು ಹೊರತುಪಡಿಸಿ ಆಂದೋಲನದ ಇತರ ಕ್ರಿಯೆಗಳಲ್ಲಿ ಅಂಥವರು ವಿಶ್ವಾಸವನ್ನು ಪೂರ್ಣವಾಗಿ ಕಳೆದುಕೊಂಡವರಾಗಿದ್ದರು. ಬಹಳಷ್ಟು ವಕೀಲರು ತಮ್ಮ ವಕೀಲಿ ವೃತ್ತಿಗೆ ಮರಳಿದ್ದರು. ವಕೀಲೀ ವೃತ್ತಿಯನ್ನು ಬಿಟ್ಟು ಕೊಟ್ಟದ್ದಕ್ಕೆ ಅನೇಕರು ಪಶ್ಚಾತ್ತಾಪ

ಪಡುತ್ತಲೂ ಇದ್ದರು. ಕಾಂಗ್ರೆಸ್ಸನ್ನು ಬಿಟ್ಟವರನೇಕರು ಕಾಂಗ್ರೆಸ್ಸಿಗೆ ಮರಳಿದ್ದಾರೆ. ವಿಧಾನ ಮಂಡಳ ಪ್ರವೇಶದಲ್ಲಿ ನಂಬುಗೆಯಿರಿಸಿದವರ ಸಂಖ್ಯೆಯೂ ಹೆಚ್ಚುತ್ತಲಿದೆ. ಸರಕಾರೀ ಶಾಲೆ ಕಾಲೇಜುಗಳನ್ನು ಬಿಟ್ಟು ಹೊರಬಂದ ನೂರಾರು ವಿದ್ಯಾರ್ಥಿಗಳು ತಮ್ಮ ಕೃತಿಯ ಬಗ್ಗೆ ಪಶ್ಚಾತ್ತಾಪ ಪಟ್ಟು ಮತ್ತೆ ಸರಕಾರೀ ಶಾಲೆ ಕಾಲೇಜುಗಳಿಗೆ ಮರಳಿದ್ದಾರೆ. ಸರಕಾರೀ ಶಾಲೆ ಕಾಲೇಜುಗಳಲ್ಲಿಗೆ ಸೇರಿಕೊಳ್ಳಬಯಸುವವರ ಸಂಖ್ಯೆ ಹೆಚ್ಚಿದ್ದು ಇಂಥ ಬೇಡಿಕೆಗಳನ್ನು ಪೂರೈಸಲು ಶಾಲೆ ಕಾಲೇಜಗಳು ಅಸಾಧ್ಯವೆನಿಸತೊಡಗಿದವೆಂದು ನಾನು ಕೇಳಿದ್ದೇನೆ. ಪರಿಸ್ಥಿತಿ ಹೀಗಿರುವಾಗ ಇಂಥವರನ್ನು ಹೊರತು ಪಡಿಸಿ ನಿಷೇಧ ಅಥವಾ ಬಹಿಷ್ಕಾರ ರಾಷ್ಟ್ರೀಯ ಕಾರ್ಯಕ್ರಮ ಅಥವಾ ಆಂದೋಲನ ನಡೆಯಲು ಸಾಧ್ಯವಿಲ್ಲ. ಆದರೆ ಇಂಥವರನ್ನು ಕಾಂಗ್ರೆಸ್ಸಿನಿಂದ ಹೊರಗಿಡುವುದು ವ್ಯಾವಹಾರಿಕವೆನಿಸದು. ಅಸಹಕಾರ ಆಂದೋಲನ ಕಾರರನ್ನು ಕಾಂಗ್ರೆಸ್ಸಿನಿಂದ ಹೊರಗಿರಿಸಲು ಸಾಧ್ಯವಿಲ್ಲ. ಪರಸ್ಪರರು ಬೇರೆಯವರ ಕಲಾಪಗಳಲ್ಲಿ ಚಿಂತನೆಯಲ್ಲಿ ಪ್ರವೇಶಿಸದೇ ಟೀಕೆ ಟಿಪ್ಪಣಿಗಳಿಂದ ಅತಿಕ್ರಮಣಕ್ಕೆ ಎಳಸದೇ ಉಭಯತರರೂ ಕಾಂಗ್ರೆಸ್ಸಿನಲ್ಲೇ ಉಳಿದು ಕಾರ್ಯ ಮಾಡಲೇಬೇಕಾಗುತ್ತದೆ. ಹಿಂದು ಮುಸ್ಲಿಂರ ಐಕ್ಯಕ್ಕೆ ಅನ್ವಯವಾಗುವ ಸೂತ್ರವನ್ನೇ ವಿಭಿನ್ನ ಚಿಂತನೆಯ ಬಣಗಳಿಗೂ ಅನ್ವಯಿಸಬೇಕಾಗುತ್ತದೆಂದೇ ನನಗನಿಸುತ್ತದೆ. ಉಭಯತರೂ ಅಥವಾ ಎಲ್ಲ ವಿಚಾರಧಾರೆಯ ಬಣಗಳೂ ಪರಸ್ಪರರನ್ನು ಸಹನೆಯಿಂದ ಕಾಣುತ್ತ ಸಹಕರಿಸಲೇಬೇಕು. ವಿಶ್ವಾಸದಿಂದ ವರ್ತಿಸುತ್ತ ಮನಸ್ಸನ್ನು ಗೆದ್ದು ತಮ್ಮ ತಮ್ಮ ವಿಚಾರ ಧಾರೆಗೆ ಸೆಳೆದುಕೊಳ್ಳುವ ಪ್ರಯತ್ನ ಮಾಡಬಹುದು. ನಾವು ಪ್ರಗತಿ ಸಾಧಿಸಬೇಕಾಗಿದೆ. ಮುಂದೆ ಹೆಜ್ಜೆ ಇಟ್ಟು ಸಾಗುವುದಿದೆ. ಕಾಂಗ್ರೆಸ್ ಸೇರಬಯಸದ ಉದಾರ ಮತವಾದಿಗಳೊಂದಿಗೆ ಲಿಬರಲ್ ನೇತಾರರೊಂದಿಗೆ ಸಂವಾದ ನಡೆಸಿ ಅವರೂ ಕಾಂಗ್ರೆಸ್ ಸೇರುವಂತೆ ಮಾಡಲೇಬೇಕಾಗಿದೆ. ಅಸಹಕಾರ ಆಂದೋಲನವನ್ನೇ ಸ್ಥಗಿತಗೊಳಿಸಿರುವಾಗ ಕಾಂಗ್ರೆಸ್ಸಿನಿಂದ ಅವರು ಹೊರಗುಳಿಯಬೇಕೆ ? ನಮ್ಮಿಂದ ಕಾಂಗ್ರೆಸ್ಸಿಗರಿಂದ ಈ ಪ್ರಯತ್ನ ಮುಂದಾಗಿ ನಡೆಯಬೇಕು. ಅವರನ್ನು ಹೃತ್ಪೂರ್ವಕ ಸ್ವಾಗತಿಸೋಣ ಕಾಂಗ್ರೆಸ್ ಪ್ರವೇಶದ ದಾರಿ ಸುಲಭಗೊಳಿಸೋಣ. ಸ್ವರಾಜ್ಯ ಪಕ್ಷದೊಡನೆ ನಾನೇಕೆ ರಾಜಿಗೆ ಸಿದ್ಧವಾದೆ ಎಂಬುದು ಈಗ ನಿಮಗೆ ಕಂಡು ಬಂದಿರಲಿಕ್ಕೆ ಸಾಕು.

ವಿದೇಶಿ ಬಟ್ಟೆಗೆ ಬಹಿಷ್ಕಾರ

ಕೇವಲ ಒಂದರ ಬಹಿಷ್ಕಾರ ಅಥವಾ ನಿಷೇಧವನ್ನು ಚಾಲ್ತಿಯಲ್ಲಿ ಉಳಿಸಿಕೊಂಡಿರುವುದು ನಿಮ್ಮ ಗಮನಕ್ಕೆ ಬಂದಿರಲಿಕ್ಕೆ ಸಾಕು. ಆಂಗ್ಲ ಸ್ನೇಹಿತನೊಬ್ಬನ ಭಾವನೆಗಳಿಗೆ ಮಾನ್ಯತೆ ನೀಡಿ ''ಬಹಿಷ್ಕಾರ'' (ಬಾಯ್‌ಕಾಟ್) ಶಬ್ದಕ್ಕೆ ಬದಲು ವಿದೇಶೀ ಬಟ್ಟೆಗಳ ಬಳಕೆಯನ್ನು ನಿರಾಕರಿಸುವುದು ನಿಷೇಧಿಸುವುದು ಎಂಬ ಪದವನ್ನು ರಾಜೀ

ಒಡಂಬಡಿಕೆಯಲ್ಲಿ ಬದಲಿಸಿ ಬಳಸಲಾಗಿದೆ. ಬಾಯಕಾಟ್ ಶಬ್ದವು ನಿಶ್ಚಿತವಾಗಿ ಕೆಟ್ಟ ಅರ್ಥವನ್ನು ಕೊಡುವುದಾಗಿದೆ. ಈ ಶಬ್ದವು ಸಾಮಾನ್ಯವಾಗಿ ದ್ವೇಷದ ಭಾವನೆಯನ್ನು ಹೊಂದಿರುವಂಥದು. ನನ್ನ ಮಟ್ಟಿಗೆ ಹೇಳುವುದಾದರೆ ಆ ಶಬ್ದವನ್ನು ನಾನು ಯಾವುದೇ ಕೆಟ್ಟ ಅರ್ಥದ ಹಿನ್ನೆಲೆಯಿಟ್ಟುಕೊಂಡು ಬಳಸಿಲ್ಲ. ನಾನು ಬಳಸಿದ ''ಬಾಯ್‌ಕಾಟ್'' ಅಥವಾ ಬಹಿಷ್ಕಾರ ಶಬ್ದವು ಆಂಗ್ಲರಿಗೆ ಸಂಬಂಧಿಸಿದುದಾಗಲೀ ಅವರ ಬಹಿಷ್ಕಾರವೆಂದಾಗಲಿ ಅಲ್ಲ. ಆದರೆ ಬಹಿಷ್ಕಾರ ಕೇವಲ ವಿದೇಶಿಯ ಬಟ್ಟೆಗಳಿಗೆ ಮಾತ್ರ ಸಂಬಂಧಿಸಿದಂಥದು. ಬಾಯ್‌ಕಾಟ್ ಬಹಿಷ್ಕಾರ ಈ ಶಬ್ದಗಳು ಕೇವಲ ನಮ್ಮ ಹಕ್ಕು ಎಂಬರ್ಥದಲ್ಲಿರದೇ ನಾವು ನಿರ್ವಹಿಸಲೇಬೇಕಾದ ಕರ್ತವ್ಯಕ್ಕೆ ಸಂಬಂಧಿಸಿದುದಾಗಿದೆ. ಭಾರತದಲ್ಲಿಯ ನದಿಗಳ ನೀರಿಗೆ ಬದಲಾಗಿ ವಿದೇಶಗಳಿಂದ ನೀರನ್ನು ಬಳಕೆಗಾಗಿ ತರಿಸಿಕೊಳ್ಳುವುದನ್ನು ಯೋಗ್ಯವಲ್ಲವೆಂದು ಹೇಗೆ ಬಹಿಷ್ಕರಿಸಬೇಕೋ ಹಾಗೆಯೇ ವಿದೇಶಿಯ ಬಟ್ಟೆಗಳ ಬಹಿಷ್ಕಾರ ಅಥವಾ ನಿಷೇಧವುಂಟು.

ರಾಜಿ ಒಡಂಬಡಿಕೆಯಲ್ಲಿ ವಿದೇಶಿಯ ಬಟ್ಟೆಗಳ ಆಯಾತ ಹಾಗೂ ಬಳಕೆಯ ಮೇಲಿನ ಬಹಿಷ್ಕಾರವೊಂದನ್ನು ಉಳಿಸಿಕೊಳ್ಳಲಾಗಿದೆ ಹಾಗೂ ಅದಕ್ಕೆ ಪ್ರಾಧಾನ್ಯತೆ ನೀಡಲಾಗಿದೆಂಬುದನ್ನು ನಾನು ಇಲ್ಲಿ ಸ್ಪಷ್ಟಪಡಿಸಬಯಸುತ್ತೇನೆ. ಹಿಂಸಾತ್ಮಕ ಕ್ರಮ ವಿಧಾನ, ಆಂದೋಲನಗಳಿಗೆ ಇದು ಅತ್ಯಂತ ಪರಿಣಾಮಕಾರಿ ಪರ್ಯಾಯವೆಂಬುದು ನನ್ನ ಅಭಿಮತ. ವ್ಯಕ್ತಿಶಃ ನಿಂದೆ ಭೇಡಿಸುವ ಹಾಗೂ ಚಿತಾವಣಿ ನೀಡುವುದು ಸುಳ್ಳು ಹೇಳುವುದು, ಮನಸ್ಸನ್ನು ನೋಯಿಸುವುದು, ಗಾಯಗೊಳಿಸುವುದು ಹಾಗೂ ಕೊಲೆ ಇವುಗಳು ಹಿಂಸೆಯ ಪ್ರತೀಕಗಳಾಗಿರುವಂತೆಯೇ ಸಹಕಾರ, ಸಹಯೋಗ, ಯಾರನ್ನೂ ಅವಮಾನ ಪಡಿಸುವ ರೀತಿಯಲ್ಲಿ ನಡೆದುಕೊಳ್ಳುವುದು ಸತ್ಯಾಚರಣೆಗೆ ಬದ್ಧತೆ ಇವುಗಳು ಅಹಿಂಸೆಯ ಪ್ರತೀಕಗಳೆನಿಸುತ್ತವೆ. ಅದೇ ರೀತಿ ವಿದೇಶಿಯ ಬಟ್ಟೆಗಳ ಬಳಕೆಯ ನಿರಾಕರಣೆಯೂ ಸಹ ನನ್ನ ಅಭಿಪ್ರಾಯದಲ್ಲಿ ಅಹಿಂಸೆಯ ಪ್ರತೀಕವೇ. ಕ್ರಾಂತಿಕಾರಿಗಳು ಮಾಡುವ ಆಂದೋಲನ, ಹಿಂಸಾಚಾರ ಇವುಗಳು ಸರಕಾರದ ಮೇಲೆ ಒತ್ತಡ ತರುವ ಉದ್ದೇಶದವಾಗಿ ರುತ್ತವೆಯೇನೋ ನಿಜ. ಆದರೆ ಅದು ಸಿಟ್ಟು ಹಾಗೂ ದುರ್ಭಾವನೆಗಳಿಂದ ಪ್ರೇರಿತ. ಅಮಾನವೀಯ, ಕ್ರೂರ, ಅನಾಗರಿಕ ರೀತಿಯದು. ಇಂಥ ಹಿಂಸಾತ್ಮಕ ಕ್ರಮಗಳಿಗಿಂತಲೂ ಅಹಿಂಸಾತ್ಮಕ ಆಂದೋಲನಗಳು ಅಧಿಕ ಪರಿಣಾಮಕಾರಿ, ಯಾಕೆಂದರೆ ಅವುಗಳು ಸದ್ಭಾವನೆ, ಸಹಾನುಭೂತಿ ಕುದುರಿಸಿ ಬೇಕಾದ ಒತ್ತಡ ತರುತ್ತವೆ ಎಂಬುದು ನನ್ನ ನಿಲುಮೆ. ವಿದೇಶಿಯ ಬಟ್ಟೆಗಳ ಬಳಕೆ ನಿರಾಕರಣವು ಅಂಥ ಒತ್ತಡವನ್ನು ತರುವ ಸಾಮರ್ಥ್ಯ ಹೊಂದಿದೆ. ಅತ್ಯಧಿಕ ವಿದೇಶಿಯ ಬಟ್ಟೆಗಳನ್ನು ನಾವು ಲ್ಯಾಂಕಶಾಯರ್‌ನಿಂದ ಆಮದು ಮಾಡಿಕೊಳ್ಳುತ್ತೇವೆ. ನಮ್ಮ ಎಲ್ಲ ಆಯಾತಗಳಿಗಿಂತಲೂ ದೊಡ್ಡ ಆಯಾತವೆಂದರೆ

ವಿದೇಶೀಯ ಬಟ್ಟೆಗಳದೇ. ನಂತರ ಸಕ್ಕರೆಯ ಆಯಾತದ ಪ್ರಮಾಣ ದೊಡ್ಡದು. ಭಾರತದೊಡನೆ ನಡೆಯುವ ಲ್ಯಾಂಕಶಾಯರ್‌ನ ಬಟ್ಟೆ ವ್ಯಾಪಾರದಲ್ಲೇ ಬ್ರಿಟನ್ನಿನ ಮುಖ್ಯ ಆಸಕ್ತಿ. ಭಾರತೀಯ ರೈತ ಸಮುದಾಯವನ್ನು ಬೇರೆಲ್ಲದಕ್ಕಿಂತ ಅಧಿಕವಾಗಿ ಹಾಳುಗೆಡವಿದ್ದು ಹಾಗೂ ರೈತರು ತಮ್ಮ ಬಿಡುವಿನ ವೇಳೆಯಲ್ಲಿ ಕೈಕೊಳ್ಳುತ್ತಿದ್ದ ನೂಲು ತೆಗೆಯುವ ಹಾಗೂ ನೇಯ್ಗೆಯ ಚಟುವಟಿಕೆಗಳನ್ನು ಅವರಿಂದ ಕಿತ್ತುಕೊಳ್ಳುವ ಮೂಲಕ ಅವರ ಆಂಶಿಕ ವೃತ್ತಿಯನ್ನು ಸಹ ನಿರ್ನಾಮಗೊಳಿಸಿದುದು ವಿದೇಶೀಯ ಬಟ್ಟೆಗಳ ಆಯಾತ ಚಟುವಟಿಕೆಯೇ ಆಗಿದೆ. ಹೀಗಾಗಿ ಭಾರತದಲ್ಲಿಯ ಗ್ರಾಮಸ್ಥರು ಬದುಕುಳಿಯಬೇಕಾದರೆ ವಿದೇಶಿಯ ಬಟ್ಟೆಗಳ ಬಹಿಷ್ಕಾರ ಅತ್ಯಗತ್ಯ. ಆದ್ದರಿಂದ ಭಾರತೀಯ ಗ್ರಾಮೀಣ ಜನತೆ ರೈತಾಪಿ ವರ್ಗದವರು ಸೋವಿ ದರದಲ್ಲಿ ಸಿಗುವ ಹಾಗೂ ಅತ್ಯಂತ ಆಕರ್ಷಕವಾಗಿ ಕಾಣುವ ನಯವಾದ ವಿದೇಶೀಯ ಬಟ್ಟೆಗಳ ಬಳಕೆಯನ್ನು ಬಿಟ್ಟು ಕೊಡುವುದಷ್ಟೇ ಅಲ್ಲದೇ ತಮ್ಮ ಬಿಡುವಿನ ವೇಳೆಯನ್ನು ಹತ್ತಿಯನ್ನು ಹಿಂಜಿ ಸ್ವಚ್ಛ ಮಾಡುವುದರಲ್ಲಿ ನೂಲುವುದರಲ್ಲಿ ಹಾಗೂ ನೇಯ್ಗೆಯಲ್ಲಿ ತೊಡಗಿಸುವಂತೆ ಮಾಡಬೇಕು. ಅದರಿಂದ ವಿದೇಶೀಯ ಬಟ್ಟೆಗಳ ಆಯಾತದ ವೆಚ್ಚ ಹಾಗೂ ಭಾರತದ ಗಿರಣಿಗಳಲ್ಲಿ ಉತ್ಪಾದನೆ ಮಾಡುವ ಬಟ್ಟೆಗಳ ಉತ್ಪಾದನೆ ವೆಚ್ಚ ಉಳಿಸಿ ಅದರಿಂದ ಗ್ರಾಮೀಣ ಜನತೆಯನ್ನು ಉದ್ಯೋಗಕ್ಕೆ ಹಚ್ಚಿದಂತಾಗುವುದು. ಹೀಗೆ ವಿದೇಶಿಯ ಬಟ್ಟೆಗಳ ಬಳಕೆಯನ್ನು ಕೈನೂಲು ತೆಗೆವ ಹಾಗೂ ಕೈಮಗ್ಗದ ಮೇಲೆ ನೇಯ್ದು ಬಟ್ಟೆ ಉತ್ಪಾದಿಸುವ ಅಂದರೆ ಖಾದಿಯ ಮೂಲಕ ತಡೆದು ನಿಷೇಧಿಸಲು ಸಾಧ್ಯವಾಗುತ್ತದೆ. ಇದರಿಂದ ರೈತನ ಹಣದ ಉಳಿತಾಯ ಹಾಗೂ ಜನತೆಗೆ ಮೊದಲ ದರ್ಜೆಯ ಅತ್ಯುತ್ತಮ ಸೇವೆ ಎರಡೂ ಸಾಧಿಸುತ್ತವೆ. ಇದು ಗ್ರಾಮೀಣ ಜನತೆಯ ಜೊತೆ ನೇರ ಸಂಪರ್ಕವನ್ನು ಸಂವರ್ಧಿಸುತ್ತದೆ. ಅವರಿಗೆ ನಿಜವಾದ ರಾಜಕೀಯ ಶಿಕ್ಷಣ ನೀಡಲು ಹಾಗೂ ಸ್ವಾವಲಂಬಿಗಳನ್ನಾಗಿಸಲು ಇದು ನಮ್ಮನ್ನು ಸಮರ್ಥಗೊಳಿಸುತ್ತದೆ. ಹೀಗೆ ಖಾದಿ ಸಂಘಟನೆಯು ಸಹಕಾರಿ ಸಂಘ ಅಥವಾ ಇತರ ರೀತಿಯ ಯಾವುದೇ ಗ್ರಾಮೀಣ ಸಂಘಟನೆಗಿಂತಲೂ ಉತ್ತಮವಾದುದೆನಿಸುತ್ತದೆ. ಇದು ಬೀರಲಿರುವ ರಾಜಕೀಯ ಪರಿಣಾಮ ಅತ್ಯಂತ ಹೆಚ್ಚಿನದು. ಯಾಕೆಂದರೆ ಬ್ರಿಟನ್ನಿನ ಅನೈತಿಕ ಮೋಹಕ ಮಾಯಾಜಾಲವನ್ನೇ ಉಧ್ವಸ್ತಗೊಳಿಸುತ್ತದೆ. ಲ್ಯಾಂಕಶಾಯರದಿಂದ ನಡೆಯುವ ವ್ಯಾಪಾರ ವ್ಯವಹಾರ ಅನೈತಿಕವೆಂದೇ ನಾನು ಹೇಳುತ್ತೇನೆ. ಯಾಕೆಂದರೆ ಅದು ಭಾರತದ ಲಕ್ಷಾಂತರ ರೈತರನ್ನು ಹಾಳುಗೆಡವಿ ಅವರ ಉತ್ಪನ್ನದಿಂದ ಹುಟ್ಟಿಕೊಂಡು ಬೆಳೆಯುತ್ತಿರುವಂಥದು. ಒಂದು ವಿಧದ ಅನೈತಿಕತೆ ಇನ್ನೊಂದಕ್ಕೆ ದಾರಿ ಮಾಡಿ ಕೊಡುತ್ತದೆ. ಬ್ರಿಟನ್ನಿನ ಹಲವಾರು ಅನೈತಿಕತೆಯಿಂದ ಹುಟ್ಟಿಕೊಂಡು ಬೆಳೆದುದನ್ನು ಅನೇಕರು ಪ್ರಮಾಣಗಳೊಂದಿಗೆ ಸಿದ್ಧಮಾಡಿ ತೋರಿಸಿದ್ದಾರೆ. ಆದ್ದರಿಂದ ಭಾರತದ ಸ್ವಯಂ ಸ್ಫೂರ್ತಿಯ ಪ್ರಯತ್ನ ಪರಿಶ್ರಮದಿಂದ ಬ್ರಿಟನ್ನಿನ ಇದೊಂದು ಅನೈತಿಕತೆಯನ್ನು ಧ್ವಂಸಗೊಳಿಸಿದ್ದಾದರೆ ಭಾರತಕ್ಕೂ ಒಳ್ಳೆಯದು,

ಇಂಗ್ಲಂಡಿಗೂ ಕ್ಷೇಮ. ಬ್ರಿಟನ್ನು ಈಗ ಜಗತ್ತಿನ ಅತ್ಯಂತ ಬಲಾಢ್ಯ ರಾಷ್ಟ್ರವೆಂದು ಗುರುತಿಸಲ್ಪಡುತ್ತಿರುವದರಿಂದ ಬ್ರಿಟನ್ನು ನೀತಿಮಾರ್ಗ ಹಿಡಿದರೆ ಅದರಿಂದ ಮಾನವಕುಲಕ್ಕೆ ಸಹ ಒಳ್ಳೆಯದಾಗುತ್ತದೆ.

ಬೇಡಿಕೆ ಹೆಚ್ಚಿದಂತೆ ಪೂರೈಕೆ ಅದನ್ನು ಹಿಂಬಾಲಿಸಿ ಹೆಚ್ಚುತ್ತ ಹೋಗುತ್ತದೆ ಎಂಬುದನ್ನು ನಾನು ಒಪ್ಪುವುದಿಲ್ಲ. ನಂಬಿಕೆಗೆ ಅರ್ಹರಲ್ಲದ, ವಂಚಕ ಸಾಗಾಟಗಾರರು ವರ್ತಕರು ಕೃತಕ ಬೇಡಿಕೆಯುಂಟು ಮಾಡುವುದು ಸರ್ವೇ ಸಾಮಾನ್ಯವಾದುದು. ವ್ಯಕ್ತಿಗಳು ಹೇಗೆ ಒಂದು ನೀತಿಗೆ ಬದ್ಧರಾಗಿರುತ್ತಾರೋ ಹಾಗೆಯೇ ದೇಶ ಸಹ ಒಂದು ನೀತಿಗೆ ಬದ್ಧವಾಗಿದ್ದು ನಡೆಯಬೇಕಾಗುತ್ತದೆ. ದೇಶ ಜನರ ಬೇಡಿಕೆಗಳನ್ನು ಗಮನಿಸಿ ಅವರ ಬೇಡಿಕೆಗಳೆಲ್ಲ ಸುಲಭವಾಗಿ ಪೂರೈಕೆಯಾಗುವಂತೆ ಕ್ರಮ ಕೈಗೊಳ್ಳಬೇಕಾಗುತ್ತದೆ. ದೇಶ ಅನುಸರಿಸಬೇಕಾದ ನೀತಿ ಸಂಹಿತೆಯದು. ಜನ ಕಲ್ಯಾಣ ಗಮನಿಸಿ ಸರಕಾರ ಅವರ ಕಲ್ಯಾಣ, ಹಿತವಾಗುವಂಥದನ್ನೇ ಪೂರೈಸಬೇಕಾಗುತ್ತದೆ. ಜನರು ಮದ್ಯವನ್ನು ಮಾದಕಗಳನ್ನು ಬಯಸುತ್ತಾರೆಂದು ಅಂಥವುಗಳನ್ನೇ ಸರಕಾರ ಪೂರೈಸುತ್ತ ಹೋಗುವುದು ತುಂಬಾ ತಪ್ಪು ಹಾಗೂ ಅನೀತಿಯದು. ಮದ್ಯ ಮಾದಕಗಳ ವಿಷಯದಲ್ಲಿಯ ಈ ನೀತಿ ಸೂತ್ರ ಆಹಾರ ಧಾನ್ಯ ಹಾಗೂ ಬಟ್ಟೆಗಳ ಲಭ್ಯತೆಗೂ ಅನ್ವಯಿಸುತ್ತದೆ. ವಿದೇಶಗಳಿಂದ ಆಹಾರಧಾನ್ಯ ಹಾಗೂ ಬಟ್ಟೆಗಳನ್ನು ಆಯಾತ ಮಾಡಿ ಪೂರೈಸುವ ಕ್ರಮದಿಂದಾಗಿ ಜನ ಸೋಮಾರಿಗಳಾಗುತ್ತಾರೆ. ಆದರಿಂದ ಅಭಾವ, ಬರಗಾಲ ಹುಟ್ಟಿಕೊಳ್ಳುತ್ತದೆ. ನಂತರ ಇದರಿಂದ ಮನುಷ್ಯನ ಆತ್ಮಬಲ ಶಾರೀರಿಕ ಆರೋಗ್ಯ ಶಕ್ತಿ ಸಂಪನ್ನತೆ ಹ್ರಾಸಗೊಳ್ಳುತ್ತವೆ. ಇದರಿಂದ ಉಂಟಾಗುವ ಹತಾಶೆ ಉಂಟು ಮಾಡುವ ದುರಂತ ನಮಗಿನ್ನೂ ಅರ್ಥವಾಗುತ್ತಿಲ್ಲ. ಸೋಮಾರಿತನದಿಂದ ಉಂಟಾಗುವಂಥ ಹತಾಶ ಸ್ಥಿತಿ ಅನೀತಿ ಹಾಗೂ ಪಾಪಕ್ರಿಯೆಗಳಿಂದ ಹುಟ್ಟಿಕೊಳ್ಳುತ್ತದೆ.

ಬ್ರಿಟನ್ನಿನ ಕರ್ತವ್ಯ

ಅನಂತರ ಬ್ರಿಟನ್ನು ಭಾರತದ ಜನಕಲ್ಯಾಣಕ್ಕೆ ಸಂಬಂಧಿಸಿದಂತೆ ಭಾರತಕ್ಕೆ ತಾನು ಮಾಡುತ್ತಲಿರುವ ವಸ್ತುಗಳ ನಿರ್ಯಾತವನ್ನು ನಿಯಂತ್ರಿಸುವುದು ಹಾಗೂ ಭಾರತದಲ್ಲಿ ಆಗುತ್ತಲಿರುವ ಆಯಾತಗಳನ್ನು ನಿಯಂತ್ರಿಸಿ ಕಡಿಮೆಗೊಳಿಸುವುದು ತನ್ನ ಕರ್ತವ್ಯವೆಂದೇ ತಿಳಿದುಕೊಳ್ಳಬೇಕೆಂದೇ ನಾನೆನ್ನುತ್ತೇನೆ. ನೈತಿಕ ಮೌಲ್ಯಗಳನ್ನು ಗೌರವಿಸದಿರುವ, ಅಂಗೀಕರಿಸದಿರುವ ಅರ್ಥ ವ್ಯವಸ್ಥೆಯು ನಿಜವಾದುದಲ್ಲ. ಅಂತರಾಷ್ಟ್ರೀಯ ವಾಣಿಜ್ಯ ವ್ಯವಹಾರಗಳಲ್ಲಿ ಅನುಷ್ಠಾನಕ್ಕೆ ತರಲಾದ ನೈತಿಕ ಮೌಲ್ಯಗಳಿಗಿಂತ ಅರ್ಥ ವ್ಯವಸ್ಥೆಗಳಲ್ಲಿ ಅಹಿಂಸೆಯನ್ನು ಅನುಷ್ಠಾನಕ್ಕೆ ತರಬೇಕಾದುದು ಕಡಿಮೆ ಮಹತ್ವದ್ದೇನೂ ಅಲ್ಲ. ಭಾರತದ ಹಾಗೂ ಭಾರತೀಯರ ಪ್ರಯತ್ನಗಳ ಮೂಲಕವೇ ಅಂತಾರಾಷ್ಟ್ರೀಯ ಸ್ನೇಹ ಸಂಬಂಧಗಳು ರಾಷ್ಟ್ರ ರಾಷ್ಟ್ರಗಳ ನಡುವಿನ ವ್ಯಾಪಾರ ವ್ಯವಹಾರ ಸಂಬಂಧಗಳು ನೈತಿಕತೆಯ ಭದ್ರ

ಬುನಾದಿಯ ಮೇಲೆ ನಿಲ್ಲುವಂತೆ ಮಾಡುವುದು ನನ್ನ ಗುರಿಯೆಂದು ಹೇಳುವಲ್ಲಿ ನನಗೆ ಎಳ್ಳಷ್ಟೂ ಸಂಕೋಚವೆನಿಸದು. ನನ್ನ ಇಂಥ ಪ್ರಯತ್ನಗಳ ಬಗ್ಗೆ ನನಗೆ ಕೊಂಚವೂ ಪಶ್ಚಾತ್ತಾಪವಿಲ್ಲ. ಕೆಲವೇ ಜನರನ್ನು ಸೀಮಿತವಾಗಿ ಸಾಮೂಹಿಕ ಅಹಿಂಸೆಗೆ ಒಳಪಡಿಸುವ ಬಗ್ಗೆ ಅಹಿಂಸೆ ಸಂಸ್ಕೃತಿಯನ್ನು ಅಳವಡಿಸಿಕೊಂಡುದನ್ನು ಕುರಿತು ನನಗೆ ನಿರಾಶೆ ಎನಿತೂ ಇಲ್ಲ. ಮಾನವನ ಸ್ವಭಾವ ಯಾವಾಗಲೂ ಪತನ ಮಾರ್ಗಿಯೆಂಬುದನ್ನು ನಾನು ನಂಬಲಾರೆ.

ನೂಲುವಿಕೆ ಹಾಗೂ ಖಾದಿ ಬಳಕೆಯ ಆಂದೋಲನದ ಮೂಲಕ ವಿದೇಶಿಯ ಬಟ್ಟೆಗಳ ಬಹಿಷ್ಕಾರ ಯಶಸ್ವಿಯಾದುದು, ಫಲಕಾರಿಯೆನಿಸಿದುದು. ಅದು ಮುಂದೆ ಅತಿ ಪ್ರಾಮುಖ್ಯತೆಯುಳ್ಳ ವ್ಯಾಪಕ ರಾಜಕೀಯ ಪರಿವರ್ತನೆ ತರುವ ಹಾಗೂ ಭಾರತದೊಳಗಿನ ಅತ್ಯಂತ ಕಡು ಬಡವ, ದಟ್ಟ ದರಿದ್ರ ಪುರುಷ ಅಥವಾ ಸ್ತ್ರೀ ಯಾರೇ ಆಗಲಿ ತನ್ನ ಆಂತರಿಕ ಮನೋಬಲ ಅರಿತುಕೊಂಡು ಭಾರತದ ಸ್ವಾತಂತ್ರ್ಯ ಆಂದೋಲನದಲ್ಲಿ ಪಾಲುಗೊಳ್ಳುವಂತೆ ಮಾಡುವ ಗುರಿಯನ್ನು ಹೊಂದಿರುತ್ತದೆ.

ಬಟ್ಟೆಗಳ ಬಹಿಷ್ಕಾರದ ವಿರುದ್ಧ ಬ್ರಿಟಿಶರು

ಬ್ರಿಟನ್ನಿನಲ್ಲಿಯ ಉತ್ಪಾದಿತ ಬಟ್ಟೆಗಳ ಬಹಿಷ್ಕಾರದ ಹಿಂದೆ ಹಿಂಸೆಯುಂಟೆಂದು ಪ್ರತಿಪಾದಿಸುವುದು ನಿರರ್ಥಕ ಅಥವಾ ಅನೇಕ ದೇಶಾಭಿಮಾನಿಗಳು ಹೇಳುವಂತೆ ಬ್ರಿಟನ್ನಿನ ಅನೇಕ ವಸ್ತುಗಳು ಭಾರತದಲ್ಲಿ ಉತ್ಪಾದಿತ ವಸ್ತುಗಳಿಗಿಂತ ಉತ್ತಮವೆಂದು ಹೇಳುವುದು ಅನಗತ್ಯ. ನಾನು ಸಂಪೂರ್ಣವಾಗಿ ಭಾರತದ ಹಿತವನ್ನೇ ಗಮನಿಸಿ ವಿದೇಶೀಯ ಬಟ್ಟೆಗಳ ಬಹಿಷ್ಕಾರದ ಬಗ್ಗೆ ಯೋಚಿಸುತ್ತೇನೆ. ಬ್ರಿಟನ್ನಿನಲ್ಲಿ ಉತ್ಪಾದಿತವಾದ ಎಲ್ಲ ವಸ್ತುಗಳು ನಮಗೆ ಹಾನಿಯುಂಟು ಮಾಡುವುದಿಲ್ಲ. ಬೌದ್ಧಿಕ ಬೆಳವಣಿಗೆ ಅಥವಾ ಆತ್ಮೋನ್ನತಿಯ ಲಾಭಕ್ಕಾಗಿ ಅನೇಕ ಇಂಗ್ಲೀಷ ಪುಸ್ತಕಗಳು ಇಂಗ್ಲೀಷರ ಚಿಂತನೆ ನಮಗೆ ಒಳ್ಳೆಯದೇ. ಬಟ್ಟೆಗಳ ಆಯಾತ ವಿಷಯದಲ್ಲಿ ಕೇವಲ ಬ್ರಿಟನ್ನಿನಲ್ಲಿಯ ಉತ್ಪಾದಿತ ಬಟ್ಟೆಯಷ್ಟೇ ಅಲ್ಲ ಎಲ್ಲ ವಿದೇಶೀಯ ಬಟ್ಟೆಗಳೂ ಭಾರತಕ್ಕೆ ಹಾನಿಕಾರಕವೇ. ಕೆಲ ಮಟ್ಟಿಗಾದರೂ ಭಾರತದಲ್ಲೇ ಗಿರಣಿಗಳಲ್ಲಿ ಉತ್ಪಾದಿತ ವಾಗುವಂಥ ಬಟ್ಟೆಗಳೂ ನಮಗೆ ಹಾನಿಕಾರಕ, ಅಪಾಯಕಾರಿ. ಬ್ರಿಟನ್ನಿನಿಂದ ಆಯಾತ ಮಾಡಲಾದ ಬಟ್ಟೆಗಳನ್ನಷ್ಟೇ ಬಹಿಷ್ಕರಿಸುವದರಿಂದ ಮಾತ್ರವೇ ಆಗುವ ಪರಿಣಾಮವು ನೂಲುವಿಕೆ ಹಾಗೂ ಕೈಮಗ್ಗಗಳ ಮೇಲಿನ ನೇಯ್ಗೆ ಅಥವಾ ಖಾದೀ ಆಂದೋಲನ ಮೂಲಕ ಆಗಬಹುದಾದ ಅತಿ ಹೆಚ್ಚಿನ ಹಾಗೂ ಗಂಭೀರ

ಅಧಿವೇಶನಕ್ಕೆ ಒಟ್ಟು ಖರ್ಚು ಆಗಿದ್ದು 2 ಲಕ್ಷ 20 ಸಾವಿರ 829 ರೂ. ಇದರಲ್ಲಿ 772 ರೂಪಾಯಿ 1 ಆಣೆ 6 ಪೈಸೆ ಉಳಿದಿತ್ತು. ಈ ಪೈಕಿ ಬೆಳಗಾವಿಯ ಪಿ.ಯು.ಸಿ.ಸಿ. ಬ್ಯಾಂಕಿನಲ್ಲಿ 745 ರೂಪಾಯಿ 9 ಆಣೆ 6 ಪೈ ಇಡಲಾಗಿದೆ. ಕಾರ್ಯದರ್ಶಿ ಸೋಮನ್ ಬಳಿ 25 ರೂ. ಇದೆ. ಖಜಾಂಚಿ ಎನ್.ವಿ. ಹೇರೇಕೇರ ಬಳಿ ಒಂದು ರೂಪಾಯಿ ಎಂಟು ಆಣೆ ಇವೆ ಎಂದು ತಿಳಿಸಲಾಗಿತ್ತು.

ಪರಿಣಾಮವುದಂತಿರಲಾರದು. ಎಲ್ಲ ಬಗೆಯ ಅಂದರೆ ಕೈನೂಲು ಕೈಮಗ್ಗಗಳಿಂದ ಉತ್ಪಾದಿತವಾದ ಖಾದಿಯನ್ನು ಹೊರತು ಪಡಿಸಿ ಗಿರಿಣಿಯ ನೂಲು ಬಟ್ಟೆಗಳೆಲ್ಲವನ್ನೂ ಒಳಗೊಂಡಂತೆಯೇ ಎಲ್ಲ ವಿದೇಶೀ ಬಟ್ಟೆಗಳ ಬಹಿಷ್ಕಾರದ ಅಗತ್ಯತೆ ಹಾಗೂ ಅನಿವಾರ್ಯತೆಯನ್ನು ಇದು ಸ್ಪಷ್ಟಪಡಿಸುತ್ತದೆ. ಇಂಥ ಬಹಿಷ್ಕಾರವು ಯಾರನ್ನೂ ಶಿಕ್ಷೆಗೆ, ದಂಡನೆಗೆ ಅಥವಾ ಹಾನಿಗೆ ಒಳಪಡಿಸುವುದಾಗಿರದೇ ರಾಷ್ಟ್ರೀಯ ಅಸ್ತಿತ್ವ ಅಸ್ಮಿತೆಯನ್ನು ಹೊಂದುವುದಕ್ಕಾಗಿಯೇ ಇದೆ.

ಆಕ್ಷೇಪಣೆಗಳ ಬಗ್ಗೆ ವಿಚಾರ ವಿಮರ್ಶೆ

ಚರಖಾದ ಮೇಲೆ ನೂಲುತ್ತ ಕೂಡುವುದು ಕೇವಲ ಹೆಂಗಳೆಯರ ಕೆಲಸ, ಕೈನೂಲು ತೆಗೆಯುವುದೆಂದರೆ ಮತ್ತೆ ಹಿಂದಿನ ಮಧ್ಯಯುಗಕ್ಕೆ ಮರಳಿದ ಹಾಗೆ, ವೈಜ್ಞಾನಿಕ ಸಂಶೋಧನೆಯ ಮುನ್ನಡೆಯ ಪ್ರತೀಕವಾದ ಯಂತ್ರಗಳ ಬಳಕೆಯಿಂದ ಮತ್ತೆ ಹಿಂದೆ ಹೋಗುವುದೆಂದರೆ ವಿಜ್ಞಾನದ ಪ್ರಗತಿಯನ್ನು ತಡೆದು ನಿಲ್ಲಿಸುವ ನಿರರ್ಥಕ ಹಾಗೂ ಹುಚ್ಚು ಸಾಹಸವೆಂದು ಬಹಳಷ್ಟು ಟೀಕೆಗಳು ಕೇಳಿ ಬರುತ್ತಲಿವೆ. ನನ್ನ ಅಭಿಪ್ರಾಯದಲ್ಲಿ ಇಂಥ ಎಲ್ಲ ವಿದ್ಯಮಾನಗಳತ್ತ ಬೆರಗಾಗಿ ನೋಡುತ್ತ ಸುಮ್ಮನಿರುವುದು ಅದ್ಭುತ ಆಶ್ಚರ್ಯಗಳ ಪ್ರವಾಹದಲ್ಲಿ ತೇಲುತ್ತ ವಿಹರಿಸುತ್ತ ವೈಮರೆಯುವದು ಈಗಿನ ಭಾರತದ ಅಗತ್ಯತೆಯಾಗಿರದೇ ಕ್ರಿಯಾಶೀಲರಾಗುವುದು ಅನಿವಾರ್ಯವೆನಿಸಿದೆ ಎಂಬುದೇ ನನ್ನ ಅಭಿಮತ. ಲಕ್ಷಾವಧಿ ಭಾರತೀಯರು ಖಾದೀ ಆಂದೋಲನದಲ್ಲಿ ಕಾರ್ಯಾನ್ವಿತಗೊಳ್ಳುವುದೇ ಒಂದು ಅದ್ಭುತ ಚಮತ್ಕಾರ. ಅದೇ ಕಾಲಕ್ಕೆ ಭಾರತದ ಅಭ್ಯುದಯಕ್ಕೆ ಲಭ್ಯವಾಗುವ ಪೌಷ್ಟಿಕಾಂಶವು ಸಹ ಅದುವೇ ಆಗಿರುತ್ತದೆ. ಚರಖಾ ಆಂದೋಲನಕ್ಕೆ ನಾವು ಸಾಕಷ್ಟು ಒತ್ತು ನೀಡದೇ ಹೋಗಿದ್ದೇವೆ ಎಂಬುದೇ ಗಮನಿಸಬೇಕಾದ ಸತ್ಯಾಂಶ ನಮ್ಮಲ್ಲಿಯ ಬಹಳಷ್ಟು ಮಂದಿ ಚರಖಾದ ಶಕ್ತಿಯ ಬಗ್ಗೆ ಗಂಭೀರವಾಗಿ ಯೋಚಿಸಿಯೇ ಇಲ್ಲವೆಂಬ ವ್ಯಸನ ನನ್ನನ್ನು ಕಾಡುತ್ತಿದೆ. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಲ್ಲೇ ಬಹಳಷ್ಟು ಮಂದಿ ಚರಖಾದ ಮೇಲೆ ಕೈನೂಲು ತೆಗೆಯುವುದನ್ನು ಕುರಿತಂತೆ ಆಗಾಗ ಅಂಗೀಕರಿಸುತ್ತ ಬರಲಾದ ಗೊತ್ತುವಳಿಗಳ ಅನುಷ್ಠಾನಕ್ಕೆ ಸ್ವತಃ ಲಕ್ಷ್ಯಕೊಟ್ಟಿಲ್ಲ. ಅಥವಾ ಲಕ್ಷ್ಯ ಕೊಡುವಲ್ಲಿ ವಿಫಲರಾಗಿದ್ದಾರೆ. ನಮ್ಮಲ್ಲಿಯವರೇ ಬಹಳಷ್ಟು ಮಂದಿ ಚರಖಾ ಹಾಗೂ ಖಾದಿ ಆಂದೋಲನದಲ್ಲಿ ದೃಢ ವಿಶ್ವಾಸ ಹೊಂದಿಲ್ಲ. ಪರಿಸ್ಥಿತಿ ಹೀಗಿರುವಾಗ ಚರಖಾ ಹಾಗೂ ಕೈನೂಲಿನ ವ್ರತದ ಬಗ್ಗೆ ಅದರ ಚಮತ್ಕಾರವನ್ನು ಕುರಿತು ಸಾಕಷ್ಟು ತಿಳುವಳಿಕೆ ಮೂಡದಿರುವುದರ ಪರಿಣಾಮವಾಗಿ ಅದು ವಿಫಲಗೊಂಡಿತೆಂದು ಹೇಳಬಹುದಾಗಿದೆ. ನೂಲುವುದು ಕೇವಲ ಮಹಿಳೆಯರ ಅದರಲ್ಲೂ ವೃದ್ಧೆಯರ ಕೆಲಸ ಮಾತ್ರವೆಂಬುದು ಹಲವಾರು ಸತ್ಯಗಳನ್ನು ನಿರಾಕರಿಸುತ್ತದೆ. ನೂಲಿನ ಗಿರಣಿಗಳೆಂದರೇನು ಅವುಗಳೂ

ಹಲವಾರು ನೂಲುವ ಚಕ್ರಗಳ ಅಳವಡಿಕೆಯಿಂದಲೇ ಆದಂಥವುಗಳು. ಆ ನೂಲುವ ಚಕ್ರಗಳನ್ನು ತಿರುಗುವಂತೆ ಮಾಡುವವರು ಜನರೇ ಆಗಿರುತ್ತಾರೆ. ಕೆಲವು ವೃತ್ತಿಗಳು ಮನುಷ್ಯನ ಘನತೆ ಗೌರವಕ್ಕೆ ಸರಿಸಮವೆನಿಸುವ ಯೋಗ್ಯವಾಗಲಾರವು ಎಂಬ ಮೌಢ್ಯವನ್ನು ತೊರೆಯಬೇಕಾದ ಸಮಯವಿದಾಗಿದೆ. ಸಾಮಾನ್ಯವಾಗಿ ದಿನ ನಿತ್ಯದ ಕರ್ತವ್ಯ ಕರ್ಮಗಳ ನಿರ್ವಹಣೆಯ ಕ್ರಮಗಳಲ್ಲಿ ನೂಲುವುದು ಮಹಿಳೆಯರದೇ ಕೆಲಸವೆಂದೆನಿಸಿತು. ಆದರೆ ನಮ್ಮ ದೇಶದ ಉಜ್ಜ್ವಲ ಭವಿಷ್ಯಕ್ಕೋಸುಗ ಕೆಲವಷ್ಟು ಪುರುಷರೂ ಚರಖಾ ತಿರುಗಿಸಿ ನೂಲುವುದಕ್ಕೆ ತೊಡಗಬೇಕು. ಅಂದರೆ ಅದರಲ್ಲಿ ಸುಧಾರಣೆಗಳನ್ನು ತಂದು ಕುಟಿರೋದ್ಯೋಗದ ವ್ಯಾಪ್ತಿಯಲ್ಲಿ ಅದನ್ನು ಅಭಿವೃದ್ಧಿ ಪಡಿಸಲು ಪುರುಷರು ಚರಖಾ ತಿರುಗಿಸಿ ಕೈನೂಲು ತೆಗೆಯಲು ಉದ್ಯುಕ್ತರಾಗಬೇಕು. ಚರಖಾದಲ್ಲಿ ಈಗ ತರಲಾದ ಮಾರ್ಪಾಟು ಸುಧಾರಣೆ, ನೂಲುವುದರಲ್ಲಿ ಪ್ರಗತಿ, ಪರಿಣತಿ, ಇವುಗಳು ನಮ್ಮಲ್ಲಿಯವರೇ ಆದ ಕೆಲ ಪುರುಷರು ನೂಲುವುದಕ್ಕೆ ತೊಡಗಿರದೇ ಹೋಗಿದ್ದರೆ ಹಾಗೂ ಹಗಲಿರುಳು ಅದರ ಬಗ್ಗೆ ಚಿಂತನ ಮಾಡದೇ ಹೋಗಿದ್ದರೆ ಸಾಧ್ಯವಾಗುತ್ತಿರಲಿಲ್ಲ.

ಯಂತ್ರ

ಯಂತ್ರವನ್ನು ಕುರಿತಂತೆ ನನ್ನ ಅಭಿಪ್ರಾಯವೆಂದು ಹೇಳಲಾಗುತ್ತಿರುವುದನ್ನು ನೀವು ನಿಮ್ಮ ಮನಸ್ಸಿನಿಂದ ತೆಗೆದು ಹಾಕಿ. ಮೊದಲ ಮಾತೆಂದರೆ ಯಂತ್ರದ ಬಳಕೆಯ ಬಗ್ಗೆ ನಾನು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ದೇಶದ ಜನತೆ ಒಪ್ಪಬೇಕೆಂದಿಲ್ಲ. ಅಹಿಂಸೆಯಲ್ಲಿಯ ನನ್ನ ಶ್ರದ್ಧೆಯನ್ನು ಮಾತ್ರ ಸ್ವೀಕರಿಸಬೇಕೆನ್ನುತ್ತೇನೆ. ಚರಖಾ ಸಹ ಒಂದು ವಿಶಿಷ್ಟವಾದ ಯಂತ್ರವೇ ಆಗಿದೆ. ಚರಖಾದ ಅಜ್ಞಾತ ಸಂಶೋಧಕನಿಗೆ ನಾನು ಪ್ರತಿದಿನವೂ ತಲೆಬಾಗಿ ವಂದಿಸುತ್ತೇನೆ. 1900 ಮೈಲು ಉದ್ದ 1500 ಮೈಲು ಅಗಲದ ವ್ಯಾಪ್ತಿಯುಳ್ಳ ಈ ವಿಶಾಲ ದೇಶದ ಸಹಸ್ರಾವಧಿ ಬಡವರ ಮನೆಗಳನ್ನು ಹಸಿವೆ ಎಂಬ ತೋಳನಿಂದ ದೂರಿರಿಸಲು ಶಕ್ತವಾಗಿದ್ದ ಭಾರತದ ಈ ಒಂದು ಕುಟಿರೋದ್ಯೋಗವನ್ನು ನಿರ್ದಯಿಯಾಗಿ ಮೋಸದಿಂದ ಧ್ವಂಸ ಮಾಡಿರುದನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ.

ಕೈನೂಲಿನ ವಂತಿಗೆ

ಚರಖಾದ ಬಗೆಗಿನ ನನ್ನ ಆತ್ಮೀಯತೆ ಅಥವಾ ಹುಚ್ಚನ್ನು ಕುರಿತು ಕೈನೂಲಿನ ವಂತಿಗೆ ಕ್ರಮವನ್ನು ಸೂಚಿಸುವ ಸಾಹಸವನ್ನು ನಾನೇಕೆ ಮಾಡಬೇಕಾಯಿತು. ಪಂಡಿತ ಮೋತಿಲಾಲ ನೆಹ್ರು ಹಾಗೂ ದೇಶಬಂಧು ಚಿತ್ತರಂಜನದಾಸರಂಥವರು ಸ್ವರಾಜ್ಯ ಪಕ್ಷದ ವತಿಯಿಂದ ಇದನ್ನು ಏಕೆ ಒಪ್ಪಿಕೊಂಡಿದ್ದಾರೆ ಎಂದು ಈಗ ನಿಮಗೆ ಯಾವುದೇ ರೀತಿ ಆಶ್ಚರ್ಯವುಂಟಾಗದು. ನಾನು ನನ್ನ ಹಾದಿ ಹಿಡಿದಿದ್ದರೆ ಕಾಂಗ್ರೆಸ್ಸಿನಲ್ಲಿ ಕೈನೂಲು ತೆಗೆಯಬಯಸದವರು ಹಾಗೂ ಎಲ್ಲ ಸಂದರ್ಭಗಳಲ್ಲಿಯೂ ಖಾದಿ ಧರಿಸದವರು

ಉಳಿಯುತ್ತಿದ್ದಿರಲಿಲ್ಲ. ಸ್ವರಾಜ್ಯ ಪಕ್ಷವು ನನ್ನ ಸೂಚನೆಯನ್ನು ಅಂಗೀಕರಿಸಿದ್ದಕ್ಕಾಗಿ ಅದಕ್ಕೆ ನನ್ನ ಕೃತಜ್ಞತೆಗಳು. ಅಶಕ್ತರಿಗೆ ಅಥವಾ ವಿಶ್ವಾಸವಿಲ್ಲದವರಿಗೆ ಮಾತ್ರ ನೂಲುವದರಿಂದ ರಿಯಾಯಿತಿ ತೋರಿಸಲಾಗಿದೆಯಷ್ಟೇ. ಆದರೆ ಚರಖಾ ಹಾಗೂ ಖಾದಿಯಲ್ಲಿ ಸಂಪೂರ್ಣ ವಿಶ್ವಾಸವುಳ್ಳವರೇ ಈ ಆಂದೋಲನ ತೀವ್ರಗೊಳ್ಳುವಂತೆ ತಮ್ಮ ಪಾತ್ರವಾಡಬೇಕಾಗುತ್ತದೆ.

ಬೇರೆ ಸಂದೇಶವಿಲ್ಲ

ದೇಶಕ್ಕೆ ನಾನು ನೀಡಬೇಕಾದ ಬೇರೊಂದು ಉತ್ತಮ ಸಂದೇಶವಿಲ್ಲದ ಕಾರಣ ನಾನು ಚರಖಾ ಹಾಗೂ ಖಾದಿಯ ಬಗ್ಗೆ ಒತ್ತು ಕೊಡುತ್ತಲಿದ್ದೇನೆ. ಶಾಂತಿಯುತ ಹಾಗೂ ಕಾನೂನೂ ಬದ್ಧ ರೀತಿಯಲ್ಲಿ ಸ್ವರಾಜ್ಯಗಳಿಸಬೇಕೆಂದರೆ ಚರಖಾ ಹಾಗೂ ಖಾದಿಯನ್ನುಳಿದು ಬೇರೆ ಪರಿಣಾಮಕಾರಿ ಪದ್ಧತಿಯೇ ಅಥವಾ ಸಾಧನವೇ ನನಗೆ ತೋಚದು. ಹಿಂಸೆಗೆ ಪರ್ಯಾಯವಾಗಿ ಇಡೀ ದೇಶವೇ ಒಪ್ಪಿಕೊಳ್ಳಲು ಸಾಧ್ಯವಿರುವ ಒಂದೇ ಒಂದು ಪರ್ಯಾಯವಂದರೆ ಚರಖಾ ಹಾಗೂ ಖಾದಿ ಉದ್ಯೋಗ. ವಿದೇಶಿಯ ಬಟ್ಟೆಯ ಬಹಿಷ್ಕಾರದ ಮೂಲಕ ನಾವು ಶಕ್ತಿ ಸಂಪನ್ನರಾಗದ ಹೊರತು ಸ್ವರಾಜ್ಯದ ಗುರಿ ಸಾಧನೆಗಾಗಿ ಸವಿನಯ ಕಾಯ್ದೆ ಭಂಗ ಆಂದೋಲನ ಯಶಸ್ವಿಯಾಗದು.

ಚರಖಾ ಬಗೆಗಿನ ನನ್ನ ವಿಚಾರಗಳು ನಿಮಗೆ ಒಪ್ಪಿತವಾಗದೇ ಹೋದಲ್ಲಿ ಕಾಂಗ್ರೆಸ್‌ಗೆ ನಾನು ಮಾರ್ಗದರ್ಶಕನಾಗಿರುವುದು ನಿರರ್ಥಕವೆಂಬುದು ನಿಮಗೆ ಈಗ ಸ್ಪಷ್ಟವಾಗಿರಲಿಕ್ಕೆ ಸಾಕು. ಚರಖಾಶಾಸ್ತ್ರವನ್ನು ಕುರಿತು ನಾನು ಪ್ರತಿಪಾದಿಸುತ್ತಲಿರುವುದು ನೀವು ತಪ್ಪು ಎಂದು ಪರಿಗಣಿಸುವುದಾದಲ್ಲಿ ನನ್ನ ಕೆಲವು ಸ್ನೇಹಿತರು ರಾಷ್ಟ್ರೀಯ ವಿಕಾಸಕ್ಕೆ ಆತಂಕಕಾರಿ ಎಂದು ಹೇಳುತ್ತಿರುವುದನ್ನು ನೀವು ಸಮರ್ಥಿಸಿದಂತೆಯೇ ಆಗುತ್ತದೆ. ನನ್ನ ವಿಚಾರ ಸರಣಿಯು ನಿಮ್ಮ ಬುದ್ಧಿ ಹಾಗೂ ಹೃದಯಕ್ಕೆ ಮನದಟ್ಟಾಗದೇ ಹೋದರೆ ನೀವು ನನ್ನ ನಾಯಕತ್ವವನ್ನು ತಿರಸ್ಕರಿಸದೇ ನಿಮ್ಮ ಕರ್ತವ್ಯದಲ್ಲಿ ತಪ್ಪುತ್ತಿದ್ದೀರಿ ಎನ್ನಬೇಕಾಗುತ್ತದೆ. ನಾವು ಯಾವುದಕ್ಕೂ ನಿರಾಕರಿಸುವ ಶಕ್ತಿ ಹಾಗೂ ಧೈರ್ಯವನ್ನು ಹೊಂದಿರುವುದಿಲ್ಲ ಎಂದು ಲಾರ್ಡ ವಿಲಿಂಗ್ಟನ್ ಒಂದು ಬಾರಿ ನಮ್ಮನ್ನು ಕುರಿತು ಹೇಳಿದಂತೆಯೇ ಆಗಬಾರದು. ನೀವು ನನ್ನ ಸಲಹೆಯನ್ನು ನಂಬದೆ ಹೋದರೆ ಅದನ್ನು ತಿರಸ್ಕರಿಸುವುದೂ ಸ್ವರಾಜ್ಯದ ಗುರಿ ಸಾಧನೆಯಲ್ಲಿ ಒಂದು ಹೆಜ್ಜೆ ಮುಂದಿಟ್ಟಂತಾಗುವುದು.

ಹಿಂದು - ಮುಸ್ಲಿಂ ಏಕತೆ ಚರಖಾಕ್ಕಿಂತ ಕಡಿಮೆ ಮಹತ್ವದೇನಲ್ಲ. ಅದು ನನ್ನ ಜೀವನದ ಉಸಿರೇ ಆಗಿದೆ. ಈ ವಿಷಯದಲ್ಲಿ ನಾನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳಬಯಸುತ್ತಿಲ್ಲ. ಯಾಕೆಂದರೆ ಎಲ್ಲರೂ ಬಹುತೇಕ ಇದನ್ನು ಒಪ್ಪಿಕೊಂಡಿದ್ದಾರೆ. ಕೆಲವು ಹಿಂದುಗಳು ಮತ್ತು ಮುಸಲ್ಮಾನರು ಇದನ್ನು ಒಪ್ಪುದಿರುವವರಿರುವುದರಿಂದ ಅಥವಾ

ಮುಸಲ್ಮಾನರೆಲ್ಲರೂ ಭಾರತೀಯರೇ ಎಂದು ತಿಳಿಯದಿರುವದರಿಂದ ಬ್ರಿಟನ್ನಿನ ಮೇಲಿನ ನಮ್ಮ ಅವಲಂಬನೆ ಅಥವಾ ಭಾರತೀಯರ ಸದ್ಯದ ದಾಸ್ಯದ ಸ್ಥಿತಿಯನ್ನೇ ಒಪ್ಪಿಕೊಂಡಂತೆನಿಸುತ್ತದೆ ಯಾದ್ದರಿಂದ ನಾನು ಈ ಮಾತನ್ನು ಹೇಳುವಾಗ ಬಹುಶಃ ಅಥವಾ ಬಹುತೇಕ ಎಂಬ ಶಬ್ದಗಳನ್ನು ಬಳಸುತ್ತಿದ್ದೇನೆ. ಆದರೂ ಅಂಥ ಸಂಖ್ಯೆ ಬಹಳ ಕಡಿಮೆ ಎನ್ನುವುದೇ ಸಮಾಧಾನ.

ಸದ್ಯದ ತುಮುಲ ಅಥವಾ ಮಾನಸಿಕ ಗೊಂದಲದ ವಾತಾವರಣ ಕೇವಲ ತಾತ್ಪೂರ್ತಿಕವಾದುದೆಂಬ ಮೌಲಾನಾ ಶೌಕತ ಅಲಿಯವರ ತುಂಬು ಆಶಾವಾದದಲ್ಲಿ ನಾನೂ ಸಹಭಾಗಿ. ಖಿಲಾಫತ್ ಆಂದೋಲನದಲ್ಲಿ ಏಕೋಭಾವನೆಯಿಂದ ಹಿಂದುಗಳೂ ಸಹಭಾಗಿಯಾಗಿರುವುದು ಹಾಗೂ ತದನಂತರ ಅಸಹಕಾರ ಆಂದೋಲನದಲ್ಲಿ ಎಲ್ಲರೂ ಭಾಗವಹಿಸಿದಂತಾದುದು ಸುಪ್ತ ಜನ ಸಮೂಹವನ್ನು ಜಾಗೃತಗೊಳಿಸಿದಂತಾಗಿದೆ. ಅಸಹಕಾರ ಆಂದೋಲನದ ಯಶಸ್ವಿನಿಂದ ತೀವ್ರ ಅಸಮಾಧಾನಗೊಂಡ ಕೆಲ ಆಸಕ್ತ ವರ್ಗಗಳವರು ಈಗ ಅದು ತನ್ನ ಆಕರ್ಷಣೆ ನಾವೀನ್ಯತೆಯನ್ನು ಕಳೆದುಕೊಂಡ ಬಳಿಕ ಮತ್ತೆ ಚೇತರಿಸಿಕೊಂಡು ಎರಡೂ ವರ್ಗಗಳಲ್ಲಿಯ ಸ್ವಾರ್ಥಪರರ ಭಾವನೆ ಹಾಗೂ ಧರ್ಮಾಂಧತೆಯ ಪ್ರಯೋಜನ ಪಡೆದು ಗೊಂದಲವುಂಟು ಮಾಡುವ ಯತ್ನದಲ್ಲಿದ್ದಾರೆ. ಕಳೆದ ಎರಡು ವರ್ಷಗಳ ಅವಧಿಯಲ್ಲಿ ನಡೆದ ಗಲಭೆಗಳ ಇತಿಹಾಸ ಅಂಥವರ ಕುತಂತ್ರಗಳ ಪರಿಣಾಮವೆನಿಸಿದೆ. ಧರ್ಮದ ವಿಷಯಗಳನ್ನು ತಿರುಚಿ ಭ್ರಾಮಕ ವಿಚಾರಗಳನ್ನು ಬಿತ್ತಿ ಭಾವನೆಗಳನ್ನು ಉದ್ದೀಪನಗೊಳಿಸಿ ಗೊಂದಲವೆಬ್ಬಿಸಲಾಗುತ್ತಿದೆ. ಸಣ್ಣ ಪುಟ್ಟ ಕ್ಷುಲ್ಲಕ ವಿಷಯಗಳನ್ನೇ ದೊಡ್ಡದನ್ನಾಗಿಸಿ ಧರ್ಮದ ತತ್ವಗಳ ಹೆಸರಿನಲ್ಲಿ ಧರ್ಮಾಂಧರು ಮಾಡುವ ಕಿತಾಪತಿಯನ್ನು ಕಾಳಜಿ ಪೂರ್ವಕ ಗಮನಿಸಿ, ಅಂಥವರ ಕುತಂತ್ರ ಫಲಿಸದಂತೆ ಹೇಗಾದರೂ ನೋಡಿಕೊಳ್ಳಲೇಬೇಕಾಗಿದೆ. ಗಲಭೆಗಳನ್ನು ಪ್ರಚೋದಿಸಲು ಆರ್ಥಿಕ ಹಾಗೂ ರಾಜಕೀಯ ಕಾರಣ, ಉದ್ದೇಶಗಳನ್ನು ಬಳಸಲಾಗುತ್ತಿದೆ. ಕೋಹತದಲ್ಲಿ ಗಲಭೆಯುಂಟಾಗಲು ಇದೇ ಕಾರಣ. ಸ್ಥಳೀಯ ಅಧಿಕಾರಿಗಳ ನಿರ್ಲಿಪ್ತತೆಯಿಂದಾಗಿ ದುರಂತ ಉಲ್ಬಣಗೊಂಡಿತ್ತು. ಕಾರಣಗಳನ್ನು ವಿವರಿಸುತ್ತ ಹೋಗುವುದಾಗಲೀ ದೋಷಾರೋಪಣೆಗಳನ್ನು ಸಂಬಂಧಿಸಿದವರ ತಲೆಗೆ ಕಟ್ಟುತ್ತ ಹೋಗುವುದಾಗಲಿ ನನ್ನ ಉದ್ದೇಶವಿಲ್ಲ ನಾನು ಹೀಗೆ ಮಾಡೋಣವೆಂದುಕೊಂಡರೂ ನನ್ನ ಬಳಿ ಘಟನೆ ಕುರಿತಂತೆ ವಿವರಗಳೇ ಇಲ್ಲ. ಹಿಂದುಗಳು ಪ್ರಾಣ ಭಯದಿಂದ ನಿರಾಶ್ರಿತರಾಗಿ ಅಲ್ಲಿಂದ ಬೇರೆಡೆಗೆ ಗುಳೇ ಹೋಗಬೇಕಾಯಿತೆಂಬುದಿಷ್ಟೇ ಸಾಕು. ಕೋಹತದಲ್ಲಿ ಮುಸಲ್ಮಾನರು ಬಹು ಸಂಖ್ಯಾಕರಾಗಿದ್ದಾರೆ. ಅವರೆಲ್ಲ ಇಲ್ಲಿಯ ವರೆಗೆ ವಿದೇಶೀಯ ಪ್ರಭುತ್ವದಡಿ ಪರಿಣಾಮಕಾರಿಯಾದ ರಾಜಕೀಯ ನಿಯಂತ್ರಣಕ್ಕೆ ಒಳ ಪಟ್ಟವರು. ಇದೇ ಕೋಹತ ಶಹರ ಹಿಂದುಗಳಿಂದ ತುಂಬಿಕೊಂಡಿರುವುದಾದರೆ ಹೇಗಿರಬೇಕೋ ಹಾಗೆ ಪ್ರಚಂಡ ಬಹು ಸಂಖ್ಯಾಕರಾಗಿರುವ

ಮುಸ್ಲಿಮರು ಹಿಂದುಗಳನ್ನು ಸುರಕ್ಷಿತರನ್ನಾಗಿ ಇಡುವ ಹೊಣೆ ಅಥವಾ ಜವಾಬ್ದಾರಿಯುಳ್ಳವರಾಗಿರಬೇಕಾಗುತ್ತದೆ. ಪ್ರತಿಯೊಬ್ಬ ಹಿಂದೂ ನಿರಾಶ್ರಿತರು ಸುರಕ್ಷಿತತೆಯ ಪ್ರಚಾರ ಭರವಸೆಯೊಂದಿಗೆ ಕೋಹತಕ್ಕೆ ಮರಳುವಂತಾಗುವ ತನಕ ಕೋಹತದ ಬಹುಸಂಖ್ಯಾಕರಾದ ಮುಸಲ್ಮಾನರು ವಿರಮಿಸತಕ್ಕದ್ದಲ್ಲ. ಹಿಂದು ನಿರಾಶ್ರಿತರು ಸಹ ಸರಕಾರ ಒಡ್ಡುವ ಬಲೆಗೆ ಸಿಲುಕಿ ಹಾಕಿಕೊಳ್ಳದೇ ತಮ್ಮ ವಿತ್ತ ಜೀವಿತಗಳ ಸುಭದ್ರತೆಗೆ ಕೋಹತದ ಮುಸಲ್ಮಾನರಿಂದ ಸ್ಪಷ್ಟ ಭರವಸೆ ದೊರೆಯುವವರೆಗೂ ಮರಳಕೂಡದು., ಹಿಂದು ಬಹುಸಂಖ್ಯಾಕ ರಾಗಿರುವೆಡೆಗಳಲ್ಲಿ ಅಲ್ಪಸಂಖ್ಯಾಕರಾಗಿರುವ ಮುಸಲ್ಮಾನರು ಗೌರವಯುತವಾಗಿ ಸ್ನೇಹದಿಂದ ಸಮಾನತೆಯಿಂದ ಬಾಳುವಂತಾದರೇನೆ ಮುಸ್ಲಿಂ ಜನಾಧಿಕ್ಯವುಳ್ಳ ಪ್ರದೇಶಗಳಲ್ಲಿ ಹಿಂದುಗಳು ಸುರಕ್ಷಿತರಾಗಿ ಬಾಳಬಹುದು. ಸರಕಾರವು ಜನರಿಗೆ ಕಳ್ಳರಿಂದ, ದರೋಡೆಕೋರರ ದಾಳಿಯಿಂದ ರಕ್ಷಿಸಲು ಕ್ರಮ ತೆಗೆದುಕೊಳ್ಳುತ್ತದೆ. ಆದರೆ ಯಾವುದೇ ಸರಕಾರ, ಸ್ವರಾಜ್ಯದ ಸರಕಾರ ಸಹ ಒಂದು ಸಮಾಜ ಇನ್ನೊಂದನ್ನು ಪೂರ್ಣ ಬಹಿಷ್ಕರಿಸುತ್ತ ನಡೆದರೆ ಅಂಥ ಬಹಿಷ್ಕೃತರಿಗೆ ರಕ್ಷಣೆ ನೀಡಲಾರದು. ಯಾವಾಗಲೋ ಒಮ್ಮೆ ಅಥವಾ ಕೆಲವು ಸಲ ಅಸಾಮಾನ್ಯ ಅಸಹಜ ಪರಿಸ್ಥಿತಿ ಉದ್ಭವಿಸಿದರೆ ಅಂಥದನ್ನು ಎದುರಿಸಿ ಜನರಿಗೆ ರಕ್ಷಣೆ ನೀಡಲು ಸಾಧ್ಯ. ಆದರೆ ಜಗಳ, ತಂಟೆ, ಸಂಘರ್ಷಗಳು ದೈನಂದಿನ ಜೀವನವೇ ಆಗ ಹತ್ತಿದರೆ ಅದು ಯಾದವೀ ಕಲಹದ ಸ್ವರೂಪ ತಾಳುತ್ತದೆ. ಅಂಥ ಪ್ರಸಂಗದಲ್ಲಿ ಸಂಬಂಧಪಟ್ಟ ಗುಂಪುಗಳು ಬಡಿದಾಟದಲ್ಲೇ ತೊಡಗಿಕೊಂಡಿರಬೇಕಾಗುತ್ತದೆ.

ಸದ್ಯ ಸರಕಾರ ವಿದೇಶೀಯ ಸರಕಾರ; ನಿಜವಾಗಿಯೂ ನಾಗರಿಕ ಸರಕಾರವೆಂದು ಹೊರಗೆ ಮಾತ್ರ ತೋರಿಸಿಕೊಳ್ಳುವ ಸೈನಿಕಾಡಳಿತವೇ ಆಗಿರುವ ಅದು ತನ್ನ ಎಲ್ಲ ಸಾಧನ ಸಂಪನ್ಮೂಲಗಳ ಮೂಲಕ ಮನಸ್ಸಿದ್ದರೆ ಇಂಥ ಗಲಭೆಗಳನ್ನು ಹತ್ತಿಕ್ಕುವ ಕ್ರಮ ಕೈಗೊಳ್ಳದಿರಬಹುದು. ಆದರೆ ಸ್ವರಾಜ್ಯದ ಸರಕಾರ ಜನತಾ ಸರಕಾರವೇ ಆಗುವುದರಿಂದ ಇಂತಹ ಗಲಭೆಗಳನ್ನು ತಡೆಯಲು ಯುದ್ಧೋಪಾದಿಯಲ್ಲಿ ಕ್ರಮ ಕೈಕೊಳ್ಳಲು ಸಾಧ್ಯವಿತ್ತು. ಸ್ವರಾಜ್ಯ ಸರಕಾರವು ಹಿಂದುಗಳು, ಮುಸಲ್ಮಾನರ ಹಾಗೂ ಬೇರೆಯವರೆಲ್ಲರ ಸಾಮೂಹಿಕ ಇಚ್ಛೆಯಿಂದ ರಚಿತವಾದುದು ಎಂದರ್ಥ. ಹಿಂದು ಮುಸಲ್ಮಾನರು ಸ್ವರಾಜ್ಯ ಹೊಂದುವ ಇಚ್ಛೆಯಿರುವುದಾದರೆ ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಬೇಕು.

ದಿಲ್ಲಿಯಲ್ಲಿ ಜರುಗಿದ ಐಕ್ಯ ಸಮ್ಮೇಳನವು ಧಾರ್ಮಿಕ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳುವುದಕ್ಕೆ ಮಾರ್ಗ ನಿರ್ಮಿಸಿದೆ. ಸರ್ವ ಪಕ್ಷೀಯ ಪರಿಷತ್ತಿನ ಸಮಿತಿ ಹಿಂದು ಮುಸ್ಲಿಂರಷ್ಟೇ ಅಲ್ಲದೇ ಎಲ್ಲಾ ಜಾತಿ ಧರ್ಮ, ಬಣಗಳ ನಡುವಿನ ರಾಜಕೀಯ ಭಿನ್ನಮತಗಳ ನಿವಾರಣೆಗೆ ಪರಿಹಾರ ಸೂತ್ರ ಕಂಡು ಹಿಡಿಯುವ ನಿರೀಕ್ಷೆಯಿದೆ. ಮತೀಯ ಹಾಗೂ

ಜಣಗಳ ಪ್ರಾತಿನಿಧ್ಯದ ಪ್ರಶ್ನೆಯನ್ನು ಕೂಡಲೇ ಬಗೆಹರಿಸಿಕೊಳ್ಳುವ ಗುರಿ ನಮ್ಮದಾಗಬೇಕು. ಎಲ್ಲ ಮತದಾರರು ಒಟ್ಟಾಗಿ ಅರ್ಹತೆ ಆಧರಿಸಿ ನಿಷ್ಪಕ್ಷಪಾತವಾಗಿ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವಂತಾಗಬೇಕು. ಆದರೆ ಅಷ್ಟರೊಳಗೆಯೇ ಮತೀಯ ದ್ವೇಷ, ಅಥವಾ ಪಕ್ಷಪಾತವೆನ್ನುವುದು ನಿರ್ನಾಮವಾಗಿ ಅದೊಂದು ಗತೇತಿಹಾಸ ಮುಗಿದು ಹೋದಂಥದು ಎನ್ನುವಂತಾಗಬೇಕಾಗಿದೆ. ಬಹುಸಂಖ್ಯಾಕರು ತಮ್ಮನ್ನು ಅಲ್ಪ ಸಂಖ್ಯಾಕರರು ಸಂಶಯ ದೃಷ್ಟಿಯಿಂದ ನೋಡುವದನ್ನು ಸಹಿಸಬೇಕಾಗುತ್ತದೆ. ಬಹು ಸಂಖ್ಯಾಕರು ಸ್ವಾರ್ಥ ತ್ಯಾಗದ ಆದರ್ಶ ಮೆರೆಯಲೇಬೇಕಾಗುತ್ತದೆ.

ಅಸ್ಪೃಶ್ಯತೆ

ಸ್ವರಾಜ್ಯ ಪಡೆಯುವುದಕ್ಕೆ ಇರುವ ಇನ್ನೊಂದು ಆತಂಕವೆಂದರೆ ಅಸ್ಪೃಶ್ಯತೆ. ಹಿಂದು-ಮುಸ್ಲಿಂ ಐಕ್ಯ ಸಾಧಿಸುವಷ್ಟೇ ಅಸ್ಪೃಶ್ಯತೆ ನಿವಾರಣೆ ಸ್ವರಾಜ್ಯದ ಗುರಿ ಸಾಧನೆಗೆ ಅತ್ಯಗತ್ಯ. ಮುಖ್ಯವಾಗಿ ಇದು ಹಿಂದುಗಳ ಸಮಸ್ಯೆ. ಅಸ್ಪೃಶ್ಯರಿಗೆ ದೀನ ದಲಿತರಿಗೆ ಹತ್ತಿಕ್ಕಲ್ಪಟ್ಟ ಶೋಷಿತ ವರ್ಗಕ್ಕೆ ಅವರ ಸ್ವತಂತ್ರ ಜೀವನದ ಹಕ್ಕನ್ನು ಪುನಃ ಒದಗಿಸಿ ಕೊಡುವತನಕ ಸ್ವರಾಜ್ಯ ಪಡೆಯುವ ಹಕ್ಕು ಹೊಂದಲಾರರು. ಆಕ್ರಮಣಕಾರಿಗಳಾಗಿದ್ದ ಆರ್ಯರು ಹಿಂದುಸ್ಥಾನದ ಮೂಲ ನಿವಾಸಿಗಳನ್ನು, ಈಗ ಆಂಗ್ಲ ಆಕ್ರಮಣಕಾರರು ನಮ್ಮನ್ನು ನಡೆಸಿಕೊಳ್ಳುವಂತೆ ಹಾಗೂ ಅದಕ್ಕೂ ಕೆಟ್ಟದಾಗಿ ನಡೆಸಿಕೊಂಡರೆಂದು ಇತಿಹಾಸಕಾರರು ಹೇಳುತ್ತಾರೆ. ಹಿಂದಕ್ಕೆ ನಾವೇ ಹುಟ್ಟು ಹಾಕಿದ ಅಸ್ಪೃಶ್ಯತೆಯೇ ಈಗ ನಮ್ಮ ಗುಲಾಮಗಿರಿಯಲ್ಲಿ ಕಾಣಿಸಿಕೊಂಡಿದೆ. ನಾವು ಅಸ್ಪೃಶ್ಯತೆಯನ್ನು ಎಷ್ಟು ಬೇಗ ನಿವಾರಿಸಿಕೊಳ್ಳುತ್ತೇವೋ ಅಷ್ಟು ನಮಗೆಯೇ ಹಿಂದುಗಳಿಗೆಯೇ ಒಳ್ಳೆಯದು. ಆದರೆ ಪುರೋಹಿತವರ್ಗ ಅಸ್ಪೃಶ್ಯತೆಯನ್ನು ದೈವಾನುದತ್ತವೆನ್ನುತ್ತದೆ. ಹೀಗೆ ಹೇಳುವಲ್ಲಿ ಪುರೋಹಿತವರ್ಗ ತಪ್ಪು ಮಾಡುತ್ತಿದೆ ಎಂದು ನನಗೆ ಖಾತ್ರಿಯೆನಿಸಿದೆ. ದೇವರು ಕೆಲವರನ್ನು ಅಸ್ಪೃಶ್ಯರನ್ನಾಗಿಸಿದ್ದಾನೆಂದರೆ ಅದು ಆ ದೇವರಿಗೆಯೇ ಅಪಮಾನ. ದೇವನಿಂದೆ. ದೇವದ್ರೋಹ. ಕಾಂಗ್ರೆಸ್ಸಿಗರಾಗಿರುವ ಹಿಂದುಗಳು ಆದಷ್ಟು ತ್ವರಿತವಾಗಿ ಈ ಭೇದಕ್ಕೆ ಕೊನೆ ಹೇಳಲೇಬೇಕು. ವೈಕಮ್ ಸತ್ಯಾಗ್ರಹಿಗಳು ಈ ದಿಶೆಯಲ್ಲಿ ನಮಗೆ ದಾರಿ ತೋರಿಸಿದ್ದಾರೆ. ಅವರು ದೃಢತೆಯಿಂದ ಸುಸಂಸ್ಕೃತ ರೀತಿಯಲ್ಲಿ ಹೋರಾಟ ನಡೆಸುತ್ತಿದ್ದಾರೆ. ಅವರಲ್ಲಿ ಆತ್ಮ ವಿಶ್ವಾಸವಿದೆ. ಧೈರ್ಯವಿದೆ. ತಾಳ್ಮೆಯಿದೆ. ಈ ಗುಣಗಳಿರುವ ಯಾವುದೇ ಆಂದೋಲನ ಬಲಾಢ್ಯ ಅಜೇಯವಾದುದು ಹತ್ತಿಕ್ಕಲ್ಪಡಲಾರದಂಥದು.

ರಾಜಕೀಯ ಉದ್ದೇಶಗಳಿಗಾಗಿ ಬಳಸಿಕೊಳ್ಳುವ ಪ್ರವೃತ್ತಿ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವುದರ ಬಗ್ಗೆ ಹಿಂದೂ ಸಹೋದರರನ್ನು ಎಚ್ಚರಿಸಬಯಸುತ್ತೇನೆ. ಸವರ್ಣೀಯ ಹಿಂದುಗಳು ತಮಗೋಸ್ಕರ ಹಿಂದುತ್ವದ ಸಲುವಾಗಿ ಮಾಡಬೇಕಾಗಿರುವ ತಪಸ್ಸೇ ಅಸ್ಪೃಶ್ಯತಾ

ನಿರ್ಮೂಲನ. ನಡೆಯಬೇಕಾದುದು ಅಸ್ಪೃಶ್ಯರ ಶುದ್ಧೀಕರಣವಲ್ಲ. ಸವರ್ಣಿಯರೆಂದುಕೊಳ್ಳುವ ಹಿಂದುಗಳವರದು. ಮೇಲು ಜಾತಿಗಳವರದು. ಅಸ್ಪೃಶ್ಯರಲ್ಲಿ ಯಾವುದೇ ಕಲ್ಮಷವಿಲ್ಲ. ಅವರಿರುವ ಕೊಳೆ ಹಾಗೂ ಅಶುದ್ಧ ಅನಾರೋಗ್ಯಕರ ಬದುಕು ಸಹ ಕಲ್ಮಷವಲ್ಲ. ನಮ್ಮ ಉದ್ಧಟತನ, ಒರಟುತನ, ಸೊಕ್ಕಿನ ನಡವಳಿಕೆ ನಮ್ಮನ್ನು ಕುರುಡರನ್ನಾಗಿಸಿದೆ. ಶ್ರೇಷ್ಠ ಜಾತಿಯವರೆನಿಸುವಂಥ ಹಿಂದುಗಳ ನಿಂದಾತ್ಮಕ ನಡವಳಿಕೆ ದಲಿತ ಸಹೋದರ ಸಹೋದರಿಯರನ್ನು ಅಸ್ಪೃಶ್ಯರು ಹೊಲಸುಮಯ ಎಂದೆಲ್ಲ ರಂಜಿತವಾಗಿ ತೋರಿಸುತ್ತದೆ. ನಾವು ಅವರನ್ನು ಹತ್ತಿಕ್ಕಿದ್ದೇವೆ. ಹತ್ತಿಕ್ಕುತ್ತಲೇ ಇದ್ದೇವೆ. ಧರ್ಮಗಳು ಸಹ ರಾಷ್ಟ್ರಗಳಂತೆ ಏರುಪೇರು ಏಳು ಬೀಳು ಸ್ಥಿತಿಯಲ್ಲಿ ಹೊಯ್ದಾಡುತ್ತವೆ. ಯಾವುದೇ ಒಂದು ಜಾತಿ ಬಣ ಅಥವಾ ದೇಶದ ಸೊತ್ತು ಅಥವಾ ಹಕ್ಕು ದೇವಾನುಗ್ರವಲ್ಲ. ಯಾವುದೇ ವಿಶೇಷ ಜಾತಿಗಷ್ಟೇ ದೇವರು ತನ್ನ ಸಂದೇಶ ನೀಡುವುದಿಲ್ಲ. ಅನ್ಯಾಯ, ಅಸತ್ಯ ಹಾಗೂ ಹಿಂಸೆಯಲ್ಲಿ ವಿಶ್ವಾಸವಿರಿಸುವ ಯಾವುದೇ ಧರ್ಮ ಹಾಗೂ ರಾಷ್ಟ್ರ ಜಗತ್ತಿನ ಮೇಲೆ ಉಳಿಯಲು ಬಾಳಲು ಬೆಳೆಯಲು ಸಾಧ್ಯವೇ ಇಲ್ಲ. ದೇವರೆಂದರೆ ಬೆಳಕು. ಪ್ರಕಾಶ, ಆತ ಕತ್ತಲೆಯಲ್ಲ. ದೇವರೆಂದರೆ ಪ್ರೀತಿ, ಪ್ರೇಮ, ವಿಶ್ವಾಸ. ದ್ವೇಷ ಮತ್ಸರ ನಿಂದೆಯಲ್ಲ. ದೇವರೆಂದರೆ ಸತ್ಯ. ಅಸತ್ಯ ಮಿಥ್ಯೆಯಲ್ಲ. ದೇವರೊಬ್ಬನೆ ದೊಡ್ಡವ ಆತನ ಸೃಷ್ಟಿಯಾಗಿರುವ ನಾವೆಲ್ಲ ಧೂಳಿ ಕಣ ಮಾತ್ರ. ನಾವು ವಿನೀತರಾಗೋಣ. ಆ ದೇವನ ಕಿರಿಯವಿಗಳಲ್ಲಿ ಕಿರಿಯದಾದ ಅತ್ಯಂತ ಕ್ಷುಲ್ಲಕವಾದ ಜೀವಿಗಳನ್ನು ಗುರುತಿಸಿ ಪ್ರೀತಿಸೋಣ. ಹರಕು ಚಿಂದೆ ಬಟ್ಟೆ ತೊಟ್ಟ ದಟ್ಟ ದರಿದ್ರನಾದ ಸುದಾಮನನ್ನು ಕೃಷ್ಣ ಗೌರವಿಸಿದ್ದು ಪೂಜಿಸಿದ್ದು. ಪ್ರೇಮ ಹಾಗೂ ತ್ಯಾಗದಲ್ಲೇ. ಧರ್ಮದ ಬೇರಿದೆ. ಈ ನಾಶವಂತ ದೇಹ, ಶರೀರದಲ್ಲಿ ಸ್ವಾರ್ಥ ಹಾಗೂ ಅಧರ್ಮ ನೆಲೆಯೂರಿದೆ ಎಂದು ತುಳಸೀದಾಸರು ಹೇಳುತ್ತಾರೆ. ಸ್ವರಾಜ್ಯವನ್ನು ನಾವು ಗೆದ್ದುಕೊಳ್ಳುತ್ತೇವೋ, ಇಲ್ಲವೋ ತಿಳಿಯದು ಆದರೆ ವೇದಜ್ಞರ ಪುನರುತ್ಥಾನ ಹಾಗೂ ಸತ್ಯದಿಂದ ಬದುಕಿ ಬಾಳಲು ಹಿಂದುಗಳು ಮೊಟ್ಟ ಮೊದಲು ತಾವು ಪರಿಶುದ್ಧರಾಗಬೇಕಾಗಿದೆ.

ಸ್ವರಾಜ್ಯದ ಯೋಜನೆ

ಆದರೆ ಚರಖಾ, ಹಿಂದು - ಮುಸ್ಲಿಂ ಏಕತೆ ಹಾಗೂ ಅಸ್ಪೃಶ್ಯತೆಯ ನಿರ್ಮೂಲನೆ ಇವುಗಳು ಗುರಿ ಸಾಧನೆಯ ಸಾಧನಗಳು. ನಮ್ಮ ಗುರಿಯೇನೆಂಬುದನ್ನೇ ನಾವು ತಿಳಿದಿರುವುದಿಲ್ಲ. ನನ್ನ ಮಟ್ಟಿಗೆ ಸಾಧನಗಳನ್ನು ಹಾಗೂ ಮಾರ್ಗವನ್ನು ತಿಳಿದುಕೊಂಡರಷ್ಟೇ ಸಾಕು. ಬಾಬೂ ಭಗವಾನದಾಸರು ಸಾರ್ವತ್ರಿಕವಾಗಿ ಪ್ರತಿಪಾದಿಸಿದಂತೆಯೇ ಗುರಿಯನ್ನು ಅರಿತುಕೊಳ್ಳುವುದು ಅತ್ಯಂತ ಮಹತ್ವದ್ದು. ಗುರಿಯನ್ನು ಸಂಕ್ಷಿಪ್ತವಾಗಿ ಗಮನಕ್ಕೆ ತಂದುಕೊಂಡಿರಬೇಕೆಂಬ ಅವರ ವಿಚಾರಕ್ಕೆ ನನ್ನನ್ನು ಪರಿವರ್ತಿಸಿಕೊಂಡಿದ್ದೇನೆ. ಜನ ಮೊದಲಿಗೆ ಸ್ವರಾಜ್ಯದ ಪೂರ್ಣ ವ್ಯಾಖ್ಯೆಯನ್ನು ಅರಿತುಕೊಳ್ಳತಕ್ಕದ್ದು. ಅಂದರೆ ಭಾರತದಲ್ಲಿ

ಎಲ್ಲರೂ ಬಯಸುವ ಸ್ವರಾಜ್ಯದ ಗುರಿ ಸಾಧನೆಯ ಯೋಜನೆ ಹಾಗೂ ಅದಕ್ಕಾಗಿ ನಡೆಸಬೇಕಾದ ಹೋರಾಟ ಇವುಗಳನ್ನು ಅರಿತುಕೊಳ್ಳಲೇಬೇಕು. ಸರ್ವ ಪಕ್ಷೀಯ ಸಮಿತಿಗೆ ಈ ಕೆಲಸ ವಹಿಸಲಾಗಿದೆ. ಅದು ಎಲ್ಲರಿಗೂ ಸಮ್ಮತವಾದ ಯೋಜನೆಯೊಂದನ್ನು ಸಿದ್ಧಪಡಿಸಲಿದೆ. ನಾನು ಸರ್ವರ ಪರಾಮರ್ಶೆಗೋಸ್ಕರ ಸ್ವರಾಜ್ಯ ಯೋಜನೆಗೆ ನನ್ನ ಕೆಲ ಸಲಹೆಗಳನ್ನು ಮುಂದಿಡಬಯಸುತ್ತೇನೆ.

1. <u>ಮತದಾರನಾಗುವುದಕ್ಕೆ ಅರ್ಹತೆ:</u> ಆತ ಹೊಂದಿರುವ ಆಸ್ತಿ ಪಾಸ್ತಿ ಅಥವಾ ಹುದ್ದೆ ಅಧಿಕಾರವಾಗಿರದೇ ಕಾಂಗ್ರೆಸ್ ಸಂಸ್ಥೆಯಲ್ಲಿ ಮತದಾರನಾಗುವುದಕ್ಕೆ ವಿಧಿಸಲಾದ ಸದಸ್ಯನ ದೈಹಿಕ ಪರಿಶ್ರಮದ ಕೆಲಸವೆಂದಿರಬೇಕು. ಸಾಕ್ಷರತೆ ಅಥವಾ ಆಸ್ತಿಪಾಸ್ತಿಗಳ ಹೊಂದುವಿಕೆ ಕುರಿತು ಅರ್ಹತಾ ಕ್ರಮ ನಿರರ್ಥಕವೆಂದು ಸಿದ್ಧವಾಗಿ ಹೋಗಿದೆ. ದೈಹಿಕ ಪರಿಶ್ರಮ ಅಥವಾ ಕೆಲಸವಂತಿಕೆಯ ಅರ್ಹತಾ ಮಾಪನವು ಸರಕಾರದ ಸಂಚಲನೆ ಹಾಗೂ ದೇಶದ ಕಲ್ಯಾಣ ಕಾರ್ಯದಲ್ಲಿ ಎಲ್ಲರಿಗೂ ಭಾಗವಹಿಸುವ ಅವಕಾಶ ನೀಡುತ್ತದೆ.

2. ಸರ್ವನಾಶಕಾರಕವಾದ ಸೈನಿಕ ವೆಚ್ಚವನ್ನು ಕಡಿಮೆಗೊಳಿಸಬೇಕು. ಸಾಮಾನ್ಯ ದಿನಗಳಲ್ಲಿ ಜನತೆಯ ವಿತ್ತ ಜೀವಿತಗಳ ರಕ್ಷಣೆಗೆ ಅವಶ್ಯವಾಗಿರುವಷ್ಟರ ಮಟ್ಟಕ್ಕೆ ಈ ವೆಚ್ಚವನ್ನು ನಿಯಂತ್ರಿಸತಕ್ಕದ್ದು.

3. ನ್ಯಾಯ ವಿಚಾರಣೆ ಹಾಗೂ ನ್ಯಾಯದಾನ ಕಡಿಮೆ ವೆಚ್ಚದ್ದಾಗುವಂತೆ ಕ್ರಮ ಕೈಗೊಳ್ಳುವುದು ಅತ್ಯಗತ್ಯ. ಮೇಲ್ಮನವಿ ಅರ್ಜಿಗಳನ್ನು (ಅಪೀಲುಗಳನ್ನು) ವಿಚಾರಣೆ ಮಾಡಿ ಅಂತಿಮ ತೀರ್ಪು ಸಾರುವ ವರಿಷ್ಠ ಅಥವಾ ಸರ್ವೋಚ್ಚ ನ್ಯಾಯಾಲಯವು ಲಂಡನ್ನಿನಲ್ಲಿರದೇ ದಿಲ್ಲಿಯಲ್ಲಿ ಇರತಕ್ಕದ್ದು. ಭ್ರಷ್ಟಾಚಾರ ಹಾಗೂ ಕಾಯ್ದೆಗಳ ತಪ್ಪು ಅನ್ವಯದ ಪ್ರಕರಣಗಳನ್ನು ಹೊರತು ಪಡಿಸಿ ಎಲ್ಲ ಬಹಳಷ್ಟು ಪ್ರಮಾಣದ ದಿವಾಣಿ ಪ್ರಕರಣಗಳ ಇತ್ಯರ್ಥವನ್ನು ಮಧ್ಯಸ್ಥಿಕೆ ಮೂಲಕ ಹಾಗೂ ಪಂಚಾಯತಿಗಳ ಮೂಲಕ ಅಂತಿಮಗೊಳಿಸುವ ನ್ಯಾಯದಾನ ಪದ್ಧತಿ ಜಾರಿಗೆ ಬರಬೇಕು. ಹಲವಾರು ನ್ಯಾಯಾಲಯಗಳಲ್ಲಿ ಪ್ರಕರಣಗಳು ಮೇಲ್ಮನವಿಗಳ ಮೂಲಕ ಸಾಗ ಹಾಕಲ್ಪಟ್ಟಿವೆ. ಅಂತಿಮ ನಿರ್ಣಯವಾಗುವಂಥ ಬಹು ನ್ಯಾಯಾಲಯಗಳ ಪದ್ಧತಿ ತೆಗೆದುಹಾಕಿ ನ್ಯಾಯದಾನ ಪದ್ಧತಿಯನ್ನು ಸುಲಭಗೊಳಿಸತಕ್ಕದ್ದು. ನಾವು ಅತ್ಯಂತ ಗೊಂದಲಮಯವಾದ ಸಂಕೀರ್ಣವಾದ ಇಂಗ್ಲೀಷ ನ್ಯಾಯದಾನ ಪದ್ಧತಿ ಅನುಸರಿಸುತ್ತಲಿದ್ದೇವೆ. ವಸಾಹತು ಪ್ರದೇಶಗಳಲ್ಲಿ ನ್ಯಾಯದಾನ ಕ್ರಮಗಳನ್ನು ಸುಲಭಗೊಳಿಸಿ ನ್ಯಾಯ ಅಪೇಕ್ಷಿಸಿ ನ್ಯಾಯಾಲಯದ ಮೊರೆ ಹೊಕ್ಕಿರುವಂಥವರಿಗೆ ತಮ್ಮ ವಾದವನ್ನು ಸ್ವತಃ ತಾವೇ ಮಂಡಿಸುವಂತಾಗತಕ್ಕದ್ದು.

4. ಜನರಿಗೆ ಮಾದಕ ವಸ್ತುಗಳ ಚಟ ಹತ್ತಿಸಿ ಅಂಥ ವಸ್ತುಗಳ ಮಾರಾಟದ ಮೂಲಕ ಸರಕಾರದ ಬೊಕ್ಕಸ ತುಂಬುವ ಪದ್ಧತಿ ನಿರ್ಮೂಲನ ಅತ್ಯಗತ್ಯ

5. ದೇಶದ ಸಾಮಾನ್ಯ ಜನತೆಯ ಬದುಕಿಗೆ ಸರಿ ಹೊಂದುವ ರೀತಿಯಲ್ಲಿ ನಾಗರಿಕ ಹಾಗೂ ಸೈನಿಕ ಸೇವೆಯಲ್ಲಿರುವವರ ಸಂಬಳ ಸವಲತ್ತುಗಳನ್ನು ಕನಿಷ್ಟ ಮಿತಿಗೆ ಇಳಿಸತಕ್ಕದ್ದು.

6. ಭಾಷಾವಾರು ಪದ್ಧತಿಯ ಮೇಲೆ ಪ್ರಾಂತಗಳ ಪುನರ್ವಿಂಗಡಣೆ ಮಾಡಿ ಎಲ್ಲ ಪ್ರಾಂತಗಳಿಗೆ ಆಂತರಿಕ ಆಡಳಿತ ನಡೆಸಿಕೊಂಡು ಪ್ರಗತಿ ಹೊಂದಲು ಸಾಧ್ಯವಾಗುವಂತೆ ಸ್ವಾಯತ್ತತೆ ನೀಡಲ್ಪಡತಕ್ಕದ್ದು.

7. ವಿದೇಶೀಯರಿಗೆ ನೀಡಲಾದ ಸ್ವಾಯತ್ತಾಧಿಕಾರಿಗಳ ಪುನರ್ಪರಿಶೀಲನೆಗೆ ಆಯೋಗ ನೇಮಿಸಿ ಆ ಆಯೋಗದ ಶಿಫಾರಸುಗಳನ್ವಯ ಸಂಬಂಧಪಟ್ಟ ಸ್ಥಳೀಯರಿಗೆ ಸ್ಥಳೀಯ ಸಂಘಟನೆಗಳ ಹಿತ ಹಾಗೂ ವಿಕಾಸ ಸಾಧ್ಯವಾಗುವಂತೆ ಮಾಡತಕ್ಕದ್ದು.

8. ಕೇಂದ್ರ ಸರಕಾರದ ಅಧೀನಕ್ಕೊಳಪಡುವ ಹಕ್ಕಿಗೆ ಸಂಬಂಧಪಟ್ಟಂತೆ ಪ್ರಾಂತಗಳ ಹಾಗೂ ಸಂಸ್ಥಾನಗಳ ಮುಖ್ಯಸ್ಥರಿಗೆ, ನರೇಶರಿಗೆ ದಂಡ ಸಂಹಿತೆಗನುಗುಣವಾದ ಅಪರಾಧಗಳ ವಿಚಾರಣೆ, ಇತ್ಯರ್ಥವನ್ನುಳಿದು ಬೇರೆಲ್ಲ ವಿಷಯಗಳಲ್ಲಿ ಯಾವುದೇ ಅಡೆತಡೆಗಳಿಲ್ಲದ ಸ್ವಯಂಮಾಡಳಿತದ ಅಧಿಕಾರವು ಸ್ವತಂತ್ರ ಭಾರತದಲ್ಲಿ ನೀಡಲ್ಪಡತಕ್ಕದ್ದು.

9. ಎಲ್ಲ ಮಧ್ಯಸ್ಥಿಕೆ ಅಧಿಕಾರಗಳನ್ನು ತೆಗೆದುಹಾಕಬೇಕಾಗುವುದು.

10. ಭಾರತದೊಳಗಿನ ಎಲ್ಲ ನಾಗರಿಕ ಹಾಗೂ ಸೈನಿಕ ಸೇವಾಧಿಕಾರಗಳಿಗೆ ಪರೀಕ್ಷೆಗಳಲ್ಲಿ ಉತ್ತೀರ್ಣತೆ ಹಾಗೂ ಕಾರ್ಯ ನಿರ್ವಹಣೆಯ ಅರ್ಹತೆ ಸಂಪಾದಿಸಿದವರಿಗೆ ಎಲ್ಲ ಉನ್ನತ ಹುದ್ದೆಗಳಲ್ಲಿಯ ನೇಮಕ ಮುಕ್ತವಾಗಿರತಕ್ಕದ್ದು.

11. ಪರಸ್ಪರ ತಾಳ್ಮೆ, ಸಹನೆ, ಸಹಕಾರ ಸಹಬಾಳುವೆಗೆ ಒಳಪಟ್ಟು ಎಲ್ಲರಿಗೂ ಧಾರ್ಮಿಕ ಸ್ವಾತಂತ್ರ್ಯವಿರಬೇಕು.

12. ಪ್ರಾಂತೀಯ ಸರಕಾರಗಳ ಆಡಳಿತ, ವಿಧಾನ ಮಂಡಳ, ನ್ಯಾಯಾಲಯ ಇವುಗಳಲ್ಲಿ ನಿಗದಿತ ಅವಧಿಯೊಳಗೆಯೇ ಆಡಳಿತ ಮಾಧ್ಯಮದ ಭಾಷೆ ಅಲ್ಲಿಯ ಸ್ಥಳೀಯರ ಭಾಷೆಗಳೇ ಆಗಿರಬೇಕು. ಪ್ರಿವ್ಹಿ ಕೌನ್ಸಿಲ್ ಹಾಗೂ ಅಂತಿಮ ಸರ್ವೋಚ್ಚ ನ್ಯಾಯಾಲಯದಲ್ಲಿ ಹಿಂದುಸ್ಥಾನಿಯೇ ವಿಚಾರಣೆ ಹಾಗೂ ತೀರ್ಪಿನ ಮಾಧ್ಯಮವಿರತಕ್ಕದ್ದು.

ಹಿಂದುಸ್ತಾನೀ ಭಾಷಾ ಮಾಧ್ಯಮದ ಕಲಾಪಗಳು ದೇವನಾಗರೀ ಇಲ್ಲವೇ ಪರ್ಶಿಯನ್ ಮಾಧ್ಯಮದಲ್ಲಿ ಬರೆಯಲ್ಪಡಬೇಕು. ಕೇಂದ್ರ ಸರಕಾರ ಹಾಗೂ ಸಂಸತ್ತಿನ ಕಲಾಪಗಳು ಹಿಂದುಸ್ತಾನಿಯಲ್ಲಿ ಬರೆಯಲ್ಪಡತಕ್ಕದ್ದು. ಅಂತಾರಾಷ್ಟ್ರೀಯ ಅಥವಾ ಬೇರೆ ಬೇರೆ ರಾಷ್ಟ್ರಗಳೊಂದಿಗಿನ ವ್ಯವಹಾರ ಇಂಗ್ಲೀಷಿನಲ್ಲಿ ಇರತಕ್ಕದ್ದು.

ಸ್ವರಾಜ್ಯದ ಕೆಲವು ಅಗತ್ಯತೆಗಳನ್ನು ನಾನು ಈ ಯೋಜನೆಯಲ್ಲಿ ತುಂಬಾ ವಿವರವಾಗಿ ಮುಂದಿರಿಸಿರುವುದನ್ನು ನೋಡಿ ನೀವು ನಗಲಿಕ್ಕಿಲ್ಲವೆಂದು ನಂಬುತ್ತೇನೆ. ಇಷ್ಟೆಲ್ಲ ಪಡೆದುಕೊಳ್ಳಲು ಅಥವಾ ಸಾಧನೆಗೈಯಲು ನಾನು ಈಗ ಶಕ್ತರಾಗಿರಲಿಕ್ಕಿಲ್ಲ. ಇಚ್ಛಾ ಶಕ್ತಿಯೊಂದು ಪ್ರಬಲವಾದುದಾದರೆ ನಾವು ಸಾಧಿಸಬಹುದು. ಅಂಥ ಪ್ರಬಲ ಇಚ್ಛೆಯನ್ನು ಬೆಳೆಸಿಕೊಳ್ಳೋಣ. ಅತ್ಯಾಕರ್ಷಕ ಆದರೆ ಊಹಾತ್ಮಕವಾದ ಈ ಯೋಜನೆಯನ್ನು ಸ್ವರಾಜ್ಯ ಯೋಜನೆ ರೂಪಿಸುವ ಸಮಿತಿಯ ಮುಂದಿರಿಸುತ್ತೇನೆ. ಸಮಿತಿಯು ತನ್ನ ತೀವ್ರ ಗಮನ ಹರಿಸಿ ಈ ಸಲಹೆಗಳನ್ನು ಸೇರ್ಪಡೆ ಮಾಡಿಕೊಳ್ಳುವಷ್ಟು ಮಹತ್ವ ಪಡೆಯಲೆಂದು ನಾನು ನನ್ನ ಅಧ್ಯಕ್ಷೀಯ ಭಾಷಣದಲ್ಲಿ ಮುಂದಿರಿಸಿದ್ದೇನೆ.

ಸ್ವಾತಂತ್ರ್ಯ

ನನ್ನ ಯೋಜನೆ ಬ್ರಿಟಿಷರೊಡನೆ ನಮ್ಮ ಗೌರವಯುತ ಸಂಬಂಧಗಳನ್ನು ಮುಂದುವರಿಸಿಕೊಂಡು ಹೋಗುವುದನ್ನು ಒಳಗೊಂಡಿದೆ. ಆದರೆ ಕೆಲವು ಕಾಂಗ್ರೆಸ್ಸಿಗರು ಸಂಪೂರ್ಣ ಸ್ವರಾಜ್ಯವನ್ನು ಪಡೆದುಕೊಳ್ಳಲು ತೀವ್ರ ಆಸಕ್ತರಿದ್ದಾರೆಂಬುದು ನನಗೆ ಗೊತ್ತು. ಬ್ರಿಟಿಶರೊಡನೆ ಸಹಭಾಗಿತ್ವ ಸಮಾನತೆಯಿಂದ ಮುಂದುವರಿಯುವುದೂ ಅವರಿಗೆ ಬೇಕಿಲ್ಲ. ಆದರೆ ಬ್ರಿಟಿಷ ಸರಕಾರ ಅವರ ಭಾವನೆಗಳನ್ನು ಅರ್ಥ ಮಾಡಿಕೊಂಡು ಭಾರತೀಯರಿಗೆ ಪ್ರಾಮಾಣಿಕವಾಗಿ ಸಮಾನತೆ ಹಾಗೂ ಗೌರವವನ್ನು ಹೊಂದಿರುವ ಅವಕಾಶ ನೀಡಿದರೆ ಬ್ರಿಟಿಶರ ಸಂಬಂಧಗಳನ್ನು ನಾವು ಕಡಿದುಕೊಳ್ಳುವುದಕ್ಕಿಂತ ಒಳ್ಳೆಯದೆಂಬುದು ನನ್ನ ಅಭಿಮತ. ಆದ್ದರಿಂದ ಬ್ರಿಟಿಶ ಸಾಮ್ರಾಜ್ಯಾತಂರ್ಗತವಾದ ಸ್ವರಾಜ್ಯಕ್ಕೆ ನಾನು ಪ್ರಯತ್ನಿಸುವವನು. ಆದರೆ ಬ್ರಿಟಿಷರದೇ ಪ್ರಮಾದದಿಂದಾಗಿ ನಮಗೆ ಅವರ ಎಲ್ಲ ಸಂಬಂಧ ಕಡಿದುಕೊಳ್ಳಲೇಬೇಕಾದ ಸಂದರ್ಭವೊದಗುವುದಾದರೆ ನಾನು ಎಲ್ಲ ಬಗೆಯ ಹೋರಾಟಕ್ಕೆ ಸಿದ್ಧನಾಗಲು ಹಿಂಜರಿಯುವುದಿಲ್ಲ. ಹೀಗೆ ಬ್ರಿಟಿಶರಿಂದ ಭಾರತೀಯರು ಭಿನ್ನವಾಗುವಿಕೆಯ, ಪ್ರತ್ಯೇಕಗೊಳ್ಳುವುದರ ಜವಾಬ್ದಾರಿಯನ್ನು ಬ್ರಿಟಿಷರ ತಲೆಗೆ ಕಟ್ಟುತ್ತಿದ್ದೇನೆ. ಜಗತ್ತು ಈಗ ಪರಸ್ಪರ ಹೋರಾಟ ಸಂಘರ್ಷಕ್ಕೆಳೆಸುವ ಸ್ವತಂತ್ರ ರಾಷ್ಟ್ರಗಳನ್ನು ಬಯಸದೇ ಒಂದು ರಾಷ್ಟ್ರ ರಾಜ್ಯ ಅಥವಾ ಪ್ರದೇಶ ಬೇರೊಂದರ ಮೇಲೆ ಸಂಘರ್ಷಕ್ಕೆಳೆಸದಂತೆ ಹಾಗೂ ಎಲ್ಲ ರಾಜ್ಯಗಳೂ ಪರಸ್ಪರ ಸ್ನೇಹ ಸೌಹಾರ್ದಯುತವಾಗಿ ಪರಸ್ಪರ ಅವಲಂಬಿತರಾಗಿ

ಸೌಹಾರ್ದಯುತ ಜೀವನ ನಡೆಸುವಂಥ ಫೆಡರೇಶನ್ ಅಥವಾ ಒಕ್ಕೂಟ ವ್ಯವಸ್ಥೆ ಬಯಸುತ್ತಿದೆ. ಅಂಥ ದಿನಗಳು ಇನ್ನು ದೂರವಿಲ್ಲ. ನಾನು ನನ್ನ ರಾಷ್ಟ್ರದ ಬಗ್ಗೆ ಪ್ರತ್ಯೇಕಗೊಳ್ಳುವುದನ್ನು ಪ್ರತಿಪಾದಿಸುತ್ತಿಲ್ಲ. ಸ್ವಾತಂತ್ರ್ಯಕ್ಕಾಗಿ ಎಲ್ಲ ರಾಷ್ಟ್ರಗಳೂ ಪರಸ್ಪರ ಜಾಗತಿಕವಾಗಿ ಸ್ನೇಹ ಸಹಕಾರ. ಪರಸ್ಪರಾವಲಂಬನದಿಂದ ಬಾಳುವುದನ್ನು ನಾನು ಸ್ವಾಗತಿಸುತ್ತೇನೆ. ಸ್ವಾತಂತ್ರ್ಯಕ್ಕಾಗಿ ಪಟ್ಟು ಹಿಡಿಯದೇ ಪೂರ್ಣ ಸ್ವತಂತ್ರವಾಗಿ ಭಾರತ ಬಾಳಬೇಕೆಂದು ನಾನು ಬಯಸುತ್ತೇನೆ. ಭಾರತ ಇಂಥ ಸಂಬಂಧ ಹೊಂದುವುದೂ, ಬಿಡುವುದೂ ಬ್ರಿಟನ್ನಿನ ಕೈಯಲ್ಲಿದೆ. ಭಾರತವು ಬ್ರಿಟಿಶ ಸಾಮ್ರಾಜ್ಯದೊಡನೆ ಸಮಾನತೆಯಿಂದ ಬಾಳುವಂಥ ಗುರಿಯನ್ನು ಬ್ರಿಟನ್ನು ಘೋಷಿಸಲಿ. ಭಾರತದ ಜೊತೆ ಉತ್ತಮ ಸ್ನೇಹಯುತ ಸಂಬಂಧ ಹೊಂದಿರುವಂಥ ಸಾಮ್ರಾಜ್ಯಾಂತಾರ್ಗ ಹೊಂದಾಣಿಕೆಯನ್ನು ಬಯಸುತ್ತೇನೆ. ಬ್ರಿಟನ್ ಅಂಥ ಯಾವುದೇ ಯೋಜನೆ ರೂಪಿಸಿದರೂ ಅದು ಸ್ವಾಗತಾರ್ಹ. ನನಗದು ಒಪ್ಪಿತ. ಇಂಥ ಹೊಂದಾಣಿಕೆಯಿಲ್ಲದ ಸಂಪೂರ್ಣ ಸ್ವಾತಂತ್ರ್ಯಕ್ಕೆ ನಾನು ಒತ್ತಾಯಿಸುತ್ತಿಲ್ಲ. ನಾನು ಪ್ರತಿಯೊಬ್ಬ ಕಾಂಗ್ರೆಸ್ಸಿಗನಿಗೂ ಸಂಪೂರ್ಣ ಸ್ವಾತಂತ್ರ್ಯಕ್ಕೆ ಪಟ್ಟು ಹಿಡಿಯದೇ ಬ್ರಿಟನ್ನು ತನ್ನ ಆಳ್ವಿಕೆ ಮನೋಭಾವ ತೊರೆವ ಘೋಷಣೆ ಮಾಡಲೆನ್ನಬೇಕು.

ಸ್ವರಾಜ್ಯ ಪಕ್ಷ

ಸ್ವರಾಜ್ಯ ಪಕ್ಷದೊಂದಿಗೆ ಆಗಿರುವ ಒಡಂಬಡಿಕೆಯ ಅಂಶಗಳನ್ನು ಗಮನಿಸುತ್ತಿರುವಂತೆ ಹಾಗೂ ಅದರಿಂದ ಎದ್ದಿರುವ ಸಮಸ್ಯೆಗಳನ್ನು ನಾನು ಯೋಚಿಸಿರುವಂತೆ ಕಾಂಗ್ರೆಸ್ ಪಕ್ಷದಲ್ಲಿ ಸ್ವರಾಜ್ಯ ಪಕ್ಷಕ್ಕೆ ಸಮಾನತೆಯ ಸ್ಥಾನ ನೀಡಿರುವದರ ಬಗ್ಗೆ ಹೆಚ್ಚಿಗೇನನ್ನೂ ಹೇಳುವ ಆಗತ್ಯವಿಲ್ಲ. ವಿಧಾನ ಮಂಡಳದಲ್ಲಿ ಪ್ರವೇಶ ಕುರಿತಂತೆ ಸ್ವರಾಜ್ಯ ಪಕ್ಷದ ವಿಚಾರಗಳನ್ನು ನಾನು ಒಪ್ಪುತ್ತಿಲ್ಲವೆಂಬ ಕಾರಣಕ್ಕಾಗಿಯಲ್ಲದೇ ಸ್ವರಾಜ್ಯಪಕ್ಷ ಯೋಗ್ಯವಾದುದಲ್ಲ ಎಂಬ ಕಾರಣಕ್ಕಾಗಿ ನಾನು ಏನನ್ನೂ ಹೇಳದೇ ಸುಮ್ಮನಿರಬಯಸುತ್ತಿಲ್ಲ. ಆದರೆ ಕಾಂಗ್ರೆಸ್ಸಿನೊಳಗೆ ಇದ್ದುಕೊಂಡು ನಾಯಕತ್ವ ವಹಿಸುವುದಾದಲ್ಲಿ ನಾನು ವಸ್ತುಸ್ಥಿತಿಯನ್ನು ಇದ್ದಕ್ಕಿದ್ದಂತೆಯೇ ಒಪ್ಪಿಕೊಳ್ಳಲೇಬೇಕಾಗುತ್ತದೆ. ಕಾಂಗ್ರೆಸ್ಸಿನಿಂದ ಹೊರಗೆ ಹೋಗುವುದು ಅಥವಾ ಪಕ್ಷದ ಅಧ್ಯಕ್ಷಸ್ಥಾನ ನಿರಾಕರಿಸುವುದು ನನಗೆ ಸುಲಭವಿತ್ತು. ಆದರೆ ದೇಶದ ಹಿತದ ದೃಷ್ಟಿಯಿಂದ ಹಾಗೆ ಮಾಡುವುದು ಬೇಡವೆಂದೇ ಬಿಟ್ಟುಬಿಟ್ಟೆ. ಕಾಂಗ್ರೆಸ್ಸಿನಲ್ಲಿ ಸ್ವರಾಜ್ಯ ಪಕ್ಷ ಬಹುಮತ ಹೊಂದದೇ ಹೋದರೂ, ಬಲಿಷ್ಠ ಹಾಗೂ ಬೆಳೆಯುತ್ತಿರುವ ಅಲ್ಪಸಂಖ್ಯಾಕ ಗುಂಪಾಗಿದೆ. ಇದೊಂದು ನಿಲುವಿನ ಮೇಲೆ ಕಾಂಗ್ರೆಸ್ಸನ್ನು ಒಡೆಯದೇ ಒಂದಾಗಿರುವಂತೆ ಮಾಡಬೇಕೆಂದರೆ ನನ್ನ ಆತ್ಮಸಾಕ್ಷಿಯೊಂದಿಗೆ ಅವರಿಂದ ಸಂಘರ್ಷ ಉಂಟಾಗದಿರುವ ತನಕ ವಸ್ತುಸ್ಥಿತಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದೊಂದೇ ನನಗೆ ಪರ್ಯಾಯ

ವೆನಿಸಿದೆ. ನನ್ನ ಅಭಿಪ್ರಾಯದಲ್ಲಿ ಅವರ ನಿಲುಮೆ ಅಯೋಗ್ಯ ಅಥವಾ ಅತಾರ್ಕಿಕವೇನಲ್ಲ. ಸ್ವರಾಜ್ಯ ಪಕ್ಷದವರು ತನ್ನ ಧೋರಣೆಯ ಸಮರ್ಥನೆಗೆ ಕಾಂಗ್ರೆಸ್ಸಿನ ಹೆಸರನ್ನು ಬಳಸಿಕೊಳ್ಳಬಯಸುತ್ತಾರೆ. ಅವರ ನಿಲುಮೆಗೆ ಸಂಪೂರ್ಣ ಬದ್ಧವಾಗಿರಲೂಕೂಡದು ಅಥವಾ ಬದಲಾವಣೆ ಬಯಸದ ಗುಂಪಿನವರಿಂದ ಬದ್ಧತೆಯೂ ದೊರೆಯಬೇಕೆಂಬ ರೀತಿಯಲ್ಲಿ ಸೂತ್ರವೊಂದನ್ನು ಕಂಡು ಹಿಡಿಯಬೇಕಾಯಿತು. ಅವರ ಧೋರಣೆಯ ಅನುಷ್ಠಾನಕ್ಕಾಗಿ ಅವರಿಗೆ ಅಧಿಕಾರ ಹೊಣೆಗಾರಿಕೆಯನ್ನು ಕಾಂಗ್ರೆಸಿನಲ್ಲಿ ನೀಡಬೇಕಾಯಿತು. ಕಾಂಗ್ರೆಸ್ಸು ಇಡಿಯಾಗಿ ಎಲ್ಲ ಹೊಣೆ ಹೊತ್ತುಕೊಂಡು ಅವರ ಧೋರಣೆಯ ಕಾರ್ಯಾಚರಣೆಗೆ ಮುಂದಾಗುತ್ತಿಲ್ಲ. ನಾನೇ ಆ ಹೊಣೆಯನ್ನು ಹೊತ್ತುಕೊಳ್ಳುತ್ತಿಲ್ಲವೆಂದ ಬಳಿಕ ಬದಲಾವಣೆ ವಿರೋಧಿಗಳು ಅಂಥ ಹೊಣೆ ಹೊತ್ತುಕೊಳ್ಳಲಾರರು. ಅವರ ಧೋರಣೆ ರೂಪುಗೊಳ್ಳುವುದಕ್ಕೆ ನಾನು ಸಹಭಾಗಿಯಲ್ಲ. ನಾನು ಅದರಲ್ಲಿ ಪೂರ್ಣ ಮನಸ್ಸು ತೊಡಗಿಸದೇ ಧೋರಣೆ ರೂಪಿಸಲು ಸಹ ಸಾಧ್ಯವಿಲ್ಲ. ಯಾವುದೊಂದರಲ್ಲಿ ದೃಢನಂಬಿಕೆಯುಂಟಾದಾಗಲೇ ಮನಸ್ಸುಗೊಟ್ಟು ಕಾರ್ಯ ಮಾಡಲು ಸಾಧ್ಯವಾದೀತು. ಸ್ವರಾಜ್ಯ ಪಕ್ಷವು ವಿಧಾನ ಮಂಡಳ ಪ್ರವೇಶದ ತನ್ನ ಧೋರಣೆಗೆ ಸಮರ್ಥಿಸಿಕೊಳ್ಳಲು ಕಾಂಗ್ರೆಸ್ಸನ್ನು ಬಳಸಿಕೊಳ್ಳುವುದು ಕಾಂಗ್ರೆಸ್‌ನಲ್ಲಿ ಸೇರಬಯಸುವ ಇತರರಿಗೆ ಮುಜುಗರವುಂಟು ಮಾಡುವಂಥದು. ಆದರೆ ಇದು ಅನಿವಾರ್ಯವೆಂದೇ ನನ್ನ ಅನಿಸಿಕೆ. ಸ್ವರಾಜ್ಯ ಪಕ್ಷವು ತನಗೆ ಕೌನ್ಸಿಲ್ ಪ್ರವೇಶದಿಂದ ಆಗಿರುವ ಪ್ರಯೋಜನ ಹಾಗೂ ಲಾಭವನ್ನು ಬಿಟ್ಟುಕೊಡಲಾರದು. ಅವರು ಏನೇ ಪ್ರಯೋಜನ ಪಡೆದುಕೊಂಡರೂ ಅದು ದೇಶ ಸೇವೆಯ ಉದ್ದೇಶಕ್ಕೇ ಆಗಿದೆ. ಸ್ವರಾಜ್ಯಪಕ್ಷದ ಲಾಭಕ್ಕೇನೂ ಅಲ್ಲ. ಎಲ್ಲ ಪಕ್ಷಗಳೂ ಇದೇ ರೀತಿಯ ಲಾಭ ಅಥವಾ ಪ್ರಯೋಜನ ಗುರಿಯಿರಿಸಿಕೊಳ್ಳಬೇಕು. ಆದ್ದರಿಂದ ಬೇರೆ ಎಲ್ಲ ಗುಂಪಿನವರೂ ಹೀಗೆ ಕಾಂಗ್ರೆಸ್ಸಿನಲ್ಲೇ ಸೇರಿ ದೇಶದ ಪ್ರಗತಿಗೆ ಯೋಜನೆ ರೂಪಿಸಲು ಯತ್ನಿಸಬೇಕು. ಡಾ. ಎನಿ ಬೆಸೆಂಟ ಈ ದಿಶೆಯಲ್ಲಿ ಮಾರ್ಗದರ್ಶಕವೆನಿಸುತ್ತಾರೆ. ಡಾ|| ಎನಿ ಬೆಸೆಂಟರು ತಮ್ಮ ಮನಸ್ಸಿಗೆ ತೋಚಿದಂತೆ ಬೇಕಾದಷ್ಟು ಬೇರೆ ರೀತಿಯಲ್ಲಿಯೂ ಕಾರ್ಯ ಮಾಡಬಹುದಿತ್ತು. ಆದರೆ ಅವರು ಕಾಂಗ್ರೆಸ್ಸೊಳಗಿದ್ದುಕೊಂಡೇ ಜನರನ್ನು ತಮ್ಮ ನಿಲುಮೆ ಸ್ವೀಕರಿಸುವಂತೆ ಮಾಡುತ್ತ

ಕಾಂಗ್ರೆಸ್ ಅಧಿವೇಶನ, ಶಿಬಿರ, ಶಿಬಿರಾರ್ಥಿಗಳ ರಕ್ಷಣೆ, ಸಹಕಾರ ಇವುಗಳ ಬಗ್ಗೆ 75 ಜನ ಬ್ರಾಹ್ಮಣ ಸ್ವಯಂ ಸೇವಕರು ಇದ್ದರು. ಸ್ವಚ್ಛತೆಯ ಕೆಲಸಕ್ಕೆ ಈ ಬ್ರಾಹ್ಮಣ ತರುಣ ಸ್ವಯಂ ಸೇವಕರು ಬೆಳಗಾವಿ ನಗರ ಸಭೆಯ ಭಂಗಿ ಕಾರ್ಮಿಕರೊಂದಿಗೆ ಸ್ವ ಸಂತೋಷದಿಂದ ಕಾರ್ಯ ನಿರ್ವಹಿಸಿದರು. ಈ ಕಾರ್ಯದಲ್ಲಿ ಪಾಲ್ಗೊಳ್ಳಲು ಯಾರೂ ಹಿಂಜರಿಯಲಿಲ್ಲ ಎಂದು ದಳದ ಪ್ರಮುಖರು ನನಗೆ ತಿಳಿಸಿದರು.

ಮಹಾತ್ಮಾ ಗಾಂಧೀಜಿ

ಯಂಗ್ ಇಂಡಿಯಾ 01.01.1925

(ಬೆಳಗಾವಿ ಅಧಿವೇಶನದ ಬಗ್ಗೆ ಬರೆಯುತ್ತ)

ಬಂದಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಬದಲಾವಣೆ ಬಯಸದ ಗುಂಪಿನವರೂ ರಾಜೀ ಒಡಂಬಡಿಕೆಯನ್ನು ಮನಃಪೂರ್ವಕ ಒಪ್ಪಿಕೊಂಡು ತಮ್ಮ ಕಲಾಪಗಳನ್ನು ನಡೆಸಬೇಕು. ಖಾದಿ, ಹಿಂದು-ಮುಸ್ಲಿಂ ಏಕತೆ, ಅಸ್ಪೃಶ್ಯತಾ ನಿವಾರಣೆ ಇವಿಷ್ಟು ಏಕಮೇವ ರಾಷ್ಟ್ರೀಯ ಕಾರ್ಯಕ್ರಮವೆನಿಸಿವೆ. ನಾನು ಬಯಸುವುದಾದರೂ ಇದಿಷ್ಟೇ ಅಲ್ಲವೆ ?

ಸಮಾಜ ಸುಧಾರಣೆಯಷ್ಟೇ !

ಈ ಕಾರ್ಯಕ್ರಮಗಳಿಂದಾಗಿ ಕಾಂಗ್ರೆಸ್ಸಿನ ಕೇವಲ ಸಮಾಜ ಸುಧಾರಣೆಯಷ್ಟೇ ಆಗಿಬಿಡುತ್ತದೆ ಎಂಬುದು ಕೆಲವರ ಅಭಿಮತ. ನನ್ನ ಅಭಿಪ್ರಾಯವು ಅವರದಕ್ಕಿಂತ ಭಿನ್ನವಾದುದು. ಸ್ವರಾಜ್ಯ ಪ್ರಾಪ್ತಿಗೆ ಅಗತ್ಯವೆನಿಸುವಂಥದೆಲ್ಲವೂ ಸಾಮಾಜಿಕ ಕಾರ್ಯವೆಂದಿಷ್ಟೇ ಆಗಿ ಉಳಿಯದು. ಕಾಂಗ್ರೆಸ್ಸು ಇದೆಲ್ಲವನ್ನು ಕೈಗೊಳ್ಳಲೇಬೇಕು. ಕಾಂಗ್ರೆಸ್ಸು ಯಾವಾಗಲೂ ಇದೇ ಚಟುವಟಿಕೆಗಳನ್ನು ಮಾಡುತ್ತ ಇರಬೇಕೆಂದೇನೂ ಇಲ್ಲ. ಆದರೆ ಬರುವ ವರ್ಷಗಳಲ್ಲಿ ಕಾಂಗ್ರೆಸು ತನ್ನೆಲ್ಲ ಶಕ್ತಿಯನ್ನು ವಿಧಾಯಕ ಕಾರ್ಯಗಳ ನಿರ್ವಹಣೆಗೆ ವಿನಿಯೋಗಿಸತಕ್ಕದ್ದು ಅಥವಾ ನಾನು ವ್ಯಕ್ತ ಪಡಿಸಿರುವ ಆಂತರಿಕ ಶಕ್ತಿ ಸಾಮರ್ಥ್ಯ ವರ್ಧನೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳತಕ್ಕದ್ದು.

ಕಾಂಗ್ರೆಸು ಕೈಗೊಳ್ಳಬೇಕಾದ ವಿಧಾಯಕ ಕಾರ್ಯಗಳು ಬಹಳ. ಆದರೆ ನಾನು ಪ್ರಸ್ತಾಪಿಸಿರುವುದು ಮಹತ್ವದ ಮೂರನ್ನು ಮಾತ್ರ, ಚರಖಾ, ಖಾದಿ, ಹಾಗೂ ಕೈನೂಲಿನ ನೇಯ್ಗೆ ಇವುಗಳೇ ಆ ಮೂರು.

ರಾಷ್ಟ್ರೀಯ ಶಾಲೆಗಳು

ರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುವುದು ವಿಧಾಯಕ ಕಾರ್ಯಗಳಲ್ಲಿಯೇ ಒಂದು. ಖಾದಿಯ ನಂತರ ಅತ್ಯಂತ ಯಶಸ್ವಿಯಾದ ಇನ್ನೊಂದು ಚಟುವಟಿಕೆಯೆಂದರೆ ರಾಷ್ಟ್ರೀಯ ಶಿಕ್ಷಣದ ಪ್ರಸಾರವೆನಿಸಿದೆ ಎಂಬುದು ಬಹುತೇಕ ಜನಕ್ಕೆ ಗೊತ್ತಿಲ್ಲ. ಕೆಲವೇ ವಿದ್ಯಾರ್ಥಿಗಳಿರುವುದಾದರೂ ಇಂಥ ಸಂಸ್ಥೆಗಳನ್ನು ನಡೆಸದೇ ಇರಲು ಸಾಧ್ಯವಿಲ್ಲ. ರಾಷ್ಟ್ರೀಯ ಶಿಕ್ಷಣ ಸಂಸ್ಥೆ, ಕಾಲೇಜು ಹಾಗೂ ಶಾಲೆಗಳನ್ನು ಆಯಾ ಪ್ರಾಂತಗಳಲ್ಲಿ ನಡೆಸಿಕೊಂಡು ಹೋಗುತ್ತಿರುವುದು ಗೌರವಯುತವಾದುದು. ಅಸಹಕಾರ ಚಳುವಳಿಯನ್ನು ಸ್ಥಗಿತಗೊಳಿಸಿದ್ದರಿಂದ ಇಂಥ ಸಂಸ್ಥೆಗಳಿಂದ ಪರಿಣಾಮವಾದಂತಾಯಿತು ಎಂದು ಹೇಳಲಾಗದು. ಇಂಥ ಸಂಸ್ಥೆಗಳನ್ನು ನಡೆಸಿಕೊಂಡು ಹೋಗಲು ಹಾಗೂ ಬಲಪಡಿಸಲು ಹೆಚ್ಚಿನ ಪ್ರಯತ್ನಗಳು ನಡೆಯುವುದು ಅತ್ಯಗತ್ಯ. ಅನೇಕ ಪ್ರಾಂತಗಳಲ್ಲಿ ರಾಷ್ಟ್ರೀಯ ಶಿಕ್ಷಣ ಶಾಲೆ, ಕಾಲೇಜುಗಳಿವೆ. ಗುಜರಾಥವೊಂದೇ ಒಂದು ರಾಷ್ಟ್ರೀಯ ವಿಶ್ವವಿದ್ಯಾಲಯ ಹೊಂದಿದ್ದು ಒಂದು ಲಕ್ಷ ರೂ ವಾರ್ಷಿಕ ವೆಚ್ಚದಿಂದ ನಡೆಸಲ್ಪಡುತ್ತಿದೆ.

ಮೂರು ಕಾಲೇಜು, ಎಪ್ಪತ್ತು ಶಾಲೆ ಹಾಗೂ ಒಂಭತ್ತು ಸಾವಿರ ವಿದ್ಯಾರ್ಥಿಗಳನ್ನು ಈ ವಿಶ್ವವಿದ್ಯಾಲಯವು ಹೊಂದಿದೆ. ಅಹಮ್ಮದಾಬಾದದಲ್ಲಿ ತನ್ನದೇ ಆದ ಭದ್ರನೆಲೆ ಹೊಂದಿದ್ದು 205323 ರೂ ವೆಚ್ಚದಿಂದ ಕಟ್ಟಿಸಲಾದ ಕಟ್ಟಡಗಳನ್ನು ಹೊಂದಿದೆ.

ಅಸಹಕಾರ ಆಂದೋಲನದ ವಿದ್ಯಾರ್ಥಿಗಳು ದೇಶಾದ್ಯಂತ ಅತ್ಯುತ್ತಮವಾಗಿ ಸದ್ದುಗದ್ದಲವೊಂದೂ ಇಲ್ಲದೇ ಈ ಕಾರ್ಯ ಮಾಡುತ್ತಿದ್ದಾರೆ. ಅವರ ತ್ಯಾಗ ಬಲು ದೊಡ್ಡದು. ಗುರುತರವಾದುದು. ಲೌಕಿಕ ದೃಷ್ಟಿಯಿಂದ ಅವರು ಶಿಕ್ಷಕ ವೃತ್ತಿಯಲ್ಲಿಯ ತಮ್ಮ ಉಜ್ಜ್ವಲ ಭವಿಷ್ಯವನ್ನು ಕಳೆದುಕೊಂಡಿದ್ದಾರೆ. ಆದರೆ ರಾಷ್ಟ್ರಸೇವೆಯ ದೃಷ್ಟಿಯಿಂದ ಅವರು ಕಳೆದುಕೊಂಡುದಕ್ಕಿಂತ ಹೆಚ್ಚಿಗೆ ಗಳಿಸಿದ್ದಾರೆಂದೆನ್ನಬಹುದು. ಪಂಜಾಬದಲ್ಲಿ ಯುವ ಜನರು ತಮ್ಮ ಆಂಗ್ಲ ಸರಕಾರ ವ್ಯವಸ್ಥಿತವಾಗಿ ಶೈಕ್ಷಣಿಕ ಸಂಸ್ಥೆಗಳಲ್ಲಿ ತಮಗೆ ಅವಮಾನವಾಗುತ್ತಿದ್ದುದನ್ನು ಸಹಿಸದೇ ಅಂಥ ಸಂಸ್ಥೆಗಳನ್ನು ತ್ಯಜಿಸಿದರು. ಆ ಸಂದರ್ಭದಲ್ಲಿ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳು ಅವರಿಗೆ ಮೊದಲ ಸಂಪರ್ಕವನ್ನು ಕಲ್ಪಿಸಿದುವು. ನಂತರ ಅಸ್ತಿತ್ವಕ್ಕೆ ಬಂದ ರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳು ಅವ್ಯವಸ್ಥಿತ, ಅದಕ್ಷ ರೀತಿಯಿಂದ ನಡೆದಿರಬಹುದು. ಆದರೆ ಸ್ವಾತಂತ್ರ್ಯ ಆಂದೋಲನಕ್ಕೆ ಅಗತ್ಯವಾದ ಸ್ಫೂರ್ತಿ ಹಾಗೂ ಯುವ ಜನರ ತಂಡವನ್ನು ನಿರ್ಮಿಸಿದ ಸಾಧನಗಳವು ಎಂದೆನಿಸಿದ ವಿದ್ಯಾಮಂದಿರಗಳಾದವು. ರಾಷ್ಟ್ರೀಯ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭವಿಷ್ಯದ ಆಶಾಕಿರಣರಾಗಿ ಬೆಳೆಯ ತೊಡಗಿದರು. ಆದ್ದರಿಂದ ಇಂಥ ಸಂಸ್ಥೆಗಳು ಆಯಾ ಪ್ರಾಂತಗಳಲ್ಲಿಯ ಸಂಪನ್ಮೂಲಗಳಿಂದ ನಡೆಯಬೇಕೆಂದು ನಾನು ಬಯಸುತ್ತೇನೆ. ಆದರೆ ಇಂಥ ಸಂಸ್ಥೆಗಳು ನಿಜವಾಗಿಯೂ ರಾಷ್ಟ್ರೀಯ ಸ್ವರೂಪ ಪಡೆಯಬೇಕು. ಹಿಂದು ಮುಸ್ಲಿಂ ಏಕತೆ, ಹಿಂದು ಧರ್ಮಕ್ಕೆ ಕಳಂಕಪ್ರಾಯವಾದ ಅಸ್ಪೃಶ್ಯತೆ ನಿವಾರಣೆ, ಇವುಗಳನ್ನು ಕೈಕೊಳ್ಳಬೇಕು. ಉತ್ತಮ ಕೈನೂಲು ತೆಗೆಯುವವರು ಕೈಮಗ್ಗಗಳ ಮೇಲೆ ನೇಯ್ಗೆ ಮಾಡುವವರ ತರಬೇತಿ ಕೇಂದ್ರಗಳೆನಿಸಬೇಕು. ಚರಖಾ ಹಾಗೂ ಖಾದಿ ತತ್ವದಲ್ಲಿ ಕಾಂಗ್ರೆಸು ದೃಢ ವಿಶ್ವಾಸ ಹೊಂದಿರುವದರಿಂದ ರಾಷ್ಟ್ರೀಯ ಸಂಸ್ಥೆಗಳು ಚರಖಾದ ವಿಜ್ಞಾನಕ್ಕೆ ಪೋಷಕವಾಗಿ ಕಾರ್ಯ ನಿರ್ವಹಿಸುವಂತಾಗುವ ಅಗತ್ಯವಿದೆ. ಖಾದಿ ಉತ್ಪಾದನೆಯ ಕೇಂದ್ರಗಳಾಗಿಯೂ ಇವು ಬೆಳೆಯ ತಕ್ಕದ್ದು. ಈ ಸಂಸ್ಥೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸಾಹಿತ್ಯಿಕ ಪ್ರೌಢಿಮೆ ಹಾಗೂ ಅಪಾರ ಜ್ಞಾನ ಸಂಪಾದನೆ ಮಾಡಬಾರದೆಂದೇನೂ ನಾನು ಹೇಳುತ್ತಿಲ್ಲ. ಆದರೆ ಬೌದ್ಧಿಕ ಬೆಳವಣಿಗೆ ಹಾಗೂ ದೈಹಿಕ ಶ್ರಮ ಎರಡೂ ಜೋಡಿಯಾಗಿಯೇ ಶಿಕ್ಷಣದಲ್ಲಿ ನಡೆಯತಕ್ಕದ್ದು. ರಾಷ್ಟ್ರೀಯ ಶಿಕ್ಷಣ ಸಂಸ್ಥೆ, ಶಾಲೆ-ಕಾಲೇಜುಗಳ ಸಾರ್ಥಕತೆ ಕೇವಲ ಅವರ ವಿದ್ವತ್ತು ಹಾಗೂ ಪ್ರತಿಷ್ಠೆಯ ಸ್ಥಾನಮಾನಗಳಲ್ಲಿ, ಸಾಹಿತ್ಯ ಸೃಷ್ಟಿಯಲ್ಲಿ ಮಾತ್ರವಿರದೇ ಅರಳೆ ಹಿಂಜುವ ಕೆಲಸ ಮಾಡುವುದರಲ್ಲಿ, ಚರಖಾದ ಮೇಲೆ ನೂಲುವುದರಲ್ಲಿ ಹಾಗೂ ನೇಯ್ಗೆ

ಮಾಡುವುದರಲ್ಲಿಯ ಪರಿಣಿತಿಯಲ್ಲೂ ಉಂಟು. ರಾಷ್ಟ್ರೀಯ ಚಾರಿತ್ರ್ಯವು ಅವುಗಳಿಂದ ವರ್ಧಿಸುವಂತಾಗತಕ್ಕದ್ದು. ಇಂಥ ಸಂಸ್ಥೆಗಳು ಮುಚ್ಚಕೂಡದು. ಚೆನ್ನಾಗಿ ನಡೆಯುತ್ತ ಪ್ರಗತಿ ಸಾಧಿಸಬೇಕು. ಆದರೆ ಹಿಂದುವೇತರರಿಗೆ ಪ್ರವೇಶ ನೀಡದ ಅಸ್ಪೃಶ್ಯತೆ ಆಚರಿಸುವ, ಕೈನೂಲು ನೇಯ್ಗೆ ಇವುಗಳಲ್ಲಿಯ ತರಬೇತಿಯು ಶಿಕ್ಷಣದ ಮುಖ್ಯ ಅಂಗವಾಗಿರದ ಸಂಸ್ಥೆಗಳು ಮುಚ್ಚಿ ಹೋದರೆ ನಷ್ಟವೇನಿಲ್ಲ. ರಾಷ್ಟ್ರೀಯ ಎಂಬ ಹೆಸರುಳ್ಳ ಶೈಕ್ಷಣಿಕ ಸಂಸ್ಥೆಗಳು ಯಾವುದೇ ರೀತಿ ಸರಕಾರದ ನಿಯಂತ್ರಣಕ್ಕೆ ಒಳಪಡದೇ, ಸರಕಾರಿ ವಿಶ್ವ ವಿದ್ಯಾಲಯದ ಮಾನ್ಯತೆ ಪಡೆದುಕೊಳ್ಳದೇ ಸ್ವತಂತ್ರವಾಗಿರತಕ್ಕದ್ದು. ಅನೇಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಸ್ಥಳೀಯ ಪ್ರಾದೇಶಿಕ ಭಾಷೆ ಹಾಗೂ ಹಿಂದುಸ್ಥಾನೀ ಭಾಷೆಯನ್ನು ಕಡೆಗಣಿಸಲಾಗುತ್ತಿದೆಂಬ ಅಂಶವನ್ನು ನಾನು ಇಲ್ಲಿ ಎತ್ತಿ ತೋರಿಸದೇ ಇರಲಾರೆ. ಪ್ರಾದೇಶಿಕ ಭಾಷೆ ಹಾಗೂ ಹಿಂದುಸ್ಥಾನೀ ಭಾಷಾ ಮಾಧ್ಯಮದಿಂದ ವಿದ್ಯಾದಾನ ಮಾಡುವುದರ ಮಹತ್ವವನ್ನು ಹಾಗೂ ಅಗತ್ಯತೆಯನ್ನು ಅನೇಕ ಶಿಕ್ಷಕರು ಇನ್ನೂ ಅರಿತಿಲ್ಲವೆಂದು ಅಸಮಾಧಾನ ವಾಗುತ್ತದೆ. ಶ್ರೀ ದೇಶಪಾಂಡೆ ಗಂಗಾಧರರಾಯರು ಈ ಸಂದರ್ಭದಲ್ಲಿ ರಾಷ್ಟ್ರೀಯ ಶಿಕ್ಷಣವೇತ್ತರ ಸಮಾವೇಶವನ್ನು ಸೇರಿಸಲಿರುವುದು ಸಂತಸಕರವಾದುದು. ಆ ಸಮಾವೇಶದಲ್ಲಿ ರಾಷ್ಟ್ರೀಯ ಶಿಕ್ಷಕರ ಮಧ್ಯೆ ವಿಚಾರ ವಿನಿಮಯ ಚರ್ಚೆ ನಡೆದು ಅದರಿಂದ ಉತ್ತಮ ಶಿಕ್ಷಣದ ರೂಪುರೇಷೆ ಸಿದ್ಧಗೊಳ್ಳಲಿದೆ ಎಂದು ನಾನು ಆಶಿಸುತ್ತೇನೆ.

ಅಸಹಕಾರ ಆಂದೋಲನಕಾರರ ನಿರುದ್ಯೋಗ

ರಾಷ್ಟ್ರದ ಕರೆಗೆ ಓಗೊಟ್ಟು ಅಸಹಕಾರ ಆಂದೋಲನದಲ್ಲಿ ಭಾಗವಹಿಸಲು ವಕೀಲಿ ವೃತ್ತಿ ಸರಕಾರೀ ಶಾಲೆಗಳಲ್ಲಿಯ ಮಾಸ್ತರಿಕೆ ಹಾಗೂ ಇತರ ಸರಕಾರಿ ನೌಕರಿಗೆ ಶರಣು ಹೊಡೆದು ಉದ್ಯೋಗ ಕಳೆದುಕೊಂಡವರ ಬಗ್ಗೆ ಇಲ್ಲಿ ಪ್ರಸ್ತಾಪಿಸುವುದು ಅತ್ಯಗತ್ಯ. ಅನೇಕರು ಎರಡು ಹೊತ್ತಿನ ಗಂಜಿಗೂ ಗತಿಯಿಲ್ಲದೇ ಗೋಳಿಗೀಡಾಗಿದ್ದಾರೆಂಬುದು ನನಗೆ ತಿಳಿದಿದೆ. ಅಂಥವರಿಗೆ ರಾಷ್ಟ್ರೀಯ ಸಮರ್ಥನೆ, ಸಹಾಯಹಸ್ತ ಅಗತ್ಯವೆನಿಸುತ್ತದೆ. ಖಾದಿ ಮಂಡಳಿ ಹಾಗೂ ರಾಷ್ಟ್ರೀಯ ಶಿಕ್ಷಣ ಸಂಸ್ಥೆ, ಶಾಲೆ-ಕಾಲೇಜುಗಳಲ್ಲಿ ಅಂಥವರನ್ನು ಸೇವೆಗೆ ಸೇರಿಸಿಕೊಳ್ಳಬೇಕು. ಪ್ರಾಮಾಣಿಕ ಹಾಗೂ ಉದ್ಯೋಗಶೀಲರಾದ ಅವರಿಗೆ ಜೀವನ ನಿರ್ವಹಣೆಗೆ ಸಾಕಾಗುವಷ್ಟು ಕನಿಷ್ಟ ವೇತನ ಲಭ್ಯವಾಗಿರತಕ್ಕದ್ದು. ಇಂಥವರಲ್ಲಿ ಅನೇಕರು ತಾವು ಸಲ್ಲಿಸುತ್ತಿರುವ ಸೇವೆ ರಾಷ್ಟ್ರೀಯ ಸೇವೆಯಾದುದರಿಂದ ವೇತನವೇ ಬೇಡವೆಂದು ವೇತನ ನಿರಾಕರಿಸುತ್ತಿದ್ದುದು ನನ್ನ ಗಮನಕ್ಕೆ ಬಂದಿದೆ. ಅವರು ಹೀಗೆ ಸಂಬಳ ಸ್ವೀಕರಿಸಿ ಉಚಿತ ಸೇವೆ ನೀಡುತ್ತಿರುವುದು ಸ್ವಾಗತಾರ್ಹ, ಪ್ರಶಂಸಾರ್ಹ. ಆದರೆ ಎಲ್ಲರಿಗೂ ಹೀಗೆ ಮಾಡುವುದು ಸಾಧ್ಯವಾಗದು. ಪ್ರತಿಯೊಂದು ಸೇವೆಗೂ ಯೋಗ್ಯ ಸಂಬಳ ಪ್ರತಿಫಲ

ದೊರೆಯಲೇಬೇಕು. ಯಾವುದೇ ದೇಶದಲ್ಲಿ ಸಂಬಳವಿಲ್ಲದೇ ದುಡಿಯುವ ಶಿಕ್ಷಕರ ದೊಡ್ಡ ಸಂಖ್ಯೆಯಿರಲು ಸಾಧ್ಯವೇ ಇಲ್ಲ. ಸರಕಾರೀ ಸಂಸ್ಥೆಗಳಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಸಂಬಳ ಲಭ್ಯವಿರುವಾಗ ಅಂಥದನ್ನು ಬಿಟ್ಟುಕೊಟ್ಟು ರಾಷ್ಟ್ರೀಯ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಲು ಮುಂದೆ ಬರುವುದೇ ಒಂದು ದೊಡ್ಡ ತ್ಯಾಗ. ಅದುವೇ ದೇಶಾಭಿಮಾನ. ಆದರೆ ಅಂಥವರು ಸಂಬಳ ರಹಿತ ಸೇವೆಗೆ ಪಟ್ಟು ಹಿಡಿಯದೇ ಕಡಿಮೆ ಪ್ರಮಾಣದ ಸಂಬಳ ಸ್ವೀಕರಿಸಲಿ.

ಮದ್ಯ ಹಾಗೂ ಮಾದಕಗಳು

ಮದ್ಯ ಹಾಗೂ ಮಾದಕಗಳ ನಿಷೇಧ ಇನ್ನೊಂದು ರಾಷ್ಟ್ರೀಯ ಮಹತ್ವದ ಕಾರ್ಯಕ್ರಮ. 1921 ರಲ್ಲಿ ರಾಷ್ಟ್ರವ್ಯಾಪಿ ಹರಡಿಕೊಂಡ ಮದ್ಯ ಮಾದಕಗಳ ನಿಷೇಧ ಆಂದೋಲನ ಅಹಿಂಸಾತ್ಮಕವಾಗಿ ಮುಂದುವರೆದಿದ್ದರೆ ಇಷ್ಟೊತ್ತಿಗೆ ತುಂಬಾ ಪ್ರಗತಿಯಾಗಿರುತ್ತಿತ್ತು. ಆದರೆ ದುರ್ದೈವವಶಾತ್ ಮದ್ಯ ಮಾದಕಗಳ ಸೇವನೆಯ ವಿರುದ್ಧದ ಮತ ಪ್ರದರ್ಶನದಲ್ಲಿ ಹಿಂಸೆಯ ಪ್ರವೇಶವಾಯಿತು. ಹಿಂಸೆ ಸ್ಪಷ್ಟ ಹಾಗೂ ಬಹಿರಂಗವಾಗಿರದೇ ಒಳಗಿಂದೊಳಗೆಯೇ ರಹಸ್ಯ ರೀತಿಯಲ್ಲಿ ಹಬ್ಬಿಕೊಂಡಿತು. ಹೀಗಾಗಿ ಮತ ಪ್ರದರ್ಶನ ಪಿಕೆಟಿಂಗ್ ಹಿಂತೆಗೆದುಕೊಳ್ಳಬೇಕಾದುದರಿಂದ ಮದ್ಯ-ಮಾದಕಗಳ ಸೇವನೆ ಮತ್ತೆ ಮೊದಲಿಗಿಂತಲೂ ತೀವ್ರವಾಗಿ ಹಬ್ಬತೊಡಗಿತು. ಆದರೆ ಮದ್ಯ ಮಾದಕಗಳ ನಿಷೇಧದ ನಿಯಂತ್ರಣದ ಆಂದೋಲನ ಪೂರ್ಣವಾಗಿ ಸತ್ತು ಹೋಗಿಲ್ಲವೆಂಬುದು ಸಮಾಧಾನಕರ ಅಂಶ. ಅನೇಕ ಕಾರ್ಯಕರ್ತರು ಮದ್ಯ ಮಾದಕಗಳ ನಿಷೇಧಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸುವಲ್ಲಿ ತತ್ಪರರಾಗಿದ್ದಾರೆ. ಸ್ವರಾಜ್ಯವನ್ನು ಪಡೆದುಕೊಳ್ಳದ ಹೊರತು ನಾವು ಈ ಅನಿಷ್ಟವನ್ನು ಸಂಪೂರ್ಣ ತೊಡೆದು ಹಾಕಲಾರೆವೆಂಬುದನ್ನು ತಿಳಿದುಕೊಳ್ಳೋಣ. ಅನೈತಿಕವಾದ ಮದ್ಯ ಮಾರಾಟಗಳ ಮೇಲಿನ ತೆರಿಗೆ ಆದಾಯದಿಂದ ಶೈಕ್ಷಣಿಕ ಪ್ರಗತಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆಂಬುದು ಅಭಿಮಾನಾಸ್ಪದವೇನಲ್ಲ. ವಿಧಾನ ಮಂಡಳದಲ್ಲಿ ಪ್ರವೇಶ ಪಡೆಯಬಯಸುವ ಕಾಂಗ್ರೆಸ್ಸಿಗರು ಶೈಕ್ಷಣಿಕ ಪ್ರಗತಿಯಾಗದೇ ಹೋದರೂ ಪರವಾಯಿಲ್ಲಾ ಇಂಥ ಅನೈತಿಕ ಆದಾಯವು ಶಿಕ್ಷಣ ಪ್ರಗತಿಗೆ ಬಳಕೆಯಾಗದಂತೆ ತಡೆದರೆ ವಿಧಾನ ಮಂಡಳದಲ್ಲಿಯ ಅವರ ಪ್ರವೇಶವನ್ನು ನಾನು ಕ್ಷಮಿಸುತ್ತೇನೆ. ಅದೇ ರೀತಿ ಸೈನಿಕ ವೆಚ್ಚವನ್ನೂ ಇಳಿಸುವುದಕ್ಕೆ ಅವರು ಆಗ್ರಹ ಪಡಿಸಿದರೆ ಒಳ್ಳೆಯದು.

ಬಂಗಾಲದಲ್ಲಿ ದಬ್ಬಾಳಿಕೆ

ಮುಂದಿನ ಕೆಲವು ವಿಚಾರಗಳನ್ನು ನಾನು ದೇಶದಲ್ಲಿಯ ಆಂತರಿಕ ವಿದ್ಯಮಾನಗಳಿಗೆ ಸೀಮಿತಗೊಳಿಸಬಯಸುತ್ತೇನೆ. ಆದರೆ ಬಾಹ್ಯ ಒತ್ತಡದ ಸಂದರ್ಭಗಳು ಆಂತರಿಕ ವಿದ್ಯಮಾನಗಳಿಗಿಂತಲೂ ಭೀಕರ ಪರಿಣಾಮವನ್ನು ನಮ್ಮ ಮೇಲೆ ಮಾಡುತ್ತಲಿದ್ದು ನಮಗೆ

ಬಾಧಕವಾಗುತ್ತಲಿವೆ. ನಮ್ಮ ಮೇಲೆ ದುಷ್ಪರಿಣಾಮ ಬೀರುತ್ತಲಿವೆ. ನಾವು ಅಂಥವುಗಳನ್ನು ನಮ್ಮ ಲಾಭಕ್ಕೆ ತಿರುಗಿಸಿಕೊಳ್ಳಬೇಕು. ಇಲ್ಲವೇ ಅಂಥವುಗಳಿಗೆ ಈಡಾಗಿ ನಷ್ಟ ಅನುಭವಿಸಬೇಕು ಎನ್ನುವಂತೆ ಪರಿಸ್ಥಿತಿಯಿದೆ. ಬಂಗಾಲದಲ್ಲಿ ನಮ್ಮ ಆಳರಸರು ನಡೆಸುತ್ತಲಿರುವ ದಬ್ಬಾಳಿಕೆ ಇತ್ತೀಚಿನದು. ಸರ್ವ ಪಕ್ಷೀಯ ಸಮ್ಮೇಳನ ಸರಕಾರದ ಈ ದಮನಕಾರೀ ಪ್ರವೃತ್ತಿಯನ್ನು ಸ್ಪಷ್ಟವಾಗಿ, ಬಲವಾಗಿ ಖಂಡಿಸಿದೆಂಬುದೇನೋ ನಿಜ ಹಾಗೂ ನಿಸ್ಸಂದೇಹ. ಆದರೆ ಆಳರಸರ ದಮನಕಾರೀ ಕ್ರಮಗಳು ಬಂಗಾಲದ ಸ್ವರಾಜ್ಯ ಪಕ್ಷವನ್ನು ನಿರ್ನಾಮಗೊಳಿಸುವ ಉದ್ದೇಶದವೆಂಬುದನ್ನು ಸ್ಪಷ್ಟವಾಗಿ ಹೇಳಲು ಅದು ಹಿಂಜರಿದಿದೆ. ಆದರೆ ಕಲಕತ್ತೆಗೆ ಭೇಟಿ ನೀಡಿ ವಿವಿಧ ಅಭಿಪ್ರಾಯಗಳನ್ನು ಹೊಂದಿದ ಕಾರ್ಯಕರ್ತರನ್ನು, ನೇತಾರರನ್ನು ಸಂಪರ್ಕಿಸಿ ಮಾತಾಡುವ ಮೂಲಕ ಸರಕಾರದ ಎಲ್ಲ ದಮನಕಾರೀ ಕ್ರಮಗಳು ಬಂಗಾಲದ ಸ್ವರಾಜ್ಯ ಪಕ್ಷದ ವಿರುದ್ಧವೇ ತೆಗೆದುಕೊಂಡವುಗಳೆಂಬ ತೀರ್ಮಾನಕ್ಕೆ ಬಂದಿದ್ದೇನೆ. ಲಾರ್ಡ ಲಿಟ್ಟನ್ ಹಾಗೂ ರೀಡಿಂಗ ಅವರ ಭಾಷಣಗಳೇ ನನ್ನ ಅಭಿಪ್ರಾಯವನ್ನು ದೃಢಪಡಿಸುತ್ತವೆ. ಸರಕಾರದ ಕ್ರಮಗಳನ್ನು ಅವರು ಸಮರ್ಥಿಸಿಕೊಳ್ಳುತ್ತಿರುವುದನ್ನು ಮನಸ್ಸು ಒಪ್ಪಲು ಸಾಧ್ಯವೇ ಇಲ್ಲ. ಸಾರ್ವಜನಿಕ ಅಭಿಪ್ರಾಯಕ್ಕೆ ಕಿಂಚಿತ್ತೂ ಮಾನ್ಯತೆ ಸಿಗದಂಥ ತಮ್ಮ ಕ್ರಮಗಳಿಗೆ ಭಾರತದಲ್ಲಿ ಮಾತ್ರವೇ ಅವರು ಈ ರೀತಿ ಸಮರ್ಥನೆ ನೀಡಬಹುದಾಗಿದೆ. ಸ್ವರಾಜ್ಯ ಪಕ್ಷದ ಬಂಧಿತ ಕಾರ್ಯಕರ್ತರ ಬಿಡುಗಡೆಗೆ ಲಾರ್ಡ ಲಿಟ್ಟನ್ ಒಡ್ಡಿರುವ ಶರತ್ತುಗಳು ತುಂಬಾ ಅವಮಾನಕಾರಕ 1818 ರ ಕಾಯ್ದೆಯನ್ವಯ ಸುಗ್ರೀವಾಜ್ಞೆ ಹೊರಡಿಸಬೇಕಾದಂಥ ಸ್ಥಿತಿ ಉದ್ಭವವಾಗಿದೆಂದು ಗವ್ಹರ್ನರರು ಹೇಳಿರುವದು ಹಾಗೂ ಸುಗ್ರೀವಾಜ್ಞೆ ಅನುಸರಿಸಿ ದಮನಕಾರೀ ಕ್ರಮಗಳನ್ನು ಜಾರಿಗೊಳಿಸಿರುವುದು ಅಸಮರ್ಥನೀಯ ಈ ಕುರಿತು ರಾಷ್ಟ್ರೀಯ ನಿಲುಮೆ ಹೀಗಿದೆ.

1. ಗವ್ಹರ್ನರರು ಹೇಳಿದಂತೆ ಗಂಭೀರ ಪರಿಸ್ಥಿತಿ ಉದ್ಭವಿಸಿರಲೇ ಇಲ್ಲ.

2. ಒಂದು ವೇಳೆ ಅಂಥ ಭೀಕರ ಪರಿಸ್ಥಿತಿ ಉಂಟಾಗಿತ್ತೆಂಬುದನ್ನು ಊಹಿಸಿದರೂ ಅದನ್ನು ಎದುರಿಸಲು ತೆಗೆದುಕೊಂಡ ಕ್ರಮಗಳು ಪರಿಸ್ಥಿತಿಯ ಭೀಕರತೆಯ ಪರಿಣಾಮಕ್ಕಿಂತಲೂ ಭೀಕರ ಹಾಗೂ ಕೆಟ್ಟುದಾಗಿದೆ.

3. ಉಂಟಾಗಿದ್ದ ಭೀಕರ ಪರಿಸ್ಥಿತಿ ಎದುರಿಸುವುದಕ್ಕೆ ಸಾಮಾನ್ಯ ಕಾಯ್ದೆಯಡಿ ಕ್ರಮ ತೆಗೆದುಕೊಳ್ಳಲು ಸರಕಾರಕ್ಕೆ ಸಾಧ್ಯವಿತ್ತು.

4. ಒಂದು ವೇಳೆ ಇನ್ನೂ ಉಗ್ರ ಹಾಗೂ ವಿಶೇಷ ಕ್ರಮ ಜರುಗಿಸುವುದು ಅಗತ್ಯವೆಂದೆನಿಸಿದಲ್ಲಿ ಸರಕಾರವೇ ಸ್ವತಃ ಸೃಷ್ಟಿಸಿರುವ ವಿಧಾನ ಮಂಡಳದ ಅನುಮತಿ ಪಡೆದು ಅಧಿಕಾರ ಚಲಾಯಿಸಲಿಕ್ಕೆ ಬರುತ್ತಿತ್ತು.

ಗವರ್ನರರ ಭಾಷಣಗಳಲ್ಲಿ ಈ ಪರಿಸ್ಥಿತಿ ಹಾಗೂ ಸಮಸ್ಯೆಗಳ ಉಲ್ಲೇಖವಿಲ್ಲ. ಅಸಮರ್ಥನೀಯವಾದ ಇಂಥ ಹಲವಾರು ಹೇಳಿಕೆಗಳನ್ನು ಕೇಳಿ ಕೇಳಿ ಸಾಕಷ್ಟು ಅನುಭವವುಳ್ಳ ನಾವೆಲ್ಲ ಗವರ್ನರರ ವಿವರಣೆಯನ್ನು ಸತ್ಯವೆಂದು ನಂಬಲು ಸಾಧ್ಯವಿಲ್ಲ. ಗವರ್ನರರು ನೀಡಿರುವ ಹೇಳಿಕೆಗಳು ಉದ್ದೇಶಪೂರ್ವಕವಾದ ಅಸತ್ಯದ ನುಡಿಗಳೆಂದು ನಾವು ಹೇಳುತ್ತಿಲ್ಲ. ಆದರೆ ಅವರು ತಮಗೆ ದೊರೆತ ತಪ್ಪು ಮಾಹಿತಿ ಹಾಗೂ ಕಳಂಕಿತ ಅಭಿಪ್ರಾಯಗಳಿಂದಾಗಿ ಸತ್ಯ ದೂರವಾದ ಹೇಳಿಕೆ ನೀಡಿದ್ದಾರೆಂಬುದನ್ನು ಕಂಡುಕೊಂಡಿದ್ದೇವೆ. ಅವರು ನೀಡಿರುವ ಭರವಸೆಗಳು ಸಹ ನಗೆಗೀಡು ಮಾಡುವಂಥವಾಗಿವೆ. ಅವರ ಭಾಷಣಗಳು ನಮಗೆ ಸವಾಲು ಎಸೆಯುವ ಸ್ವರೂಪದವಿವೆ. ತಾಳ್ಮೆಗೆಡಿಸುವಂಥವಿವೆ. ಆದರೆ ನಾವು ಚಿತಾವಣೆ ಹಾಗೂ ಅಸಹನೆಗೆ ಒಳಗಾಗಬಯಸುವುದಿಲ್ಲ. ಆಳರಸರ ದಬ್ಬಾಳಿಕೆ ನಮ್ಮನ್ನು ತೆಪ್ಪಗಾಗಿಸದೆ ಹೋದರೆ ನಮ್ಮನ್ನು ನಮ್ಮ ಉದ್ದೇಶಗಳಿಂದ ವಿಮುಖಗೊಳಿಸದೇ ಹೋದರೆ ನಮ್ಮನ್ನು ಸ್ವರಾಜ್ಯದ ಗುರಿ ಸಾಧನೆಯತ್ತ ಸನಿಹಕ್ಕೆ ಕರೆದೊಯ್ಯುತ್ತದೆ. ಅದು ನಮ್ಮಲ್ಲಿ ತ್ಯಾಗ ಭಾವನೆ ಹಾಗೂ ಅಪಾಯಗಳನ್ನು ಎದುರಿಸುವ ಧೈರ್ಯವನ್ನು ಉದ್ದೀಪನಗೊಳಿಸುತ್ತದೆ. ಅಗ್ನಿಯಲ್ಲಿ ಪುಟಕ್ಕಿಟ್ಟ ಚಿನ್ನದಂತೆ ದಬ್ಬಾಳಿಕೆಗೆ ಗುರಿಯಾಗುವ ಮನುಷ್ಯ ಹಾಗೂ ರಾಷ್ಟ್ರ ಅಧಿಕ ಶಕ್ತಿ ಹಾಗೂ ಪ್ರಭಾವವುಳ್ಳದ್ದಾಗಿ ಹೊಳೆಯಲಾರಂಭಿಸುತ್ತವೆ. 1921 ರಲ್ಲಿ ಸವಿನಯ ಕಾಯ್ದೆಭಂಗ ಮೂಲಕ ದಬ್ಬಾಳಿಕೆಯನ್ನು ಎದುರಿಸಿ ಸರಕಾರದ ಕ್ರೂರ ವರ್ತನೆಗೆ ಕಾರಣರಾದೆವು. ಆದರೆ ನಂತರ ಅದರ ಪ್ರಯೋಜನ ಪಡೆದೆವು. ಈಗ ನಾವು ಸವಿನಯ ಕಾಯ್ದೆಭಂಗ ಚಳುವಳಿಗೆ ಸಿದ್ಧರಿಲ್ಲ. ಆದರೆ ನಾವು ಸಿದ್ಧರಾಗಬಹುದಾಗಿದೆ. ಶಿಸ್ತು ಸಹನೆ, ತಾಳ್ಮೆ, ಆತ್ಮ ಸಂಯಮನ, ಅಹಿಂಸೆ ಇವುಗಳೆಲ್ಲ ನಾವು ಪ್ರತಿಭಟನೆಗೆ ಸನ್ನದ್ಧರಾಗುವುದಕ್ಕೆ ಸಾಧನಗಳು. ಎಲ್ಲ ನ್ಯಾಯವಾದ ಮಾರ್ಗಗಳು ದೇವರ ನಿಯಮ. ಮಾನವ ನಿಯಮವೆಂದರೆ ದೇವ ನಿಯಮಗಳನ್ನು ಅನುಸರಿಸುವುದಾಗಿದೆ. ಆದರೆ ದುರ್ದೈವವಶಾತ್ ಈಗ ನಮ್ಮ ಉದ್ದೇಶ ಸಾಧನೆಗೆ ಬೇಕಾಗುವ ಶಿಸ್ತು ಸಂಯಮಗಳಿಲ್ಲ. ನಾವು ಹಿಂಸಕರೂ ಅಲ್ಲ. ನಿಷ್ಕ್ರಿಯರ ಅಹಿಂಸೆ ನಮ್ಮದಾಗಿದೆ. ದೇವ ನಿಯಮ ಅಥವಾ ಮಾನವ ನಿಯಮ ಎರಡರಲ್ಲಿ ಒಂದನ್ನೂ ನಾವು ಕಡ್ಡಾಯವಾಗಿ, ಬದ್ಧತೆಯಿಂದ ಅನುಸರಿಸುತ್ತಿಲ್ಲ. ಹಿಂದು ಮುಸಲ್ಮಾನರ ನಡುವಿನ ಸಂಬಂಧಗಳನ್ನೇ ತೆಗೆದುಕೊಂಡರೆ ನಾವು ದೇವರ ನಿರ್ದೇಶನ ಹಾಗೂ ಮಾನವ ನಿರ್ಮಿತ ಕಾನೂನು ವ್ಯವಸ್ಥೆ ಎರಡನ್ನೂ ಉಲ್ಲಂಘಿಸುತ್ತಿದ್ದೇವೆ. ಯಾವಾಗಲೂ ಅಜೇಯ ಶಕ್ತಿ ಸಂಪನ್ನವಾದ ಸವಿನಯ ಕಾಯ್ದೆಭಂಗ ಚಳುವಳಿಗೆ ಸೂಕ್ತ ವಾತಾವರಣ ಈಗಿಲ್ಲ. ಇದಕ್ಕೆ ಪರ್ಯಾಯವೆಂದರೆ ಹಿಂಸೆ. ಅಂಥದೇ ವಾತಾವರಣ ಈಗುಂಟು. ಹಿಂದು ಮುಸ್ಲಿಂ ನಡುವಿನ ಗಲಭೆಗಳು ನಮ್ಮನ್ನು ಹಿಂಸಾಚಾರಕ್ಕೆ ಅಣಿಗೊಳಿಸುತ್ತಲಿವೆ. ಹೀಗೆ ನಮ್ಮ ಉದ್ದೇಶಿತ ಗುರಿ ಸಾಧಿಸಲು ಹಿಂಸೆ ಸಾಧನವೆಂದು ಅನೇಕರು ನಂಬುತ್ತಾರೆ. ಅದು ಕೊನೆಗೆ ನಮ್ಮ ನಮ್ಮೊಳಗೆಯೇ ಸಂಘರ್ಷಕ್ಕೆ

ಕಾರಣವಾಗುತ್ತದೆ. ಹಿಂಸೆಯಲ್ಲಿ ತೊಡಗಿರುವವರಿಗೆ ನಾನು ನೀವೆಲ್ಲಾ ಭಾರತದ ಪ್ರಗತಿಗೆ ಬಾಧಕರೆಂದು ಎಚ್ಚರಿಸಬಯಸುತ್ತೇನೆ. ಹಸಿವೆಯಿಂದ ಬಳಲುತ್ತಿರುವ ಲಕ್ಷಾವಧಿ ದೇಶ ಬಾಂಧವರಿಗೆ ಇಂಥ ಹಿಂಸೆಯ ಮೂಲಕ ಏನನ್ನೂ ಮಾಡಲಾರಿರಿ. ಅಂಥವರಿಗೆ ನಿಮ್ಮ ಸೇವೆ ತಲುಪದು. ನೀವು ಎದುರಿಸಬೇಕಾದ ವೈರಿ ಅಧಿಕ ಶಸ್ತ್ರಸುಸಜ್ಜಿತ ಹಾಗೂ ಬಲಾಢ್ಯ. ನೀವು ನಿಮ್ಮ ಜೀವವನ್ನು ತೃಣಸಮಾನವೆಂದೇ ಬಗೆದು ಬಲಿದಾನ ಮಾಡಬಹುದು. ಆದರೆ ಹೀಗೆ ಬಲಿದಾನ ಮಾಡಲು ಸಿದ್ಧರಿಲ್ಲದವರ ಬಗ್ಗೆ ಅನಾದರ ತೋರುವುದು ಬೇಡ. ಆಳರಸರು ಅಥವಾ ಈಗಿನ ಸರಕಾರ ತನ್ನನ್ನು ರಕ್ಷಿಸಿಕೊಳ್ಳಲು ಜಲಿಯನ್‌ವಾಲಾಬಾಗ ಹತ್ಯಾಕಾಂಡದ ಪುನರಾವರ್ತನೆಯಲ್ಲಿ ನಂಬಿಕೆಯಿರಿಸಿದೆ. ಬೇರೆ ದೇಶಗಳಲ್ಲಿಯ ಸತ್ಯ ಸ್ಥಿತಿ ಹೇಗೆಯೇ ಇದ್ದೀತು. ಆದರೆ ಭಾರತದಲ್ಲಿ ಹಿಂಸೆಯ ಪರಂಪರೆ ಬೆಳೆಯಲಾರದು. ಭಾರತ ಯಾವಾಗಲೂ ಅಹಿಂಸೆಯ ಆಚರಣೆಯಲ್ಲಿ ತೊಡಗಿರುವಂಥದು. ಆದ್ದರಿಂದ ಅಹಿಂಸೆಗೋಸ್ಕರವೇ ತ್ಯಾಗ ಬಲಿದಾನಕ್ಕೆ ನೀವೇಕೆ ಸಿದ್ಧರಾಗಬಾರದು?.

ಏನೇ ಆದರೂ ಹಿಂಸಾತ್ಮಕ ಕ್ರಾಂತಿಕಾರಿಗಳಿಗೆ ನನ್ನ ಈ ಮನವಿಯು ನಮ್ಮ ಹಿಂಸಾತ್ಮಕ ಹಾಗೂ ಅರಾಜಕತೆಯ ಸರಕಾರಕ್ಕೆ ಮಾಡುವ ಮನವಿಯಷ್ಟೇ ನಿರರ್ಥಕವೆಂಬುದು ನನಗೆ ತಿಳಿದಿದೆ.

ಆದ್ದರಿಂದಲೇ ಹಿಂಸೆಗಿಂತ ಪ್ರಬಲ ಹಾಗೂ ಪರಿಣಾಮಕಾರಿಯಾದ ಶಕ್ತಿಯೊಂದಿದೆ. ಅಂತಹ ಆತ್ಮಶಕ್ತಿಯಿಂದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳೋಣ ಎಂದು ಹಿಂಸಾಚಾರ ಹಾಗೂ ದಮನಕಾರಿ ನೀತಿ ಅನುಸರಿಸುತ್ತಿರುವ ಸರಕಾರ ಹಾಗೂ ಹಿಂಸಾತ್ಮಕ ಕ್ರಾಂತಿಕಾರಿಗಳಿಗೀರ್ವರಿಗೂ ನಾವು ಕೇಳಿಕೊಳ್ಳೋಣ.

ದಮನ ದಬ್ಬಾಳಿಕೆ ಒಂದು ಲಕ್ಷಣ

ದಬ್ಬಾಳಿಕೆ ಅಥವಾ ದಮನ ಕ್ರಿಯೆಯನ್ನು ನಾನು ಒಂದು ತರಹದ ಒಂದೇ ಸವನೇ ಕಾಡುತ್ತಿರುವ ರೋಗದ ಲಕ್ಷಣವೆಂದು ಭಾವಿಸುತ್ತೇನೆ. ಐರೋಪ್ಯರ ಪ್ರಭುತ್ವ ಹಾಗೂ ಏಶಿಯಾ ರಾಷ್ಟ್ರಗಳನ್ನು ದಾಸ್ಯಕ್ಕೆ ಒಳಪಡಿಸುವುದು ಐರೋಪ್ಯರ ಒಂದು ಕಾರ್ಯಸೂತ್ರ. ಕೆಲವೊಮ್ಮೆ ಇದನ್ನೇ ಕರಿಯರ ಮೇಲೆ ಬಿಳಿಯರ ದಬ್ಬಾಳಿಕೆ ಅಥವಾ ಬಿಳಿಯ-ಕರಿಯ ವರ್ಣದವರ ನಡುವಣ ಸಂಘರ್ಷವೆಂದು ಹೇಳಲಾಗುತ್ತದೆ. ಶ್ವೇತವರ್ಣೀಯರು ಆಡಳಿತದ ಹೊಣೆ ಹೊತ್ತುಕೊಂಡಿರುವುದು ಅವರಿಗೊಂದು ಸಹಿಸಲಾರದ ಭಾರವೆಂದು ಕಿಪ್ಲಿಂಗ್ ತಪ್ಪಾಗಿ ವಿವರಿಸಿದ್ದಾನೆ. ಮಲಾಯಾದಲ್ಲಿ ತಾತ್ಪೂರ್ತಿಕ ಸ್ವರೂಪದಲ್ಲಿದ್ದ ವರ್ಣಭೇದ ನೀತಿ ಈಗ ಶಾಶ್ವತ ರೂಪು ಹೊಂದಿದೆ. ಮಾರಿಶಸ್‌ದ ತೋಟಗಾರ ಉದ್ಯಮಿ ಭಾರತೀಯ ಕಾರ್ಮಿಕರನ್ನು ಯಾವುದೇ ಅಡೆತಡೆ ಅಥವಾ ಯೋಚನೆಯಿಲ್ಲದೇ ಕೂಲಿಗೆ ಪಡೆಯುತ್ತಾನೆ.

ಕೆನ್ಯಾದಲ್ಲಿ ಐರೋಪ್ಯ ಭಾರತೀಯ ಹಕ್ಕು ಹತ್ತಿಕ್ಕಲು ದಬ್ಬಾಳಿಕೆ ಚಲಾಯಿಸುತ್ತಾರೆ. ದಕ್ಷಿಣ ಆಫ್ರಿಕೆ ಒಕ್ಕೂಟದವರು ಹಿಂದಿನ ಎಲ್ಲ ಒಡಂಬಡಿಕೆಗಳನ್ನು ಗಾಳಿಗೆ ತೂರಿ ಭಾರತೀಯರನ್ನು ಹೊರಗಟ್ಟುತ್ತಾರೆ. ಇಂಥ ಎಲ್ಲ ಪ್ರಕರಣಗಳಲ್ಲಿ ಭಾರತ ಸರಕಾರ ಹಾಗೂ ಬ್ರಿಟಿಶ ಸಾಮ್ರಾಜ್ಯ ಅಸಹಾಯಕರೆನಿಸುವದಿಲ್ಲ. ಆದರೆ ಸಮಸ್ಯೆ ಬಗೆಹರಿಸಲು ಅವು ಮನಸ್ಸು ಮಾಡುತ್ತಿಲ್ಲ. ಭಾರತೀಯ ನಿವಾಸಿಗಳಿಗೆ ರಕ್ಷಣೆ ಒದಗಿಸುತ್ತಿಲ್ಲ. ಫಿಜಿ ಕುರಿತಂತೆ ಸ್ವತಃ ತಾನೇ ನೇಮಿಸಿದ ಆಯೋಗದ ವರದಿಯನ್ನು ಪ್ರಕಟಿಸುವ ಸೌಜನ್ಯವನ್ನು ಸಹ ಭಾರತ ಸರಕಾರ ತೋರಿಸುತ್ತಿಲ್ಲ.

ಅಕಾಲಿಗಳನ್ನು ಹತ್ತಿಕ್ಕುವ ಪ್ರಯತ್ನವೂ ಇದೇ ರೋಗದ ಒಂದು ಲಕ್ಷಣ. ಅಕಾಲಿಗಳು ತಾವು ನಂಬಿದ ತತ್ವಕ್ಕಾಗಿ ತಮ್ಮ ರಕ್ತವನ್ನು ನೀರಿನಂತೆ ಹರಿಸಿದ್ದಾರೆ. ಅವರಿಂದಲೂ ತಪ್ಪು ಆಗಿರಬಹುದು. ಅವರು ತಪ್ಪನ್ನೇ ಎಸಗಿದ್ದಾರೆಂದರೆ ಸ್ವತಃ ತಾವೇ ತಮ್ಮ ರಕ್ತ ಹರಿಸಿದ್ದಾರೆ. ಇತರರಿಗೆ ನೋವು ಮಾಡಿಲ್ಲ. ನಾನಕ ಸಾಹೇಬ, ಗುರುಕಾಬಾಗ್ ಹಾಗೂ ವೈಕಂ ಆಂದೋಲನಗಳು ಅವರ ಧೈರ್ಯ, ಬಲಿದಾನಗಳಿಗೆ ಸಾಕ್ಷಿಗಳಾಗಿವೆ. ಆದರೆ ಪಂಜಾಬದ ಗವರ್ನರ್‌ರು ಅಕಾಲಿಗಳನ್ನು ಹತ್ತಿಕ್ಕಲು ಪಣತೊಟ್ಟಂತಿದೆ.

ಬ್ರಹ್ಮದೇಶದಲ್ಲೂ ಅಲ್ಲಿಯ ಜನರ ಅಂತಃಸತ್ವವನ್ನು ದಬ್ಬಾಳಿಕೆಯಿಂದ ಅಡಗಿಸುವ ಪ್ರಯತ್ನ ನಡೆದಿದೆ. ಇಜಿಪ್ತರ ಸ್ಥಿತಿ ನಮಗಿಂತ ಉತ್ತಮವಾದುದೇನಿಲ್ಲ. ಇಜಿಪ್ತಿನ ಓರ್ವ ತಲೆ ತಿರುಕ, ಬ್ರಿಟಿಶ ಅಧಿಕಾರಿಯ ಹತ್ಯೆಗೈದದ್ದು ನಿಜ. ಆದರೆ ಶಿಕ್ಷೆ ಅವನಿಗೊಬ್ಬನಿಗೆಯೇ ಆಗಲಿಲ್ಲ. ಇಜಿಪ್ತದ ಸಮಸ್ತ ಜನತೆಯ ಮೇಲೆ ದಬ್ಬಾಳಿಕೆ ನಡೆಯಿತು. ಅದು ಮಾನವತೆಯ ಮೇಲೆ ನಡೆದ ದಬ್ಬಾಳಿಕೆಯಾಗಿತ್ತು. ಒಬ್ಬನು ಮಾಡಿದ ತಪ್ಪಿಗಾಗಿ ಇಡೀ ಇಜಿಪ್ತದ ಮೇಲೆ ಕ್ರೂರ ದಬ್ಬಾಳಿಕೆ ನಡೆದಿದೆ. ಬ್ರಿಟಿಶ ಅಧಿಕಾರಿಯ ಕೊಲೆಯ ಬಗ್ಗೆ ಇಜಿಪ್ತ ಜನತೆ ಕೊಲೆಗಾರನ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿರಬಹುದು. ಆದರೆ ಅಂಥ ಸಹಾನುಭುತಿ ಭಯೋತ್ಪಾದನ ಚಟುವಟಿಕೆಗಳಿಗೆ ನೀಡುವ ಸಮರ್ಥನೆಯಾಗಲಾರದು.

ಆದ್ದರಿಂದ ಬಂಗಾಲದ ಮೇಲಿನ ದಬ್ಬಾಳಿಕೆಯಲ್ಲಿ ವಿಶೇಷವಾಗಿ ಹೇಳುವಂಥದೇನಿಲ್ಲ. ಇಂತಹ ತಾತ್ಕಾಲಿಕ ಉದ್ದೇಶಗಳು ಅವುಗಳನ್ನು ಕುರಿತು ದಬ್ಬಾಳಿಕೆ ಕ್ರಮಗಳು ಅಲ್ಲಲ್ಲಿ ಬೇರೆ ಬೇರೆ ಪ್ರಾಂತಗಳಲ್ಲಿ ಜನರು ಒಂದು ಸಾಮಾನ್ಯ ಸ್ಥಿತಿಗೆ ತಲುಪುವ ತನಕ ನಡೆಯತಕ್ಕವೇ.

ಮಂಜೂರಿಯ ಅಗತ್ಯತೆ

ಆದ್ದರಿಂದ ಕಾಂಗ್ರೆಸ್ ಪಕ್ಷ ಇಲ್ಲಿ ಮಂಡಿಸಲಾದ ಗೊತ್ತುವಳಿ ಹಾಗೂ ಬೇಡಿಕೆಗಳನ್ನು ವಿಶ್ವಾಸವಿರಿಸಿ ಒಪ್ಪಿ ಮಂಜೂರಿ ನೀಡಲೇಬೇಕು. ಹೀಗೆ ಮಾಡುವುದಕ್ಕೆ ಮೊದಲು ನಾವು


ಹಿಂದುಗಳು, ಮುಸಲ್ಮಾನರು, ಕ್ರೈಸ್ತರು, ಶೀಖರು, ಪಾರ್ಸಿ ಮೊದಲಾದ ಜನಾಂಗದವರು ಸ್ವರಾಜ್ಯ ಪಕ್ಷದವರು ಬದಲಾವಣೆ ವಿರೋಧಿಗಳು, ಉದಾರಮತವಾದಿ ಲಿಬರಲ್ಲರು, ಹೋಮ್‌ರೂಲ್ ಆಂದೋಲನಕಾರರು, ಮುಸ್ಲಿಂಲೀಗನವರು ಮತ್ತಿತರರು ಐಕ್ಯ ಸಾಧಿಸಿ ಬಲ ಹೆಚ್ಚಿಸಿಕೊಳ್ಳಬೇಕು. ವಿದೇಶೀ ಬಟ್ಟೆಗಳನ್ನು ನಮ್ಮ ದೇಶದಿಂದ ದೂರ ಮಾಡುವ ಶಕ್ತಿಯನ್ನು ನಾವು ಬೆಳೆಸಿಕೊಳ್ಳುವುದು ಒಳಿತು. ನಂತರ ನಾವು ಒಟ್ಟಾಗಿ ಇಂಥ ಕಾರ್ಯಕ್ಕೆ ಸಿದ್ಧಿಸಿ ಕ್ರಿಯಾಶೀಲರಾಗೋಣ.

ನನ್ನ ವಿಶ್ವಾಸ

ನನ್ನ ವಿಶ್ವಾಸ ಹಾಗೂ ಶ್ರದ್ಧೆಯನ್ನು ನಾನು ಘೋಷಿಸ ಬಯಸುತ್ತೇನೆ. ಒಬ್ಬ ಕಾಂಗ್ರೆಸ್ಸಿಗನಾಗಿ ಕಾಂಗ್ರೆಸ್ಸಿನ ಏಕತೆ ಒಗ್ಗಟ್ಟಿನ ರಕ್ಷಣೆಗಾಗಿ ಹಾಗೂ ಅಸಹಕಾರ ಆಂದೋಲನಕ್ಕೆ ರಾಷ್ಟ್ರವಿನ್ನೂ ಸಿದ್ಧವಾಗಿಲ್ಲವಾದ್ದರಿಂದ ನಾನು ಆಂದೋಲನ ಸ್ಥಗಿತಗೊಳಿಸುವ ಸಲಹೆ ನೀಡಬೇಕಾಯಿತು. ಆದರೆ ಒಬ್ಬ ವ್ಯಕ್ತಿಯಾಗಿ ನಾನು ಸರಕಾರ ಈಗಿನಂತೆ ಇರುವವರೆಗೆ ನನ್ನ ಆಂದೋಲನದಿಂದ ಹಿಂದೆ ಸರಿಯುತ್ತಿಲ್ಲ. ಅಸಹಕಾರ ಆಂದೋಲನವನ್ನು ಒಂದು ಧೋರಣೆ ಅಥವಾ ಕಾರ್ಯಕ್ರಮ ಮಾತ್ರವಲ್ಲ ಅದು ನನ್ನ ಅಚಲ ವಿಶ್ವಾಸ, ದೃಢ ನಿಶ್ಚಯದ ವಿಷಯ. ಅಸಹಕಾರ ಆಂದೋಲನ ಹಾಗೂ ಸವಿನಯ ಕಾಯ್ದೆ ಭಂಗ ಎರಡೂ ಚಳವಳಿಗಳು ಸತ್ಯಾಗ್ರಹ ಎಂಬ ಹೆಮ್ಮರದ ಎರಡು ಬೇರೆ ಬೇರೆ ಶಾಖೆಗಳಷ್ಟೇ. ಸತ್ಯಾಗ್ರಹ ನನ್ನ ಮಟ್ಟಿಗೆ ಕಲ್ಪವೃಕ್ಷ. ಬೇಡಿದುದನ್ನು ಕೊಡುವಂಥಹದು. ಸತ್ಯಾಗ್ರಹವು ಸತ್ಯದ ಶೋಧನೆ, ದೇವರೇನೇ ಸತ್ಯ. ಅಹಿಂಸೆ ಆ ಸತ್ಯದ ಪ್ರಕಾಶ ಬೀರುವ ಒಂದು ಭಾಗ ಅಥವಾ ಒಂದು ಅಂಶ. ದಕ್ಷಿಣ ಆಫ್ರಿಕೆ, ಖೇಡ, ಅಥವಾ ಚಂಪಾರಣ್ಯದಲ್ಲಿ ಸತ್ಯಾಗ್ರಹ ವಿಫಲವಾಗಲಿಲ್ಲ. ಇಂಥ ಇನ್ನೂ ಅನೇಕ ಉದಾಹರಣೆಗಳನ್ನು ನಾನು ಸಾದರ ಪಡಿಸಬಲ್ಲೆ. ಸತ್ಯಾಗ್ರಹವು ಹಿಂಸೆ ಅಥವಾ ದ್ವೇಷದಿಂದ ಮುಕ್ತವಾದುದು. ಹೊರತಾದುದು. ಆದ್ದರಿಂದ ನಾನು ಇಂಗ್ಲೀಷರನ್ನು ದ್ವೇಷಿಸುವುದಿಲ್ಲ. ಅವರು ಹೇರುವ ನೊಗದ ಭಾರವನ್ನು ನಾನು ತಡೆಯಲಾರೆ. ಭಾರತದ ಮೇಲೆ ಬ್ರಿಟಿಶ ಆಡಳಿತ ವಿಧಾನ ಹಾಗೂ ಸಂಸ್ಥೆಗಳ ಪ್ರಭುತ್ವವನ್ನು ಬಲವಂತವಾಗಿ ಅಪವಿತ್ರ ರೀತಿಯಲ್ಲಿ ಹೇರುತ್ತ ನಡೆದರೆ ಅಂಥವರನ್ನು ನಮ್ಮ ದೇಹಾಂತ್ಯದವರೆಗೂ ಎದುರಿಸಿ ಹೋರಾಟ ನಡೆಸಬಯಸುತ್ತೇನೆ. ಆದರೆ ನನ್ನೆಲ್ಲ ಅಂಥ ಪ್ರಯತ್ನಗಳನ್ನು ಅಹಿಂಸೆ ಆಧರಿಸಿಯೇ ನಡೆಸುತ್ತೇನೆ. ಇಂಗ್ಲೀಷ ಆಡಳಿತದ ವಿರುದ್ಧ ಭಾರತೀಯರು ಅಹಿಂಸಾತ್ಮಕ ಹೋರಾಟ ನಡೆಸುವ ಶಕ್ತಿ ಸಾಮರ್ಥ್ಯ ಹೊಂದಿದ್ದಾರೆಂಬುವಲ್ಲಿ ನನ್ನ ಅಚಲ ವಿಶ್ವಾಸವಿದೆ. ಭಾರತದ ಇಂಥ ಪ್ರಯೋಗ ವಿಫಲವಾಗಿಲ್ಲ. ಎಂದೂ ವಿಫಲವಾಗುವುದೂ ಇಲ್ಲ. ಭಾರತದ ಈ ಪ್ರಯತ್ನ ಯಶಸ್ವಿಯಾಗಿದೆಯಾದರೂ ನಾನು

ನಿರೀಕ್ಷಿಸಿದಷ್ಟು, ಬಯಸಿದಷ್ಟು ಯಶಸ್ವಿಯಾಗಿಲ್ಲವಷ್ಟೇ. ಇದರಿಂದ ನನಗೆ ನಿರಾಶೆಯೇನೂ ಇಲ್ಲ. ಕೂಡಲೇ ಭಾರತ ಸತ್ಯಾಗ್ರಹ ಮೂಲಕವಾಗಿಯೇ ಸ್ವತಂತ್ರವಾಗಲಿದೆ ಎಂದು ನಾನು ದೃಢವಾಗಿ ನಂಬಿದ್ದೇನೆ. ಆಂದೋಲನದ ಸದ್ಯದ ಸ್ಥಗಿತತೆ ಅಂಥ ಪ್ರಯತ್ನಗಳಲ್ಲಿಯ ಒಂದು ಭಾಗವಷ್ಟೇ ಎನ್ನಬಹುದು. ಮುಂದೆ ನನ್ನಿಂದ ರೂಪಿತವಾದ ಕಾರ್ಯಕ್ರಮ ಪೂರ್ಣ ಯಶಸ್ವಿಯಾಗುವ ತನಕ ನಾನು ಅಸಹಕಾರ ಆಂದೋಲನವನ್ನು ಪುನರಾರಂಭಿಸುವುದಿಲ್ಲ. ನನ್ನ ಕಾರ್ಯಕ್ರಮ ವಿಫಲಗೊಂಡರೆ ಬೇರೆ ಯಾವುದೇ ರೀತಿಯಲ್ಲಿ ಸ್ವರೂಪದಲ್ಲಿ ಕಾಂಗ್ರೆಸ್ಸಿನ ಮೂಲಕ ಅಥವಾ ಅದನ್ನು ಹೊರತು ಪಡಿಸಿ ಅಹಿಂಸಾತ್ಮಕ ಅಸಹಕಾರ ಆಂದೋಲನ ಮತ್ತೆ ಶುರುವಾಗಬಹುದು. ಸತ್ಯಾಗ್ರಹ ಎಂದೆಂದಿಗೂ ವಿಫಲಗೊಳ್ಳದು. ಸತ್ಯವು ಪ್ರಕಾಶಿತಗೊಳ್ಳಲು ಒಬ್ಬನೇ ಒಬ್ಬ ಪರಿಪೂರ್ಣ ಸತ್ಯಾಗ್ರಹಿಯೂ ಸಾಕಾದೀತು. ತಾಳ್ಮೆ, ಸಹನೆ ಈ ಗುಣಗಳು ನಮ್ಮಲ್ಲಿಯೇ ಕೆಳದರ್ಜೆಯವರಾಗಿರುವವರಲ್ಲಿ ಹೆಚ್ಚಿರುತ್ತದೆ. ಸತ್ಯಾಗ್ರಹ ಇದು ಅಂತಃ ಸತ್ವದ ಪ್ರಕಟನೆ. ಇದು ನಮ್ಮಲ್ಲಿಯ ಪ್ರತಿಯೊಬ್ಬರಲ್ಲೂ ಉಂಟು. ಸ್ವರಾಜ್ಯ ನಮ್ಮ ಜನ್ಮ ಸಿದ್ಧ ಹಕ್ಕು ಆಗಿರುವಂತೆಯೇ ಸತ್ಯಾಗ್ರಹ ಸಹ ನಮ್ಮ ಜನ್ಮ ಸಿದ್ಧ ಹಕ್ಕು ಎಂಬುದನ್ನು ನಾವು ಅರಿತುಕೊಳ್ಳೋಣ.

ವಂದೇ ಮಾತರಮ್



ಗೊತ್ತುವಳಿಗಳು

ಗೊತ್ತುವಳಿ 1

ಶ್ರದ್ಧಾಂಜಲಿ ಠರಾವು

ಅಪರಾಹ್ನ 4ಗಂಟೆ 5 ನಿಮಿಷಕ್ಕೆ ಮಹಾಧಿವೇಶನದ ಅಧ್ಯಕ್ಷ ಮಹಾತ್ಮಾ ಗಾಂಧೀಜಿಯವರು ಮೊದಲ ಠರಾವನ್ನು ಮಂಡಿಸಲು ಮುಂದಾಗಿ, ''ನಾನೀಗ ಮೊದಲ ಠರಾವನ್ನು ಓದುತ್ತೇನೆ. ದಯವಿಟ್ಟು ಎದ್ದು ನಿಂತು ನಮ್ಮನ್ನಗಲಿದ ಮಹನೀಯರ ಆತ್ಮಗಳಿಗೆ ಶಾಂತಿಕೋರಲು ಒಂದು ನಿಮಿಷ ಮೌನ ಪ್ರಾರ್ಥನೆ ಸಲ್ಲಿಸಬೇಕೆಂದು'' ಕೇಳಿಕೊಂಡರು.

ಶ್ರೀ ಬಿ. ಅಮ್ಮನ್, ಸರ್ ಅಶುತೋಷ ಚೌಧರಿ, ಸರ್ ಅಶುತೋಷ ಮುಖರ್ಜಿ, ಶ್ರೀ ಭೂಪೇಂದ್ರನಾಥ ಬಸು, ಶ್ರೀ ಸುಬ್ರಹ್ಮಣ್ಯ ಅಯ್ಯರ್, ಶ್ರೀ ದಲಬಹಾದ್ದೂರ ಗಿರಿ, ಶ್ರೀ ಗೋವಿಂದ ವೆಂಕಟೇಶ ಯಾಳಗಿ, ಶ್ರೀ ವಾಮನರಾವ್ ಮೊಹರೀರ್, ಶ್ರೀ ಟಿ. ಗೋಪಾಲಸ್ವಾಮಿ ಮುದಲಿಯಾರ್, ಶ್ರೀ ಸಿ.ವ್ಹಿ. ಪಿ. ಶಿವಮ್, ಶ್ರೀ ಲಾಲಾ ಕನ್ನೈಯ್ಯಾಲಾಲಜೀ, ದಕ್ಷಿಣ ಆಫ್ರಿಕೆಯಲ್ಲಿಯ ಶ್ರೀ ರುಸ್ತೂಮಜೀ ಜೀವನಜೀ ಘೋರಖೋಡು, ಶ್ರೀ ಪಿ.ಕೆ. ನಾಯುಡು ಇವರ ನಿಧನ ಬಗ್ಗೆ ಕಾಂಗ್ರೆಸ್ಸು ತೀವ್ರ ದುಃಖ ವ್ಯಕ್ತ ಪಡಿಸುತ್ತ ಅವರ ಕುಟುಂಬಗಳಿಗೆ ಸಾಂತ್ವನ ಹೇಳಬಯಸುತ್ತಿದೆ ಎಂಬ ಠರಾವು ಮಂಡಿಸಿದರು.

ಅಧ್ಯಕ್ಷರು ನಂತರ ಠರಾವಿನ ಬಗ್ಗೆ ಹಿಂದೀಯಲ್ಲಿ ಮಾತನಾಡಿದರು. ಎಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನ ಪ್ರಾರ್ಥನೆ ಸಲ್ಲಿಸಿದ ಬಳಿಕ ಮುಂದಿನ ಗೊತ್ತುವಳಿ ಮಂಡಿಸುವಂತೆ ದೇಶಬಂಧು ಚಿತ್ತರಂಜನದಾಸರನ್ನು ಕೇಳಿಕೊಂಡರು. ಅವರು ಗೊತ್ತುವಳಿ ಮಂಡಿಸುವದಕ್ಕೆ ಮೊದಲು ಗಾಂಧೀಜಿಯವರು ದಿವಂಗತ ಕನ್ಹೈಯ್ಯಲಾಲಜಿಯವರ ಹೆಸರನ್ನು ದುಃಖ ಸೂಚಕ ಠರಾವಿನಲ್ಲಿ ಸೇರಿಸಿ ಗೌರವಾರ್ಪಣೆ ಮಾಡಿದರು.

ಗೊತ್ತುವಳಿ 2

ರಾಜಿ ಒಡಂಬಡಿಕೆ, ಕಾಂಗ್ರೆಸ್ಸಿಗರೆಲ್ಲರೂ ಕಡ್ಡಾಯವಾಗಿ ನೂಲಬೇಕೆಂಬ ಹಾಗೂ ನೂಲಿನ ವಂತಿಗೆ ಸಲ್ಲಿಕೆಯ ಠರಾವು

ಒಡಂಬಡಿಕೆ ಹಾಗೂ ಕಾಂಗ್ರೆಸ್ಸಿಗರೆಲ್ಲರೂ ನೂಲಲೇ ಬೇಕೆಂದೂ ಕೈನೂಲಿನ ವಂತಿಗೆ ಸಲ್ಲಿಸಬೇಕೆಂದೂ ಕಡ್ಡಾಯ ವಿಧಿಸುವ ಗೊತ್ತುವಳಿಯನ್ನು ಮಂಡಿಸಲು ಎದ್ದು ನಿಂತ ದೇಶ ಬಂಧು ಚಿತ್ತರಂಜನ ದಾಸರನ್ನು ಎಲ್ಲರೂ ಹರ್ಷೋದ್ಗಾರಗಳಿಂದ ಉತ್ಸಾಹಯುತರಾಗಿ ಸ್ವಾಗತಿಸಿದರು.

''ಮಹಾತ್ಮಾಜೀ, ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಬಂಧು, ಭಗಿನಿಯರೇ, ಎಂದೆನ್ನುತ್ತ ಚಿತ್ತರಂಜನದಾಸರು ತಮ್ಮ ಭಾಷಣ ಆರಂಭಿಸಿದರು.

ವಿಷಯ ಪಟ್ಟಿಯೊಳಗಿನ ಈ ಎರಡನೆಯ ಗೊತ್ತುವಳಿಯನ್ನು ಮಂಡಿಸಲು ಮಹಾತ್ಮಾಜೀ ನನ್ನನ್ನು ಕೇಳಿಕೊಂಡಿರುವುದು ನನಗೆ ನೀಡಿದ ಅಪೂರ್ವ ಗೌರವವೆನಿಸಿದೆ. ಅದಕ್ಕಾಗಿ ನಾನವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನಾನು ಈ ಗೊತ್ತುವಳಿಯನ್ನು ಪೂರ್ಣವಾಗಿ ಓದುವ ಅಗತ್ಯವಿಲ್ಲ. ಮುದ್ರಿತ ಪ್ರತಿಗಳನ್ನು ಹಂಚಲಾಗಿದೆ. ಆದರೆ ಗೊತ್ತುವಳಿಯಲ್ಲಿಯ ಎಲ್ಲ ಅಂಶಗಳನ್ನು ನೀವೀಗಾಗಲೇ ಅರಿತಿರುವಿರೆಂದು ಭಾವಿಸುತ್ತೇನೆ. ಈ ಗೊತ್ತುವಳಿ ಎರಡು ಭಾಗಗಳನ್ನು ಒಳಗೊಂಡಿರುತ್ತದೆ. ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಎರಡು ಬೇರೆ ಬೇರೆ ಬಣಗಳನ್ನು ಒಗ್ಗೂಡಿಸುವುದಿದಾಗಿದೆ. ಸರಕಾರಕ್ಕೆ ಸವಾಲನ್ನೆಸೆಯುವ ಆಹ್ವಾನಾತ್ಮಕ ಗೊತ್ತುವಳಿಯಿದು.

ನಮ್ಮ ನಮ್ಮೊಳಗೆ ಬೇಕಾದಷ್ಟು ಭಿನ್ನಾಭಿಪ್ರಾಯಗಳಿರಬಹುದು. ಆದರೆ ಭಾರತ ರಾಷ್ಟ್ರೀಯ ಕಾಂಗ್ರೆಸ್ಸು, ಸಂಕಷ್ಟಗಳ ಸಂದರ್ಭಗಳು ಎದುರಾದಾಗ ಒಗ್ಗಟ್ಟಿನಿಂದ ನಾವೆಲ್ಲ ಹೇಗೆ ಗಟ್ಟಿಯಾಗಿ ನಿಂತು ಎದುರಿಸಬೇಕೆಂಬುದನ್ನು ಬಹಳ ಚೆನ್ನಾಗಿ ಅರಿತಿದೆ. (ಹೀಯರ್ ಹೀಯರ್, ಕೇಳಿರಿ ಕೇಳಿರಿ ಎಂಬ ಹರ್ಷೋದ್ಗಾರ ಹಾಗೂ ಪ್ರಚಂಡ ಕರತಾಡನಗಳ ಗಡಚಿಕ್ಕುವ ಧ್ವನಿ) ನನಗೆ ಇಂದು ತುಂಬಾ ಆನಂದ ತಂದಿರತಕ್ಕಂಥ ದಿನ. ಯಾಕೆಂದರೆ

ಕಳೆದ ಹಲವಾರು ವರ್ಷಗಳಿಂದ ಇಂದಿನ ಈ ದಿನ ಎಂದು ಬರುವುದೋ ಎಂಬ ಕನಸು ಕಾಣುತ್ತಿದ್ದೆ. ಈ ದಿನಕ್ಕಾಗಿ ಕಾತುರತೆಯಿಂದ ಎದುರು ನೋಡುತ್ತಲಿದ್ದೆ. ಗಯಾದಲ್ಲಿಯ ಕಾಂಗ್ರೆಸ್ ಅಧಿವೇಶನದಲ್ಲಿ ದುರ್ದೈವದಿಂದ ಈ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿದ್ದವು ಎಂಬುದು ನಿಮಗೆಲ್ಲ ಗೊತ್ತೇ ಇದೆ. ಆಗ ಸಹ ನಾನು ಐಕ್ಯ ಸಾಧನೆಯ ಹಲವಾರು ಸಲಹೆಗಳನ್ನು ಮುಂದಿಟ್ಟು ಪ್ರಯತ್ನಿಸಿದ್ದೆ. ಮಹನೀಯರೇ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಸದಸ್ಯತ್ವವನ್ನು ಆಗ ತ್ಯಜಿಸಿದ್ದ ಓರ್ವನಾದ ನಾನು ಈಗ ತಮ್ಮ ಮುಂದೆ ಐಕ್ಯ ಸಾಧನೆಯ ಗೊತ್ತುವಳಿ ಮಂಡಿಸಲು ನಿಂತಿದ್ದೇನೆ. ಮಹನೀಯರೇ ನಾನು ಯಾವಾಗಲೂ ಎಂದೂ ಬಂಡುಖೋರನಾದವನಲ್ಲ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಚಟುವಟಿಕೆಗಳ ದಿಶೆಯನ್ನು ಬದಲಿಸಬೇಕಾದುದು ನನ್ನ ಕರ್ತವ್ಯವೆಂದೇ ಬಗೆದು ನನ್ನ ಬಂಧುಗಳ ವಿರುದ್ಧ ಆಗ ಹೋರಾಟಕ್ಕೆಳಿಸಿದವನು. ನಾನು ಮತ್ತು ನನ್ನ ಕೆಲ ಸ್ನೇಹಿತರು ಏನೇ ಮಾಡಿದ್ದರೂ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಡಿಪಾಯ ಸುಭದ್ರಗೊಳ್ಳಲೆಂದೇ ಎಲ್ಲವನ್ನೂ ಮಾಡಿದ್ದಾಗಿದೆಂಬುದನ್ನು ಹಲವಾರು ವರ್ಷಗಳ ನಂತರ ಇಂದು ಕಾಂಗ್ರೆಸ್ಸಿನ ಇತಿಹಾಸವೇ ಸಾರುತ್ತಲಿದೆ. ನನ್ನ ಎಲ್ಲ ಕೃತಿಗಳಿಗೆ ಕಾಂಗ್ರೆಸ್ಸಿನ ಇತಿಹಾಸವೇ ಸಾಕ್ಷ್ಯರೂಪವಾಗಿ ನಿಂತಿರುತ್ತದೆ. ಬೇರೊಂದು ಪಕ್ಷ ಅಥವಾ ಸಂಘಟನೆಯನ್ನು ಕಟ್ಟಲಿಕ್ಕೆಂದು ನಾನು ಕಾಂಗ್ರೆಸ್ಸಿನಿಂದ ಹೊರಗೆ ಹೋದವನಲ್ಲ. ಕಾಂಗ್ರೆಸ್ಸನ್ನು ಒಗ್ಗೂಡಿಸಲೆಂದೇ ನನ್ನ ಎಲ್ಲ ಪ್ರಯತ್ನಗಳು ನಡೆದಿದ್ದವು. ಕೆಲ ಮಟ್ಟಿಗೆ ನಾನು ಈ ದಿನ ಯಶಸ್ವಿಯಾಗಿರುವುದರ ಬಗ್ಗೆ ನನ್ನನ್ನು ನಾನೇ ಅಭಿನಂದಿಸಿಕೊಳ್ಳಬಯಸುತ್ತೇನೆ. ಗಯಾ ಕಾಂಗ್ರೆಸ್ಸಿನ ಗೊತ್ತುವಳಿಯ ನಂತರ ಫೆಬ್ರುವರಿಯಲ್ಲಿ ಅಲಹಾಬಾದಿನಲ್ಲಿ ಒಂದು ಸೂಚನೆ ಮಾಡಲ್ಪಟ್ಟಿದ್ದನ್ನು ನೀವು ಮತ್ತೊಮ್ಮೆ ನೆನಪಿಸಿಕೊಳ್ಳಿ. ಮತ್ತು ಆ ಸಲಹೆ ಅಂಗೀಕೃತವಾದುದು. ಅಂದು ನನಗೆ ಸಂತಸ ತಂದಿತ್ತು. ನಂತರ ಲಾಹೋರ ಅಧಿವೇಶನದಲ್ಲಿ ಇನ್ನೂ ಒಂದು ಸಲಹೆ ಬಂದಿತ್ತು. 1923 ಎಪ್ರಿಲ್ 17 ರ ಕಾರ್ಯಕಾರೀ ಸಮಿತಿಯ ಗೊತ್ತುವಳಿಯಲ್ಲಿ ಅದು ಉಲ್ಲೇಖಿತವಾಯಿತು. ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಬಲಾಢ್ಯವಾಗಿರುವಂತೆ ನಾವು ನೋಡಿಕೊಳ್ಳಲೇಬೇಕು. ನಾವು ನಮ್ಮ ಭಿನ್ನಾಭಿಪ್ರಾಯಗಳಿಗೆ ಕೊನೆಹೇಳತಕ್ಕದ್ದು. ಬೇರೆ ಬೇರೆ ಅಭಿಪ್ರಾಯಗಳಿದ್ದರೂ ಅಂಥ ಭಿನ್ನಮತಗಳಿರುವವರೊಂದಿಗೆ ಒಂದಾಗಿರುವುದನ್ನು ಅವರ ಅಭಿಪ್ರಾಯಗಳನ್ನು ಗೌರವಿಸುವುದನ್ನು ಅಂಗಿಕರಿಸುವುದನ್ನು ರೂಢಿಸಿಕೊಳ್ಳೋಣ. ಭಿನ್ನಮತಗಳೆಷ್ಟೇ ಇದ್ದರೂ ಏಕತೆಯ ಭಾವನೆಯಿಂದ ಒಗ್ಗೂಡಿಯೇ ಇರೋಣ. ಭಿನ್ನಮತಗಳುಳ್ಳ ಎರಡೂ ಪಕ್ಷಗಳು ಅಥವಾ ಬಣಗಳು ಪರಸ್ಪರ ಗೌರವ ಭಾವನೆ ಹೊಂದಿರಬೇಕೆಂಬುದೇ ಆ ಸಲಹೆಗಳಾಗಿದ್ದುವು. ನೀವು ನಿಮ್ಮದೇ ಮಾರ್ಗ ಸರಿಯೆನ್ನುವುದಾದರೆ ನಾನು ಬೇರೆ ಅಭಿಮತ ಅಥವಾ ಮಾರ್ಗ ಸರಿಯನ್ನುವವರಾಗಿರುತ್ತೇವೆ ಎಂದಿಷ್ಟೇ ಹೇಳುತ್ತ ಕಾರ್ಯತತ್ಪರ

ರಾಗಬೇಕು. ಐಕ್ಯ ಸಾಧಿಸುವ ರೀತಿಯೇ ಇದು. ಈ ವಿಧಾನವನ್ನು ಒಳಗೊಂಡ ಗೊತ್ತುವಳಿಯನ್ನು ನಾನು ಈಗ ನಿಮ್ಮ ಮುಂದೆ ಮಂಡಿಸುತ್ತೇನೆ.

1923 ಎಪ್ರಿಲ್‌ದಲ್ಲಿ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ನನ್ನ ಆ ಪ್ರಯತ್ನ ವಿಫಲಗೊಂಡ ಬಳಿಕ ದಿಲ್ಲಿಯಲ್ಲಿ ಜರುಗಿದ ಸಮಾಜವಾದೀ ಕಾಂಗ್ರೆಸ್ಸಿನಲ್ಲಿಯೂ ಇಂಥ ಪ್ರಯತ್ನವನ್ನು ಮಾಡಿದ್ದೇನೆಂಬುದನ್ನು ನೀವೇ ತಿಳಿದಿರುವಿರಿ. ಕೆಲ ಮಟ್ಟಿಗೆ ನಾವು ಆ ಪ್ರಯತ್ನದಲ್ಲಿ ಯಶ ಗಳಿಸಿದೆವಾದರೂ ಭಿನ್ನಾಭಿಪ್ರಾಯಗಳು ಇನ್ನೂ ಬಲಗೊಳ್ಳುತ್ತವೆ ಎಂಬ ಭಯ ನಮ್ಮಲ್ಲಿ ಮೂಡಿ ಅಸಮಾಧಾನವುಂಟಾಗಿತ್ತು. ಕಾಕಿನಾಡಾ ಅಧಿವೇಶನದಲ್ಲಿ ಮತ್ತೆ ನಾವೆಲ್ಲ ಕೂಡಿದೆವು. ನಾನಿಲ್ಲಿ ಯಾರ ಮೇಲೂ ಅಪ್ರಾಮಾಣಿಕತೆಯ ದೂಷಣೆ ಹೊರಿಸ ಬಯಸುತ್ತಿಲ್ಲ. ನಾವು ನಮ್ಮ ತತ್ವ ವಿಚಾರಗಳಲ್ಲಿ ದೃಢವಾಗಿರುವಷ್ಟೇ ನಮ್ಮೊಂದಿಗೆ ಹೋರಾಟಕ್ಕಿಳಿದ ಬೇರೆ ಬಣದಲ್ಲಿಯ ನನ್ನ ಸ್ನೇಹಿತರೂ ತಮ್ಮ ತಮ್ಮ ನಿಲುಮೆಗಳಿಗೆ ಬಲವಾಗಿ ಅಂಟಿಕೊಂಡವರಾಗಿದ್ದರು. ದಿಲ್ಲಿಯಲ್ಲಿ ನಾವು ಪರಸ್ಪರ ಹೋರಾಟ ನಡೆಸಿದೆವು. ನಮ್ಮ ಭಿನ್ನಾಭಿಪ್ರಾಯಗಳನ್ನು ಸ್ವಲ್ಪ ಮಟ್ಟಿಗೆ ಹೋಗಲಾಡಿಸಿಕೊಂಡೆವು. ಕಾಕಿನಾಡಾದಲ್ಲಿ ಮತ್ತೆ ಜಗಳಾಡಿದೆವು. ಮತ್ತಷ್ಟು ಭಿನ್ನಾಭಿಪ್ರಾಯಗಳನ್ನು ನೀಗಲು ನಮಗೆ ಸಾಧ್ಯವಾಯಿತು. ಮುಂದೆ ಎಂದಾದರೊಂದು ದಿನ ಮಹಾತ್ಮಾಜಿಯವರ ಮುಂದೆಯೇ ನಮ್ಮ ಎಲ್ಲ ಭಿನ್ನಮತಗಳು ಅಂತ್ಯಗೊಳ್ಳುವವೆಂದು ನನಗನಿಸಿಯೇ ಇತ್ತು. ನಾನು ಇಂಥ ಒಂದು ದಿನಕ್ಕಾಗಿ ಒಂದು ಸಂದರ್ಭಕ್ಕಾಗಿ ಯಾವಾಗಲೂ ಎದುರು ನೋಡುತ್ತಲೇ ಇದ್ದೆ. ನಾನು ಬಯಸಿದಂತೆ ಮಹಾತ್ಮಾಜಿಯವರು ಜೈಲಿನಿಂದ ಬಿಡುಗಡೆಯಾದ ಬಳಿಕ ಕಾಕಿನಾಡದಲ್ಲಿ ನಮ್ಮ ಎರಡೂ ಬಣಗಳ ನಡುವೆ ಒಡಂಬಡಿಕೆಯಾಗುವುದಕ್ಕೆ ಸಮ್ಮತಿಸಿದರು.

"ಗೆಳೆಯರೇ, ಒಡಂಬಡಿಕೆಯೇನಿದೆ" ಎಂದು ನಿಮಗೆಲ್ಲರಿಗೂ ಗೊತ್ತು. ಯಾವುದೇ ಒಂದು ಬಣವು ಬೇರೊಂದು ಬಣವನ್ನು ಕಾಂಗ್ರೆಸ್ಸಿನಿಂದ ಹೊರಗುಳಿದುದು ಎಂದು ಯಾವುದೇ ಬಣದವರು ಯಾವಾಗಲೂ ಹೇಳಕೂಡದೆಂಬುದು ಈ ಒಡಂಬಡಿಕೆಯಲ್ಲಿ ಮುಖ್ಯವಾದ ಅಂಶ. ಕಾಂಗ್ರೆಸ್ಸಿನಲ್ಲಿ ನನಗೆಷ್ಟು ಹಕ್ಕಿದೆಯೋ ಅಷ್ಟೇ ಹಕ್ಕು ಅಧಿಕಾರಗಳು ಬೇರೆಯವರಿಗೂ ನನ್ನ ಎದುರು ಗುಂಪಿನವರಿಗೂ ಉಂಟು. ಈ ಗೊತ್ತುವಳಿಯ ಇದೇ ಅಂಶವನ್ನು ಸಮ್ಮತಿಸುತ್ತದೆ. ಅಮೇರಿಕೆ ಕವಯಿತ್ರಿಯೊಬ್ಬಳ ಸುಂದರ ಕವನದ ಸಾಲುಗಳು ನನಗಿಲ್ಲಿ ನೆನಪಿಗೆ ಬರುತ್ತಿವೆ. ಆ ಕವಯಿತ್ರಿಯ ಹೆಸರು ನನಗೀಗ ನೆನಪಿಗೆ ಬರುತ್ತಿಲ್ಲ. ಕವನದ ಸಾಲುಗಳನ್ನು ಮರೆತಿದ್ದೇನೆ. ಎರಡು ಸಾಲುಗಳಷ್ಟೇ ನೆನಪಿನಲ್ಲಿವೆ. ಮೊದಲ ಎರಡು ಸಾಲುಗಳು ನಮ್ಮ ಈಗಿನ ಸ್ಥಿತಿಯನ್ನು ಪರಿಣಾಮಕಾರಿಯಾಗಿ ಬಿಂಬಿಸುತ್ತವೆ.

He drew a circle and cut me out. He called me a rebel and leretic.
But love and I joined to win we drew a circle and I took him in.

ವರ್ತುಳವೊಂದನ್ನು ರಚಿಸುವವನು ಹೊರಗಡೆ ನನ್ನನು ತಳ್ಳಿದನು. ಬಂಡುಖೋರನಿವ ದ್ರೋಹಿಯೆನ್ನುತ ನಿಂದಿಸಿದನು. ನಾ ಪ್ರೇಮಭಾವದಲಿ ವರ್ತುಳ ಬೇರೆಯೇ ರಚಿಸುತಲಿ ಆತನಿಗೂ ಪ್ರೇಮದಿಂದ ಕರೆದು ಅಖಂಡ ವಲಯದೊಳು ಬಂದು ಕೂಡಿದೆವು, ಒಂದಾಗಿಹೆವು.

ನಿಮ್ಮ ಮುಂದೆ ನಾನು ಮಂಡಿಸಲಿರುವ ಗೊತ್ತುವಳಿಯ ನಿಜ ಸ್ವರೂಪವೇ ಇದು. ಮಹಾತ್ಮಾ ಗಾಂಧೀಜಿಯವರು ಇಲ್ಲಿ ಬಹಳ ಪ್ರೇಮ ಹಾಗೂ ಅಂತಃಕರಣದಿಂದ ತಮ್ಮದೊಂದು ವಿಶಾಲ ವಲಯ ಅಥವಾ ವರ್ತುಳವನ್ನು ರಚಿಸಿಬಿಟ್ಟು ನಮ್ಮೆಲ್ಲರನ್ನೂ ಆ ಅಖಂಡವಲಯದೊಳಗೆ ಅಂದರೆ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನೊಳಗೆ ಅಭಿನ್ನರಾಗಿರುವಂತೆ ಒಂದು ಗೂಡಿಸಿದ್ದಾರೆ. (ಕೇಳಿರಿ, ಕೇಳಿರಿ ಎಂಬ ಘೋಷಣೆ ಹಾಗೂ ಪ್ರಚಂಡ ಹರ್ಷೋದ್ಗಾರ)

ಇಂದು ಬದಲಾವಣೆ ಬೇಡವೆಂಬವರು ಬದಲಾವಣೆ ಪರವಾಗಿರುವವರು ಈ ಎರಡೂ ಗುಂಪುಗಳವರು ಕಾಂಗ್ರೆಸ್ಸಿನಲ್ಲಿ ಅವಿಭಾಜ್ಯ ಅಂಗವಾಗಿ ಸೇರಿಕೊಂಡಿದ್ದಾರೆ. ನಿಮ್ಮೊಳಗೆಯೇ ಒಗ್ಗಟ್ಟೆಂಬುದಿಲ್ಲ, ನೀವು ವಿಭಾಜಿತರಾಗಿರುವಿರಿ. ಎರಡು ಬಣಗಳಾಗಿ ಒಡೆದು ಹೋಗಿದ್ದೀರಿ ಎಂದು ಸರಕಾರ ಈಗ ನಮ್ಮ ಕಡೆ ಕೈಮಾಡಿ ಹೇಳುವ ಸ್ಥಿತಿಯಲ್ಲಿಲ್ಲ. ಎಲ್ಲಿಯವರೆಗೆ ಸ್ವತಃ ವಿಚಾರ ಮಾಡುವ, ವಿವೇಕದಿಂದ ತಮ್ಮದೊಂದು ನಿಲುಮೆ ತಳೆಯುವ ಹಕ್ಕನ್ನು, ಬುದ್ಧಿ ಶಕ್ತಿಯನ್ನು ಮಾನವ ಹೊಂದಿರುತ್ತಾನೆಯೋ ಅಲ್ಲಿಯವರೆಗೆ ಭಿನ್ನಾಭಿಪ್ರಾಯಗಳಿರತಕ್ಕವೇ. ಭಿನ್ನಾಭಿಪ್ರಾಯಗಳಿರಲೇಬೇಕು. ಆದರೆ ಸಾಮ್ರಾಜ್ಯಶಾಹೀ ಅಧಿಕಾರಶಾಹಿ ನೀಡುವ ಅಹ್ವಾನಗಳಿಗೆ, ಸವಾಲುಗಳಿಗೆ ದೃಢವಾಗಿ ಎದುರು ನಿಂತು ಸೂಕ್ತ ಉತ್ತರ ನೀಡುವ ಶಕ್ತಿ ಯಾವಾಗಲೂ ನಮ್ಮಲ್ಲಿದೆ. ಪ್ರಚಂಡ ಅಹ್ವಾನಗಳನ್ನು ಒಗ್ಗಟ್ಟಿನಿಂದ ಎದುರಿಸುವ ಕಾಲವೀಗ ಪ್ರಾಪ್ತವಾಗಿದೆ. ಸಾಮ್ರಾಜ್ಯಶಾಹೀ ಅಧಿಕಾರ ಶಾಹಿ ಗೆಲ್ಲುತ್ತದೊ ಅಥವಾ ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಜಯದುಂದುಭಿ ಮೊಳಗಿಸುತ್ತದೊ ಎಂಬುದರ ನಿಷ್ಕರ್ಷ ಆಗುವುದು ನಮ್ಮನ್ನೇ ಅವಲಂಬಿಸಿದೆ. ಸಾಮ್ರಾಜ್ಯಶಾಹೀ ಅಧಿಕಾರಶಾಹೀ ದರ್ಪ ನಿಮ್ಮ ಮುಂದೆ ಬಲವಾದ ಆಹ್ವಾನವನ್ನೊಡ್ಡಿದೆ. ಅದು ಜಾರಿಗೆ ತಂದಿರುವ ಸುಗ್ರೀವಾಜ್ಞೆಯು ಈಗೇನೋ ಒಂದು ಪ್ರಾಂತಕ್ಕಷ್ಟೇ ಅನ್ವಯಿಸಿರಬಹುದು. ಆ ಒಂದು ಪ್ರಾಂತದಲ್ಲಿ ಮಾತ್ರ ಅನುಷ್ಠಾನಕ್ಕೆ ತರುವ ಉದ್ದೇಶದ್ದಿರಬಹುದು. ಆದರೆ ಸರಕಾರದ ಈ ಸುಗ್ರೀವಾಜ್ಞೆಯು ಇಡೀ ಭಾರತಕ್ಕೆಯೇ ಅವಮಾನಕಾರಕವೆಂಬುದನ್ನು ನಾನು ಹೇಳಬಯಸುತ್ತೇನೆ. ಇದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಿರಿ (ಕೇಳಿರಿ ಕೇಳಿರಿ ಎಂಬ ಕೂಗು) ಇಡೀ ಭಾರತದ ಮೇಲೆ ಆಕ್ರಮಣ ದಬ್ಬಾಳಿಕೆ ನಡೆದಿದೆ ಅದಕ್ಕೆ ನಿಮ್ಮ ಉತ್ತರವೇನು? ನಿಮ್ಮ ಪ್ರತಿಕ್ರಿಯೆ ಪ್ರತ್ಯುತ್ತರವೆಂತು ? ಬದಲಾವಣೆ ಬಯಸುವವರೆಲ್ಲರೂ ಅವಿವೇಕಿಗಳು, ವಿಚಾರ ಹೀನರು ಆಗಿದ್ದು ಅವರನ್ನೆಲ್ಲ

ಕಾಂಗ್ರೆಸ್ಸಿನಿಂದ ಹೊರದೂಡಬೇಕೆಂದು ಬದಲಾವಣೆ ಬೇಡವೆನ್ನುವವರೆಲ್ಲರೂ ಈಗ ಹೇಳಲು ಸಾಧ್ಯವೇ ? ಅಥವಾ ಬದಲಾವಣೆ ಬೇಡವೆನ್ನುವವ ರೆಲ್ಲನ್ನೂ ಸಂಕುಚಿತ ಮನೋಭಾವದವರೆಂದೂ ವಿಚಾರ ಶಕ್ತಿಯೇ ಇಲ್ಲದವರೆಂದೂ ಹೇಳುತ್ತ ಅಂಥವರನ್ನೆಲ್ಲ ಕಾಂಗ್ರೆಸ್ಸಿನಿಂದ ಹೊರಗಿಡಬೇಕೆಂದು ಬದಲಾವಣೆ ಪರರು ಆಗ್ರಹಿಸಬಹುದೆ? ನಮ್ಮ ನಮ್ಮೊಳಗಿನ ಭಿನ್ನಮತ ವ್ಯಕ್ತನೆಯ, ಒಡಕಿನ ನಿರ್ಣಯದ ಸಮೀಚಿನ ಭೋಜನವೇ ತಮಗಾಗಿ ಬೆಳಗಾವಿಯಲ್ಲಿ ಅಣಿಗೊಳ್ಳಬಹುದೆಂಬುದನ್ನು ಸಾಮ್ರಾಜ್ಯಶಾಹಿ ಅಧಿಕಾರಶಾಹಿ ಗಳು ಕಾತುರತೆಯಿಂದ ನಿರೀಕ್ಷಿಸುತ್ತಿದ್ದಾರೆ. (ಪ್ರಚಂಡ ನಗುವಿನ ಅಲೆಗಳು ಹೊರ ಹೊಮ್ಮಿದವು.) ಬದಲಾವಣೆ ಒಲ್ಲದವರ ಹಾಗೂ ಬದಲಾವಣೆ ಪರವಾಗಿರುವವರ ನಡುವೆ ಬೃಹತ್ ಸಂಘರ್ಷ ಇಲ್ಲಿ ಮೈ ತಾಳಬಹುದೆಂಬುದು ಅವರ ಬಲವಾದ ನಿರೀಕ್ಷೆ. ಮಹಾತ್ಮಾ ಗಾಂಧೀಜಿಯವರು ಇಂಥದೊಂದು ಪ್ರಸಂಗವೇ ನಡೆಯದಂತೆ ತಪ್ಪಿಸಿ ಅವರ ನಿರೀಕ್ಷೆಯನ್ನು ಹುಸಿಗೊಳಿಸಿದ್ದಾರೆ. (ಮತ್ತೆ ಶ್ರೋತೃಗಳ ಪ್ರತಿನಿಧಿಗಳ ಪ್ರಚಂಡ ನಗೆ) ನೀವೂ ಏನೇ ಮಾಡಿರಿ. ಎಷ್ಟೇ ಲಾಗ ಹಾಕಿರಿ. ಆದರೆ ಒಗ್ಗಟ್ಟಿನಿಂದ ಬಲಾಢ್ಯವಾದ ಸುಸಂಘಟಿತ ರಾಷ್ಟ್ರೀಯ ಸಂಘಟನೆಯ ಎದುರಿನಲ್ಲಿ ಸಾಮ್ರಾಜ್ಯಶಾಹಿ ಅಧಿಕಾರಶಾಹಿಯು ಎಂದೂ ಯಶಸ್ವಿಯಾಗಿ ನಿಲ್ಲುವುದು ಈ ಪ್ರಪಂಚದಲ್ಲಿ ಯಾವಾಗಲೂ ಸಾಧ್ಯವಾಗದು ಎಂಬುದೇ ನಾವು ಇಂದು ಅವರಿಗೆ ನೀಡುವ ಉತ್ತರವಾಗಿದೆ. ಅವರ ವಿರುದ್ಧ ಇಂದು ಸರ್ವತ್ರ ಎಲ್ಲ ದಿಶೆಗಳಲ್ಲಿ ಹೋರಾಟ ನಡೆಸಲು ಸನ್ನದ್ಧರಾಗಿದ್ದೇವೆ ಎಂಬುದೇ ಅವರಿಗೆ ನಾವು ನೀಡಬೇಕಾದ ಸೂಕ್ತ ಉತ್ತರ. ನೀವು ಈಗ ನಾನು ಮಂಡಿಸಿದ ಗೊತ್ತುವಳಿಯನ್ನು ಅಂಗೀಕರಿಸಿದಿರಾದರೆ ಅವರಿಗೆ ನೀಡಬೇಕಾದ ಈ ಉತ್ತರ ನೀಡುವುದಕ್ಕೆ ಸಿದ್ಧರಾದಂತೆ. ಅಧಿಕಾರಶಾಹಿ ದಬ್ಬಾಳಿಕೆಯನ್ನು ಸರ್ವ ದಿಶೆಯಲ್ಲೂ ಬಲವಾಗಿ ಎದುರಿಸಿ ಹೋರಾಡುವುದಕ್ಕೆ ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಸಮ್ಮತಿಸಿದೆಂದು ಭಾವಿಸುತ್ತೇನೆ. ಅವರಿಗೆ ದಬ್ಬಾಳಿಕೆ ಮುಂದುವರಿಸಲು ಇನ್ನು ಎಲ್ಲೂ ತಿಲ ಮಾತ್ರವೂ ಸ್ವಲ್ಪವೂ ಅವಕಾಶ ನೀಡಬೇಡಿ. ಅವರ ಅಡಿಪಾಯವನ್ನೇ ಎಲ್ಲೆಡೆಯಲ್ಲೂ ಸಡಿಲುಗೊಳಿಸಿ ಅಮೂಲಾಗ್ರ ಕಿತ್ತೊಗೆಯಿರಿ.

ಹಗಲಿರುಳೂ ನನ್ನನ್ನು ಸದಾ ಕಾಡುತ್ತಿರುವ ಪ್ರಶ್ನೆ ಸ್ವರಾಜ್ಯ ಎಂದರೇನು ? ಎಂಬುದು. ಆಂಗ್ಲ ಸಾಮ್ರಾಜ್ಯಾಂತರ್ಗತ ಅಧೀನ ಸ್ವಾತಂತ್ರ್ಯವೆಂದು, ಡೊಮಿನೀಯನ್ ಸ್ಟೇಟಸ್ ಎಂದೂ ಕೆಲವರೆಂದರೆ ಇನ್ನು ಕೆಲವರು ಸ್ವಾತಂತ್ರ್ಯವೆಂದಿಷ್ಟೇ ಹೇಳುತ್ತಾರೆ. ಎರಡೂ ನಮಗೆ ಬೇಕಿಲ್ಲ. ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು. ಸ್ವಾತಂತ್ರ್ಯ ಸ್ವರಾಜ್ಯ ವೆಂದರೇನು ? ಆಂಗ್ಲರನ್ನು ನಮ್ಮ ದೇಶದಿಂದ ಹೊರದೂಡಿದರೆ ನಮಗೆ ಸ್ವರಾಜ್ಯ ಸಿಕ್ಕಂತಾಗುವುದೆ ? ಇಲ್ಲ. ಸ್ವರಾಜ್ಯವೆಂದರೆ ಇವೆರಡಕ್ಕಿಂತಲೂ ಉನ್ನತವಾದುದು. ನಿಮ್ಮ ರಾಷ್ಟ್ರ ನಿರ್ಮಾಣಕ್ಕೆ ಎದುರಾಗುವ ಎಲ್ಲ ಅಡೆತಡೆ ಆತಂಕಗಳಿಂದ ಮುಕ್ತರಾಗುವುದೇ ಸ್ವರಾಜ್ಯ. ನಿಮ್ಮತನದ ಬಗ್ಗೆ

ನಿಮ್ಮಲ್ಲಿರುವ ಶಕ್ತಿ ಸಾಮರ್ಥ್ಯಗಳ ಬಗ್ಗೆ ಜಾಗೃತಿ ಮೂಡುವುದಕ್ಕೆ ಉಂಟಾಗುವ ಎಲ್ಲ ತಡೆಗಳನ್ನು ನಿರ್ಮೂಲಗೊಳಿಸಿಕೊಳ್ಳುವುದೇ ಸ್ವರಾಜ್ಯ. ಎರಡನೆಯದಾಗಿ ಸ್ವರಾಜ್ಯವೆಂದರೆ ಆತ್ಮ ಸಾಕ್ಷಾತ್ಕಾರದಿಂದಾದ ಹಕ್ಕು. ಭಾರತ ರಾಷ್ಟ್ರವನ್ನು ಕುರಿತಂತೆಯೇ ಪ್ರಗತಿಪರ ಕ್ರಿಯಾಶೀಲತೆಯ ಆತ್ಮಸಾಕ್ಷಾತ್ಕಾರ. ಸ್ವರಾಜ್ಯದ ನಿಜಾರ್ಥವಿದು. ಪಾಶ್ಚಾತ್ಯರಿಂದ ಸ್ವರಾಜ್ಯಕ್ಕೆ ಬರುವ ಅರ್ಥವನ್ನು ನಾನಿಲ್ಲಿ ಆಯ್ದುಕೊಳ್ಳಬಯಸುವುದಿಲ್ಲ. ಸ್ವರಾಜ್ಯವೆಂಬುದರ ಅರ್ಥ ಹೀಗಿರುವುದಾದರೆ ಇದನ್ನು ಪಡೆದುಕೊಳ್ಳಲು ನಾವೇನು ಮಾಡಬೇಕು ? ಇಂದು ನಿಮ್ಮ ಸಮಗ್ರ ರಾಷ್ಟ್ರೀಯ ಜೀವನ ಸಾಮ್ರಾಜ್ಯಶಾಹೀ ಅಧಿಕಾರಶಾಹಿಗಳ ಚಟುವಟಿಕೆಗಳಿಂದ ತುಂಬಿಕೊಂಡಿದೆ. ನೀವು ನಿಮ್ಮೆಲ್ಲ ಚಟುವಟಿಕೆಗಳನ್ನು ಈಗ ಇಂಥ ಸಾಮ್ರಾಜ್ಯಶಾಹೀ ಅಧಿಕಾರಶಾಹೀ ಚಟುವಟಿಕೆಗಳಿಂದ ಮುಕ್ತಗೊಳಿಸಿಕೊಳ್ಳುವುದಿದೆ. ಹೀಗಾಗುವುದೇ ಸ್ವರಾಜ್ಯ ಅಥವಾ ಸ್ವಾತಂತ್ರ್ಯ . ಆದರೆ ಸ್ವರಾಜ್ಯವೆಂದರೇನು ? ಎಂಬ ಪ್ರಶ್ನೆಯ ಒಂದು ಭಾಗದ ವಿವರಣೆ ಮಾತ್ರವದು. ನೀವು ನಿಮ್ಮ ಬದುಕನ್ನು ಸಮಗ್ರವಾಗಿ ವ್ಯಾಪಿಸಿಕೊಂಡಿರುವ ಆವರಣದಿಂದ ಅಂದರೆ ಸಾಮ್ರಾಜ್ಯಶಾಹೀ ಅಧಿಕಾರಶಾಹೀ ಪ್ರಭಾವದ ವಲಯದಿಂದ ಪೂರ್ಣ ಮುಕ್ತಗೊಳಿಸಿಕೊಳ್ಳಲಾರಿರಿ. ನಿಮ್ಮದೇ ರಾಷ್ಟ್ರೀಯ ಪ್ರಜ್ಞೆ ಅಥವಾ ರಾಷ್ಟ್ರವನ್ನು ನೀವು ಸ್ವತಃ ನಿರ್ಮಾಣ ಮಾಡಿಕೊಳ್ಳದ ಹೊರತು ನೀವು ಅವರ ಸಾಮ್ರಾಜ್ಯಶಾಹೀ ಚಟುವಟಿಕೆಗಳಿಂದ ಮುಕ್ತರಾಗಲು ಸಾಧ್ಯವೇ ಇಲ್ಲ. ಈ ಎರಡೂ ಅಂಶಗಳನ್ನು ನೀವು ಗಮನದಲ್ಲಿಟ್ಟುಕೊಳ್ಳಬೇಕು ಎಂದು ನಾನು ಹೇಳಬಯಸುತ್ತೇನೆ.

ವಿಧಾನ ಮಂಡಳದಲ್ಲಿ ಪ್ರವೇಶಿಸುವುದರಿಂದ ನಿಮಗೆ ಸ್ವರಾಜ್ಯ ಲಭ್ಯವಾದೀತೆ ಎಂದು ನನ್ನನ್ನು ಮೇಲಿಂದ ಮೇಲೆ ಪ್ರಶ್ನಿಸಲಾಗಿದೆ. ನಾನದಕ್ಕೆ ಹಲವಾರು ಬಾರಿ ಉತ್ತರಿಸಿಯೂ ಇದ್ದುದುಂಟು. ಆದರೆ ದೃಢ ನಿಲುವು ವ್ಯಕ್ತಪಡಿಸಿದಂತೆ ಸ್ಪಷ್ಟ ವಿಚಾರ ವ್ಯಕ್ತ ಮಾಡಿದಂತೆ ಅದಾಗಿಲ್ಲವೆಂಬ ಅಳುಕು ನನ್ನಲ್ಲಿದೆ. ಯಾಕೆಂದರೆ ವಿಧಾನ ಮಂಡಳದಲ್ಲಿಯ ನಮ್ಮ ಪ್ರವೇಶವನ್ನು ವಿರೋಧಿಸಿದ ಮಹನೀಯರೆಲ್ಲರೂ ನಮ್ಮನ್ನು ಸಂಶಯಾಸ್ಪದ ದೃಷ್ಟಿಯಿಂದಲೇ ಸಂಪರ್ಕಿಸಿದ್ದುಂಟು. ವಿಧಾನ ಮಂಡಳದಲ್ಲಿಯ ಪ್ರವೇಶ ಮಾತ್ರದಿಂದಲೇ ಸ್ವರಾಜ್ಯ ಲಭಿಸದು. ಅದು ನಮಗೆ ಬೇಕಾದ ಸ್ವರಾಜ್ಯ ಅಥವಾ ಸ್ವಾತಂತ್ರ್ಯ ನೀಡಲಾರದು ಎಂದೇ ನಾನು ಒಂದಲ್ಲ ಹಲವಾರು ಸಲ ಪುನರುಚ್ಚರಿಸುತ್ತಲೇ ಬಂದಿದ್ದೇನೆ. ಅಷ್ಟೇ ಅಲ್ಲದೇ ವಿಧಾನ ಮಂಡಳ ಪ್ರವೇಶವು ನಿಮ್ಮ ಸ್ವಾತಂತ್ರ್ಯ ವಿರುದ್ಧ ಕೆಲಸ ಮಾಡುವಂಥ ಸಂಸ್ಥೆಯಲ್ಲವೆಂದೂ ನಾನು ಹೇಳಿದುದುಂಟು. ಸ್ವರಾಜ್ಯ ಪಡೆಯಲು ಉಂಟಾಗುವ ತಡೆ ಅಥವಾ ಆತಂಕವನ್ನು ನೀವು ಉಚ್ಚಾಟಿಸಬೇಕಾಗಿದೆ. (ಕೇಳಿರಿ ಕೇಳಿರಿ ಎಂಬ ಧ್ವನಿ ಹಾಗೂ ಪ್ರಚಂಡ ಕರತಾಡನ) ಆದರೆ ನೀವು ನಿಮ್ಮದೇ ಆದ ಚಟುವಟಿಕೆಗಳಿಂದ ಕ್ರಿಯಾಶೀಲತೆಯಿಂದ ಗಳಿಸಬೇಕಾಗಿರುವ ಸಂಪದ ಸ್ವರಾಜ್ಯವೆನಿಸಿದೆ. ಸ್ವರಾಜ್ಯವೆಂದರೇನು ? ಎಂಬುವುದರಲ್ಲೇ ನೀವು ನಿಮ್ಮ ಚಿಂತನೆ

ನೆಲೆಗೊಳಿಸಿಕೊಳ್ಳುವಂತೆ ನಿಮ್ಮನ್ನು ಕೇಳಿಕೊಳ್ಳುತ್ತಲಿದ್ದೇನೆ. ಸಾಮ್ರಾಜ್ಯಶಾಹಿ ಅಧಿಕಾರಶಾಹಿಯು ನಿರಂತರ ಕಾರ್ಯತತ್ಪರವಾಗಿರುವ ಎಲ್ಲ ಕ್ಷೇತ್ರಗಳನ್ನು ನೀವು ಕಿತ್ತುಕೊಳ್ಳಲು ನೀವೆಲ್ಲ ಸದಾ ಕಾರ್ಯಾನ್ವಿತರಾಗಿರಬೇಕೆಂಬುದೇ ನನ್ನ ವಿಚಾರ ಹಾಗೂ ಇಚ್ಛೆ. ನೀವೆಲ್ಲ ಈ ದೋಷಪೂರಿತ ವ್ಯವಸ್ಥೆಯನ್ನು ಒಂದೊಮ್ಮೆ ನಿರ್ಮೂಲಗೊಳಿಸಿದಿರೋ ಆಗ ವಿಧಾನ ಮಂಡಲಗಳನ್ನು ಅವುಗಳ ಬೇರೆಯದ್ದೇ ಆದ ಕಾರ್ಯ ನಿರ್ವಹಣೆಗೆ ಬಿಟ್ಟು ಕೊಡಬಹುದು. ವಿಧಾನ ಮಂಡಳದ ಪ್ರಕ್ರಿಯೆ ಎಂಬುದು ನಿಮ್ಮೊಂದಿಗಿರಬೇಕಾದ ಶಾಶ್ವತ ಸ್ವರೂಪದ ಚಟುವಟಿಕೆಯೇನೂ ಅಲ್ಲ. ಎಲ್ಲ ಪುರಸಭೆ ನಗರ ಪಾಲಿಕೆ ಜಿಲ್ಲಾ ಮಂಡಳ ಹಾಗೂ ಸ್ಥಳೀಯ ಸಂಸ್ಥೆಗಳನ್ನು ನಿಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಿ ನಂತರ ನೀವು ನಿಮ್ಮದೇ ಆದ ಬದುಕು ನಿರ್ಮಿಸಿಕೊಳ್ಳಿ.

ಗೊತ್ತುವಳಿಯ ಎರಡನೇ ಭಾಗವಾಗಿರುವ ವಿದೇಶೀ ಬಟ್ಟೆಗಳ ಬಹಿಷ್ಕಾರದಲ್ಲಿ ಅಡಕವಾದ ಸಾಮ್ರಾಜ್ಯಶಾಹಿ ಅಧಿಕಾರಶಾಹೀ ನಿರ್ಮೂಲನೆಯ ಇನ್ನೊಂದು ದೊಡ್ಡ ಪ್ರಶ್ನೆಗೆ ಈಗ ನಾನು ಮಹತ್ವದ ಉತ್ತರ ನೀಡ ಬಯಸುತ್ತೇನೆ. ಅಧಿಕಾರಶಾಹೀ ದಬ್ಬಾಳಿಕೆಗೆ ಅಥವಾ ನಿಯಂತ್ರಣಕ್ಕೆ ನೀವು ಸಹ ಸೂಕ್ತ ಉತ್ತರ ನೀಡಲು ಹಾಗೂ ಅದನ್ನು ಕಿತ್ತೆಸೆಯಲು ಸಿದ್ಧರಾಗಬೇಕೆಂದು ನಾನು ಬಯಸುತ್ತಿದ್ದೇನೆ. ನೀವು ವಿದೇಶೀ ಬಟ್ಟೆಗಳ ಬಹಿಷ್ಕಾರದ ಮೂಲಕ ನೀಡುವ ಉತ್ತರವು ಅವರ ಅಂದರೆ ವಿದೇಶಿಯ ಅಧಿಕಾರಶಾಹೀ ಚಟುವಟಿಕೆಗಳ ಅಹಮಹಮಿಕೆಯ ಸದ್ದನ್ನು ಅಡಗಿಸುವುದಲ್ಲದೇ ನಿಮ್ಮದೇ ಆದ ರಾಷ್ಟ್ರೀಯ ಜೀವನವನ್ನು ರೂಪಿಸಿಕೊಳ್ಳಲು ನಿಮಗೆ ನೆರವಾಗುತ್ತದೆ. ನೀವು ಅಂಥ ಇನ್ನೊಂದು ದೃಢ ನಿರ್ಧಾರ ಕೈಗೊಳ್ಳಬೇಕೆಂದು ನಾನು ಇಚ್ಛಿಸುತ್ತೇನೆ. ಸ್ವತಃ ಕೈಯಿಂದ ನೂಲು ತೆಗೆಯಲಿಕ್ಕೆ ಸಾಧ್ಯವಿಲ್ಲದವರು ನೂಲು ತೆಗೆಯಲಿಕ್ಕೆಂದು ಇರುವ ಸಂಘಟನೆಯತ್ತ ಗಮನ ಹರಿಸಬೇಕು. ನೇಯ್ಗೆಯನ್ನು ಸ್ವತಃ ಕೈಗೊಳ್ಳಲು ಸಾಧ್ಯವಿಲ್ಲದವರು ನೇಯ್ಗೆ ವ್ಯವಸಾಯದ ಸಂಘಟನೆಯತ್ತ ಲಕ್ಷ್ಯ ಕೊಡಬೇಕು. ನಾವೆಲ್ಲ ಇತ್ತ ಗಮನ ಹರಿಸಿ ಸ್ವತಃ ಕಠಿಣ ಪರಿಶ್ರಮ ಮಾಡಿದ್ದಾದರೆ ನಮಗಾಗಿ ನಮ್ಮ ರಾಷ್ಟ್ರೀಯ ಜೀವನದ ಪುನರುತ್ಥಾನಕ್ಕಾಗಿ ಬೇರೆಯವರಾರೂ ಏನನ್ನೂ ಮಾಡಬೇಕಾಗಿಲ್ಲ. ವಿದೇಶೀ ಬಟ್ಟೆಗಳ ಬಹಿಷ್ಕಾರವನ್ನು ನಾವು ಅತ್ಯಲ್ಪ ಅವಧಿಯಲ್ಲೇ ಸಾಧಿಸಬಹುದೆಂಬ ಆತ್ಮ ವಿಶ್ವಾಸ ನನಗಿದೆ. ಅದುವೇ ನಮ್ಮ ಸ್ವರಾಜ್ಯ ಸಿದ್ಧಿಯ ಆರಂಭವೆನಿಸುತ್ತದೆ. ಅದುವೇ ನಮ್ಮ ಸ್ವಾತಂತ್ರ್ಯ ಪ್ರಾಪ್ತಿ ಹಾಗೂ ದಾಸ್ಯ ವಿಮೋಚನೆಗೆ ಭದ್ರ ಬುನಾದಿಯೆನಿಸಿತು. ನಾನು ಯಾವಾಗಲೂ ಬೋಧಿಸಬಯಸುವ ಪವಿತ್ರ ಬೋಧೆ ಗೀತೆ, ಬೈಬಲ್ ಕುರಾನಿನ ಪ್ರಸಕ್ತ ಉಪದೇಶವೇ ಅದು. ವಿಧಾಯಕ ಕಾರ್ಯಕ್ರಮಗಳ ವಿರುದ್ಧ ನಾನು ಯಾವಾಗಲೂ ಒಂದೇ ಒಂದು ಶಬ್ದವನ್ನಾಡಿಲ್ಲ. ಬೇರೆ ಚಟುವಟಿಕೆಗಳನ್ನೂ ನಾನವರಲ್ಲಿ ಸೇರಿಸಲೆತ್ನಿಸಿದ್ದೇನೆ. ಸಾಮ್ರಾಜ್ಯಶಾಹೀ ಅಧಿಕಾರಶಾಹಿಯ ವಿರುದ್ಧ ಸರ್ವತ್ರ

ಹೋರಾಟ ನಡೆಸುವ ಸ್ವಾತಂತ್ರ್ಯ, ಯಾವ ಅನಿಷ್ಟವನ್ನು ಸಂಪೂರ್ಣ ಧ್ವಂಸಗೊಳಿಸಬೇಕೋ ಅಂಥ ಬಲಾಢ್ಯ ಶಕ್ತಿ ಸಾಮರ್ಥ್ಯ ಹಾಗೂ ಅದ್ಭುತವಾದ ಪ್ರಚಂಡ ಪುನರ್ನಿರ್ಮಾಣ ಶಕ್ತಿಯನ್ನು ನಿಮಗೆ ನೀಡುವಂಥ ಗೊತ್ತುವಳಿಯನ್ನು ಈಗ ಮಂಡಿಸುವ ಗೌರವ ನನ್ನ ಪಾಲಿನದಾಗಿದೆ.

ಪ್ರಪಂಚದ ಇತಿಹಾಸದಲ್ಲಿ ಮಹಾ ಸಾಮ್ರಾಜ್ಯಗಳನೇಕ ನಿರ್ಮಾಣಗೊಂಡಿವೆ. ಹಾಗೆಯೇ ಮಣ್ಣು ಮುಕ್ಕಿವೆ. ಭಾರತದ ಮೇಲೆ ತನ್ನ ದಬ್ಬಾಳಿಕೆಯನ್ನು ಎಂದಿನಂತೆ ಹಾಗೆಯೇ ತಾನು ಮುಂದುವರಿಸಿಕೊಂಡು ಹೋಗುವುದು ಸಾಧ್ಯವಿದೆ ಅಂಥದಕ್ಕೆಂದೇ ತಾನಿರುವುದು ಎಂದೇನಾದರೂ ಅಧಿಕಾರಶಾಹಿ ಅಥವಾ ಸಾಮ್ರಾಜ್ಯಶಾಹೀ ಶಕ್ತಿ ಎಂದುಕೊಂಡಿದ್ದರೆ ಅವರ ಸಂಕುಚಿತ ದೃಷ್ಟಿಯದು. ತಪ್ಪು ತಿಳುವಳಿಕೆಯವರದು. ಅವರ ಅಂತ್ಯಕಾಲವೀಗ ಸನ್ನಿಹಿತವಾಗಿದೆ. ಏನೇ ಆದರೂ ಈ ಪ್ರಪಂಚ ದೇವರದು. ಆಗುಹೋಗುಗಳೆಲ್ಲ ದೈವಾಯತ್ತ ದೇವ ನಿಯಂತ್ರಿತ ನಮ್ಮ ದೋಷಗಳಿಗಾಗಿ, ನಾವು ಸ್ವಯಂಕೃತಾಪರಾಧಗಳಿಗಾಗಿ ಈಗಾಗಲೇ ನಾವು ಶಿಕ್ಷೆಯನ್ನು ಅನುಭವಿಸಿ ಆಗಿದೆ. ನಾವಿನ್ನೂ ಸ್ವರಾಜ್ಯ ಸಿದ್ದಿಗೆ, ಸ್ವಾತಂತ್ರ್ಯ ಪ್ರಾಪ್ತಿಗೆ ನಮ್ಮನ್ನು ಅರ್ಹರನ್ನಾಗಿಸಿಕೊಳ್ಳಲೇಬೇಕು. ಭಾರತ ರಾಷ್ಟ್ರ ಸ್ವತಃ ಹೀಗೆ ಸನ್ನದ್ಧವಾದಾಗ ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಕೇವಲ ಠರಾವುಗಳನ್ನು ಪಾಸು ಮಾಡುವಲ್ಲಿ ಅಲ್ಲದೆ ಕಾರ್ಯಾಚರಣೆಯಲ್ಲೂ ಒಗ್ಗಟ್ಟಿನಿಂದ ದೃಢವಾಗಿ ನಿಂತಾಗ, ಸಾಮ್ರಾಜ್ಯಶಾಹೀ ತನ್ನಿಂತಾನೇ ನಾಶಗೊಳ್ಳುತ್ತದೆ ಎಂದು ಅವರು ತಮ್ಮ ಭಾಷಣ ಕೊನೆಗೊಳಿಸಿದಂತೆಯೇ ಪ್ರಚಂಡ ಕರತಾಡನ, ಹರ್ಷೋದ್ಗಾರಗಳು ಗಗನ ಚುಂಬಿಸಿದುವು.

ಗೊತ್ತುವಳಿಯನ್ನು ಅನುಮೋದಿಸುವಂತೆ ಅಧ್ಯಕ್ಷ ಮಹಾತ್ಮಾ ಗಾಂಧೀಜಿಯವರಿಂದ ಕೇಳಿಕೊಳ್ಳಲಾದ ಮೌಲಾನಾ ಮಹಮ್ಮದ ಅಲಿಯವರು ಹರ್ಷೋದ್ಗಾರ ಹಾಗೂ ಜಯಘೋಷಗಳ ಮಧ್ಯೆ ವೇದಿಕೆಯ ಮೇಲೆ ಬಂದು ನಿಂತು ''ಮಹಾತ್ಮಾಜೀ ಹಾಗೂ ಸ್ನೇಹಿತರೇ, ಮೊದಲಿಗೆ ನಿಮ್ಮ ಅನುಮತಿಯೊಂದಿಗೆ ಇಂಗ್ಲೀಷಿನಲ್ಲಿ ನನ್ನ ಭಾಷಣ ಆರಂಭಿಸಿ ನಂತರ ರಾಷ್ಟ್ರ ಭಾಷೆಯಲ್ಲಿ ಮಾತನಾಡಬಯಸುತ್ತೇನೆ'' ಎಂದರು.

ದೇಶಬಂಧು ಚಿತ್ತರಂಜನದಾಸರು ಈಗಾಗಲೇ ಗೊತ್ತುವಳಿಯನ್ನು ಮಂಡಿಸಿದ್ದಾರೆ. ಸ್ವಾಗತಾಧ್ಯಕ್ಷರಾದ ಕರ್ನಾಟಕದ ಶಿವಾಜಿಯವರಾದ ಗಂಗಾಧರರಾವ್ ದೇಶಪಾಂಡೆಯವರು ನನಗೆ ಈ ಗೊತ್ತುವಳಿಯನ್ನು ಓದಲು ತಿಳಿಸಿದ್ದಾರೆ. ಔರಂಗಜೇಬನೂ ಸಹ ಶಿವಾಜಿಯ ನಾಡಿನಲ್ಲಿ ಅವನು ಹೇಳಿದಂತೆ ಕೇಳಬೇಕಾಯಿತು. ಈಗ ನಾನದನ್ನೇ ಮಾಡುತ್ತಿದ್ದೇನೆ. (ಕೇಳಿರಿ ಕೇಳಿರಿ ಎಂಬ ಧ್ವನಿ, ಚಪ್ಪಾಳೆ ಹಾಗೂ ಹರ್ಷೋದ್ಗಾರ ಕೇಳಿ ಬಂತು) ಒಡಂಬಡಿಕೆ ಗೊತ್ತುವಳಿಯನ್ನು ನಾನು ಓದಬೇಕೆಂದು ನೀವು ಬಯಸುತ್ತಿಲ್ಲ ತಾನೆ?ಯಾಕೆಂದರೆ ಈಗಾಗಲೇ ಅದು ಪ್ರಕಟವಾಗಿ ಆಕಾಶವಾಣಿಯಲ್ಲಿ ಬಿತ್ತರಿಸಲ್ಪಟ್ಟು ಎಲ್ಲರೂ ತಿಳಿದುಕೊಂಡಿದ್ದುಂಟು ಎಂದರು.

ಗೊತ್ತುವಳಿ ಹೀಗಿದೆ

1. ಮಹಾತ್ಮಾ ಗಾಂಧೀಜಿಯವರು ಒಂದೆಡೆ ಹಾಗೂ ದೇಶಬಂಧು ಚಿತ್ತರಂಜನದಾಸ, ಪಂಡಿತ ಮೋತಿಲಾಲ ನೆಹ್ರು ಇವರು ಸ್ವರಾಜ್ಯ ಪಕ್ಷದ ಪರವಾಗಿ ಇನ್ನೊಂದೆಡೆ. ಹೀಗೆ ಉಭಯ ಪಕ್ಷಗಳು ಒಪ್ಪಿಕೊಂಡು ಸಹಿ ಹಾಕಿದ ಒಡಂಬಡಿಕೆ ಠರಾವಿಗೆ ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ತನ್ನ ಅಂಗೀಕಾರ ನೀಡುತ್ತಿದೆ.

ಒಡಂಬಡಿಕೆ

ಭಾರತದಲ್ಲಿಯ ಎಲ್ಲ ಪಕ್ಷಗಳ ಪಂಗಡಗಳ, ಬಣಗಳ, ಗುಂಪುಗಳ ಗುರಿ ಸ್ವರಾಜ್ಯ ಪ್ರಾಪ್ತಿಯೇ ಆಗಿದೆ. ದೇಶದಲ್ಲಿರುವ ಬೇರೆ ಬೇರೆ ಗುಂಪುಗಳು ಗುರಿಯೊಂದೇ ಆಗಿದ್ದರೂ ಪರಸ್ಪರ ವಿರೋಧವಾಗಿ ಕಾರ್ಯ ಮಾಡುತ್ತಿರುವಂತೆ ತೋರುತ್ತಿರುವುದರಿಂದ ಇಂತಹ ಪರಸ್ಪರ ವಿರುದ್ಧ ನಡೆದುಕೊಳ್ಳುವ ಪ್ರಕ್ರಿಯೆಯು ಸ್ವರಾಜ್ಯ ಸಿದ್ಧಿಯು ಗುರಿ ಸಾಧನೆಯ ಪ್ರಗತಿಗೆ ಮಾರಕವೆನಿಸುತ್ತಿದೆ. ಆದ್ದರಿಂದ ಹೀಗೆ ಭಿನ್ನಭಿನ್ನವಾಗಿ ಒಡೆದು ಹೋಗಿರುವ ಎಲ್ಲ ಗುಂಪುಗಳನ್ನು ಸ್ವರಾಜ್ಯ ಪ್ರಾಪ್ತಿಯ ಗುರಿ ಸಾಧನೆಗಾಗಿ ಕಾಂಗ್ರೆಸ್ಸಿನೊಳಕ್ಕೆ ಒಂದೇ ಒಂದು ವೇದಿಕೆಯ ಮೇಲೆ ತರುವುದು ಒಗ್ಗೂಡಿಸುವುದು ಅಪೇಕ್ಷಣೀಯವಾಗಿದೆ. ಕಾಂಗ್ರೆಸ್ಸಿನಲ್ಲಿಯೇ ಎರಡು ಬಣಗಳಿದ್ದು ಅವುಗಳು ಪರಸ್ಪರ ವಿರುದ್ಧ ನಡೆದುಕೊಳ್ಳುತ್ತಿರುವುದರಿಂದ ರಾಷ್ಟ್ರದ ಗುರಿ ಸಾಧನೆಗೆ ಹಾನಿಯುಂಟು ಮಾಡುತ್ತಿವೆ. ಉಭಯತರಿಗೂ ಸಾಮಾನ್ಯವಾದ ಒಂದು ಹಿರಿಯ ಉದ್ದೇಶ ಹಾಗೂ ಗುರಿ ಸಾಧನೆಗಾಗಿ ಎರಡನ್ನೂ ಪುನಃ ಒಗ್ಗೂಡಿಸುವುದು ಅಪೇಕ್ಷಣೀಯವೆನಿಸಿದೆ. ಬಂಗಾಲ ಪ್ರಾಂತದಲ್ಲಿ ಅಲ್ಲಿಯ ಸ್ಥಳೀಯ ಸರಕಾರವು ಗವರ್ನರ್ ಜನರಲ್ಲನ ಮಂಜೂರಿಯ ಸುಗ್ರೀವಾಜ್ಞೆ ಮೂಲಕ ಕೈಕೊಳ್ಳುತ್ತಿರುವ ಕ್ರಮಗಳು ಹಿಂಸಾಚಾರಗಳ ದಮನಕ್ಕಾಗಿರದೇ ಸಂವಿಧಾನಾತ್ಮಕ ಹಾಗೂ ನ್ಯಾಯಯುತವಾಗಿ ಕಾರ್ಯ ಮಾಡುತ್ತಿರುವ ಅಲ್ಲಿಯ ಸ್ವರಾಜ್ಯ ಪಕ್ಷವನ್ನು ಹತ್ತಿಕ್ಕುವ ದಮನಕಾರಿ ಉದ್ದೇಶಗಳನ್ನು ಹೊಂದಿದಂಥವುಗಳಾಗಿವೆ. ಬಂಗಾಲ ಸರಕಾರದ ಇಂಥ ದಮನಕಾರಿ ನೀತಿಯ ವಿರುದ್ಧ ಇಡೀ ದೇಶವೇ ಜಾಗೃತಗೊಂಡು ಒಗ್ಗಟ್ಟಿನಿಂದ ನಿಂತು ಹೋರಾಡುವುದು ಅಗತ್ಯವೆನಿಸಿದೆ. ಆದ್ದರಿಂದ ಈ ಒಡಂಬಡಿಕೆಗೆ ಸಹಿ ಮಾಡಿದ ನಾವೆಲ್ಲರೂ ಎಲ್ಲ ಬೇರೆ ಬೇರೆ ಪಕ್ಷಗಳು ಬಣಗಳವರು ಕಾಂಗ್ರೆಸ್ಸಿನಲ್ಲಿ ಒಂದುಗೂಡಬೇಕಾಗಿದೆ ಎಂದೂ ಈಗ ಬೆಳಗಾವಿಯಲ್ಲಿ ಈ ಅಧಿವೇಶನದಲ್ಲಿ ಅಂಥ ಒಂದು ಒಡಂಬಡಿಕೆಗೆ ಒಪ್ಪಿಕೊಂಡು ಅಂಗೀಕರಿಸುತ್ತಿದ್ದೇವೆ.

ಭಾರತದ ಹೊರಗಡೆ ವಿದೇಶಗಳಲ್ಲಿ ಸಿದ್ಧವಾದ ಅಲ್ಲಿಂದ ಆಯಾತ ಮಾಡಿಕೊಳ್ಳಲಾಗುತ್ತಿರುವ ಬಟ್ಟೆಯ ಬಳಕೆ ಮಾಡುವುದನ್ನು ಹಾಗೂ ಧರಿಸುವುದನ್ನು ಬಹಿಷ್ಕರಿಸುವ ರಾಷ್ಟ್ರೀಯ ಕಾರ್ಯಕ್ರಮವೊಂದನ್ನು ಹೊರತು ಪಡಿಸಿ ಅಸಹಕಾರ

ಆಂದೋಲನದ ಎಲ್ಲ ರಾಷ್ಟ್ರೀಯ ಕಾರ್ಯಕ್ರಮವನ್ನು ಕಾಂಗ್ರೆಸ್ಸು ಸ್ಥಗಿತಗೊಳಿಸತಕ್ಕದ್ದು.

ಕಾಂಗ್ರೆಸ್ಸಿನೊಳಗೆಯೇ ಇರುವ ಬೇರೆ ಬೇರೆ ಬಣಗಳು ತಮ್ಮ ತಮ್ಮ ಅಗತ್ಯವೆನಿಸುವ ಕಾರ್ಯಗಳನ್ನು ಹಾಗೂ ಕಾಂಗ್ರೆಸ್ಸು ತಮ್ಮ ಬೇರೆ ಘಟಕಗಳಲ್ಲಿ ನಿರ್ವಹಿಸಬೇಕಾದ ಕಾರ್ಯಗಳನ್ನು ಮಾಡುತ್ತ ಹೋಗಬೇಕು. ಚರಖಾದ ಮೇಲೆ ಕೈಯಿಂದ ನೂಲುವಿಕೆ, ಕೈನೂಲನ್ನೇ ಬಳಸಿ ಕೈಮಗ್ಗದಲ್ಲಿ ನೇಯ್ಗೆ ಮಾಡಲಾದ ಖಾದಿ ಬಟ್ಟೆಗಳನ್ನೇ ಧರಿಸುವುದಕ್ಕೆ ಈ ಸಂಬಂಧದ ಎಲ್ಲ ಚಟುವಟಿಕೆಗಳಿಗೆ ಪ್ರೋತ್ಸಾಹಿಸಲು ಪ್ರತಿಯೊಬ್ಬ ಕಾಂಗ್ರೆಸ್ಸಿಗನೂ ಯಾವುದೇ ಬಣದವನಾಗಿದ್ದರೂ ಬದ್ಧನಿರಬೇಕು. ವಿವಿಧ ಜಾತಿ ಮತ ಧರ್ಮಗಳವರ ನಡುವೆ ವಿಶೇಷವಾಗಿ ಹಿಂದು - ಮುಸ್ಲಿಮರ ನಡುವೆ ಏಕತೆಯನ್ನು ಸಂವರ್ಧಿಸುವಂತೆ ಮಾಡುವುದಕ್ಕೆ ಹಿಂದುಗಳಲ್ಲಿಯ ಅಸ್ಪೃಶ್ಯತೆ ನಿವಾರಣೆಗೆ ಕಾಂಗ್ರೆಸ್ಸಿನಲ್ಲಿಯ ಎಲ್ಲ ಬಣಗಳು ಎಲ್ಲ ಘಟಕಗಳು ಕಾರ್ಯಕರ್ತರು, ನೇತಾರರು ಬದ್ಧರಾಗಿ ಕಾರ್ಯ ಮಾಡತಕ್ಕದ್ದು. ಸ್ವರಾಜ್ಯ ಪಕ್ಷದವರು ಕಾಂಗ್ರೆಸ್ ಪಕ್ಷದ ವತಿಯಿಂದ ಕಾಂಗ್ರೆಸ್ ಸಂಘಟನೆಯ ಅವಿಭಾಜ್ಯ ಅಂಗವಾಗಿ ಕೇಂದ್ರ ಹಾಗೂ ಪ್ರಾಂತೀಯ ವಿಧಾನ ಮಂಡಲಗಳಲ್ಲಿ ಕೆಲಸ ಮಾಡಬೇಕು. ಹೀಗೆ ಕ್ರಿಯಾಶೀಲರಾಗಿರಲು ಸ್ವರಾಜ್ಯ ಪಕ್ಷವು ತನ್ನದೇ ಆದ ನಿಯಮಾವಳಿ ಘಟನೆಗಳನ್ನು ರಚಿಸಿಕೊಂಡು ತನ್ನದೇ ಸಂಪನ್ಮೂಲಗಳನ್ನು ಬಳಸಿಕೊಂಡು ಕಾರ್ಯತತ್ಪರವಾಗಿರತಕ್ಕದ್ದು.

ಭಾರತದಲ್ಲಿ ಸಾರ್ವತ್ರಿಕವಾಗಿ ಎಲ್ಲರೂ ಚರಖಾದ ಮೇಲೆ ಸ್ವತಃ ಕೈನೂಲು ತೆಗೆಯುವುದಕ್ಕೆ ತೊಡಗದ ಹೊರತು ಭಾರತ ತನ್ನ ಬಟ್ಟೆಯ ಅಗತ್ಯತೆಯನ್ನು ಸ್ವತಃ ಸಂಪೂರ್ಣವಾಗಿ ಪೂರೈಸಿಕೊಳ್ಳಲು ಸಾಧ್ಯವಾಗುವುದಿಲ್ಲವೆಂಬುದು ಅನುಭವ ಸಿದ್ಧವಾದ ಸಂಗತಿಯಾಗಿದೆ.

ಚರಖಾದ ಮೇಲೆ, ಕೈನೂಲು ತೆಗೆಯುವಿಕೆಯ ಕಾಂಗ್ರೆಸ್ ಕಾರ್ಯಕರ್ತ ಕಾರ್ಯಕರ್ತೆಯರೊಡನೆ ಜನಸಾಮಾನ್ಯರೊಂದಿಗೆ ನಿಕಟ ಸಂಪರ್ಕ ಹಾಗೂ ಆತ್ಮೀಯ ಸಂಬಂಧಗಳನ್ನು ಹೊಂದಲು ಏಕತೆ ಸಾಧಿಸಲು ಸುಲಭ ಸಾಧನವಾಗಿದೆ. ಕೈನೂಲು ಹಾಗೂ ಕೈನೂಲಿನಿಂದ ಕೈಮಗ್ಗದ ಮೇಲೆ ಉತ್ಪಾದನೆಯಾದ ಖಾದಿ ಬಟ್ಟೆಗಳನ್ನು ಬಳಕೆಗೆ ತರುವುದು ಪ್ರಚಾರ ಮಾಡುವುದು ಎಲ್ಲ ಕಾಂಗ್ರೆಸ್ಸಿಗರ ಕರ್ತವ್ಯವೆನಿಸಿದೆ. ಆದ್ದರಿಂದ ಕಾಂಗ್ರೆಸ್ಸು ತನ್ನ ಸಂವಿಧಾನದಲ್ಲಿಯ ಏಳನೆಯ ವಿಧಿಯನ್ನು ರದ್ದು ಪಡಿಸಿ ಅದರ ಬದಲಿಗೆ ಮುಂದೆ ಕಾಣಿಸಲಾಗುವ ವಿಧಿಯನ್ನು ಸೇರಿಸುತ್ತಿದೆ.

ಹದಿನೆಂಟು ವರ್ಷದ ಒಳಗಿನ ಯಾರೂ ಕಾಂಗ್ರೆಸ್ ಪಕ್ಷದ ಅಥವಾ ಯಾವುದೇ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿರಲು ಸಾಧ್ಯವಿಲ್ಲ. ಅದೇ ರೀತಿ ಕೈನೂಲನ್ನು ಬಳಸಿ ಸಿದ್ಧಪಡಿಸಲಾದ ಖಾದಿ ಬಟ್ಟೆಯನ್ನು ಧರಿಸಲಾರದ ಯಾವುದೇ ವ್ಯಕ್ತಿಯು ಕಾಂಗ್ರೆಸ್ ಪಕ್ಷದ

ಯಾವುದೇ ಸಭೆ ಸಮಾರಂಭ, ಕಾಂಗ್ರೆಸ್ಸಿನ ಯಾವುದೋ ಘಟಕದ ಸಮಿತಿಯ ಸಭೆ ನಡವಳಿಕೆಯಲ್ಲಿ ಭಾಗವಹಿಸಲಾರ. ಮಾಸಿಕ ಪ್ರತಿಯೊಬ್ಬ ಕಾಂಗ್ರೆಸ್ಸಿಗನೂ ಎರಡು ಸಾವಿರ ಯಾರ್ಡದಷ್ಟು ಕೈನೂಲನ್ನು ತೆಗೆದು ಸದಸ್ಯತ್ವ ವಂತಿಗೆ ಎಂದು ತನ್ನ ವಂತಿಗೆಯೊಂದಿಗೆ ಕಾಂಗ್ರೆಸ್ಸಿಗೆ ಸಲ್ಲಿಸಲೇಬೇಕು. ಅನಾರೋಗ್ಯ ಅಥವಾ ಬೇರೆ ಕಾರ್ಯಭಾರದಂತಹ ಕಾರಣಗಳಿಗಾಗಿ ಸ್ವತಃ ನೂಲುವುದು ಸಾಧ್ಯವಾಗದಿದ್ದ ಪಕ್ಷದಲ್ಲಿ ಬೇರೆಯವರು ನೂತು ಸಿದ್ಧಪಡಿಸಿದ ಕೈನೂಲನ್ನಾದರೂ ನಿಗದಿತ ಮಾಸಿಕ ಪ್ರಮಾಣದಂತೆ ಸಲ್ಲಿಸತಕ್ಕದ್ದು.

2. ಕಾಂಗ್ರೆಸ್ಸಿನಲ್ಲಿಯ ಎರಡು ಬಣಗಳ ಏಕತೆ ಸಾಧಿಸುವಲ್ಲಿ ಹಾಗೂ ಬೇರೆ ರಾಜಕೀಯ ಪಕ್ಷಗಳನ್ನು ಕಾಂಗ್ರೆಸ್ಸಿನಲ್ಲಿ ಸೇರುವಂತೆ ಮಾಡುವಲ್ಲಿ ಈ ಒಡಂಬಡಿಕೆ ಫಲಿಸುವುದೆಂದು ಕಾಂಗ್ರೆಸ್ ಆಶಿಸುತ್ತದೆ. 1818 ರ 3ನೇ ನಿಯಮಾವಳಿ ಹಾಗೂ ಹೊಸ ಸುಗ್ರೀವಾಜ್ಞೆಯನ್ವಯ ಸರ್ಕಾರದಿಂದ ಬಂಧಿಸಲ್ಪಟ್ಟ ಸ್ವರಾಜ್ಯ ಪಕ್ಷದ ಕಾರ್ಯಕರ್ತರನ್ನು ಹಾಗೂ ಇತರರನ್ನು ಕಾಂಗ್ರೆಸ್ಸು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ. ಭಾರತದ ಜನತೆ ತಮ್ಮ ಅಸ್ತಿತ್ವ ಹಾಗೂ ತಮ್ಮ ಸ್ವಾತಂತ್ರ್ಯವನ್ನು ಪ್ರತ್ಯಕ್ಷಪಡಿಸುವ ಶಕ್ತಿ ಸಾಮರ್ಥ್ಯಗಳನ್ನು ಹೊಂದುವತನಕ ಈ ರೀತಿಯ ಬಂಧನಗಳು ಅನಿವಾರ್ಯವೆನಿಸುತ್ತವೆ. ಇಂಥ ಶಕ್ತಿ ಸಾಮರ್ಥ್ಯಗಳನ್ನು ಪ್ರಸಕ್ತ ಸಂದರ್ಭದಲ್ಲಿ ಭಾರತೀಯರು ದೀರ್ಘ ಕಾಲದಿಂದ ಮುಂದೂಡುತ್ತ ಬರಲಾದ ವಿದೇಶೀ ಉತ್ಪನ್ನಗಳ ಹಾಗೂ ಬಟ್ಟೆಗಳ ಬಹಿಷ್ಕಾರವನ್ನು ಅನುಸರಿಸುವುದರಿಂದಲೇ ಹೊಂದಲು ಸಾಧ್ಯವಿದೆ ಎಂದು ಕಾಂಗ್ರೆಸ್ಸು ಅಭಿಪ್ರಾಯ ಪಡುತ್ತಿದೆ. ಆದ್ದರಿಂದ ಎಲ್ಲರೂ ಸದ್ಯದ ಪರಿಸ್ಥಿತಿಯ ತೀವ್ರತೆ ಹಾಗೂ ಗಂಭೀರತೆಯನ್ನು ಗಮನಿಸಿ ಚರಖಾದ ಮೇಲೆ ಸ್ವತಃ ನೂತು ಕೈನೂಲನ್ನು ಸದಸ್ಯತ್ವ ವಂತಿಗೆಯಾಗಿ ಪ್ರತಿ ತಿಂಗಳೂ ಸಲ್ಲಿಸಬೇಕೆಂಬುದನ್ನು ಕಾಂಗ್ರೆಸ್ಸು ಸ್ವಾಗತಿಸುತ್ತಿದೆ. ಹಾಗೆಯೇ ಪ್ರತಿಯೊಬ್ಬರನ್ನು ಕಾಂಗ್ರೆಸ್ಸಿನಲ್ಲಿ ಸೇರುವಂತೆ ಆಹ್ವಾನಿಸಲಾಗುತ್ತಿದೆ.

3. ಪ್ರತಿಯೊಬ್ಬ ಭಾರತೀಯ ಪುರುಷ ಹಾಗೂ ಮಹಿಳೆ ಎಲ್ಲ ವಿದೇಶೀ ಉತ್ಪನ್ನ ಬಟ್ಟೆಗಳನ್ನು ಬಹಿಷ್ಕರಿಸಿ ಕೈನೂಲಿನಿಂದ ತಯಾರಿಸಲಾದ ಖಾದೀ ಬಟ್ಟೆಯನ್ನೇ ಧರಿಸುತ್ತ ಸ್ವದೇಶೀ ವಸ್ತುಗಳನ್ನೇ ಬಳಸುತ್ತ ಆಂದೋಲನ ಮುಂದೆ ತೀವ್ರ ರಭಸವಾಗಿ ಸಾಗುವುದಕ್ಕೆ ಸಹಕರಿಸಬೇಕೆಂದು ಕಾಂಗ್ರೆಸ್ಸು ಬಯಸುತ್ತದೆ.

ಆದ್ದರಿಂದ ಎಲ್ಲ ಕಾಂಗ್ರೆಸ್ಸಿಗರೂ ಸ್ವಲ್ಪವೂ ವಿಳಂಬ ಮಾಡದೇ ಚರಖಾದಿಂದ ಸ್ವತಃ ಕೈನೂಲು ತೆಗೆಯುವುದನ್ನು ಅದಕ್ಕೆ ಸಂಬಂಧಿತವಾದ ಎಲ್ಲ ಚಟುವಟಿಕೆಗಳನ್ನು ಖಾದೀ ಬಟ್ಟೆ ಉತ್ಪಾದನೆ ಹಾಗೂ ವ್ಯಾಪಾರವನ್ನು ಪ್ರೋತ್ಸಾಹಿಸಿ ಇಂಥ ಚಟುವಟಿಕೆಗಳು ವರ್ಧಿಸುವಂತೆ ಮಾಡಬೇಕು.

4. ಕಾಂಗ್ರೆಸ್ಸಿನಲ್ಲಿ ಸದಸ್ಯರಾಗಿರದೇ ಇರುವ ಎಲ್ಲ ನರೇಶರು, ಸಂಸ್ಥಾನಿಕರು, ರಾಜಕುಮಾರರು, ರಾಜಕುಮಾರಿಯರು, ಶ್ರೀಮಂತರು ಬೇರೆ ರಾಜಕೀಯ ಪಕ್ಷ ಹಾಗೂ ಸಂಘಟನೆಗಳ ಸದಸ್ಯರಾಗಿರುವವರು, ನಗರ ಪಾಲಿಕೆ, ಲೋಕಲ್ ಬೋರ್ಡ್, ಪಂಚಾಯತಿ ಮೊದಲಾದ ಸ್ಥಳೀಯ ಸಂಸ್ಥೆ, ಬೇರೆ ಬೇರೆ ಸಂಘಟನೆಗಳ ಸದಸ್ಯರಾಗಿರುವವರು ಕೈನೂಲು ಹಾಗೂ ಖಾದಿ ಆಂದೋಲನಕ್ಕೆ ಉದಾರ ಪ್ರೋತ್ಸಾಹವಿತ್ತು ಕಲಾತ್ಮಕವಾಗಿ ಖಾದಿ ಉತ್ಪಾದಿಸುವ ಕಲಾಕಾರರಿಗೆ ಹೊಸ ಹೊಸ ವಿನ್ಯಾಸಗಳಿಗೆ ಪ್ರೋತ್ಸಾಹಿಸಬೇಕೆಂದು ಕಾಂಗ್ರೆಸ್ಸು ವಿನಂತಿಸುತ್ತಿದೆ.

5. ವಿದೇಶೀ ಬಟ್ಟೆ ಹಾಗೂ ನೂಲಿನ ವ್ಯವಹಾರದಲ್ಲಿ ತೊಡಗಿರುವಂಥ ವರ್ತಕರು ರಾಷ್ಟ್ರ ಹಿತವನ್ನು ಗಮನಿಸಿ ತಮ್ಮ ಅಂಥ ವ್ಯವಹಾರವನ್ನು, ಆಯಾತವನ್ನು ನಿಲ್ಲಿಸಿ ಬಿಟ್ಟು ಖಾದಿ ಹಾಗೂ ಗ್ರಾಮೀಣ ಕುಟಿರೋದ್ಯೋಗಗಳನ್ನು ಪ್ರೋತ್ಸಾಹಿಸಬೇಕು. ಅವುಗಳ ವ್ಯವಹಾರದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ಕಾಂಗ್ರೆಸ್ಸು ವಿನಂತಿಸುತ್ತದೆ.

6. ಗಿರಣಿಗಳಲ್ಲಿ ಉತ್ಪಾದಿತವಾದಂಥ ಬಟ್ಟೆ ಹಾಗೂ ಗಿರಣಿಗಳಲ್ಲಿ ತಯಾರಾದ ನೂಲನ್ನೇ ಬಳಸಿ ಬೇರೆ ಮಗ್ಗಗಳ ಮೇಲೆ ನೇಯ್ಗೆ ಮಾಡಲಾದ ಬಟ್ಟೆಗಳನ್ನೇ ಖಾದಿ ಬಟ್ಟೆಯಂತೆ ಬಿಂಬಿಸಿ ಭಾರತೀಯ ಮಾರುಕಟ್ಟೆಗಳಲ್ಲಿ ಮೋಸದಿಂದ ಮಾರಾಟ ಮಾಡಲಾಗುತ್ತಿರುವುದು ಕಾಂಗ್ರೆಸ್ಸಿನ ಲಕ್ಷ್ಯಕ್ಕೆ ಬಂದಿದೆ. ಜವಳಿ ಗಿರಣಿಗಳ ಒಡೆಯರು ಹಾಗೂ ಮತ್ತಿತರರು ಇಂಥ ಬಟ್ಟೆಗಳ ಉತ್ಪಾದಕರು ತಮ್ಮ ಈ ಅನಪೇಕ್ಷಣೀಯ ಅಪ್ರಾಮಾಣಿಕ ವ್ಯವಹಾರವನ್ನು ಕೊನೆಗೊಳಿಸಿ ಭಾರತದ ಪರಂಪರಾಗತ ಕುಟಿರೋದ್ಯೋಗಗಳನ್ನು ಪ್ರೋತ್ಸಾಹಿಸಬೇಕೆಂದು ವಿನಂತಿಸುತ್ತಿದೆ. ಕಾಂಗ್ರೆಸ್ಸಿನ ಪ್ರಭಾವಕ್ಕೊಳಪಡದ ಭಾಗಗಳಿಗೆ ವರ್ತಕರು ತಮ್ಮ ಅನಪೇಕ್ಷಣೀಯವಾದ ಇಂಥ ವ್ಯವಹಾರಗಳನ್ನು ಸೀಮಿತಗೊಳಿಸಲಿ ಮತ್ತು ವಿದೇಶೀ ನೂಲಿನ ಆಯಾತ ಸ್ಥಗಿತಗೊಳಿಸಬೇಕೆಂದು ಕಾಂಗ್ರೆಸ್ಸು ಬಿನ್ನವಿಸುತ್ತಿದೆ.

7. ಹಿಂದು-ಮುಸ್ಲಿಂ ಇಲ್ಲವೇ ಬೇರೆ ಧರ್ಮಗಳ ವರಿಷ್ಠರು, ಪೀಠಾಧಿಪತಿಗಳಾದವರು ತಮ್ಮ ತಮ್ಮ ಧಾರ್ಮಿಕ ಸಮಾವೇಶ, ಜಾತ್ರೆ, ಮೇಳಗಳಲ್ಲಿ ಖಾದಿಯ ಬಳಕೆ ಹಾಗೂ ವಿದೇಶೀ ಬಟ್ಟೆಗಳ ಬಹಿಷ್ಕಾರದ ಉಪದೇಶ ನೀಡಿ ಪ್ರಚಾರ ಮಾಡಬೇಕೆಂದು ಕಾಂಗ್ರೆಸ್ ಪಕ್ಷ ವಿನಂತಿ ಮಾಡುತ್ತದೆ.

ಬಿ) ಕಾಂಗ್ರೆಸ್ ಸಂಘಟನೆಯ ಏಳನೇ ವಿಧಿಯನ್ನು ರದ್ದು ಪಡಿಸಿ ಅದರ ಸ್ಥಾನದಲ್ಲಿ ಹೀಗೆ ಸೇರ್ಪಡೆ ಮಾಡಲಾಗುತ್ತಿದೆ.

1) ನಾಲ್ಕನೇ ವಿಧಿಯಡಿ ಅನರ್ಹಗೊಳಿಸಲ್ಪಟ್ಟಿದ್ದ ಯಾವುದೇ ವ್ಯಕ್ತಿಯು ಪ್ರಾಂತೀಯ ಕಾಂಗ್ರೆಸ್ ಸಮಿತಿಯ ನಿಯಂತ್ರಣಕ್ಕೊಳಪಟ್ಟ ಯಾವುದೇ ಪ್ರಾಥಮಿಕ ಸಂಸ್ಥೆಯ ಸದಸ್ಯತ್ವ

ಹೊಂದಲು ಅರ್ಹನೆನಿಸುತ್ತಾನೆ. ಕೈನೂಲಿನಿಂದ ಕೈಮಗ್ಗದ ಮೇಲೆ ನೇಯ್ಗೆ ಮಾಡಲಾದ ಖಾದಿಯನ್ನು ಧರಿಸದಂಥ ಯಾವನೂ ಕಾಂಗ್ರೆಸ್ ಸಮಿತಿಯ ಅಥವಾ ಸಂಸ್ಥೆಯ ಸದಸ್ಯತ್ವ ಹೊಂದಲಾರನು. ಅಂಥವನು ಕಾಂಗ್ರೆಸ್ ಸಭೆ ಸಮಾರಂಭ ಹಾಗೂ ಸಮಿತಿಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಲು ಸಾಧ್ಯವಿಲ್ಲ. ವರ್ಷಕ್ಕೆ 24 ಸಾವಿರ ಯಾರ್ಡನಷ್ಟು ಕೈನೂಲನ್ನು ಸ್ವತಃ ನೂತು ನೂಲಿನ ವಂತಿಗೆಯನ್ನು ಸಲ್ಲಿಸಬೇಕಾದುದು ಪ್ರತಿಯೊಬ್ಬ ಕಾಂಗ್ರೆಸ್ ಸದಸ್ಯನಿಗೂ ಕಡ್ಡಾಯ. ಒಂದು ವೇಳೆ ಅನಾರೋಗ್ಯ ಅಥವಾ ಬೇರೆ ಯಾವುದೋ ಕಾರಣದಿಂದಾಗಿ ಕೈನೂಲಿನ ವಂತಿಗೆ ಸಲ್ಲಿಸಲು ಶಕ್ತನಾಗಿಲ್ಲವಾದರೆ ಬೇರೆಯವರು ನೂತು ಸಿದ್ಧಪಡಿಸಿದ ಕೈನೂಲನ್ನು ಅವರಿಂದ ಪಡೆದು ತಮ್ಮ ವಂತಿಗೆ ಸಲ್ಲಿಸಬಹುದಾಗಿದೆ. ಯಾವನೊಬ್ಬನು ಏಕಕಾಲಕ್ಕೆ ಎರಡು ಬೇರೆ ಬೇರೆ ಕಾಂಗ್ರೆಸ್ ಘಟಕಗಳಲ್ಲಿ ಸದಸ್ಯತ್ವ ಹೊಂದಲು ಸಾಧ್ಯವಿಲ್ಲ.

2. ಸದಸ್ಯತ್ವದ ವಾರ್ಷಿಕಾವಧಿ ಪ್ರತಿ ವರ್ಷದ ಜನೆವರಿ ಒಂದರಿಂದ ಡಿಸೆಂಬರ 31 ರ ತನಕ ಇರುತ್ತದೆ. ಸದಸ್ಯತ್ವ ವಂತಿಗೆಯನ್ನು ಮುಂಗಡವಾಗಿ ನೀಡತಕ್ಕದ್ದು. ವರ್ಷದ ಮಧ್ಯದಲ್ಲೇ ಸದಸ್ಯರಾಗಿ ಕಾಂಗ್ರೆಸ್ ಸೇರಬಯಸುವವರು ಆ ವರ್ಷಾರಂಭದಿಂದ ವರ್ಷಾಂತ್ಯದ ಅವಧಿಗೆ ಪೂರ್ಣ ವಂತಿಗೆ ಹಾಗೂ ಕೈನೂಲಿನ ವಂತಿಗೆ ಸಲ್ಲಿಸಬೇಕಾಗುತ್ತದೆ.

ತಾತ್ಕಾಲಿಕ ಅವಕಾಶ

1925 ರ ಸಾಲಿನ ಕೈನೂಲು ವಂತಿಗೆ 20 ಸಾವಿರ ಯಾರ್ಡ ಕೈನೂಲು ಎಂದು ಮಧ್ಯಂತರ ಅವಕಾಶ ಕಲ್ಪಿಸಲಾಗಿದೆ. ಇಷ್ಟು ಕೈನೂಲನ್ನು ಮಾರ್ಚ ಒಂದಕ್ಕೆ ಅಥವಾ ಅದಕ್ಕೆ ಮೊದಲು ಸಲ್ಲಿಸತಕ್ಕದ್ದು. ಕಂತುಗಳ ರೂಪದಲ್ಲೂ ಅಷ್ಟಿಷ್ಟು ಪ್ರಮಾಣದಲ್ಲಿ ಸಲ್ಲಿಸಬಹುದಾಗಿದೆ.

3. ಕೈನೂಲಿನ ವಂತಿಗೆ ಸಲ್ಲಿಸದೇ ಹೋದಲ್ಲಿ ಅಥವಾ ವಂತಿಗೆಯ ಕಂತಿನ ಬಾಕಿ ಉಳಿದಿದ್ದರೆ ಅಂಥವರು ಕಾಂಗ್ರೆಸ್ಸಿನ ಯಾವುದೇ ಸಮಿತಿಯ ಉಪ ಸಮಿತಿ, ಯಾವುದೇ ಘಟಕದ ಚುನಾವಣೆಯ ಮತದಾನದಲ್ಲಿ ಭಾಗವಹಿಸಲು ಅವಕಾಶ ಇರಲಾರದು. ಅಂಥವನಿಗೆ ಸ್ಪರ್ಧಿಸಲು ಸಹ ಬರುವಂತಿಲ್ಲ.

ಕೈನೂಲಿನ ವಂತಿಗೆ ಸಲ್ಲಿಸಲು ವಿಫಲರಾದವರು ಕೂಡಲೇ ತಮ್ಮ ಕಂತಿನ ಬಾಕಿ ಹಾಗೂ ಚಾಲ್ತಿ ತಿಂಗಳ ವಂತಿಗೆ ಸಲ್ಲಿಸಿದ ತಕ್ಷಣ ಮತದಾನ ಹಾಗೂ ಸ್ಪರ್ಧೆಯ ಹಕ್ಕನ್ನು ಪಡೆಯುತ್ತಾರೆ.

4. ಪ್ರತಿಯೊಂದು ಪ್ರಾಂತೀಯ ಸಮಿತಿಯು ಸದಸ್ಯರ ಮಾಸಿಕ ಕೈನೂಲು ವಂತಿಗೆಯನ್ನು ಪ್ರತಿ ತಿಂಗಳೂ ತಪ್ಪದೇ ಸಂಗ್ರಹಿಸಿ ಆ ವಿವರಗಳನ್ನು ಅಖಿಲ ಭಾರತ

ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿಗಳಿಗೆ ಸಲ್ಲಿಸತಕ್ಕದ್ದು. ಪ್ರಾಂತೀಯ ಕಾಂಗ್ರೆಸ್ ಸಮಿತಿಗಳು ಕೈನೂಲು ವಂತಿಗೆಯ ಒಟ್ಟು ಸಂಗ್ರಹದ ಶೇಕಡಾ ಹತ್ತರಷ್ಟು ಅಥವಾ ಅಷ್ಟು ಮೌಲ್ಯವನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಕಟ್ಟತಕ್ಕದ್ದು.

5. ಸಂವಿಧಾನದಲ್ಲಿಯ ಸದ್ಯದ ಆರನೇ 'ಇ' ವಿಧಿ ಹಾಗೂ ಒಂಬತ್ತನೇ 'ಬಿ' ವಿಧಿಯನ್ನು ಘಟನೆಯಿಂದ ತೆಗೆದು ಹಾಕಬೇಕು.

ಗೊತ್ತುವಳಿಯನ್ನು ಓದಿ ಅನುಮೋದಿಸಿದ ಮೌಲಾನಾ ಮಹಮ್ಮದ ಅಲಿಯವರು ''ಇದು ಗೊತ್ತುವಳಿಯ ಪೂರ್ತಿ ಪಾಠ. ದೇಶಬಂಧು ಚಿತ್ತರಂಜನದಾಸರು ಈ ಗೊತ್ತುವಳಿಯನ್ನು ಮಂಡಿಸುತ್ತ ಗಯಾ ಕಾಂಗ್ರೆಸ್ ಅಧಿವೇಶನದಿಂದ ಹಿಡಿದು ಇಲ್ಲಿವರೆಗಿನ ವಿವಾದಗಳ ಇತಿಹಾಸವನ್ನೇ ನಿಮ್ಮ ಮುಂದೆ ಬಿಚ್ಚಿಟ್ಟಿದ್ದಾರೆ. ಇದೇ ವರ್ಷದ ಫೆಬ್ರುವರಿ ತಿಂಗಳಲ್ಲಿ ಜೈಲಿನಿಂದ ಬಿಡುಗಡೆಯಾಗಿ ದಿಲ್ಲಿಗೆ ಬಂದ ಬಳಿಕ ಮಹಾತ್ಮಾಜಿಯವರು ಯಾವ ನಿಜ ಸ್ಥಿತಿ ಅರಿತುಕೊಂಡಿರುವರೋ ಅದಷ್ಟನ್ನೇ ನಾನೂ ಬಲ್ಲೆ. ದಾಸ್ ಅವರು ತಮ್ಮ ವಿಧಾನ ಮಂಡಳ ಬಗ್ಗೆ ಹೇಳಿದುದನ್ನೆಲ್ಲ ನಾನು ಒಪ್ಪುತ್ತಿಲ್ಲವೆಂದೇ ಸಷ್ಟಪಡಿಸಬೇಕಾಗಿದೆಂದು ಇಷ್ಟು ಮಾತ್ರ ಹೇಳುತ್ತ ನಾನು ಯಾವುದೇ ವಿವಾದದಲ್ಲಿ ಸೇರಬಯಸುವುದಿಲ್ಲವೆಂದೇ ಸ್ಪಷ್ಟ ಪಡಿಸುತ್ತೇನೆ. ವಿವಾದಕ್ಕೆ ಕೊನೆ ಹೇಳಬಯಸುತ್ತೇನೆ. ದಿಲ್ಲಿಯಲ್ಲೇ ಅಷ್ಟಕ್ಕೇಯೇ ನಾನು ಕೊನೆ ಹೇಳಿಯೂ ಬಿಟ್ಟಿದ್ದೇನೆ. ಯಾವುದೇ ಒಂದು ಬಣ ಇನ್ನೊಂದು ಬಣವನ್ನು ಹೊಣೆಗಾರವೆಂದು ದೂರಲು ಸಾಧ್ಯವಿಲ್ಲ. ನಾವೆಲ್ಲ ನಮ್ಮ ನಮ್ಮೊಳಗಿನ ಭಿನ್ನಮತಗಳೇನೇ ಇರಲಿ ಕಾಂಗ್ರೆಸ್ಸಿನಲ್ಲೇ ಉಳಿಯಬಯಸಿದ್ದೇನೆ ಎಂದೇ ನಾನಾಗ ಹೇಳಿದ್ದೆ. ಕಾಂಗ್ರೆಸ್ಸಿನಿಂದ ಯಾರನ್ನೂ ಹೊರದೂಡುತ್ತಿಲ್ಲ. ಕಾಂಗ್ರೆಸ್ಸಿನ ವಿರುದ್ಧ ಯಾರೂ ಬಂಡುಖೋರನಿಲ್ಲ. ವಿಧಾನ ಮಂಡಳದಲ್ಲಿ ಪ್ರವೇಶ ಹೊಂದುವ ಪರವಾಗಿರುವ ಒಂದು ಬಣವಿದ್ದು ಅದು ಅಸಹಕಾರ ಆಂದೋಲನದ ವಿರೋಧಿಯಾಗಿಲ್ಲ. ಅದೇ ರೀತಿ ಇನ್ನೊಂದು ಬಣ ಅಸಹಕಾರ ಆಂದೋಲನ ಪರವಾದುದು. ವಿಧಾನ ಮಂಡಳ ಪ್ರವೇಶಕ್ಕೆ ತಾನು ವಿರೋಧಿಸುತ್ತಿಲ್ಲವೆಂದು ಅದು ಸ್ಪಷ್ಟ ಪಡಿಸಿದೆ.

ಈ ಒಂದು ಪ್ರಶ್ನೆ ಕುರಿತಂತೆಯೂ ತಮ್ಮ ತಮ್ಮ ನಿಲುಮೆಗೆ ಅಂಟಿಕೊಂಡೇ ಇದ್ದರೂ ಕಾಂಗ್ರೆಸ್ಸನ್ನು ಒಡೆಯಕೂಡದೆಂದು ನಿರ್ಧರಿಸಿವೆ. ಕಾಂಗ್ರೆಸ್ಸಿನಲ್ಲಿ ಉಭಯತರೂ ಸೇರಿಕೊಂಡು ಕಾಂಗ್ರೆಸ್ಸಿನ ಹಾಗೂ ಭಾರತ ರಾಷ್ಟ್ರದ ಹಿತದ ಸಾಮಾನ್ಯ ಉದ್ದೇಶಕ್ಕಾಗಿ ಒಗ್ಗಟ್ಟಿನಿಂದ ಹೋರಾಟ ನಡೆಸಲು ಅಣಿಯಾಗಿವೆ. ನಾನು ಈ ಗೊತ್ತುವಳಿಯ ಬಗ್ಗೆ ಬೇರೆ ಭಾಷ್ಯ ಮಾಡುವ ಹೊಣೆಗಾರಿಕೆ ಹೊತ್ತುಕೊಳ್ಳುತ್ತಿಲ್ಲ. ಧಾರ್ಮಿಕ ಅಥವಾ ಬೇರೆ ರೀತಿಯ ಭಿನ್ನಾಭಿಪ್ರಾಯಗಳ ಕಾರಣದಿಂದಾಗಿ ವಿಧಾನ ಮಂಡಳಗಳ ಚುನಾವಣೆಯಲ್ಲಿ ಅನೇಕರಿಗೆ ಭಾಗವಹಿಸಲು ಸಾಧ್ಯವಾಗಿಲ್ಲದಿರಬಹುದು. ಅಂಥವರು ಚುನಾವಣೆಗಳಲ್ಲಿ

ಅಭ್ಯರ್ಥಿಗಳಾಗಿಲ್ಲ. ಅಂಥವರು ಮತದಾನ ಮಾಡದೇ ಇರಲಡ್ಡಿಯಿಲ್ಲ. ಆದರೆ ವಿಧಾನ ಮಂಡಲಗಳಲ್ಲಿ ಸ್ಪರ್ಧಿಸಿ ಪ್ರವೇಶ ಬಯಸುವ ನಮ್ಮ ಸ್ನೇಹಿತರಿಗೆ ಬದಲಾವಣೆ ಬಯಸದ ನಮ್ಮಂಥವರು ಏಕತೆಯ ಸಾಧನೆಯ ದೃಷ್ಟಿಯಿಂದ ನಮ್ಮ ವಿರೋಧವನ್ನು ಸ್ಥಗಿತಗೊಳಿಸೋಣ. ವಿಧಾನ ಮಂಡಳಗಳ ಪ್ರವೇಶಕ್ಕಾಗಿ ಪ್ರಚಾರ ನಡೆಸಲು ಅಂಥವರಿಗೆ ಅನುಮತಿ ನೀಡೋಣ. ಕಾಕಿನಾಡ ಕಾಂಗ್ರೆಸ್ ಅಧಿವೇಶನದಲ್ಲಿಯೂ ನಮ್ಮ ನಿಲುಮೆ ಇದೇ ರೀತಿಯದಾಗಿತ್ತು. ಈಗ ಮಂಡಿಸಲಾದ ಗೊತ್ತುವಳಿಯು ಇದೇ ನಿಲುಮೆಯ ಪರವಾಗಿದೆ. ಕಾಂಗ್ರೆಸ್ಸಿನಲ್ಲಿ ಎರಡು ವರ್ಗಗಳ ಜನರಿದ್ದಾರೆ. ವಿಧಾನ ಮಂಡಳಗಳಲ್ಲಿ ಪ್ರವೇಶಿಸುವುದರಿಂದ ಸ್ವಲ್ಪ ಒಳ್ಳೆಯದಾಗಬಹುದು ಆದರೆ ಸ್ವರಾಜ್ಯ ಸಿಕ್ಕಲಾರದು ಎಂಬುದು ಒಂದು ವರ್ಗದ ಅಭಿಮತ. ವಿಧಾನ ಮಂಡಳ ಪ್ರವೇಶದಿಂದ ಸ್ವರಾಜ್ಯ ಲಭ್ಯವಾಗುತ್ತದೆ ಎಂಬುದು ಇನ್ನೊಂದು ಅನಿಸಿಕೆ. ವಿಧಾನ ಮಂಡಳ ಪ್ರವೇಶದಿಂದ ಏನೂ ಒಳ್ಳೆಯದಾಗದು ಎಂಬುದು ಬೇರೆ ಕೆಲವರ ಭಾವನೆ. ಬದಲಾವಣೆ ಬೇಡವೆನ್ನುವವರು ಅಂಥ ಮೂರನೇ ಬಣದವರಲ್ಲ. ಆದರೆ ವಿಧಾನ ಮಂಡಳ ಪ್ರವೇಶದಲ್ಲಿ ನಂಬುಗೆಯಿರಿಸಿದವರನ್ನು ಹಾಗೂ ವಿಧಾನ ಮಂಡಳದಲ್ಲಿ ಅವರಿಂದ ನಡೆಯುವ ವಿನಾಶಕಾರೀ ಚಟುವಟಿಕೆಗಳನ್ನು ಬದಲಾವಣೆ ಬೇಡೆವೆನ್ನುವವರು ಅರಿತಿದ್ದಾರೆ.

ದಿಲ್ಲಿ ಹಾಗೂ ಕಾಕಿನಾಡಾ ಅಧಿವೇಶನಗಳಲ್ಲಿ ನಡೆದುದನ್ನೇ ಈಗ ಪುನಃ ಈ ಅಧಿವೇಶನದಲ್ಲಿ ಗೊತ್ತುವಳಿಯೆಂದು ಅಂಗೀಕರಿಸಲಾಗಿದೆ. ಭಾರತದಲ್ಲಿ ಈಗಾಗಲೇ ಒಂದು ಮಹಾ ಕ್ರಾಂತಿ ಎಸಗಲಾಗಿದೆ ಎಂದು ಮಹಾತ್ಮಾ ಗಾಂಧೀಜಿಯವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಗಾಂಧೀಜಿ ನಂಬಿದ ರಾಷ್ಟ್ರದ ಹಿತಕ್ಕಾಗಿ ಹಾಗೂ ಕಾಂಗ್ರೆಸ್ ಪಕ್ಷದ ಹಿತಕ್ಕೋಸುಗ ಹೀಗೆ ನಡೆಯುತ್ತಿದೆ. ಮಹಾತ್ಮಾ ಗಾಂಧೀಜಿಯವರ ಈ ಪ್ರವೇಶದ ನಂತರ ಮುಂದಿನ ವರ್ಷಗಳನ್ನು ಗಾಂಧೀ ಯುಗವೆಂದೇ ಕರೆಯಬಯಸುತ್ತೇನೆ. ಗಾಂಧೀ ಯುಗಕ್ಕಿಂದು ಮೊದಲಿನದು, ಅರ್ಜಿ ಅಥವಾ ಮನವಿಗಳನ್ನು ಗುಜರಾಯಿಸುವ ಕಾಲವಾಗಿತ್ತು. ಗಾಂಧೀ ಯುಗ ಆತ್ಮೋನ್ನತಿಯ ಯುಗ. ಇದು ಭಾರತದ ಹಾಗೂ ಭಾರತೀಯರ ಆತ್ಮ ಚೈತನ್ಯದ ಸಾಕ್ಷಾತ್ಕಾರದ ಯುಗ. ದೇಶಬಂಧು ಚಿತ್ತರಂಜನದಾಸರು ವಿವರಿಸುವ ನಿಜವಾದ ಸ್ವರಾಜ್ಯ ಇದಾಗಿದೆ.

ನಿಮ್ಮ ಹಾಗೂ ಇಡೀ ದೇಶದ ಬಲ ಸಂವರ್ಧನೆ ಮಾಡಿಕೊಳ್ಳಬೇಕೆಂದು ಗಾಂಧೀಜಿ ಬಯಸುತ್ತಾರೆ. ಬಲ ಸಂವರ್ಧನೆ ಮಾಡಿಕೊಳ್ಳೋಣವೆಂದೇ ದಿಲ್ಲಿ ಹಾಗೂ ಕಾಕಿನಾಡಾ ಅಧಿವೇಶನಗಳಲ್ಲಿ ವಿಧಾನ ಮಂಡಳ ಪ್ರವೇಶ ಕುರಿತಂತೆ ವಿವಾದಕ್ಕೆ ತೊಡಗುತ್ತ ನಮ್ಮ ಶಕ್ತಿ ಹ್ರಾಸ ಮಾಡಿಕೊಳ್ಳುವುದು ಬೇಡವೆಂದು ನಾನೆಂದಿದ್ದೆ. ದೇವರ ದಯದಿಂದ ನಾವು ಇಂದು ಅಂತಿಮವಾಗಿ ಭಿನ್ನಮತಕ್ಕೆ ಕೊನೆ ಹೇಳುತ್ತಿದ್ದೇವೆ. (ಕೇಳಿರಿ ಕೇಳಿರಿ ಎಂಬ ಧ್ವನಿ.) ಇಂದು

ನಾವು ನಮ್ಮ ನಮ್ಮೊಳಗಿನ ವಾದ ವಿವಾದಗಳನ್ನು ಅಂತಿಮವಾಗಿ ಮುಕ್ತಾಯಗೊಳಿಸಿದ್ದೇವೆ. ಮಹಾತ್ಮಾ ಗಾಂಧೀಜಿ ಹಾಗೂ ನಾನು ಇಬ್ಬರೂ ಭೆಟ್ಟಿಯಾಗಿ ನಿರ್ಣಯಿಸಿದ ಬಳಿಕ ವಿಧಾನ ಮಂಡಳಗಳಲ್ಲಿ ಪ್ರವೇಶ ಮಾಡಿ ಅಲ್ಲಿ ಕಾಲ ಹರಣ ಮಾಡುವುದು ಅನಗತ್ಯವೆಂದು ನಿಮಗನಿಸುತ್ತಿರಬಹುದು. ಆದರೆ ಬದಲಾವಣೆ ಪರವಾಗಿರದ ನಮ್ಮ ಗೆಳೆಯರೇ, ನೀವು ಸ್ವರಾಜ್ಯ ಪಕ್ಷದವರು ಏನು ಮಾಡುತ್ತಿದ್ದಾರೆ, ಯಾವ ಪ್ರಮಾದಗಳನ್ನೆಸಗುತ್ತಿದ್ದಾರೆ ಎಂದು ಯೋಚಿಸಬೇಕಾದ ಅಗತ್ಯವೇ ಇಲ್ಲ. ನಮ್ಮೆಲ್ಲರಿಗೂ ಸಾಮಾನ್ಯವಾಗಿರುವ ಶತ್ರುಗಳನ್ನು ಹೋರಾಟ ಮಾಡಿ ಹಣಿಯುವುದೊಂದರ ಬಗ್ಗೆ ಮಾತ್ರ, ಹಾಗೂ ನಿಮ್ಮ ನಿಮ್ಮ ಶಕ್ತಿ ಸಾಮರ್ಥ್ಯಗಳನ್ನು ವರ್ಧಿಸಿಕೊಳ್ಳುವಲ್ಲಿ ಎಲ್ಲರೂ ಪ್ರಯತ್ನಶೀಲರಾಗಬೇಕಾಗಿದೆ. (ಹರ್ಷೋದ್ಗಾರಗಳ ಧ್ವನಿ.)

ವಿಧಾಯಕ ಕಾರ್ಯಕ್ರಮಗಳನ್ನು ಶ್ರದ್ಧೆಯಿಂದ ಮುಂದುವರೆಸಿಕೊಂಡು ಹೋಗುವ ಮೂಲಕ ಗುರಿ ಸಾಧನೆಯಲ್ಲಿ ಯಶ ಪಡೆಯುವಲ್ಲಿ ಮಹಾತ್ಮಾ ಗಾಂಧೀಜಿಯವರು ಇರಿಸಿದ ಅಚಲ ಶ್ರದ್ಧೆ ಹಾಗೂ ಬಲವಾದ ಆತ್ಮ ವಿಶ್ವಾಸವನ್ನು ಸ್ವರಾಜ್ಯ ಪಕ್ಷದಲ್ಲಿಯ ಕೆಲವರು ಹೊಂದಿಲ್ಲದೇ ಹೋದರೂ ಇಡೀ ಸ್ವರಾಜ್ಯ ಪಕ್ಷದ ವತಿಯಿಂದ ವಿಧಾಯಕ ಕಾರ್ಯಕ್ರಮಗಳನ್ನು ಸರಾಗವಾಗಿ ನಿರಾತಂಕವಾಗಿ ನಡೆಸಿಕೊಂಡು ಹೋಗುವ ಸ್ಪಷ್ಟ ಭರವಸೆ ಘೋಷಿಸಲಾಗಿದೆ. ನಿಃಸಂದಿಗ್ಧ ರೀತಿಯಲ್ಲಿ, ಗೌರವಯುತವಾಗಿ ಒಗ್ಗಟ್ಟಿನಿಂದ ಈ ಭರವಸೆಯನ್ನು ಸ್ವರಾಜ್ಯ ಪಕ್ಷದವರು ನೀಡಿದ್ದಾರೆ. ನಮ್ಮ ಆತ್ಮೀಯ ಗೆಳೆಯ ದೇಶಬಂಧು ಚಿತ್ತರಂಜನ ದಾಸರು ಗೊತ್ತುವಳಿ ಕುರಿತಂತೆ ಸ್ವರಾಜ್ಯ ಸಿದ್ಧಿಯ ಕುರಿತು ಹೇಳಿದ ಪ್ರತಿಪಾದನೆಯ ಮಾತುಗಳು, ವ್ಯಕ್ತಪಡಿಸಿದ ಆತ್ಮ ವಿಶ್ವಾಸ ಇವುಗಳು ನನ್ನನ್ನು ಆತ್ಮೀಯತೆಯಿಂದ ಬಲವಾಗಿ ಸುತ್ತು ಹಾಕಿಕೊಂಡ ಬಳ್ಳಿಯೋಪಾದಿಯಲ್ಲಿದ್ದು ಮಹಾತ್ಮಾ ಗಾಂಧೀಜಿಯವರು ತಮ್ಮ ಅಪೂರ್ವವಾದ ಚರಖಾ ಶಾಸ್ತ್ರದ ಮೂಲಕ ವಿಜಯಿಯಾಗುತ್ತಾರೆಂಬ ನಂಬುಗೆಯನ್ನು ದೃಢಗೊಳಿಸುತ್ತದೆ. (ಚಪ್ಪಾಳೆ ಹರ್ಷೋದ್ಗಾರಗಳ ಧ್ವನಿ) ಅದೇ ರೀತಿ ಗಾಂಧೀಜಿಯವರು ಉಪದೇಶಿಸಿದ ''ಚರಖಾ ಚಲಾ ಚಲಾಕೆ ಹಮ್ ಸ್ವರಾಜ್ಯ ಲೇಂಗೆ'' ಎಂಬ ಹುಚ್ಚು ಆವೇಶಕ್ಕೆ ಒಳಗಾದವರಿಂದಾಗಿ ದೇಶಬಂಧು ಚಿತ್ತರಂಜನದಾಸರಂತಹ ವಿಚಾರವಾದಿಗಳು ಚರಖಾ ಶಕ್ತಿಯಲ್ಲಿ ವಿಶ್ವಾಸ ದೃಢಗೊಳಿಸಿ ಕೊಂಡಿರುವುದು ಸಮಾಧಾನ ಮೂಡಿಸಿದೆ. ಚರಖಾ ಶಾಸ್ತ್ರದ ಮೂಲಕ ಗಾಂಧೀಜಿ ವಿಜಯಶಾಲಿಯಾಗುವರೆಂಬುದನ್ನು ದೃಢಗೊಳಿಸುತ್ತಿದೆ.

ಇದೊಂದು ಮಹಾಸಾಧನೆ. ಉಜ್ವಲ ಭವಿಷ್ಯದ ಸೂಚಕ. ಉತ್ತಮ ಶಕುನ. ವಾದ ವಿವಾದ ಭಿನ್ನಮತಗಳ ಹಳೆಯ ಯುಗಕ್ಕೆ ಕೊನೆ ಹೇಳಿ ಹೊಸ ಯುಗಾರಂಭದ ಘಂಟಾನಾದವನ್ನು ಮಾಡುವಂಥದಿದು. ಆದರೆ ಸ್ವರಾಜ್ಯ ಪಕ್ಷದವರು ಮಾಡಬಾರದ್ದೇನನ್ನು

ಮಾಡುತ್ತಾರೆ. ಅಂಥದರಿಂದ ಆಗುವ ಪರಿಣಾಮಗಳೇನು ? ಎಂಬುದರ ಬಗ್ಗೆ ತಲೆ ಕೆಡಿಸಿಕೊಳ್ಳದಿರಿ. 1925 ರ ಡಿಸೆಂಬರ ಅಂತ್ಯದಷ್ಟೊತ್ತಿಗೆ ಅದಕ್ಕಿಂತ ಮೊದಲಿಗೆಯೇ ಕಾಂಗ್ರೆಸ್ಸಿನ ಮುಂದಿನ ಅಧಿವೇಶನದಲ್ಲಿ ನೂತನ ಅಧ್ಯಕ್ಷರು ತಮ್ಮ ಅಧ್ಯಕ್ಷೀಯ ಭಾಷಣ ಮಾಡುವುದಕ್ಕೆ ಮೊದಲು. ನೀವೆಲ್ಲ ಒಗ್ಗಟ್ಟಿನಿಂದ ನಿರಂತರ ಪ್ರಯತ್ನಶೀಲರಿದ್ದುಕೊಂಡು ವಿದೇಶೀ ಬಟ್ಟೆಗಳನ್ನು ಗಿರಣಿ ಬಟ್ಟೆಗಳನ್ನು ರಾಷ್ಟ್ರ ವ್ಯಾಪಿ ಬಹಿಷ್ಕರಿಸುವಂತೆ ಹಾಗೂ ನಿಮ್ಮ ಕೈನೂಲಿನಿಂದಲೇ ಸಿದ್ಧವಾದ ಖಾದೀ ಬಟ್ಟೆಗಳನ್ನೇ ಎಲ್ಲರೂ ಧರಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿರಿ.

ತದ ನಂತರ ಈ ಮಧ್ಯಸ್ಥಿಕೆಯೇಕೆ ? 24 ಸಾವಿರ ಯಾರ್ಡನಷ್ಟು ಕೈನೂಲಿನ ವಂತಿಗೆಯನ್ನು ಪ್ರತಿಯೊಬ್ಬ ಕಾಂಗ್ರೆಸ್ಸಿಗನೂ ಸಲ್ಲಿಸಲೇಬೇಕೆಂಬ ಕಡ್ಡಾಯದ ಅಗತ್ಯವಾದರೂ ಎಲ್ಲಿ ಬೀಳುವುದು ? ಕೈನೂಲಿನ ವಂತಿಗೆ ಸಲ್ಲಿಸಬೇಕೆಂಬ ಕಡ್ಡಾಯವು ಎಂದೂ ಯಾರೂ ಕೇಳಿರದಂತಹ ನಿಯಮ ಇದೊಂದು ಉತ್ತಮ ಪ್ರಯೋಗ, ಹುಚ್ಚುತನದ ಪ್ರಯೋಗವೂ ಎಂದು ನಾನು ಹೇಳುತ್ತೇನೆ. ನಮ್ಮ ನಿಮ್ಮೆಲ್ಲರ ದಾಸ್ಯ ಅಥವಾ ಗುಲಾಮಗಿರಿಯೂ ಅಷ್ಟೇ ವಿಶಿಷ್ಟವಾದುದು ಎಂದೂ ಹೇಳಬಯಸುತ್ತೇನೆ. ಯಾಕೆಂದರೆ 320 ದಶಲಕ್ಷ ಅಂದರೆ ಮೂವತ್ತೆರಡು ಕೋಟಿ ಜನರು ಕೆಲವೇ ಐರೋಪ್ಯರ ಅತಿಯಾಸೆಗೆ ಈಡಾಗಿ ಗುಲಾಮಗಿರಿಯಲ್ಲಿರುವುದು ಜಗತ್ತಿನಲ್ಲಿ ಬೇರೆ ಎಲ್ಲಿಯಾದರೂ ಇದ್ದುದಾದರೆ ನನಗೆ ತೋರಿಸಿರಿ. ಕೇವಲ ಐವತ್ತು - ಅರವತ್ತು ಸಾವಿರ ಐರೋಪ್ಯ ಸೈನಿಕರನ್ನು ಹೊಂದಿರುವ ಚಿಕ್ಕ ರಾಷ್ಟ್ರವೊಂದು ಮೂವತ್ತೆರಡು ಕೋಟಿ ಜನರನ್ನು ಗುಲಾಮರನ್ನಾಗಿ ಆಳುತ್ತಿರುವುದನ್ನು ಬೇರೆ ಎಲ್ಲಿಯಾದರೂ ಇರುವುದಾದರೆ ತೋರಿಸಿ. ಕೇವಲ ಐವತ್ತು ಅರವತ್ತು ಸಾವಿರ ವ್ಯಾಪಾರಿಗಳು, ನಾಗರಿಕ ಸೇವೆಯಲ್ಲಿರುವ ಐರೋಪ್ಯ ನೌಕರರು ಭಾರತದಲ್ಲಿದ್ದಾರೆ. ಗ್ರೇಟ್ ಬ್ರಿಟನ್ ಸಹ ಕೇವಲ ಕಾಲು ಕೋಟಿ ಜನಸಂಖ್ಯೆಯುಳ್ಳ ಚಿಕ್ಕ ರಾಷ್ಟ್ರ. ಇಂಥದೊಂದು ಸಣ್ಣ ದೇಶ ನಮ್ಮ ದೊಡ್ಡ ದೇಶದ ಮೂವತ್ತೆರಡು ಕೋಟಿ ಜನರನ್ನು ದಾಸ್ಯದಲ್ಲಿಟ್ಟು ಆಳುತ್ತಿರುವುದು ವಿಶೇಷವೆನಿಸುವುದಿಲ್ಲವೇ ? ಮೂವತ್ತೆರಡು ಕೋಟಿ ಜನರು ಹೀಗೆ ಗುಲಾಮಗಿರಿಯಲ್ಲಿ ನರಳುತ್ತಿರುವುದು ಜಗತ್ತಿನ ಇತಿಹಾಸದಲ್ಲಿಯೇ ಎಲ್ಲಿಯಾದರೂ ಎಂದಾದರೂ ಸಂಭವಿಸಿದ್ದರೆ ಅಂಥದನ್ನು ನನಗೆ ತೋರಿಸಿರಿ. ಎಲ್ಲಿಯೂ ಎಂದೂ ಹೀಗೆ ನಡೆದುದಿಲ್ಲ. ಹೀಗೆ ವಿಶಿಷ್ಟವಾದ ಸಮಸ್ಯೆಗೆ ವಿಶಿಷ್ಟ ರೀತಿಯ ಪರಿಹಾರವನ್ನೇ ಕಂಡುಕೊಳ್ಳುವುದು ಸೂಕ್ತವೆನಿಸುತ್ತದೆ.

ಇನ್ನೂ ಹೆಚ್ಚಿಗೆ ಹೇಳಬೇಕೆಂದರೆ ನೀವೇ ಸ್ವತಃ ನಿಮ್ಮನ್ನು ಗುಲಾಮಗಿರಿಗೆ ಒಳಪಡಿಸಿಕೊಂಡಿರುವ ಪರಿಯನ್ನು ಅರಿತುಕೊಳ್ಳುವುದೆನಿಸುತ್ತದೆ. ಗ್ರೇಟ್ ಬ್ರಿಟನ್ ನಿಮ್ಮೊಂದಿಗೆ ಯುದ್ಧಕ್ಕೆಳಸಿ ನಿಮ್ಮನ್ನು ಕತ್ತಿಯ ಅಲಗಿನ ಮುಂದೆ ನಿಲ್ಲಿಸಿ ದಾಸ್ಯಕ್ಕೊಳಪಡಿಸಿತೆ?

ಇಲ್ಲ; ಸರ್ವಥಾ ಹಾಗಾಗಿಲ್ಲ. ಬ್ರಿಟನ್ ಹಾಗೂ ಭಾರತ ಸರಕಾರದ ಅಂದರೆ ಅಂದಿನ ದೊರೆಗಳ ಆಡಳಿತದ ಸಹಕಾರದಿಂದ ಸಹಯೋಗದ ಮೂಲಕ ನಮ್ಮ ನಿಮ್ಮೆಲ್ಲರನ್ನು ದಾಸ್ಯಕ್ಕೆ ಒಳಪಡಿಸಲಾಗಿದೆ. (ಕೇಳಿರಿ, ಕೇಳಿರಿ) ಭಾರತ ಮತ್ತೆ ಮೊದಲಿನ ಹಾಗೆ ಸ್ವತಂತ್ರ ಭಾರತ ವಾಗಬೇಕೆಂದರೆ ಭಾರತೀಯರು ಬ್ರಿಟಿಶರೊಂದಿಗೆ ಅಸಹಕಾರದಿಂದಿರುವುದರೊಂದಿಗೆಯೇ ಮಾತ್ರ. (ಹರ್ಷೋದ್ಗಾರ), ಶ್ವೇತವರ್ಣೀಯರು ತಂದ ಅರ್ಥ ವ್ಯವಸ್ಥೆಯಿಂದಾಗಿ ಭಾರತದ ಆರ್ಥಿಕ ಪರಿಸ್ಥಿತಿ ರಕ್ತ ರಂಜಿತ ವಾದಂತೆಯೇ ಭಾರತೀಯರ ಪೌರುಷವೇ ಹರಣ ಮಾಡಲ್ಪಟ್ಟಿತು. ನಾನವರ ಬಗ್ಗೆ ಬಿರುಸು ನುಡಿಯ ಬಯಸುವುದಿಲ್ಲ. ಬ್ರಿಟನ್ನವನ್ನು ಕಿರುಕೊಳ ಅಂಗಡಿಕಾರರ ರಾಷ್ಟ್ರವೆಂದು ಕರೆಯಲಾರೆ. ಅವರು ನಿಜವಾಗಿಯೂ ಖಚಿತವಾಗಿ ವ್ಯವಹಾರ ನಿಪುಣರು. ಅವರು ನಮ್ಮೊಂದಿಗೆ ಯುದ್ಧ ಮಾಡಬೇಕೆಂದೂ ಬಂದವರಲ್ಲ ಅವರು. ಈ ದೇಶಕ್ಕೆ ದೊರೆಗಳಾಗಿ ಅಥವಾ ರಾಜಕುವರರಾಗಿಯೂ ಬಂದವರಲ್ಲ. ಅವರು ಪ್ರಚಂಡ ಯೋಧರಾಗಿಯೂ ಬರಲಿಲ್ಲ. ಗೌರವಾನ್ವಿತ ಜಾನ್ ಕಂಪನಿ ಹೆಸರಿನಿಂದಲೇ ಇಲ್ಲಿ ಪ್ರವೇಶಿಸಿದರು. ಮೊಗಲ್ ಸಾಮ್ರಾಜ್ಯದೆದೆರು ತಮ್ಮ ವಿನಂತಿ ಅರ್ಜಿಯೊಂದನ್ನು ಗುಜರಾಯಿಸಿದರು. ಅವರು ಪ್ರದೇಶ ಅಥವಾ ಜಾಗಗಳನ್ನೇನೂ ಕೇಳಲಿಲ್ಲ. ತಮ್ಮ ಕಾರಖಾನೆಗಳನ್ನು ನಡೆಸುವುದಕ್ಕೆ ಅನುಮತಿ ಮಾತ್ರ ಕೇಳಿದ್ದರು. ಅವರು ಕಾರಖಾನೆದಾರರಷ್ಟೇ ಸರಿ. ನಿಮಗೆ ಈ ಇತಿಹಾಸವೆಲ್ಲ ಗೊತ್ತೇ ಇದೆ. ಅವರು ಮೊದಲಿಗೆ ನಮ್ಮಲ್ಲಿಂದ ಬಟ್ಟೆಗಳನ್ನು ಹೇಗೆ ಕೇಳಿ ಪಡೆದರು. ನಂತರ ನಮ್ಮಲ್ಲಿಯ ಬಟ್ಟೆಗಳನ್ನೇ ಮಾರಿ ಅವರು ಹೇಗೆ ಶ್ರೀಮಂತರಾದರು ಎಂಬ ಇತಿಹಾಸವನ್ನು ಈಗ ಸಾದ್ಯಂತವಾಗಿ ಪುನರುಚ್ಚರಿಸಬಯಸುತ್ತಿಲ್ಲ. ಬಂಗಾಲವನ್ನು ದಿವಾಣಿ ಹಕ್ಕನ್ನಾಗಿ ಕೊಡುವಂತೆ ಅವರು ಕೇಳಿದರು ಹಾಗೂ ಪಡೆದುಕೊಂಡರು. ಭಾರತೀಯ ನೇಕಾರರು ಕಲಾವಂತಿಕೆಯಿಂದ ನೇಯ್ದ ಭಾರತೀಯ ಬಟ್ಟೆಯನ್ನು ಅವರು ತುಂಬಾ ಕಡಿಮೆ ಬೆಲೆಗೆ ಖರೀದಿಸಿ ನಂತರ ಹೆಚ್ಚಿನ ಬೆಲೆಗೆ ಮಾರಿ ದೊಡ್ಡ ಧನಿಕರಾದರು. ಭಾರತದ ನೇಯ್ಗೆಯ ನೈಪುಣ್ಯವೇ ಅಂಥದು. ಇನ್ನೂ ಅಂಥ ನೈಪುಣ್ಯ ಭಾರತದಲ್ಲಿದೆ. ಭಾರತದಲ್ಲಿ ಗುಲಾಮಗಿರಿಕೆಯ ದೃಷ್ಟಿ ಎಂದೂ ಇಲ್ಲ. ಸರ್ವತಂತ್ರ ಸ್ವತಂತ್ರರಾಗಿರುವುದರತ್ತ ಭಾರತೀಯ ನಿರಂತರ ಒಲವುಂಟು. ಈಸ್ಟ ಇಂಡಿಯಾ ಕಂಪನಿ ಭಾರತೀಯರ ಶ್ರೀಮಂತಿಕೆಯ ಹಾಗೂ ಶಾಂತಿ ಸಮಾಧಾನಯುತ ಬದುಕಿನ ಈ ರಹಸ್ಯವನ್ನು ಅರಿತುಕೊಂಡಿತು. ಭಾರತೀಯರು ಮೂಲತಃ ಕೃಷಿಕರಾಗಿರುವುದರಿಂದ ಭಾರತ ಕೃಷಿ ಪ್ರಧಾನ ವಿರುವುದರಿಂದ ಕೃಷಿ ಉತ್ಪಾದಿತ ಅರಳೆಯಿಂದ ನೂಲು ತೆಗೆವ ಹಾಗೂ ನೇಯ್ಗೆ ಮಾಡಿ ಬಟ್ಟೆ ಉತ್ಪಾದಿಸುವ ಕುಟಿರೋದ್ಯೋಗ, ಚರಖಾ ಹಾಗೂ ಕೈಮಗ್ಗ ಕೈಗಾರಿಕೆಯನ್ನು ಭಾರತೀಯರು ತಮ್ಮದಾಗಿಸಿಕೊಂಡು ಸುಖದಿಂದಿರುವುದನ್ನು ಕಂಡುಕೊಂಡಿದ್ದರು. ಭಾರತೀಯರು ಇಷ್ಟೊಂದು ಸ್ವಾಭಿಮಾನಿ ಹಾಗೂ

ಬಲಾಢ್ಯರಿರುವುದೇಕೆ? ನಾವೇ ನೇಯ್ಗೆ ಮಾಡೋಣ ಸುಖದಿಂದಿರೋಣ ಎಂಬುದು ಭಾರತೀಯರ ಸುಖ ಸಮಾಧಾನದ ಬಾಳಿನ ಗುಟ್ಟಾಗಿತ್ತು. ಈಸ್ಟ ಇಂಡಿಯಾ ಕಂಪನಿ ಇದನ್ನರಿತುಕೊಂಡು ನೂಲುವ ಹಾಗೂ ನೇಯ್ಗೆಯ ವ್ಯವಸಾಯವನ್ನು ಅವರಿಂದ ಕಸಿದುಕೊಳ್ಳಲು ಮುಂದಾಯಿತು. ಕುಶಲ ಕಲಾತ್ಮಕ ನೇಕಾರರ ಬೆರಳುಗಳನ್ನೇ ಕತ್ತರಿಸಿ ಕೈಮಗ್ಗಗಳಿಂದ ಅವರನ್ನು ದೂರವಾಗಿಸಲಾಯಿತು. ಕೈಮಗ್ಗವೇ ಬಾಳ ಸಾಧನಾಗಿರುವಾಗ ಕೈಮಗ್ಗಗಳಿಗೆ ಭಾರತೀಯರು ಅಧೀನರಾಗಿರುವಾಗ ಅವರನ್ನು ಅದರಿಂದ ಬಿಡಿಸಿ ಗುಲಾಮಗಿರಿಗೆ ಒಳಪಡಿಸಲಾಯಿತು.

ಭಾರತದಿಂದ ಬಟ್ಟೆಗಳ ನಿರ್ಯಾತ ಹೊಸದೇನಲ್ಲ. ಇಜಿಪ್ತದ ದೊರೆಗಳು ಮೃತರಾದಾಗ ಅವರನ್ನು ಅಂದರೆ ಮಮ್ಮಿಗಳನ್ನು ಶವಗಳನ್ನು ಭಾರತದಿಂದ ಆಯಾತ ಮಾಡಿಕೊಳ್ಳಲಾದ ಬಟ್ಟೆಗಳಲ್ಲಿ ಸುತ್ತಿ ಅಂತ್ಯಕ್ರಿಯೆ ಜರುಗಿಸುವುದು ಅರಸು ಗೌರವ ವೆನಿಸುತ್ತಿತ್ತು. ಅದು ಅಲ್ಲಿ ಆಗಿನ ಪರಿಪಾಠವೇ ಆಗಿತ್ತು. ಇಜಿಪ್ತದವರು ಭಾರತದಿಂದಲೇ ಬಟ್ಟೆಯನ್ನು ಆಯಾತ ಮಾಡಿಕೊಳ್ಳುತ್ತಿದ್ದರು. ಬ್ರಿಟನ್ನಿನಲ್ಲಿರುವವರಿಗೂ ಭಾರತದಿಂದಲೇ ಬಟ್ಟೆ ಪೂರೈಕೆಯಾಗುತ್ತಿತ್ತು. ಭಾರತದಲ್ಲಿ ಹತ್ತಿ ಇದು ಮೂಲೋತ್ಪತ್ತಿ. ಸುಡಾನವು ಈಗ ಇಜಿಪ್ತದಿಂದ ಆಯಾತ ಮಾಡಿಕೊಳ್ಳುತ್ತಿದೆಂದರೆ ಅದರ ರಹಸ್ಯವೇ ಇದು. ಈ ರಹಸ್ಯವು ಭಾರತದಿಂದಲೇ ಇಜಿಪ್ತ ತಲುಪಿದೆ. ಇಜಿಪ್ತರಲ್ಲಿ ಮಮ್ಮಿಗಳಿಗೆ ಹೊದಿಸುತ್ತಿದ್ದ ವಸ್ತ್ರ ಭಾರತದ್ದೇ ಆಗಿರುತ್ತಿತ್ತು. ಆದರೆ ಭಾರತದ ವಸ್ತ್ರದ ಬಟ್ಟೆಯು ಬೇಕಾದುದು ಮಮ್ಮಿಗಳಿಗೆಲ್ಲ ಶವಗಳಿಗಾಗಿ ಅಲ್ಲ, ಬ್ರಿಟನ್ನಿನ ಜೀವಂತ ಜನರಿಗಾಗಿ. ಒಂದು ರೂ ಬೆಲೆಯೂ ಭಾರತದ ಬಟ್ಟೆಯನ್ನು ಇಂಗ್ಲೆಂಡಿನಲ್ಲಿ ಏಳು ಅಥವಾ ಎಂಟು ರೂಪಾಯಿಗಳಿಗೆ ಮಾರಲಾಗುತ್ತಿತ್ತು. ಅದು ಭಾರತದಲ್ಲಿ ಕೈಮಗ್ಗಗಳು ಚಾಲ್ತಿಯಲ್ಲಿದ್ದಾಗಿನ ಮಾತು. ನಂತರ ಜೆನ್ನಿ ಯಂತ್ರ ಶೋಧವಾಗಿ ಬ್ರಿಟನ್ನಿನಲ್ಲಿ ಬಳಕೆಗೆ ಬಂತು ಇಂಥ ಶೋಧಗಳ ವಿರುದ್ಧ ಅಥವಾ ಗಿರಣಿ ಮಾಲಕರುಗಳ ವಿರುದ್ಧ ನನ್ನ ಜಗಳವಿಲ್ಲ, ನನ್ನ ಜಗಳವಿರುವುದು ನಮ್ಮದೇ ಜನರೊಂದಿಗೆ ಕೈನೂಲು ತೆಗೆಯುವಿಕೆ ಹಾಗೂ ಕೈಮಗ್ಗದ ಮೇಲೆ ನೇಯುವಿಕೆಯು ಎಂಥ ಸಿರಿವಂತಿಕೆ ಹಾಗೂ ಸುಖ ಸಮಾಧಾನ, ಶಾಂತಿಗಳನ್ನು ನೀಡಿತ್ತೆಂಬುದನ್ನು ತಿಳಿದುಕೊಳ್ಳಬಯಸದ ನಮ್ಮದೇ ಜನರೊಂದಿಗೆ ನನ್ನ ಜಗಳವಿದೆ. ಯಾವಾಗ ಹತ್ತು ಜನರು ಮಾಡುವ ಕೆಲಸವನ್ನು ಒಂದು ಯಂತ್ರದ ಮೇಲೆ ಕೇವಲ ಒಬ್ಬನು ಮಾಡಲು ಶಕ್ತನಾದನೋ ಆಗ ಆಂಗ್ಲರು ಭಾರತವನ್ನು ಹಾಳಗೆಡಹುವ ರಹಸ್ಯವನ್ನು ಕಂಡುಕೊಂಡರು. ಗಂಗೆಯು ಬಂಗಾಲ ಉಪಸಾಗರಕ್ಕೆ ಹರಿದು ಅದರಲ್ಲಿ ಸಂಗಮವಾಗುವ ಬದಲು ಗಂಗೆಯ ನೀರು ಬಂಗಾಲ ಉಪಸಾಗರದಿಂದ ಪುನಃ ಗಂಗೋತ್ರಿಯತ್ತ ವಿರುದ್ಧ ದಿಶೆಗೆ ಹರಿದು ಹೋಗುವಂಥ ಕ್ರಮವು ಜಾರಿಗೆ ಬರುವಂತೆ ಆದೇಶಗಳನ್ನು ಜಾರಿಗೊಳಿಸಲಾಯಿತು. (ನಗೆಗಳ ಅಲೆ) ಭಾರತದಲ್ಲಿ ನಿರ್ಮಿತವಾದ

ಬಟ್ಟೆಯನ್ನು ಇಂಗ್ಲಂಡಿಗೆ ನಿರ್ಯಾತ ಮಾಡುವುದಕ್ಕೆ ಬದಲು ಇಂಗ್ಲಂಡದಿಂದ ಭಾರತಕ್ಕೆ ಬಟ್ಟೆಯ ಆಯಾತ ಶುರುವಾಯಿತು. ಯಾವುದೇ ಅಲಂಕಾರಿಕ ಬಣ್ಣನೆಯನ್ನು ನಿಮ್ಮ ಮುಂದೆ ನಾನಿರಿಸುತ್ತಿಲ್ಲ. ಶಾಂತ ರೀತಿಯಿಂದ ಈ ನೂತನ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳಿರಿ ಎಂದಿಷ್ಟೇ ಹೇಳುತ್ತಿದ್ದೇನೆ. ದೇವರು ಯಾವಾಗಲೂ ನ್ಯಾಯ ಪ್ರತಿಪಾಲಕನಿದ್ದಾನೆ. ಆತ ಒಂದು ರಾಷ್ಟ್ರಕ್ಕೆ ಮಾತ್ರ ನ್ಯಾಯವೆಸಗಿ ಇನ್ನೊಂದಕ್ಕೆ ಅನ್ಯಾಯ ಮಾಡ ಬಯಸುವವನಲ್ಲ. ಧ್ರುವ ಪ್ರದೇಶಗಳಲ್ಲಿಯ ಅತ್ಯಂತ ಶೀತ ಪ್ರದೇಶಗಳಲ್ಲಿ ವಾಸಿಸುವ ಪ್ರಾಣಿಗಳಿಗೆ ಜೀವದಿಂದಿರಲು ಭಾರಿ ದಪ್ಪ ಹಾಗೂ ನಯವಾದ ತುಪ್ಪಳದಂಥ ಚರ್ಮ ನೀಡಿದರೆ ಭಾರತದಂಥ ಉಷ್ಣ ಪ್ರದೇಶಗಳಲ್ಲಿ ಆಡು, ಕುರಿ, ದನಕರುಗಳಿಗೆ ಉಣ್ಣೆಯಂಥ ಚರ್ಮವನ್ನು ನೀಡಿರುತ್ತಾನೆ. ಗ್ರೇಟ್ ಬ್ರಿಟನ್ನಿನಲ್ಲಿಯಂಥ ಚಳಿ ನಿರೋಧಕ ದಪ್ಪ ಬಟ್ಟೆಗಳಿಂದ ಭಾರತದಲ್ಲಿ ನಾನು ನಮ್ಮ ಉಡುಪುಗಳನ್ನು ತಯಾರಿಸಿಕೊಳ್ಳಬೇಕಿಲ್ಲ. ಕಾಶ್ಮೀರದ ಉಣ್ಣೆ ಬಟ್ಟೆಯಷ್ಟೇ ನಮಗೆ ಸಾಕಾಗುತ್ತದೆ. ನಮಗೆ ಬೇಕಾದಷ್ಟು ಹತ್ತಿಯನ್ನು ಬೆಳೆದುಕೊಳ್ಳುವಂಥ ಅನುಕೂಲವಾದ ನೈಸರ್ಗಿಕ ವಾತಾವರಣವನ್ನು ದೇವರು ನಮಗೆ ನೀಡಿರುವಾಗ ಆ ಹತ್ತಿಯಿಂದ ನಮ್ಮಷ್ಟಕ್ಕೆ ನಾವೇ ನೂತು, ನೇಯ್ದು ನಮ್ಮ ಬಟ್ಟೆ ತಯಾರಿಸಿಕೊಳ್ಳುವುದನ್ನು ಬಿಟ್ಟು ಇಲ್ಲಿಂದ ಏಳು ಸಾವಿರ ಮೈಲು ದೂರದ ಬ್ರಿಟನ್ನಿಗೆ ನಮ್ಮ ಹತ್ತಿಯನ್ನು ಕಳಿಸಿ ಅಲ್ಲಿಂದ ಭಾರೀ ಬೆಲೆಗೆ ನಮಗೆ ಬೇಕಾದ ಬಟ್ಟೆಯನ್ನು ತಯಾರಿಸಿಕೊಂಡು ಆಯಾತ ಮಾಡಿಕೊಳ್ಳುವುದು ತುಂಬಾ ಅಸ್ವಾಭಾವಿಕ. ಬ್ರಿಟನ್ನಿನ ಭೂಮಿಯ ಮೇಲೆ ಒಂದು ಎಕರೆಯಷ್ಟು ಪ್ರದೇಶದಲ್ಲಿ ಸಹ ಹತ್ತಿ ಬೆಳೆಯುತ್ತಿಲ್ಲ. ಒಂದೇ ಒಂದು ಹತ್ತಿಯ ಬೀಜವನ್ನು ಅಲ್ಲಿ ಬಿತ್ತನೆ ಮಾಡುತ್ತಿಲ್ಲ. ಹತ್ತಿಯ ವ್ಯವಸಾಯವೇ ಅಲ್ಲಿ ನಡೆಯಲಾರದು. ಹೀಗಿರಬೇಕಾದರೆ ನಮ್ಮಿಂದ ಏಳು ಸಾವಿರ ಮೈಲು ದೂರವಿರುವ ಅಲ್ಲಿಗೆ ನಮ್ಮ ಹತ್ತಿ ಕಳಿಸಿ ಅಲ್ಲಿ ನಮ್ಮ ಹತ್ತಿಯಿಂದಲೇ ಮಾಡಲಾದ ಬಟ್ಟೆಯನ್ನು ನಮಗೆ ಬೇಕಾದಷ್ಟೆಲ್ಲ ತರಿಸಿಕೊಂಡು ಧರಿಸುವುದು ಅವರ ಮೇಲೆ ಅವಲಂಬಿಸುವ ಪರಾವಲಂಬನ ಪ್ರವೃತ್ತಿ ತುಂಬಾ ಅಸಹಜವೆನಿಸುತ್ತದೆ.

ಗ್ರಾಮೀಣ ಜನರೊಂದಿಗೆ ಸಾಕಷ್ಟು ಮಾತಾಡಿದ್ದೇನೆ. ನನ್ನ ವಿಚಾರಗಳನ್ನು ಹಂಚಿಕೊಂಡಿದ್ದೇನೆ. ಗೋಧಿ, ಭತ್ತ, ಬೇಳೆಕಾಳುಗಳನ್ನು ನೀವು ನಿಮ್ಮ ಭೂಮಿಯಲ್ಲಿ ವಿಪುಲವಾಗಿ ಬೆಳೆಯುತ್ತಿರುವಿರಿ. ಸಮೃದ್ಧ ಫಸಲು ತೆಗೆದುಕೊಳ್ಳುತ್ತೀರಿ. ಅದನ್ನು ಸ್ವತಃ ನೀವೇ ಬೀಸಿ ಹಿಟ್ಟು ಮಾಡಿ ರೊಟ್ಟಿ ತಯಾರಿಸಿ ನಿಮ್ಮ ಹಾಗೂ ನಿಮ್ಮೆಲ್ಲರ ಹೊಟ್ಟೆ ತುಂಬಿಕೊಳ್ಳುವುದು ಯೋಗ್ಯವೋ ? ಅಥವಾ ನೀವು ಬೆಳೆದದ್ದನ್ನೆಲ್ಲ ಇಂಗ್ಲಂಡಿಗೆ ಕಳಿಸಿ ಅಲ್ಲಿಂದ ಏಳು ಸಾವಿರ ಮೈಲು ದೂರದಿಂದ ರೀಡಿಂಗ್ ಬ್ರೆಡ್, ರೀಡಿಂಗ್ ಬಿಸ್ಕಿಟ್‌ನ್ನು ನಿಮ್ಮ ಉಪಾಹಾರಕ್ಕೆಂದು ತರಿಸಿಕೊಳ್ಳುವುದು ಯೋಗ್ಯವೋ? ನೀವೇ ಹೇಳಿ (ಶ್ರೋತೃಗಳ ನಗೆಯ ಅಲೆ) ಆದ್ದರಿಂದ

ಭಾರತದ ಹತ್ತಿಯಿಂದ ಭಾರತದಲ್ಲೇ ತಯಾರಾದ ಬಟ್ಟೆಗಳನ್ನು ಸೀರೆಗಳನ್ನು ಉಡುವುದು ನಮಗೆ ಯೋಗ್ಯ ಹಾಗೂ ಸಹಜವೆನಿಸೀತು.

ದ್ರೌಪದಿಯನ್ನು ನಗ್ನಗೊಳಿಸಿ ಅವಳಿಗೆ ಅವಮಾನಗೊಳಿಸಲು ಅವಳ ಸೀರೆ ಸೆಳೆಯುವುದಕ್ಕೆ ಅವಳ ಸಂಬಂಧಿಕನಿಗೆಯೇ ತೊಡಗಿಸಿದ ಕಥೆಯನ್ನು ನಾನು ಗ್ರಾಮೀಣ ಜನತೆಯೆದುರು ಪ್ರಸ್ತಾಪಿಸುತ್ತೇನೆ. ಈಗ ನಮ್ಮ ಮಹಿಳೆಯರ ವಸ್ತ್ರಗಳನ್ನು ವಿದೇಶಿಯರ ಕೈಯಲ್ಲಿ ಮ್ಯಾಂಚೆಸ್ಟರ್ ಹಾಗೂ ಲಿವರ್‌ಪೂಲ್ ಗಿರಣಿಗಳ ಒಡೆಯರ ಕೈಯಲ್ಲಿ ನಾವು ಕೊಟ್ಟಂತಿದೆ ಎಂದು ನೆನಪಿಸುತ್ತೇನೆ. ಇಡೀ ಜಗತ್ತು ಅವರ ನಗ್ನತೆಯನ್ನು ನೋಡುವುದಾದರೆ ಅದು ಅವಳದಷ್ಟೇ ಅಲ್ಲ... (ನಮ್ಮದೂ ಕೂಡ ನಮ್ಮೆಲ್ಲರ ಮಾನಭಂಗ ಸಹ) ನಾನು ಈ ವಿಷಯದಲ್ಲಿ ಹೆಚ್ಚು ಮಾತಾಡಬಯಸುವುದಿಲ್ಲ. ಇದು ಕೇವಲ ಭಾವನಾತ್ಮಕವಾಗಿ ಅಲಂಕಾರಿಕವಾಗಿ ಹೆಣೆದ ಕಥೆ ಮಾತ್ರವಲ್ಲ ಇದು ರಾಜಕೀಯ ಅರ್ಥಶಾಸ್ತ್ರ ನೀತಿಯ ಶಾಂತಿಯುತ ತರ್ಕ ಸರಣಿಯೇ ಆಗಿದೆ.

ಭಾರತೀಯರಾದ ನಮಗೆ ಏನಾಗಿದೆ ಎನ್ನೋಣ. ಈ ದಾಸ್ಯ ಪ್ರವೃತ್ತಿಯನ್ನು ನಾವು ಪಾಶ್ಚಾತ್ಯರಿಂದ ಕಲಿತಿದ್ದೇವೆ. ಸೂರ್ಯ ಮುಳುಗುವೆಡೆಯಿಂದ ಅಂದರೆ ಪಶ್ಚಿಮ ದಿಶೆಯಿಂದ ಬೆಳಕು ಬರುವುದು ಸಾಧ್ಯವೇ. ಇಲ್ಲಿ ಸೂರ್ಯ ಉದಯವಾಗುವಂಥ ಪೂರ್ವ ದಿಶೆಯಿಂದ ಪ್ರಕಾಶ ಬರುವುದೇ ಸಹಜ ಪ್ರಕ್ರಿಯೆ. ಉಚ್ಚರಿಸಲಿಕ್ಕೆ ಸಹ ಬಾರದ ಹೆಸರಿನ ಜರ್ಮನ್‌ನೊಬ್ಬ ಭಾರತದ ರಾಜಕೀಯ ದಾಸ್ಯ ವಿಮುಕ್ತಿ ಅದರ ಆರ್ಥಿಕ ಪರಾವಲಂಬನೆ ವಿಮುಕ್ತಿಯಲ್ಲೇ ಇದೆ. ಅದು ಚರಖಾ ತಿರುಗಿಸುವುದರಲ್ಲೇ ಉಂಟು. ಚರಖಾವೇ ಭಾರತೀಯರ ದಾಸ್ಯ ವಿಮುಕ್ತಿಯ ಏಕಮೇವ ಮಾರ್ಗವೆಂದೇ ಹೇಳುತ್ತಾನೆ. ಅವರೆಲ್ಲರ ಈ ಸೋದರತೆಯ ಕೇವಲ ಮಹಾತ್ಮಾಜಿಗೆ ಸಲಹೆ ಈ ಹುಚ್ಚು.

ಮುಂಬಯಿಯ ಡಾ ರಾಯ್, ಡಾ ಅನಸಾರಿ, ಡಾ ಕಾನಡೆ ಮೊದಲಾದ ಡಾಕ್ಟರರಿಂದ ಔಷಧೋಪಚಾರದ ಯಾದಿ ಪಡೆಯಲು ಜನರು ಧಾವಿಸುತ್ತಾರೆ. ಅವರೋ ಐರೋಪ್ಯ ಔಷಧಿ ತಯಾರಕರ, ವರ್ತಕರ ಏಜೆಂಟರಂತೆ ಉದ್ದವಾದ ಔಷಧಿಗಳ ಯಾದಿಯನ್ನೇ ಜನರಿಗೆ ನೀಡುವುದುಂಟು. ಇಂಗ್ಲೆಂಡಿನಿಂದಲೇ ತರಿಸಿಕೊಳ್ಳುವಂಥ, ಒಮ್ಮೊಮ್ಮೆ ಅಲ್ಲಿಯೂ ಸುಲಭವಾಗಿ ಸಿಗಲಾರದಂತಹ ಯಾದಿ ಸಲ್ಲಿಸಿ ಕಾಯ್ದು ಕಾಯ್ದು ತರಿಸಿಕೊಳ್ಳುವಂಥ ಔಷಧಿಗಳ ಯಾದಿಯನ್ನು ಅವರು ಬರೆದಿರುತ್ತಾರೆ. ಅವರ ಉದ್ದನೆಯ ಔಷಧಿಗಳನ್ನು ನೋಡಿಯೇ ನೀವು ಎಂತಹ ಜಾಣ ಹಾಗೂ ಪರಿಣತ ಡಾಕ್ಟರರಿವರು ಎಂದೆನ್ನುತ್ತೀರಿ. ನಿಮ್ಮ ಮಧ್ಯದಲ್ಲಿರುವ ಆಯುರ್ವೇದ ವೈದ್ಯರು, ಯುನಾನಿ ಹಕೀಮರುಗಳು ನಿಮ್ಮ ಬಾಗಿಲಲ್ಲಿ ಸಿಕ್ಕುವ ನಿಮ್ಮ ಪರಿಸರದಲ್ಲಿ ಬೆಳೆಯುವ ಸಸಿ ಗಿಡಮೂಲಿಕೆಗಳ ಔಷಧಿ

ಹೇಳಿದರೆ ನಿಮಗೆ ಸಮಾಧಾನವಾಗದು. ದೇವರು ಹೇಗೆ ರೋಗಗಳನ್ನು ಉಂಟು ಮಾಡಿರುವನೋ ಹಾಗೆಯೇ ಸೂಕ್ತ ಪರಿಹಾರವನ್ನೂ ಒದಗಿಸಿದ್ದಾನೆ. ಉಷ್ಣ ಪ್ರದೇಶಗಳಲ್ಲಿ ಉಂಟಾಗುವ ರೋಗ, ಅಸ್ವಾಸ್ಥ್ಯಗಳಿಗೆ ಉಷ್ಣ ಪ್ರದೇಶದಲ್ಲೇ ಅವುಗಳನ್ನು ಪರಿಹರಿಸಬಲ್ಲಂಥ ಗಿಡಮೂಲಿಕೆಗಳನ್ನು ಬೆಳೆಯಗೊಟ್ಟಿರುತ್ತಾನೆ. ಅಂಥವುಗಳನ್ನು ಕಿತ್ತು ತೆಗೆದುಕೊಂಡು ಚಿಕಿತ್ಸೆ ಮಾಡಬೇಕೆಂದು ಸೂಚಿಸಿದ್ದಾದರೆ ಅಂಥವನನ್ನು ನೀವು ಹುಚ್ಚು, ಹೆಡ್ಡ ಎಂದೆನ್ನುವಿರಿ. ಪಾಶ್ಚಾತ್ಯ ದೇಶದ ಔಷಧಗಳ ಉದ್ದ ಯಾದಿಯನ್ನು ನೀವು ರೋಗ ಪರಿಹಾರಕ್ಕಾಗಿ ಬಯಸುತ್ತೀರಿ. ನಿಮ್ಮ ದಾಸ್ಯ ಪ್ರವೃತ್ತಿಯಿಂಥದು. ಯಶಸ್ವಿ ವೈದ್ಯ, ಹಕೀಮನೆಂದರೆ ಆತ ರೋಗ ಪರಿಹಾರಕ್ಕೆ ಸುಲಭ ಚಿಕಿತ್ಸೆ ನೀಡಬೇಕು. ಸಂಕೀರ್ಣ ಹಾಗೂ ಗೊಂದಲಮಯವಾದ ಉಪಚಾರವನ್ನಲ್ಲ. ಮಹಾತ್ಮಾ ಗಾಂಧೀಜಿ ನಮ್ಮ ದಾಸ್ಯ ವಿಮೋಚನೆಗೆ ನೀಡಿರುವ ಸುಲಭ ಚಿಕಿತ್ಸಾ ವಿಧಾನ ಚರಖಾ. ಮಹಾತ್ಮಾಜಿ ''ನೀವು ಬರೀ ನಿಮ್ಮ ಹೃದಯದ ನುಡಿಯನ್ನು ಅನುಸರಿಸಿ ಅಂದರೆ ನಿಮಗೆ ತಿಳಿದಂತೆ ನಡೆಯುವುದಲ್ಲ. ನಮ್ಮೆಲ್ಲರಿಗನಿಸಿದಂತೆ ನಮ್ಮೆಲ್ಲರ ಅಭಿಪ್ರಾಯದಂತೆ ನಡೆದುಕೊಳ್ಳಿ ಎಂದೆನ್ನುತ್ತಾರೆ. ನಿಮ್ಮ ಮನಸ್ಸಿಗೆ ಈ ಗೊತ್ತುವಳಿ ಬರದೇ, ಹಿಡಿಸದೇ ಹೋದಲ್ಲಿ ನಿಮಗೆ ಈ ಗೊತ್ತುವಳಿಯ ಬಗ್ಗೆ ನಿಶ್ಚಿತತೆ ಮೂಡದೇ ಹೋದಲ್ಲಿ ನೀವು ಇದರ ವಿರುದ್ಧ ಮತದಾನ ಮಾಡಬಹುದು'' ಎಂದೆನ್ನುತ್ತಾರೆ. ನಾನು ಮಾತ್ರ ನಮ್ಮ ಈ ಸೈನ್ಯ ಪಡೆಯ ಒಬ್ಬ ಸೈನಿಕನೂ, ನಮ್ಮೊಳಗಿನ ಯಾರೊಬ್ಬರೂ ಒಂದೇ ಒಂದು ಮತವನ್ನು ಗೊತ್ತುವಳಿಯ ವಿರುದ್ಧ ಚಲಾಯಿಸಕೂಡದು. ಚರಖಾದ ಮೌಲ್ಯ ಹಾಗೂ ಚರಖಾದ ಅಂಕಿತವುಳ್ಳ ಈ ಧ್ವಜದ ಮಹತ್ವವನ್ನು ಕುರಿತು ಖಚಿತತೆ ಮೂಡದಿರುವವರು ಸಹ ಇವೆರಡೂ ವಿಜಯದ ಗುರಿಯತ್ತ ಸಾಗುತ್ತಿರುವುದನ್ನು ಉಚಿತವಾಗಿ ಕಂಡು ಕೊಂಡಂತಿದೆ. ನನ್ನ ಗೆಳೆಯ ದೇಶಬಂಧು ಚಿತ್ತರಂಜನ ದಾಸರಿಗೆ ಕೊನೆಗೊಮ್ಮೆ ಭಾರತ ತನ್ನ ಸ್ವರಾಜ್ಯ ಪ್ರಾಪ್ತಿಗಾಗಿ ಜನ ಸಾಮಾನ್ಯರನ್ನೇ ಅವಲಂಬಿಸಬೇಕಾಗುವುದೆಂಬುದು ಖಾತ್ರಿಯಾದಂತಿದೆ. ನಾವೀಗ ಕೋಟಿ ಜನರ ಬಗ್ಗೆ ಮಾತಾಡುತ್ತೇವೆ. ಹೀಗೆ ಮಾತಾಡುವುದೇನೋ ಸುಲಭ. ಆದರೆ ಅವರಿಗಾಗಿ ನಾವೇನು ಮಾಡುತ್ತಿದ್ದೇವೆ. ಅವರ ಬಗ್ಗೆ ನಮ್ಮ ಯೋಜನೆಯೇನಿದೆ ? ನಾವು ಯಾವಾಗಲೂ ವಿಧಾನ ಮಂಡಳ, ನಗರ ಪಾಲಿಕೆ, ಜಿಲ್ಲಾ ಮಂಡಳಿ ಮೊದಲಾದವುಗಳ ಬಗ್ಗೆಯೇ ಮಾತಾಡುತ್ತೇವೆ. ಕಾರ್ಯಕಾರೀ ಸಮಿತಿ, ಯಾವುದೊಂದು ಸಭೆ. ಅವುಗಳಲ್ಲಿ ಮಾತಾಡುವುದರ ಬಗ್ಗೆಯೇ ಚಿಂತಿಸುತ್ತೇವೆ ಆದರೆ ಲಕ್ಷಾವಧಿ ಜನರ ಬಗ್ಗೆ ಮೂವತ್ತೆರಡು ಕೋಟಿ ಜನಸಾಮಾನ್ಯರ ಜೀವನದ ಬಗ್ಗೆ ಚಿಂತಿಸುವುದಿಲ್ಲ. ಈ ಲಕ್ಷಾವಧಿ ಜನರು ನಿಮ್ಮ ಸಲುವಾಗಿ ಶಸ್ತ್ರಗಳನ್ನು ಎತ್ತಿಕೊಳ್ಳಬೇಕೆಂದರೆ ಅವರಿಗೆ ನೀವು ಆಹಾರವನ್ನು ಒದಗಿಸಬೇಕಾಗುತ್ತದೆ. ಶಸ್ತ್ರಗಳನ್ನು ಎತ್ತಿಕೊಳ್ಳುವ ತಾಕತ್ತು ಅವರಲ್ಲಿ ಬರುವಂತೆ ಮಾಡಬೇಕಾಗುತ್ತದೆ. ಪ್ರತಿಯೊಂದು ಸೈನ್ಯ ಪಡೆಯ ಪ್ರತಿಯೊಬ್ಬ ಸೈನಿಕನೂ ತನ್ನ ಹೊಟ್ಟೆ

ಪಾಡಿಗಾಗಿ ಬುಸುಗುಟ್ಟುವ ಹೆಬ್ಬಾವಿನಂತೆಯೇ ಇರುತ್ತಾನೆ ಎಂದು ನೆಪೋಲಿಯನ್ ಹೇಳುತ್ತಾನೆ. ನಿಮಗಾಗಿ ನಿಮ್ಮ ಅನುಯಾಯಿಗಳು, ಸೈನಿಕರು ಹೇಗೆ ತಾನೇ ಶಸ್ತ್ರಧಾರಿಗಳಾಗಿ ಮುನ್ನುಗ್ಗಿಯಾರು ? ನೀವು ನಿಮ್ಮ ಹೊಟ್ಟೆ ತುಂಬಿಕೊಂಡರೆ, ನೀವಷ್ಟೇ ವಿಚಾರ ಮಾಡುವವರಾಗಿದ್ದರೆ ಇಂಥ ಶ್ರೀಸಾಮಾನ್ಯರಿಗೆ ಮುನ್ನಡೆಯುವ ಶಕ್ತಿಸಾಮರ್ಥ್ಯ ಹಾಗೂ ಯೋಜನೆ ವರ್ಧಿಸಲು ಸಾಧ್ಯವೇ ? ನೀವು ನಿಮ್ಮ ಹೊಟ್ಟೆ ತುಂಬಿಕೊಳ್ಳಬಹುದು. ಆದರೆ ನಿಮಗಾಗಿ ನಿಮ್ಮೊಂದಿಗೆ ಹೋರಾಡುವಂಥವರನ್ನೂ ಶಕ್ತಿಸಂಪನ್ನರನ್ನಾಗಿಸಲೇಬೇಕಾಗುತ್ತದೆ. ನೀವು ಇಡೀ ರಾಷ್ಟ್ರ ಸಾಮ್ರಾಜ್ಯಶಾಹೀ ವಿರುದ್ಧ ಹೋರಾಡುವುದಕ್ಕೆ ಅಣಿಯಾಗಬೇಕಾದರೆ ನಿಮ್ಮೊಂದಿಗೆ ಹೋರಾಟದಲ್ಲಿ ಮುನ್ನಡೆಯಲು ಕೋಟಿ ಕೋಟಿ ಜನರನ್ನು ಸಹ ಸಮರ್ಥರನ್ನಾಗಿಸಬೇಕಾಗುತ್ತದೆ. ಹೀಗಾಗದೇ ಹೋದರೆ ಅವರೆಲ್ಲರೂ ನಿಮಗೆ ಭಾರಿ ತಡೆಯುಂಟು ಮಾಡುವವರೆನಿಸುತ್ತಾರೆ. ಅವರೆಲ್ಲ ನಿಮ್ಮನ್ನು ಅನುಸರಿಸಿ ನಿಮ್ಮೊಂದಿಗೆ ಬರಬೇಕೆಂದರೆ ಅವರಿಗೆ ಅನ್ನವೊದಗಿಸಿ ಶಕ್ತಿಸಂಪನ್ನರನ್ನಾಗಿಸ ತಕ್ಕದ್ದು. ಈ ಲಕ್ಷಾಂತರ ಬಡ ಜನರಿಗೆ ಎರಡು ಮೂರು ನಾಲ್ಕು ದಿನಗಳಿಗಾದರೂ ಸಾಲುವಷ್ಟು ಹೊಟ್ಟೆ ತುಂಬುವಷ್ಟು ಎರಡು ಊಟಗಳು ಸಿಕ್ಕುವಂತೆ ಮಾಡದೇ ಹೋದರೆ ಅವರು ನಿಮ್ಮೊಂದಿಗೆ ಹೇಗೆ ತಾನೇ ಬರಲು ಸಾಧ್ಯ? ಹಾಲಿನ ಮೇಲೆ ಅಷ್ಟೇ ಇರುವುದಕ್ಕೆ ನಾವೇನೂ ಮಹಾತ್ಮಾ ಗಾಂಧಿಯಂತಲ್ಲ. ದಿನದ ಎರಡು ಹೊತ್ತಿನ ಊಟ ಬಿಟ್ಟುಬಿಡು ಎಂದು ಹೇಳುವ ಹಕ್ಕು ಅಧಿಕಾರ ಯಾರಿಗೆ ತಾನೆ ಇದೆ ? ಇದೇನೂ ನಿಜವೆನಿಸದೇ ? ನಿಮಗೆ ಗೊತ್ತಿರಲಾರದ್ದನ್ನು ಏನಾದರೂ ನಾನು ಹೇಳುತ್ತಿದ್ದೇನೆಯೇ ? ಹೊರಗೆ ನೆರೆದಿರುವ ಸಹಸ್ರಾರು ಜನರನ್ನು ಕೇಳಿ ಬನ್ನಿ. ಈ ಅಧಿವೇಶನದಲ್ಲಿ ಪ್ರವೇಶದ ತಿಕೇಟುಗಳನ್ನು ಕೊಂಡುಕೊಳ್ಳುವುದಕ್ಕೆ ಹಣವಿಲ್ಲದ ಅನೇಕರನ್ನು ಈ ದಿನ ಬೆಳಿಗ್ಗೆ ನಾನು ಮಾತಾಡಿಸಿ ತಿಳಿದುಕೊಂಡಿದ್ದೇನೆ. ಅಂಥವರೆಲ್ಲರೂ ನಮ್ಮೊಂದಿಗೆ ಹೋರಾಟದಲ್ಲಿ ಪಾಲುಗೊಳ್ಳುವಂತೆ ಆಗುವುದು ಅತ್ಯಗತ್ಯ. ನಮ್ಮ ಹೋರಾಟದಲ್ಲಿ ಅಂಥವರನ್ನು ಸೈನಿಕರನ್ನಾಗಿ ಸೇರಿಸಿಕೊಳ್ಳುವುದು ಈಗ ಅಸಾಧ್ಯವೆನಿಸಿದೆ. (ಆಗ ಅಧ್ಯಕ್ಷರಾದ ಮಹಾತ್ಮಾ ಗಾಂಧೀಜಿಯವರು ಭಾಷಣಕಾರರಿಗೆ ವಿಧಿಸಲಾದ ಕಾಲಮಿತಿಯನ್ನು ನೆನಪಿಗೆ ತಂದು ಕೊಳ್ಳುವಂತೆ ಮುಗುಳ್ನಗೆ ಸೂಸಿದರು. ಹಾಗೂ ಭಾಷಣಕಾರರ ಮಾತುಗಳನ್ನು ಎಲ್ಲರೂ ಚೆನ್ನಾಗಿ ಕೇಳಿ ಮನನ ಮಾಡಿಕೊಳ್ಳಲೆಂಬುದನ್ನು ಸಂಕೇತ ಮೂಲಕ ಸೂಚಿದರು. ಮಹಾತ್ಮಾಜೀ ಮುಗುಳ್ನಗೆ ಹೊರ ಸೂಸುತ್ತಿದ್ದಂತೆಯೇ ಶ್ರೋತೃಗಳೆಲ್ಲರೂ ನಕ್ಕರು. ಇಂತಹ ನಗೆಯ ವಾತಾವರಣದಲ್ಲೇ ಮೌಲಾನಾ ಮಹಮ್ಮದ ಅಲಿ ತಮ್ಮ ಭಾಷಣ ಮುಂದುವರಿಸಿದರು) ನೀವು ಈ ಮನುಷ್ಯನನ್ನು (ಗಾಂಧೀಜಿಯವರನ್ನು) ನಿಮ್ಮೊಂದಿಗೆ ಇರಿಸಿಕೊಳ್ಳಬಯಸುವುದಾದರೆ ಈತನಿಗೆ ಭೋಜನದ ವ್ಯವಸ್ಥೆ ಮಾಡಲೇಬೇಕಾಗುತ್ತದೆ. ಈತ ಗಳಿಸುತ್ತಾನೆ. ಈತ ಭಿಕ್ಷುಕನೇನೂ ಅಲ್ಲ. ಇವನ ನೀತಿ ಮತ್ತೆಯನ್ನು ನೀವು ಕದಡಬಾರದು. ಈತ ನಿಮ್ಮ

ಪ್ರಶಂಸೆಯನ್ನಷ್ಟೇ ಬಯಸುತ್ತಿಲ್ಲ. ನಿಮ್ಮಿಂದ ಹಣವನ್ನು ಅಪೇಕ್ಷಿಸುತ್ತಿಲ್ಲ. 20 ಲಕ್ಷ ರೂ.ಗಳನ್ನು ಸುರಿಯಬಲ್ಲ ಧನಿಕನಾಗಿದ್ದಾನೆ ? ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಅಂಥವರಾರೂ ಇಲ್ಲ. ಚರಖಾ ಎಂದರೆ ಹರ್ಷಧಾರೆ. ಸುರಿವ ಮಳೆಯಿದ್ದಂತೆ. ಕಾಲುವೆಯಲ್ಲಿ ಹರಿದು ಬರುವ ನೀರಿನಂತಲ್ಲವದು ಎಂದು ಗಾಂಧೀಜಿ ಚರಖಾದ ಬಗೆಗೆ ಹೇಳುತ್ತಾರೆ. ಮಳೆಯ ನೀರು ಪರಿಶುದ್ಧವಾದುದು. ಆದ್ದರಿಂದ ಎಷ್ಟೋ ಚಕ್ರಗಳು ಗತಿಶೀಲವಾಗುತ್ತಿವೆ. ಚರಖಾದಿಂದ ಹರಿವ ಹರ್ಷಧಾರೆಯನ್ನು ಬಡವರು ಉಪಯೋಗಿಸಿಕೊಳ್ಳುತ್ತಾರೆ. ತಮ್ಮ ದಿನಗೂಲಿ ಗಳಿಸಿ ಹೊಟ್ಟೆ ಹೊರೆದುಕೊಳ್ಳುತ್ತಾರೆ. ಹೀಗೆ ಗಳಿಸುವ ದಿನಗೂಲಿಯಿಂದ ಬಡವರ ಹೊಟ್ಟೆ ಪೂರ್ಣ ತುಂಬುವುದಿಲ್ಲವೆಂಬುದು ಗೊತ್ತಿದೆ. ಆದರೆ ಕೃಷಿ ಕೆಲಸಗಳಿಲ್ಲದ ಕಾಲದಲ್ಲಿ ದೈನಿಕ ಗಳಿಕೆ ನೀಡುವಂಥ ಕುಟಿರೋದ್ಯೋಗ ಈ ಚರಖಾ. ಇಂಥ ಚರಖಾಕ್ಕೆ ಪರ್ಯಾಯವೆನಿಸುವ ಬೇರೆಯದನ್ನು ಸೂಚಿಸಿ. ಆಗ ನಾನೂ ಚರಖಾ ಬೇಡ ಅದನ್ನು ಕಿತ್ತೆಸೆಯಿರಿ ಎಂಬ ನಿಮ್ಮ ದನಿಯೊಂದಿಗೆ ಜೊತೆಯಾಗಿ ಕೂಗುತ್ತೇನೆ. ಚರಖಾ ತಿರುಗಿಸುವುದಕ್ಕೆ ಬದಲು ಬೇರೆ ಉದ್ಯೋಗವೇ ಈಗ ಶ್ರೀಸಾಮಾನ್ಯನ ಕೈಯಲ್ಲಿಲ್ಲ. ಬೇಕಿರಲಿ ಬೇಡವಾಗಿರಲಿ ಪ್ರತಿಯೊಬ್ಬನೂ ಚರಖಾಕ್ಕೆ ಶರಣು ಹೋಗಲೇಬೇಕು. ಇದರಿಂದ ಏನೂ ಹಾನಿಯೆಂಬುದಿಲ್ಲ. ತನಗೆ ಬೇಕಾದಷ್ಟು ಬಟ್ಟೆ ಹಾಗೂ ಬೇರೆಯವರಿಗೂ ಬೇಕಾಗಬಹುದಾದ ಬಟ್ಟೆಗಳು ಸಿದ್ಧವಾಗಲು ನೆರವಾಗಲು ಮಳೆಗಾಲದಲ್ಲಿ ಸಾಧ್ಯವಾಗುತ್ತದೆ.

ಆದರೆ ಚರಖಾಕ್ಕೆ ಇನ್ನೊಂದು ಬೇರೆ ಪರ್ಯಾಯ ಕಾಣಸುತ್ತದೆ. ಚರಖಾದಲ್ಲಿ ವಿಶ್ವಾಸವುಳ್ಳವರಾದರೆ ನಿಮ್ಮ ಮನಸ್ಸಿಗೆ ಆ ಪರ್ಯಾಯ ಹಿಡಿಸಲು ಸಾಧ್ಯವೇ ಇಲ್ಲ. ಚರಖಾ ನಿಮಗೆ ಅಷ್ಟೇನೂ ಚೇತೋಹಾರಿಯೆನಿಸುತ್ತಿಲ್ಲವೆಂದೆನ್ನುವುದಾದರೆ ಚೈತನ್ಯದಾಯಕವೆನಿ ಸುವ ಆ ಪರ್ಯಾಯವನ್ನು ನಿಮ್ಮ ಮುಂದೆ ಸೂಚಿಸುತ್ತೇನೆ. ಖಡ್ಗ ಮೊದಲಾದ ಶಸ್ತ್ರಾಸ್ತ್ರ ಬಾಂಬ್, ರಿವಾಲ್ವರ ಮೊದಲಾದವುಗಳು ಪರ್ಯಾಯವೆಂದು ಹೇಳುತ್ತೇನೆ.

ಚರಖಾದ ಮೇಲೆ ಕೈನೂಲು ತೆಗೆಯುತ್ತ ಕುಳಿತುಕೊಳ್ಳುವಲ್ಲಿ ತಮಗೆ ವಿಶ್ವಾಸವಿಲ್ಲ ವೆಂದು ಪ್ರತಿಪಾದಿಸುತ್ತ ಚರಖಾದ ನಿಷ್ಪ್ರಯೋಜಕತೆ ಪ್ರತಿಪಾದಿಸುವವರಿಗೂ ಬಾಂಬ್, ರೈಫಲ್ ಮೊದಲಾದ ಶಸ್ತ್ರಾಚಾರಗಳಲ್ಲಿ ನಂಬುಗೆಯಿರುವುದಿಲ್ಲ. ಆ ರೀತಿ ಶಸ್ತ್ರಾಚಾರದಲ್ಲಿ ನಂಬಿಗೆಯಿರಿಸುವವರು ಬಹಳ ಕಮ್ಮಿ ಇರುತ್ತಾರೆಂದು ಬಿಂಬಿಸ ಬಯಸುತ್ತೇನೆ. ಆಂಗ್ಲರಿಗೂ ಈ ಬಗ್ಗೆ ವಿಶ್ವಾಸವಿರುವಂತಿಲ್ಲ. ನಾವು ಅವರಿಗೆ ವಿವರಣೆ ನೀಡಬೇಕಾಗಿಯೂ ಇಲ್ಲ. ಶಸ್ತ್ರಾಚಾರವು ನಮಗೆ ಸ್ವಾತಂತ್ರ್ಯ ಹಾಗೂ ದಾಸ್ಯ ವಿಮುಕ್ತಿಯನ್ನು ದೊರಕಿಸಿಕೊಡಲಾರದು. ಈಗ ಶಸ್ತ್ರಗಳಾದರೂ ಪ್ರಯೋಗಿಸಲು ಅಥವಾ ಪ್ರಯೋಗಿಸದಿರಲು ನಿಮ್ಮ ಕೈಯಲ್ಲಿ ಎಲ್ಲಿವೆ ? ಇಂಗ್ಲೆಂಡಿನಲ್ಲಿ ಖಿಲಾಫತ್ ವಿಷಯದಲ್ಲಿ ಸ್ನೇಹಿತ ಕರ್ನಲ್ ವೆಜವುಡ್ ಅವರು ನಮ್ಮನ್ನು ಬೆಂಬಲಿಸುವವರಾಗಿದ್ದರು. ಗೊತ್ತುವಳಿಯನ್ನು ಅವರೇ ಅನುಮೋದಿಸಿದ್ದರು. ನೀವು

ಶಸ್ತ್ರಾಚಾರಕ್ಕೆ ಮುಂದಾಗಿ ಆದರೆ ಅದರಿಂದ ರಕ್ತದ ಕಾಲುವೆ ಹರಿಯುವುದು ಎಂದವರು ಹೇಳಿದ್ದರು. ಆದರೆ ಭಾರತದಲ್ಲಿ ನಮಗಿಂದು ರಕ್ತಕ್ರಾಂತಿ ಬೇಕಿಲ್ಲ. (ಆಗ ಅಧ್ಯಕ್ಷರು ಭಾಷಣಕಾರರಿಗೆ ಕಾಲಮಿತಿಯನ್ನು ಗಮನಕ್ಕೆ ತಂದರು)

ನನಗೆ ಮಾತಾಡಲು ಈಗ ಕಾಲಾವಕಾಶವಿಲ್ಲ. ಸಮಯ ಮುಗಿದು ಹೋಗಿದೆ. ನಮಗೆ ಭಾರತದಲ್ಲಿ ಈಗ ರಕ್ತಕ್ರಾಂತಿ ಬೇಕಾಗಿಲ್ಲ. ನಾವು ಶಾಂತಿಯುತ ಕ್ರಾಂತಿ ಬಯಸುತ್ತೇವೆ ಎಂದು ನಾನು ನನ್ನ ಸ್ನೇಹಿತ ಸೈಯದ್ ಹುಸೇನ್‌ರಿಗೆ ಭರವಸೆ ನೀಡ ಬಯಸುತ್ತೇನೆ. ಇಂಥ ಶಾಂತಿಯುತ ಕ್ರಾಂತಿ ತರುವುದಕ್ಕೆ ಚರಖಾವೊಂದೇ ಸೂಕ್ತ ಹಾಗೂ ಸುಲಭ ಉಪಾಯ. ಭಾರತದ ಬಳಿ ಈಗ ಝಳಪಿಸಲು ಅಸ್ತ್ರಗಳು ಉಳಿದೇ ಇಲ್ಲ. ಚರಖಾದ ಮೇಲೆ ಮಹಿಳೆಯರನ್ನೆಲ್ಲ ತೊಡಗಿಸುವ ಅತ್ಯಂತ ಸುಲಭವಾದ ಕೆಲಸವನ್ನು ಮಾಡಲು ಸಾಧ್ಯವಾಗದಿರುವಾಗ ನೀವು ಅನುಯಾಯಿಗಳ ಸೈನಿಕರ ಪಡೆಯನ್ನು ಹೇಗೆ ತಾನೇ ಕಟ್ಟಲು ಸಾಧ್ಯ ? ಭಾರತದಲ್ಲಿ ಈಗ ನಿಮ್ಮ ಬಳಿ ಶಸ್ತ್ರಾಸ್ತ್ರಗಳಿಲ್ಲದಿರುವಾಗ ನೀವು ಬಳಸಬೇಕಾದ ಶಸ್ತ್ರ ಚರಖಾವೊಂದೇ ಆಗಿದೆ. ಶಕ್ಯವಿಲ್ಲದುದರ ಪ್ರಯತ್ನದ ಬಗ್ಗೆ ಮಾತಾಡುವುದರಲ್ಲಿ ಪ್ರಯೋಜನವಿಲ್ಲ. ಇದೊಂದೇ ಈಗ ನಿಮ್ಮ ಕೈಯಲ್ಲಿದೆ. ಚರಖಾದ ಹೊರತು ವಿಕಾಸವೇ ಇಲ್ಲ. ವಿಧಾನ ಮಂಡಳಗಳಲ್ಲಿ ಪ್ರವೇಶ ಹೊಂದುವುದರಲ್ಲಿ ನಿಮಗೆ ವಿಶ್ವಾಸ ವಿರುವುದಾದರೆ ಆ ರೀತಿ ಮಾಡಲು ಸ್ವರಾಜ್ಯ ಪಕ್ಷದವರಿಗೆ ನೆರವಾಗಿರಿ. ಅವರೊಂದಿಗೆ ಹೋಗಿರಿ ನಾವು ಮಾತ್ರ ಅವರೊಂದಿಗೆ ಹೋಗಿ ವ್ಯರ್ಥ ಕಾಲಹರಣ ಮಾಡಬಯಸುವುದಿಲ್ಲ. ಅವರೊಂದಿಗೆ ಜಗಳವಾಡುವುದರಲ್ಲಿ ನಮ್ಮ ಅತ್ಯಮೂಲ್ಯ ಸಮಯವನ್ನು ವ್ಯರ್ಥ ಹೋಗಗೊಡಲಾರೆವು. ನೀವು ವಿಧಾನ ಮಂಡಳದ ಕೆಲಸ ಹಾಗೂ ಕಲಾಪಗಳ ನಂತರ ಮರಳಿದ ಬಳಿಕ ನಿಮ್ಮ ಬಿಡುವಿನ ವೇಳೆಯನ್ನು ಚರಖಾದ ಮೇಲೆ ಕೈನೂಲು ತೆಗೆಯುವುದಕ್ಕೆ ತೊಡಗಿಸಿದರಷ್ಟೇ ಸಾಕು.

ದಿಲ್ಲಿಯಲ್ಲಿ ಹಾಗೂ ಕಾಕಿನಾಡಾದಲ್ಲಿಯ ಅಧಿವೇಶನಗಳಲ್ಲಿ ವಿಧಾಯಕ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲಾಗಿತ್ತು. ಈಗಲೂ ಅದೇ ಕಾರ್ಯಕ್ರಮಗಳ ಅನುಷ್ಠಾನದ ಕರ್ತವ್ಯ ನಮ್ಮ ಮುಂದಿದೆ. ನಾವು ಈಗ ನಮ್ಮನ್ನು ಸ್ವರಾಜ್ಯ ಪಕ್ಷದವರಿಗೆ ಮಾರಿಕೊಂಡೆವೆನಿಸಬಹುದು. ಆದರೆ ನಾವು ನಮ್ಮ ಆತ್ಮಸಾಕ್ಷಿಯನ್ನೇನೂ ಮಾರಿಕೊಂಡಿಲ್ಲ. ಏಕತೆಯ ಸಾಧನೆಗೋಸ್ಕರ ನಾವು ಈಗ ಈ ಬೆಲೆ ತೆತ್ತಿದ್ದೇವೆ. ಆದರೂ ಚರಖಾದಲ್ಲಿ ವಿಶ್ವಾಸವಿರದ ಅಂಥವರಿಂದ ಕೈನೂಲು ತೆಗೆಯುವುದಕ್ಕೆ ಬದ್ಧತೆಯನ್ನು ಅವರಿಂದ ಬಹುದೊಡ್ಡ ಬೆಲೆಯನ್ನಾಗಿ ಪಡೆದುಕೊಂಡಿದ್ದೇವೆ. ಅವರು ಕೈನೂಲು ತೆಗೆಯಲು ಇಚ್ಛಿಸಲಿಕ್ಕಿಲ್ಲ. ಆದರೆ ಬೇರೆಯವರಿಂದ ಕೈನೂಲು ತೆಗೆಸಿಯಾದರೂ ತಮ್ಮ ಹೆಸರಿನಿಂದ ಕೈನೂಲು ವಂತಿಗೆ ಸಲ್ಲಿಸುವುದಕ್ಕೆ ಅವರು ಬದ್ಧರಾಗಿದ್ದಾರೆ ಎಂದವರು ಅಧ್ಯಕ್ಷರ ಗಮನಕ್ಕೆ

ತರುವ ರೀತಿಯಲ್ಲಿ ದೃಷ್ಟಿ ಬೀರಿದರು. ಆದರೆ ಸರಿಯಾಗಿ ಕೈನೂಲು ತೆಗೆಯಲಾಗಿದೆಯೋ ಹೇಗೆಂಬುದನ್ನು ಪರೀಕ್ಷಿಸುವ ಮನುಷ್ಯ ಇಲ್ಲಿದ್ದಾನೆ. ಈತ (ಈ ಮಹಾತ್ಮ) ಅಂಥ ಒಳ್ಳೇ ನೂಲು ಪರೀಕ್ಷಕರ ದೊಡ್ಡ ಗುಂಪನ್ನೇ ಹೊಂದಿದ್ದಾನೆ. ಸಮರ್ಪಿಸಲಾದ ಕೈನೂಲಿನ ವಂತಿಗೆಯಲ್ಲಿ ಅದು ನಿಜವಾಗಿಯೂ ಕೈನೂಲು ಅಹುದೋ ಅಲ್ಲವೋ ? ಅದು ಉತ್ತಮವಿದೆಯೇ ಎಂಬುದನ್ನು ಅವರೆಲ್ಲ ಪರೀಕ್ಷಿಸಿಯೇ ತೆಗೆದುಕೊಳ್ಳುತ್ತಾರೆ. ಸ್ವತಃ ನೂಲಲು ಸಾಧ್ಯವಿಲ್ಲದವರು ಸರಿಯಾದ ನೂಲುವವರನ್ನು ತಮ್ಮ ಸಹಾಯಕರೆಂದು ಹೊಂದಿರಲೇಬೇಕಾಗುತ್ತದೆ. ಪ್ರತಿಯೊಬ್ಬ ಸ್ತ್ರೀ ಪುರುಷರೂ ಸ್ವತಃ ನೂಲಲೇಬೇಕೆಂದು ನಾನು ಬಯಸುತ್ತೇನೆ. ಸ್ವರಾಜ್ಯ ಪಕ್ಷದವರು ನೂತು ಕೈನೂಲಿನ ವಂತಿಗೆ ಸಲ್ಲಿಸಬೇಕೆನ್ನುವಂತೆ ಪ್ರಸಂಗವೇ ಉದ್ಭವಿಸದ ರೀತಿಯಲ್ಲಿ ಬೃಹತ್ಪ್ರಮಾಣದಲ್ಲಿ ನಾವು ನೀವೆಲ್ಲಾ ಚರಖಾದ ಮೇಲೆ ನೂಲು ತೆಗೆದು ನೂಲಿನ ಸಂಗ್ರಹವನ್ನು ದೊಡ್ಡ ಪ್ರಮಾಣದಲ್ಲಿ ಒಟ್ಟ ಬಿಡೋಣ. ಹಾಗೆ ಪ್ರತಿಯೊಬ್ಬರೂ ಚರಖಾದ ಹುಚ್ಚೇ ಹಿಡಿಸಿಕೊಂಡಿದ್ದೇವೆ ಎಂಬ ರೀತಿಯಲ್ಲಿ ಕಾರ್ಯ ನಿರತರಾಗೋಣ (ನಗೆಗಳ ಅಲೆ, ಚಪ್ಪಾಳೆ, ಹರ್ಷೋದ್ಗಾರ) ನಾವೆಲ್ಲ ಹೀಗೆ ಮಾಡಲು ಸಾಧ್ಯವಿದೆಯಾದರೂ ಹೀಗಾಗಲೇಬೇಕೆಂದು ನಾನು ಬಯಸುವುದಿಲ್ಲ. ನೂಲ ಬಯಸುವರಾರೂ ಇಲ್ಲದಂತೆ ಯಾರನ್ನೂ ಈ ವಿಧಾಯಕ ಕರ್ತವ್ಯದಿಂದ ಹೊರಗುಳಿಯದಂತೆ ಕಾರ್ಯ ನಡೆಯಲೆಂಬುದು ನನ್ನ ಉದ್ದೇಶ. ಅವರೆಲ್ಲ ಸ್ವತಃ ತಾವೇ ಸ್ವಯಂಸ್ಫೂರ್ತಿಯಿಂದ ಕಾರ್ಯತತ್ಪರರಾಗಲಿ. ಕಾರ್ಯ ನಿರತರಾಗಬಯಸುವವರು ನಮ್ಮೊಂದಿಗೆ ಸೇರಿಕೊಂಡು ಕಾರ್ಯ ಮಾಡಲಿ. ಚರಖಾದ ಮೇಲೆ ನೂಲ ಬಯಸುವವರು ಸಹ ನಮ್ಮೊಂದಿಗೆ ಸೇರಿಕೊಂಡು ನೂಲಲು ತೊಡಗಲಿ ಅಂದರೆ ಅದು ವಿಕಾಸವನ್ನು ಹೆಚ್ಚಿಸಿ ನಮ್ಮ ಬಲವನ್ನು ಸಂವರ್ಧಿಸುತ್ತದೆ. ಸಿರಿವಂತರು, ವಿದ್ಯಾ ವಿಭೂಷಿತರು, ಡಾಕ್ಟರರು, ಪಂಡಿತರು ನೂಲುವದಾದರೆ ಎಲ್ಲರಿಗೂ ಹುರುಪು ಬರುತ್ತದೆ. ನಾನು ನನ್ನ ಸ್ನೇಹಿತರಿಗೆಲ್ಲ ಈ ಸ್ವರಾಜ್ಯ ಸಂಸ್ಥೆಯಲ್ಲಿ ಸೇರಿಕೊಳ್ಳಲು ಆಹ್ವಾನಿಸುತ್ತೇನೆ. ಅವರಿಗೆ ಚರಖಾದ ಹುಚ್ಚು ಹಿಡಿದವರ ಚರಖೋನ್ಮಾದಿಗಳ ಸಂಘ ಅನಿಯಮಿತವೆಂಬುದನ್ನು ಹುಟ್ಟು ಹಾಕುವಂತೆ ಕೇಳಿಕೊಳ್ಳುತ್ತೇನೆ.

ಕನಿಷ್ಟ ಪಕ್ಷ ಈ ವರ್ಷವಾದರೂ ಚರಖಾದ ಇಂಥ ಹುಚ್ಚು ಎಲ್ಲರ ತಲೆಗೇರಲೆಂದು ಬಯಸುತ್ತೇನೆ. ಇಡೀ ದೇಶ ಇಂಥದೊಂದು ಹುಚ್ಚನ್ನು ಹೊಂದಿ ಒಗ್ಗಟ್ಟು ಸಾಧಿಸಿದಲ್ಲಿ ನಾವು ಈ ವರ್ಷಾಂತ್ಯದಷ್ಟೊತ್ತಿಗೆ ವಿದೇಶೀ ವಸ್ತುಗಳ, ವಸ್ತ್ರಗಳ ಬಹಿಷ್ಕಾರವನ್ನು ಸಂಪೂರ್ಣವಾಗಿ ಸಾಧಿಸುತ್ತೇವೆ. 1925 ನೇ ವರ್ಷಾಂತ್ಯಕ್ಕೆ ವಿದೇಶಿಯ ಬಟ್ಟೆಗಳ ಸಂಪೂರ್ಣ ಬಹಿಷ್ಕಾರ ಸಾಧಿಸದೇ ಹೋದರೂ ಬಹಿಷ್ಕಾರ ತುಂಬಾ ಪರಿಣಾಮಕಾರಿ ಎಂದೆನ್ನುವಷ್ಟರ ಸನಿಹದ ಸಾಧನೆ ಸಾಧಿಸಬಹುದಾಗಿದೆ.

ಬ್ರಿಟನ್ನು ಕಳೆದ ಜಾಗತಿಕ ಯುದ್ಧದಿಂದಾಗಿ ಎಂಟು ಲಕ್ಷ ಪೌಂಡುಗಳ ಋಣಭಾರ ಹೊರಬೇಕಾಗಿ ಬಂದಿದೆ. ಮುಂಬರುವ ಇಪ್ಪತ್ತು ವರ್ಷ ಮೂವತ್ತು ವರ್ಷ ಅಷ್ಟೇ ಏಕೆ ನೂರು ವರ್ಷಗಳ ಕಾಲ ಈ ಋಣಭಾರ ನಮ್ಮನ್ನು ಕಾಡಲಿದೆ ಎಂದು ಆಂಗ್ಲರು ಆರ್ಥಿಕ ಚಿತ್ರವನ್ನು ನಿಮ್ಮ ಮುಂದಿಡಬಹುದೆಂದು ನನ್ನ ಅನೇಕ ಸ್ನೇಹಿತರು ಹೇಳುತ್ತಾರೆ. ಭಾರತದಿಂದ ಇಂಗ್ಲಂಡ್ ಇಲ್ಲಿಯ ತನಕ ದೋಚಿದ ಮೂವತ್ತು ದಶಲಕ್ಷ ಪೌಂಡ ಚಿನ್ನವನ್ನು ಭಾರತಕ್ಕೆ ಮೊದಲಿಗೆ ಮರಳಿಸಲಿ. ನಂತರ ಅದು ತನ್ನ ಲೆಕ್ಕ ಹೇಳಲಿ ಎಂದೇ ನಾನು ಅವರಿಗೆ ಹೇಳಬೇಕಾಗುತ್ತದೆ. ಅದು ಇಲ್ಲಿ ಗಮನಿಸಬೇಕಾದ ಅಂಶವಲ್ಲ. ಯಾವುದೊಂದು ರಾಷ್ಟ್ರ ಬರೀ ಉತ್ಪಾದನೆಯನ್ನು ಹೆಚ್ಚಿಸಿದರೆ ಸಾಲದು. ಗಳಿಸಿದ ಸಂಪತ್ತಿಯ ಸರಿಯಾದ ಸಮನಾದ ವಿತರಣೆ ಸಹ ಆಗಬೇಕು. ಎಲ್ಲರಿಗೂ ಅದರ ಪ್ರಯೋಜನವಾಗಬೇಕು ಎಂದು ನಾನು ಬಯಸುವವ. ನೀವು ಎಷ್ಟೇ ಪ್ರಯತ್ನ ಮಾಡಿರಲಿ. ಎಷ್ಟೇ ಗಳಿಸಿರಲಿ ನೀವು ಪೂರ್ವಾಗ್ರಹ ದೂಷಿತ ಭಾವನೆಯಿಂದ ಎಷ್ಟು ಮಂದಿಗೆ ಅನ್ಯಾಯ ಬಗೆದಿರುವಿರಿ. ನಿಮ್ಮ ಗಳಿಕೆಯಲ್ಲಿ ಎಷ್ಟು ಶ್ರಮಜೀವಿಗಳಿಗೆ ನ್ಯಾಯವಾದ ಪಾಲು ನೀಡಿರುವಿರಿ ಎಂಬುದು ಮಹತ್ವದ್ದು. ಇದನ್ನು ಗಮನಿಸಿದಾಗಲೇ ನಿಮ್ಮ ನೈತಿಕ ಬಲ ನಿಮಗೇ ಅರ್ಥವಾಗುತ್ತದೆ. ಇಂದು ನೀವು ರಕ್ತಹೀನತೆಯಿಂದ ಬಳಲುತ್ತಿರುವಿರಿ. ನಿಮ್ಮ ಆತ್ಮ ಅಶಕ್ತವಾಗಿದೆ. ನಾಳೆ ನೀವು ರಕ್ತ ಹೀನತೆ ದೋಷ ಕಳೆದುಕೊಂಡು ಆರೋಗ್ಯವಂತರಾಗುವಿರಿ. ನಿಮ್ಮ ದೇಹ ಹಾಗೂ ಆತ್ಮಗಳಲ್ಲಿ ಹೊಸ ರಕ್ತ ಹರಿಯತೊಡಗುವುದು. ಅನೇಕ ಧುರೀಣರು ನಮ್ಮ ಮಧ್ಯದಲ್ಲಿದ್ದಾರೆ. ಹೊಸ ನೇತಾಗಣ ಬರುತ್ತದೆ. ನೀವು ಶೌಕತ್ ಅಲಿ ಕೀ ಜೈ, ಮಹಮ್ಮದ ಅಲಿ ಕೀ ಜೈ ಎಂದು ಜಯಘೋಷ ಮಾಡುವ ಅಗತ್ಯವಿಲ್ಲ. ಮಹಾತ್ಮಾ ಗಾಂಧೀಜೀ ಕಿ ಜೈ ಎಂದಿಷ್ಟೇ ಎನ್ನಿರಿ. ಇನ್ನು ಇವರ ಜಯಕಾರವೂ ಬೇಡ. ಕುಳಿತ ಸ್ಟೂಲಿನಿಂದ ಅವರನ್ನು ಸರಿಸುತ್ತೇನೆ. ಮಹಾತ್ಮಾ ಗಾಂಧೀಜೀ ಕೀ ಜೈ ಅನ್ನುವುದು ಸಹ ಬೇಡ. ಖಾದೀ ಕೀ ಜೈ ಎಂದಿಷ್ಟೇ ಹೇಳೋಣ. ಇದೊಂದೆ ಜಯಕಾರ ಸಾಕು. ಭಾಷಣ ಮುಗಿಯುತ್ತಲೇ ಖಾದಿಯ ಪ್ರಚಂಡ ಜಯಕಾರ ಕೇಳಿ ಬರ ಹತ್ತಿತ್ತು.

ಸಂಜೆ 5.10 ಕ್ಕೆ ಮೌಲಾನಾ ಮಹಮ್ಮದ ಅಲಿ ತಮ್ಮ ಗೊತ್ತುವಳಿಯ ಸಮರ್ಥನೆ ಮಾತುಗಳನ್ನು ಮುಗಿಸಿದ ಬಳಿಕ ಅಧ್ಯಕ್ಷರು ಮೌಲಾನಾ ಹಜರತ್ ಮೊಹಾನಿಯವರನ್ನು ಗೊತ್ತುವಳಿ ವಿರೋಧಿಸಿ ಮಾತನಾಡಲು ಆಹ್ವಾನಿಸಿದರು.

ಮೌಲಾನಾ ಹಜರತ್ ಮೊಹಾನಿಯವರು ಉರ್ದುವಿನಲ್ಲಿ ಗೊತ್ತುವಳಿ ವಿರೋಧಿಸಿ ಮಾತನಾಡಿದರು

''ಬಂಧುಗಳೇ ಗೊತ್ತುವಳಿಗೆ ನಾನು ವಿರುದ್ಧವಿರುವೆನೆಂದು ತಿಳಿಸಲು ನನಗೆ ವ್ಯಸನವಾಗುತ್ತಿದೆಂದು ಮೊತ್ತ ಮೊದಲಿಗೆ ನಿವೇದಿಸ ಬಯಸುತ್ತೇನೆ. ಗೊತ್ತುವಳಿಯಲ್ಲಿಯ

ಅನೇಕ ವಿಷಯಗಳು ನನ್ನ ಮನವೊಪ್ಪುವಂತೆ ಇರುವ ಕಾರಣದಿಂದ ನನಗೆ ಗೊತ್ತುವಳಿಯನ್ನು ಇಡಿಯಾಗಿ ವಿರೋಧಿಸಬೇಕಾಗಿದೆ ಎಂಬುದು ನನ್ನ ವ್ಯಸನದ ಒಂದು ಕಾರಣ. ಮನವೊಪ್ಪದ ಅನೇಕ ವಿಷಯುಗಳು ಗೊತ್ತುವಳಿಯಲ್ಲಿರುವದರಿಂದ ಗೊತ್ತುವಳಿಯನ್ನು ವಿರೋಧಿಸಬೇಕಾಗಿದೆಂಬುದೇ ನನ್ನ ಅಸಮಾಧಾನಕ್ಕೆ ಇನ್ನೊಂದು ಕಾರಣ. ಗೊತ್ತುವಳಿಯಲ್ಲಿ ಸಮ್ಮತವಾದ ವಿಷಯಗಳನ್ನು ಒಪ್ಪಿಕೊಳ್ಳುತ್ತೇನೆ ಆದರೆ ಒಂದೆರಡು ವಿಷಯಗಳನ್ನು ಮಾತ್ರ ವಿರೋಧಿಸುತ್ತೇನೆ. ಗೊತ್ತುವಳಿಯಲ್ಲಿ ಅಸಹಕಾರ ಆಂದೋಲನವನ್ನು ಕೈಬಿಟ್ಟಿರುವುದಕ್ಕೆ ನನ್ನ ಮೊದಲ ವಿರೋದ. ಅಸಹಕಾರ ಆಂದೋಲನವೆಂಬುದು ಸ್ವಲ್ಪ ನಿರ್ಲಕ್ಷಿಸಿದರೂ ಸತ್ತು ಹೋಗುವಂಥಹದು. ನಾಗಪುರದಲ್ಲಿ ಶಾಲೆಗಳ ಬಹಿಷ್ಕಾರಕ್ಕೆ ವಿರೋಧವಿರಲಿಲ್ಲ. ಅದಕ್ಕೆ ಬೆಂಬಲ ತೀವ್ರವಾಗುತ್ತಿದ್ದ ಹಾಗೆಯೇ ಅಸಹಕಾರ ಆಂದೋಲನ ಹಾಗೂ ಸವಿನಯ ಕಾಯದೆ ಭಂಗವನ್ನು, ಕರ ನಿರಾಕರಣೆ ಆಂದೋಲನ ಕೈಬಿಡಲಾಯಿತು. ಈಗ ಈ ಗೊತ್ತುವಳಿಯಲ್ಲೂ ಕೈ ಬಿಡಲಾಗಿದೆ. ಚರಖಾದ ಮೇಲೆ ಕೈಯಿಂದ ನೂಲು ತೆಗೆಯುವಿಕೆ ಹಾಗೂ ಖಾದಿ ಧಾರಣವನ್ನು ಕಾಂಗ್ರೆಸ್ಸಿಗರಿಗೆ ಕಡ್ಡಾಯಗೊಳಿಸಲಾಗಿದೆ. ಇವೆರಡನ್ನಷ್ಟೇ ನಾನು ವಿರೋಧಿಸುತ್ತಿದ್ದೇನೆ. ಆದರೆ ಮಹಾತ್ಮಾಜೀಯವರು ಗೊತ್ತುವಳಿಯನ್ನು ಇಡಿಯಾಗಿ ವಿರೋಧಿಸುವಂತೆ ಆದೇಶಿಸಿದ್ದಾರೆ. ನಾನು ಒಂದು ರೀತಿಯಲ್ಲಿ ಸ್ವರಾಜ್ಯ ಪಕ್ಷದ ಸದಸ್ಯನಾಗಿಯೂ ಇದ್ದೇನೆ. ಸ್ವರಾಜ್ಯ ಪಕ್ಷವು ಒಪ್ಪಿಕೊಂಡಿರುವ ರಾಜೀ ಒಡಂಬಡಿಕೆಯ ಗೊತ್ತುವಳಿಯನ್ನು ವಿರೋಧಿಸಿ ಸ್ವರಾಜ್ಯ ಪಕ್ಷದ ಯಾರೂ ಮತದಾನ ಮಾಡಕೊಡದೆಂದು ದೇಶಬಂಧು ಚಿತ್ತರಂಜನ ದಾಸ ಹಾಗೂ ಪಂಡಿತ ಮೋತಿಲಾಲ ನೆಹ್ರು ಮೊದಲೇ ಹೇಳಿ ಬಿಟ್ಟಿರುವುದು ಎಲ್ಲರಿಗೂ ಗೊತ್ತೇ ಇದೆ. ಈ ಗೊತ್ತುವಳಿಗೆ ಮಂಜೂರಿ ನೀಡದಿದ್ದವರು ಸ್ವರಾಜ್ಯ ಪಕ್ಷ ತ್ಯಜಿಸಿ ಹೊರಗೆ ಹೋದಂತೆ ಎಂದೂ ಅವರು ಹೇಳಿದ್ದಾರೆ. ಸ್ವರಾಜ್ಯ ಪಕ್ಷದ ಪ್ರಶ್ನೆಯಿದೆಂದೂ ಅವರು ಹೇಳಿರುವರು. ಯಾವುದೇ ಒಂದು ಸ್ವಂತದ ಅಭಿಪ್ರಾಯ ವ್ಯಕ್ತ ಪಡಿಸುವದರಿಂದ ಮಾತ್ರವೇ ಹೀಗೆ ಮಾಡಲಾಗದು. ಕೌನ್ಸಿಲ್‌ದೊಳಗೆ ಸಹ ಕಾಯ್ದೆ ಮಂಡಿಸುವುದಕ್ಕೆ ಮೊದಲಿಗೆ ಅದರ ಬಗ್ಗೆ ಪಕ್ಷದಲ್ಲಿ ಎಲ್ಲರ ಅಭಿಪ್ರಾಯ ಪಡೆದುಕೊಳ್ಳಲಾಗುತ್ತದೆ. ಯಾರೇ ಆದರೂ ತಮ್ಮ ವೈಯಕ್ತಿಕ ಅಭಿಮತ ವ್ಯಕ್ತ ಪಡಿಸಲು ಸ್ವತಂತ್ರರಿರುತ್ತಾರೆ. ವಿರೋಧ ಅಭಿಪ್ರಾಯ ವ್ಯಕ್ತ ಪಡಿಸಿದವರನ್ನು ಬೇರೆ ಎಂದು ತಿಳಿಯಲಾಗುತ್ತದೆ. ಸ್ವಂತದ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಯಾರೂ ಒಂದು ಸೂಚನೆಯ ಬಗ್ಗೆ ವಿರೋಧಾಭಿಪ್ರಾಯ ವ್ಯಕ್ತ ಪಡಿಸಕೂಡದೆಂದು ವಿಧಿಸುವುದು ಸರಿಯಾದುದಲ್ಲ. ದೇಶಬಂಧು ದಾಸರೇ ಸೂಚನೆಯ ಬಗ್ಗೆ ಯಾರೇ ಆದರೂ ತಮ್ಮ ವಿರೋಧವಿರುವುದಾದರೆ ಹಾಗೆ ಹೇಳಬಹುದೆಂದು ನಿನ್ನೆಯಷ್ಟೇ ಹೇಳಿದ್ದಾರೆ. ಆದ್ದರಿಂದ ನಾನು ಸೂಚನೆಯ ವಿರುದ್ಧ ಅಭಿಪ್ರಾಯ ವ್ಯಕ್ತ ಪಡಿಸದಿರುವುದಕ್ಕೆ ಬದ್ಧನಲ್ಲವೆಂದು ತಿಳಿಯುತ್ತೇನೆ. ಹೀಗೆ ಮಾಡುವುದರಿಂದ ಸ್ವರಾಜ್ಯ ಪಕ್ಷದಲ್ಲಿ ನೀವು ಇರಲು ಸಾಧ್ಯವಿಲ್ಲವೆಂದು

ಯಾರಾದರೂ ಹೇಳಿದರೆ ಪಕ್ಷ ಬಲಕ್ಕಿಂತ ನನ್ನ ವೈಯಕ್ತಿಕ ಆತ್ಮ ಬಲ ಹೆಚ್ಚಿಸದೆಂದು ನಾನು ಬಗೆಯುತ್ತೇನೆ.

ಈ ಸಂದರ್ಭದಲ್ಲಿ ಅಮೃತಸರ ಕಾಂಗ್ರೆಸ್ಸಿನ ಒಂದು ಪ್ರಸಂಗವನ್ನು ಮಹಾತ್ಮಾ ಗಾಂಧೀಜಿಯವರಿಗೆ ನೆನಪಿಸಿಕೊಡಬಯಸುತ್ತೇನೆ. ತದ ನಂತರವೇ ದಿಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಲೋಕಮಾನ್ಯ ಟಿಳಕರು ಅಮೃತಸರ ಕಾಂಗ್ರೆಸ್ಸಿನಲ್ಲಿ ಅಸಹಕಾರ ಆಂದೋಲನದಲ್ಲಿ ಸಹಭಾಗಿಯಾಗಿದ್ದರು. ಗಾಂಧೀಜಿ ಆಗ ಅವರ ವಿರೋಧಿಯಾಗಿದ್ದರು. ಜಾಲಿಯನ್ ವಾಲಾಬಾಗದ ಹತ್ಯಾಕಾಂಡಕ್ಕೆ ಸಂಬಂಧಿಸಿದಂತೆ ಅಸಹಕಾರ ಆಂದೋಲನ ಶುರುವಾಯಿತು. ನಂತರ ದಿಲ್ಲಿಯ ಖಿಲಾಫತ್ ಸಮ್ಮೇಳನದ ಮಾತು ನಡೆಯಿತು. ಖಿಲಾಫತ್ ಸಂಬಂಧಿಸಿದಂತೆ ನಾನಾಗ ಬಹಿಷ್ಕಾರ ಆಂದೋಲನ ಪ್ರಸ್ತಾಪಿಸಿದ್ದೆ., ಮಹಾತ್ಮಾಜೀಯವರು ಹೇಳಲಿ ಬಿಡಲಿ ನಾವು ಅಸಹಕಾರ ಆಂದೋಲನ ನಡೆಸೋಣ ಎಂದಿದ್ದೇ ಮಹಾತ್ಮಾ ಗಾಂಧೀಜಿಯವರು ಬಹಿಷ್ಕಾರ ಅಥವಾ ನಿಷೇಧಕ್ಕೆ ಒಪ್ಪುವುದಿಲ್ಲ. ಆದರೆ ಅಸಹಕಾರ ಆಂದೋಲನ ನಡೆಸಬೇಕು ಎಂದಿದ್ದೆ. ಬಹಿಷ್ಕಾರ ಆಂದೋಲನದಿಂದ ಖಿಲಾಫತ್ ಅಥವಾ ಪಂಜಾಬದ ಸಮಸ್ಯೆ ಬಗೆಹರಿಯುವುದಿಲ್ಲವೆಂದು ಗಾಂಧೀಜಿ ಆಗ ಹೇಳಿದ್ದರು. ಈಗ ಮಾತ್ರ ಗಾಂಧೀಜಿ ಕೈನೂಲು ವಂತಿಕೆ ಖಾದಿ ಧಾರಣ ಕಡ್ಡಾಯದಿಂದಲೇ ಆಂದೋಲನ ಯಶಸ್ವಿಯಾಗುತ್ತದೆ ಎಂದು ಹೇಗೆ ಹೇಳುತ್ತಾರೆ. ವಿದೇಶೀ ಬಟ್ಟೆಗಳ ಇಂಥ ಬಹಿಷ್ಕಾರದಿಂದ ಖಿಲಾಫತ್ ಹಾಗೂ ಪಂಜಾಬದ ಪ್ರಶ್ನೆ ಬಗೆಹರಿದಿಲ್ಲವೆಂದ ಬಳಿಕ ಸ್ವರಾಜ್ಯದ ಪ್ರಶ್ನೆ ಹೇಗೆ ತಾನೇ ಬಗೆಹರಿದೀತು.

ಎರಡನೇಯದಾಗಿ ನಾನು ವಿರೋಧಿಸುವದೆಂದರೆ ಕೈನೂಲಿನ ವಂತಿಗೆ ಕಡ್ಡಾಯವೇ. ಅದು ವ್ಯಾವಹಾರಿಕ ಹಾಗೂ ಸೂಕ್ತವೆನಿಸದು. ಪ್ರತಿಯೊಬ್ಬರೂ ಚರಖಾದಿಂದ ನೂಲುತ್ತ ಕೂಡಲು ಸಾಧ್ಯವಿಲ್ಲ. ಪ್ರತಿಯೊಬ್ಬರೂ ಕೈನೂಲು ತೆಗೆಯಲು ತೊಡಗಿ ಖಾದಿ ಧಾರಣ ಮಾಡ ಹತ್ತಿದರೆ ಒಂದೂ ಗಜದಷ್ಟು ಬಟ್ಟೆ ವಿಲಾಯತ್‌ನಿಂದ ಬರುವುದು ನಿಂತು ಹೋಗುವುದರಿಂದ ಸ್ವರಾಜ್ಯ ಸಿಕ್ಕೇ ಬಿಡುವುದೇನು ? ನಮ್ಮ ದೇಶದೊಳಕ್ಕೆ 60 ಕೋಟಿ ರೂಗಳ ಬಟ್ಟೆ ವಿಲಾಯತ್‌ನಿಂದ ಆಯಾತವಾಗುವುದನ್ನು ತಡೆಯೋಣ ಎಂದು ಜನರು ಹೇಳುತ್ತಾರೆ. ಹೀಗೆ 60 ಕೋಟಿ ರೂಗಳ ಬಟ್ಟೆ ಆಯಾತ ತಡೆದು ಬ್ರಿಟನ್ನಿಗೆ ಹಾನಿಯುಂಟು ಮಾಡೋಣ ಎಂದವರು ಹೇಳುತ್ತಾರೆ. ಆದರೆ ಹೀಗೆ ಮಾಡುವಲ್ಲಿ ನಮಗೇನೂ ಖರ್ಚು ಹತ್ತದಿರುವುದೇ ? ಅರ್ಧಕ್ಕಿಂತ ಹೆಚ್ಚು ವೆಚ್ಚದ ಭಾರ ನಮ್ಮ ಮೇಲೆ ಬೀಳುತ್ತದೆ. ಅಂದರೆ ಬ್ರಿಟನ್ನಿಗೆ 20-25 ಕೋಟಿ ರೂ.ಗಳಷ್ಟು ಮಾತ್ರವೇ ನಾವು ಹಾನಿಯುಂಟು ಮಾಡಿದಂತಾದೀತು. ಇಂಗ್ಲಂಡದ ಜನತೆಯ ಮನಸ್ಸಿನ ಮೇಲೆ ಇದು ಪರಿಣಾಮ ಬೀರಲು ಸಾಧ್ಯವೇ ? ಸ್ವಲ್ಪವೂ ಪರಿಣಾಮ ಬೀರಲಾರದು., ಯಾವ ಇಂಗ್ಲಂಡದ ಸಮುದಾಯವೂ

ಪ್ರತಿದಿನವೂ 15 ಕೋಟಿ ರೂ. ವೆಚ್ಚದಿಂದ ಕಳೆದ ನಾಲ್ಕು ವರ್ಷದಿಂದ ಜರ್ಮನಿಯ ವಿರುದ್ಧ ಯುದ್ಧ ನಡೆಸುತ್ತಿದೆಯೋ ಅದು ನಾವು ಉಂಟು ಮಾಡುವ ಕೇವಲ ವಾರ್ಷಿಕ 15-20 ಕೋಟಿ ರೂ. ಹಾನಿಯಿಂದಾಗಿ ತತ್ತರಿಸಿ ನಮಗೆ ಸ್ವರಾಜ್ಯ ನೀಡಲು ಸಾಧ್ಯವೇ ? ಬಹಿಷ್ಕಾರ ಅಥವಾ ನಿಷೇಧವೆಂಬುದು ಏನೂ ಪರಿಣಾಮ ಮಾಡಿಲ್ಲವೆಂದಾಗ ಚರಖಾ ಹಾಗೂ ಖಾದೀ ಆಂದೋಲನದಿಂದಲೂ ಏನೂ ಸಾಧ್ಯವಾಗಲಾರದು.

ಅಸಹಕಾರ ಆಂದೋಲನದಲ್ಲಿ ರಾಜಕೀಯ ಕಾರ್ಯಕ್ರಮ ಹಾಗೂ ಯೋಜನೆಯೆಂಬುದೇನೂ ಇರಲಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ ಅದಕ್ಕೆಂತಲೇ ಬದಲಾವಣೆ ಬಯಸದ ಗುಂಪಿನವರು ಚರಖಾ ಹಾಗೂ ಖಾದಿ ಆಂದೋಲನವನ್ನು ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಈಗ ಮುಂದೆ ಮಾಡುತ್ತಿದ್ದಾರೆ. ಬೇರೇನೂ ಇದರಲ್ಲಿ ಕಾಣಿಸದು. ಅದಕ್ಕಾಗಿಯೇ ನಾನು ವಿರೋಧ ವ್ಯಕ್ತಪಡಿಸುತ್ತಲಿದ್ದೇನೆ., ವಿಧಾನ ಮಂಡಳದಲ್ಲಿ ಪ್ರವೇಶಿಸಿ ಕ್ರಿಯಾಶೀಲವಾಗುವುದರಿಂದ ಸ್ವಲ್ಪ ಸಾಧನೆಗೆ ಯಶ ಸಿಗಬಹುದೆಂಬುದು ಸ್ವರಾಜ್ಯ ಪಕ್ಷದವರ ಅಭಿಮತ. ಸಾಧ್ಯವಿರುವದನ್ನೆಲ್ಲ ಅವರು ಸ್ವಲ್ಪ ಮಟ್ಟಿಗೆ ಮಾಡಿ ತೋರಿಸಿದ್ದಾರೆ. ವಿಧಾನ ಮಂಡಳದಲ್ಲಿದ್ದುಕೊಂಡು ಆಡಳಿತಕ್ಕೆ ಸವಾಲು ಎಸೆಯುತ್ತೇವೆ. ತಡೆಯೊಡ್ಡುತ್ತೇವೆ. ನಮ್ಮದೇ ಆದ ಮುಂಗಡ ಪತ್ರ ಮಂಡಿಸುತ್ತೇವೆ. ಅವರ ಆಯವ್ಯಯ ವಿರೋಧಿಸುತ್ತೇವೆ ಎಂದವರು ಹೇಳುತ್ತಿದ್ದರು. ತಮಗೆ ಸಾಧ್ಯವಿರುವುದನ್ನೆಲ್ಲ ಅವರು ಮಾಡಿದ್ದಾರೆ. ಈಗವರಿಗೆ ಮಾಡಲಿಕ್ಕೇನೂ ಉಳಿದಿರುವದಿಲ್ಲ. ಅವರು ತಮ್ಮ ಶಕ್ತಿ ಸಾಮರ್ಥ್ಯವನ್ನೆಲ್ಲ ಬಳಸಿ ಕಾರ್ಯ ಮಾಡಿದರಾದರೂ ಸರಕಾರ ಅವರ ಪ್ರಯತ್ನವನ್ನೆಲ್ಲ ವಿಫಲಗೊಳಿಸಿತು. ಈಗೇನಾದರೂ ದುಃಖ ದುಮ್ಮಾನಗಳಿದ್ದಿದ್ದರೆ ಅವುಗಳ ಪರಿಹಾರಕ್ಕಾಗಿ ಸವಿನಯ ಕಾಯ್ದೆ ಭಂಗವೊಂದೇ ಉಳಿದಿದೆ. ಈಗ ಅಂಥ ಕ್ರಮ ತೆಗೆದುಕೊಳ್ಳದೇ ಹೋದರೆ ನಮ್ಮ ಆಂದೋಲನವೇ ಸತ್ವಹೀನವೆನಿಸಿಬಿಡುತ್ತದೆ. ಈಗ ಅದನ್ನು ಕೈ ಬಿಡಲಾಗಿದೆ. ನಮ್ಮ ಬಳಿ ಈಗ ಯಾವುದೇ ರಾಜಕೀಯ ಕಾರ್ಯಕ್ರಮವೆಂಬುದೇ ಉಳಿದಿಲ್ಲ. ಆದ್ದರಿಂದ ಸಮಸ್ತ ಭಾರತೀಯರಿಗೆ ಹಾಗೂ ಮಹಾತ್ಮಾ ಗಾಂಧೀಜಿಯವರಿಗೆ ಅಸಹಕಾರ ಆಂದೋಲನವನ್ನು ಸಮಾಧಿ ಮಾಡದಿರಿ ಎಂದು ಕೇಳಿಕೊಳ್ಳುತ್ತೇನೆ. ನೂಲುವ ವರ್ಗ ನಡೆಸುವ ಮೂಲಕ ಅದನ್ನು ಕೊಂದು ಹಾಕುವ ಹುನ್ನಾರ ಬೇಡವೆಂದು ವಿನಂತಿಸುತ್ತೇನೆ.

ಠರಾವನ್ನು ಮತಕ್ಕೆ ಹಾಕಲಾಗುತ್ತಿದೆ. ನಾವು ಗೊತ್ತುವಳಿಗಳಿಗೆ ಸಮರ್ಥನೆ ನೀಡದೇ ಹೋದರೆ ನಮ್ಮ ಸ್ಪಷ್ಟ ಅಭಿಪ್ರಾಯ ಕೊಡದೇ ಇದ್ದರೆ ಮಹಾತ್ಮಾಜೀಯವರು ತಮ್ಮ ಕೆಲಸವನ್ನು ಇಲ್ಲಿಗೆಯೇ ಬಿಟ್ಟುಕೊಟ್ಟು ಹೋಗಿ ಬಿಡುವರೆಂದು ಯಾರೂ ಭಾವಿಸಬೇಕಾಗಿಲ್ಲ. ದೇಶಬಂಧು ಚಿತ್ತರಂಜನದಾಸರೇ ಗೊತ್ತುವಳಿ ಅಂಗೀಕರಿಸಿ ಇಲ್ಲವೇ ಸ್ವರಾಜ್ಯ ಪಕ್ಷದಿಂದ ತೊಲಗಿ ಎಂಬುದಾಗಿ ಆದೇಶ ನೀಡಿರುವರಲ್ಲವೇ ? (ನಗೆಗಳ ಅಲೆ)

ಮಹಾತ್ಮಾಜಿಯವರೇ ಗೊತ್ತುವಳಿಯಲ್ಲಿಯ ಕೆಲ ಭಾಗಗಳನ್ನಷ್ಟೇ ಒಪ್ಪಿಕೊಳ್ಳು ವಂಥವರು ಬದಲಾವಣೆ ಪರ ಹಾಗೂ ವಿರೋಧಿ ಈ ಎರಡೂ ಗುಂಪಿನಲ್ಲಿದ್ದಾರೆ. ಆದ್ದರಿಂದ ಠರಾವು ಮತದಾನದ ಮೂಲಕ ಪಾಸಾದರೂ ಗೊತ್ತುವಳಿಯ ಪರವಾಗಿ ಕೇವಲ ಪ್ರತಿಶತ 15-20 ರಷ್ಟು ಮಾತ್ರ ಮತಗಳು ದೊರೆತಂತಾಗುತ್ತದೆ. ಆದರಿಂದ ಚರಖಾ ಹಾಗೂ ಖಾದಿ ಆಂದೋಲನ ಯಶಸ್ವಿಯಾದಂತಾಗದು. ತಮ್ಮ ನೀತಿ ಆತ್ಮ ವೈರುಧ್ಯದಿಂದ ಕೂಡಿದೆ. ನೀವು ಒಂದೆಡೆ ಕೈನೂಲು ತೆಗೆಯುವಿಕೆ ಹಾಗೂ ಖಾದಿಧಾರಣವನ್ನು ಕಾಂಗ್ರೆಸ್ಸಿಗರಿಗೆ ಕಡ್ಡಾಯ ಗೊಳಿಸುತ್ತಿರಿ. ಅದೇ ಕಾಲಕ್ಕೆ ಕಾಂಗ್ರೆಸ್ಸಿಗೆ ಸರ್ವ ಸಮ್ಮತ ಸಾಮೂಹಿಕ ರೂಪು ಕೊಡಬಯಸುತ್ತೀರಿ. ಎರಡೂ ಏಕ ಕಾಲಕ್ಕೆ ಸಾಧ್ಯವಾಗಲಾರವು.

ಜನರನ್ನು ಹತಾಶೆ ಹಾಗೂ ಕಿಂಕರ್ತವ್ಯ ಮೂಢತೆ ಆವರಿಸಿರುವುದು ನನಗೆ ಸ್ಪಷ್ಟ ಕಾಣುತ್ತಿದೆ. ಕರಾಚಿ ಜೈಲಿನಲ್ಲಿ ನಾವೆಲ್ಲ ಇದ್ದಾಗ ನಮ್ಮೊಂದಿಗಿದ್ದ ಮೌಲಾನಾ ಮಹಮ್ಮದ ಅಲಿಯವರು ಡಿಸೆಂಬರ 31 ರೊಳಗೆ ನಮ್ಮ ಬೇಡಿಕೆಗಳು ಈಡೇರದೇ ಹೋದರೆ ಸ್ವರಾಜ್ಯಕ್ಕಾಗಿ ಆಂದೋಲನ ಶುರು ಮಾಡೋಣ; ಮಾಡುತ್ತೇವೆ ಎಂದಿದ್ದರು. ಈಗ ಅವರೇ ಚರಖಾ ತಿರುಗಿಸುತ್ತ ಕೂಡೋಣ ಎನ್ನುತ್ತಾರೆ. (ನಗುವಿನ ಅಲೆ) ಹತಾಶೆಯಲ್ಲದೇ ಇದು ಮತ್ತೇನು ?

ಆದ್ದರಿಂದ ಎಲ್ಲರೂ ಸ್ವಲ್ಪ ಯೋಚಿಸಿ ಮಹಾತ್ಮಾ ಗಾಂಧಿ ಅಥವಾ ಇತರ ಉನ್ನತ ವ್ಯಕ್ತಿಗಳಿಗೆ ಹೆದರದಿರಿ. ನಿಮಗೆ ಗೊತ್ತುವಳಿ ಒಪ್ಪಿತವಿಲ್ಲದಿದ್ದರೆ ಅಥವಾ ನಿಮ್ಮ ಅಭಿಪ್ರಾಯ ಕೊಡುವ ಮನಸ್ಸಿಲ್ಲದಿದ್ದರೆ ಸುಮ್ಮನಿರಿ.

ನಂತರ ಅಧ್ಯಕ್ಷ ಗಾಂಧೀಜಿಯವರು ಮೌಲಾನಾ ಆಜಾದ ಸೊಭಾನಿಯವರನ್ನು ಗೊತ್ತುವಳಿ ವಿರೋಧಿಸಿ ಮಾತಾಡುವಂತೆ ಕೇಳಿಕೊಂಡರು.

ಹಜರತ ಮೌಲಾನಾ ಆಜಾದ, ಸೊಭಾನಿಯವರು ಗೊತ್ತುವಳಿ ವಿರೋಧಿಸಿ ಉರ್ದುದಲ್ಲಿ ಮಾತನಾಡುತ್ತ "ಗೊತ್ತುವಳಿಯಲ್ಲಿ ಮುಖ್ಯವಾಗಿ ನಾಲ್ಕು ಅಂಶಗಳಿವೆ. ಮೂರು ಅಂಶಗಳು ಸ್ಪಷ್ಟವಾಗಿ ಮೇಲೆಯೇ ಎದ್ದು ಕಾಣುವಂತಿರುವವಾದರೆ ಒಂದು ಅಂಶ ಮಾತ್ರ ಹೊರಗೆ ತೋರುವಂಥದಲ್ಲ. ಅದು ರಹಸ್ಯ ಹಾಗೂ ಗುಪ್ತವಾಗುಳಿದಿದೆಂಬುದು ನನ್ನ ಅನಿಸಿಕೆ. ನನಗಿಂತ ಮೊದಲಿಗೆ ವಿರೋಧಿಸಿ ಮಾತನಾಡಿದ ಹಜರತ ಮೋಹಾನಿಯವರು ಈಗಾಗಲೇ ಅಸಹಕಾರ ಆಂದೋಲನವನ್ನು ಕೈಬಿಡಲಾಗಿದೆಂದು ವ್ಯಸನ ವ್ಯಕ್ತಪಡಿಸಿದ್ದಾರೆ. ಬರೀ ವಿದೇಶಿಯ ಬಟ್ಟೆಗಳ ನೂಲಿನ ನಿಷೇಧಕ್ಕೆ ಒತ್ತುಕೊಡುವುದರಿಂದ ಅಸಹಕಾರ ಆಂದೋಲನದ ಕಡೆಗೆ ಜನರು ಹೋಗುವುದಿಲ್ಲವಷ್ಟೇ ಅಲ್ಲದೇ ಅದನ್ನು ಸಂಪೂರ್ಣ ತಿರಸ್ಕರಿಸಿಬಿಡುತ್ತಾರೆ. ಸಂಪೂರ್ಣ ಸಡಿಲಾದ ಆ ಆಂದೋಲನ ತಾನೇ ಸತ್ತು ಹೋಗುತ್ತವೆ.

ಹೀಗಾಗಿ ಗೊತ್ತುವಳಿಯಲ್ಲಿ ಅಸಹಕಾರ ಆಂದೋಲನ ಸ್ಥಗಿತಗೊಳಿಸಲಾಗಿದೆಂದರೂ ಅದರ ಪೂರ್ಣ ಸಮಾಧಿ ಮಾಡಲಾಗಿದೆಂದು ನನಗೂ ಖೇದವೆನಿಸುತ್ತದೆ.

ಅಸಹಕಾರ ಆಂದೋಲನ ಸ್ಥಗಿತಗೊಳಿಸದೆಯೇ ರಾಜೀ ಒಡಂಬಡಿಕೆ ಸಾಧ್ಯವಾಗುತ್ತಿರಲಿಲ್ಲವೆಂಬ ಮಹಾತ್ಮಾಜಿಯವರ ಅಭಿಮತಕ್ಕೆ ನಾನು ಸಹಮತನಾಗುವದಿಲ್ಲ. ಮಹಾತ್ಮಾಜಿಯವರು ತಮ್ಮ ಅಭಿಪ್ರಾಯಕ್ಕೆ ಗಟ್ಟಿಯಾಗಿ ಅಂಟಿಕೊಂಡು ಬಜಾಯಿಸಿದ್ದ ಪಕ್ಷದಲ್ಲಿ ಕಾಂಗ್ರೆಸ್ಸಿನ ಅವಿಭಾಜ್ಯ ಅಂಗವೆಂದೇ ತಿಳಿಯುವುದು ನಿಜವೇ ಆದ ಪಕ್ಷದಲ್ಲಿ ಸ್ವರಾಜ್ಯ ಪಕ್ಷದವರು ತಮ್ಮ ವಿರೋಧ ವ್ಯಕ್ತಪಡಿಸುತ್ತಿದ್ದಿಲ್ಲ. ಆದರೆ ಗಾಂಧೀಜಿಯವರು ಸ್ವತಃ ಗಾಬರಿ ಹಾಗೂ ಗೊಂದಲಕ್ಕೆ ಸಿಲುಕಿ ಅಸಹಕಾರ ಆಂದೋಲನದ ಸ್ಥಗಿತತೆಗೆ ಒಪ್ಪಿಕೊಂಡಿದ್ದಾರೆ. ಮಹಾತ್ಮಾ ಗಾಂಧೀಜಿಯವರು ಇಷ್ಟೊಂದು ಮಣಿಯುವ ಅಗತ್ಯವಿರಲಿಲ್ಲ. ಆದರೆ ಅವರು ಅನವಶ್ಯಕವಾಗಿ ಸ್ವರಾಜ್ಯ ಪಕ್ಷದವರ ಒತ್ತಡಕ್ಕೆ ತಲೆಬಾಗಿದುದಕ್ಕೆ ನನ್ನ ವಿರೋಧವಿದೆ.

ಸ್ಪಷ್ಟವಾಗಿ ಎದ್ದು ಕಾಣುವ ಎರಡನೇ ಅಂಶವೆಂದರೆ ಎಲ್ಲ ಸದಸ್ಯರೂ ಸ್ವತಃ ಚರಖಾ ತಿರುಗಿಸಿ ನೂತು ತಮ್ಮ ಸದಸ್ಯತ್ವ ವಂತಿಗೆಯೊಂದಿಗೆ ಮಾಸಿಕ ಕೈನೂಲಿನ ವಂತಿಗೆ ಸಲ್ಲಿಸುವುದು ಕಡ್ಡಾಯದ ವಿಷಯ. ಹಜರತ ಮೋಹಾನಿಯವರು ತುಂಬಾ ಆಸಕ್ತಿಯಿಂದ ಅದನ್ನು ಸಮರ್ಥಿಸಿಕೊಳ್ಳುತ್ತಾರೆ. ಮಹಾತ್ಮಾಜಿಯವರು ಇದಕ್ಕಿಂತ ಇನ್ನೊಂದು ಯಾವುದೇ ಸಣ್ಣ ಅಥವಾ ಕ್ಷುಲ್ಲಕ ಕರಾರನ್ನು ಮುಂದಿರಿಸಿದ್ದರೆ ನನಗೆ ಹೆಚ್ಚು ಸಂತಸವಾಗುತ್ತಿತ್ತು. ಸಮಿತಿಯ ಸಭೆಯಲ್ಲಿ ನಾನು ಇದನ್ನು ವಿರೋಧಿಸಿದ್ದೆನಾದರೂ ನಾನು ಪರ ಅಥವಾ ವಿರುದ್ಧ ಮತದಾನ ಮಾಡದೇ ಹಾಗೆಯೇ ಉಳಿದುಕೊಂಡಿದ್ದೆ, ಒಂದೆಡೆ ಚರಖಾದ ಮೇಲೆ ತೆಗೆದ ಕೈನೂಲು ವಂತಿಗೆಯನ್ನು ಹಾಸ್ಯ ಮಾಡುವುದು ಹಾಗೂ ಅದೇ ಕಾಲಕ್ಕೆ ಅದರ ಪರವಾಗಿ ಮತ ನೀಡುವುದು ವಿಚಿತ್ರವಾಗಿದೆ. ಆದರೆ ನಾನದನ್ನು ವಿರೋಧಿಸ ಬಯಸುವುದಿಲ್ಲ.

ಅಸಹಕಾರ ಆಂದೋಲನದ ಸ್ಥಗಿತತೆಯಿಂದಾಗಿ ಸ್ವರಾಜ್ಯ ಅಥವಾ ಸ್ವಾತಂತ್ರ್ಯ ಆಂದೋಲನವೇ ನಿಂತು ಹೋಗಿದೆಂಬುದು ಮೂರನೆಯ ಅಂಶ. ಈ ರಾಜೀ ಒಡಂಬಡಿಕೆಯಲ್ಲಿ ಗೌಪ್ಯವಾಗಿರುವಂಥದು. ಅಹಮುದಾಬಾದದಲ್ಲಿ ಅಸಹಕಾರ ಆಂದೋಲನವನ್ನು ಕೈಬಿಡುವ ವಿಷಯದಲ್ಲಿ ಹಜರತ ಮೊಹಾನಿಯವರು ಮಹಾತ್ಮಾಜಿಯವರೊಡನೆ ಚರ್ಚೆ ನಡೆಸುತ್ತಿದ್ದಾಗ ಅಜಮಲ್‌ಖಾನ್ ಸಾಹೇಬರು ತುಂಬಾ ಗೊಂದಲಮಯ ಸ್ಥಿತಿಯಲ್ಲಿದ್ದರು. ಇಬ್ಬರು ಪೈಲವಾನರು ಕುಸ್ತಿಯಾಡುತ್ತಿರುವಾಗ ನಾವೇಕೆ ಹೋಗಬೇಕೆಂದು ಸುಮ್ಮನಿದ್ದೆನೆಂದು ಅಜಮಲ್‌ಖಾನ್ ಸಾಹೇಬರಿಗೆ ಹೇಳಿದ್ದೆ. ಆದರೆ ಅವರಿಬ್ಬರೂ ಸೇರಿಕೊಂಡು ಅಸಹಕಾರ ಆಂದೋಲನವನ್ನು ವ್ಯವಸ್ಥಿತವಾಗಿ ಚಿತೆಯ ಮೇಲಿರಿಸಿದ್ದಾರೆ.

ಮೌಲಾನಾ ಹಜರತ ಮೊಹಾನಿಯವರು ಕಲಕತ್ತೆಯಲ್ಲಿ ಸ್ವರಾಜ್ಯ ಪಕ್ಷದ ಸದಸ್ಯರಾಗಿ ನನಗೆ ಭೇಟಿಯಾಗಿದ್ದರು. ಅವರು ತಮ್ಮದೊಂದು ಫೆಡರೇಶನ್ ಗೊತ್ತುವಳಿಗೆ ಅಂಗೀಕಾರ ಪಡೆದು ಸ್ವರಾಜ್ಯ ಪಕ್ಷ ಸೇರಿ ಬಿಟ್ಟಿದ್ದರು. ಅವರಷ್ಟು ಚಾಲಾಕು, ಚತುರ ನಾನಲ್ಲ. ನನಗೆ ಅಂತಹ ರೀತಿ ನೀತಿ ತಿಳಿಯದು. ಮೌಲಾನಾ ಹಜರತ ಮೊಹಾನಿ ಸ್ವರಾಜ್ಯ ಪಕ್ಷದ ಬಲೆಯಲ್ಲಿ ಸಿಕ್ಕಿಕೊಂಡರು. ನಾನು ಬಚಾವ್ ಆದೆ ಎಂದು ಕೊಂಡಿದ್ದೆ. ಈಗ ಬೆಳಗಾವಿಯಲ್ಲಿ ಸ್ವರಾಜ್ಯ ಪಕ್ಷ ಹಾಗೂ ಗಾಂಧೀಜಿ ಪರ ಗುಂಪು ಎರಡೂ ಬಲೆಯಲ್ಲಿ ಸಿಕ್ಕಿ ಹಾಕಿಕೊಂಡಿರುವುದನ್ನು ಕಾಣುತ್ತಿದ್ದೇನಲ್ಲವೇ ?

ಮಹಾತ್ಮಾ ಗಾಂಧೀಜಿಯವರು ಸ್ವತಃ ಕೈನೂಲಿನಿಂದ ಬಿಗಿಯಲ್ಪಟ್ಟಂತೆ ತೋರುತ್ತದೆ. ಹೀಗಾಗಿ ಅವರ ವಿಚಾರ ಶಕ್ತಿ ಕುಂದಿ ಹೋಗಿದೆ. ಅವರು ಅದೇ ಕೈನೂಲಿನಿಂದ ಈಗ ಎಲ್ಲರನ್ನೂ ಬಿಗಿಯಲೆತ್ನಿಸುತ್ತಿದ್ದಾರೆ. ಕೈನೂಲು ಒಳ್ಳೆಯದೋ ಕೆಟ್ಟದ್ದೋ ಗೊತ್ತಿಲ್ಲ. ಆದರೆ ಪರಿಣಾಮ ಮಾತ್ರ ಹೀಗಾಗಿದೆ.

ರಾಜೀ ಒಡಂಬಡಿಕೆ ಗೊತ್ತುವಳಿಯನ್ನು ಇಡಿಯಾಗಿ ಬೆಂಬಲಿಸಿ ಇಲ್ಲವೇ ವಿರೋಧಿಸಿ ಎಂದು ಆದೇಶ ನೀಡಲಾಗಿದೆ. ಆದರೆ ನಾನು ಈ ಒಡಂಬಡಿಕೆಯಲ್ಲಿಯ ಬಂಗಾಲ ಪ್ರಾಂತದ ಗವರ್ನರರ ಸುಗ್ರೀವಾಜ್ಞೆಯನ್ನು ಒಟ್ಟಿಗೆ ಸೇರಿ ವಿರೋಧಿಸುವ ಅಂಶವನ್ನು ಸಮರ್ಥಿಸದೇ ಇರಲಾರೆ. ಯಾಕೆಂದರೆ ಪಕ್ಷದ ಮೇಲೆ ಸರಕಾರ ತನ್ನ ಒತ್ತಡ ತಂತ್ರ ಬಳಸುವುದಾದರೆ ಇಡೀ ದೇಶವೇ ಅದನ್ನು ಒಂದಾಗಿ ವಿರೋಧಿಸಬೇಕೆಂಬುದರಲ್ಲಿ ಎರಡು ಮಾತಿಲ್ಲ. ನಾನು ಇದನ್ನು ಸಮರ್ಥಿಸುತ್ತೇನೆ ಎಂದರು.

ನಂತರ ಮಹಾತ್ಮಾಜೀಯವರು ಶ್ರೀನಿವಾಸರಾವ್ ಕೌಜಲಗಿಯವರನ್ನು ಗೊತ್ತುವಳಿಯ ಪರವಾಗಿ ಮಾತಾಡಲು ಆಹ್ವಾನಿಸಿದರು.

ಶ್ರೀ ಶ್ರೀನಿವಾಸರಾವ ಕೌಜಲಗಿಯವರು ಮೊದಲಿಗೆ ಇಂಗ್ಲೀಷನಲ್ಲಿ ನಂತರ ಅದನ್ನೇ ಕನ್ನಡದಲ್ಲಿ ಮಾತಾಡಿ "ಮೌಲಾನಾ ಹಜರತ್ ಮೊಹಾನಿ ಹಾಗೂ ಮೌಲಾನಾ ಅಜಾದ ಸೊಭಾನಿಯವರ ನಂತರ ನಾನು ಮಾತಾಡಲಿಕ್ಕೆ ಬಂದಿದ್ದರಿಂದ ಅವರಂತೆಯೇ ನಾನೂ ಗೊತ್ತುವಳಿಗೆ ವಿರೋಧವಾಗಿ ಮಾತಾಡುತ್ತೇನೆಂದು ಭಾವಿಸದಿರಿ" ಎಂದು ಹೇಳಿದರು.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಈ ಗೊತ್ತುವಳಿಯನ್ನು ನಾನು ವಿರೋಧಿಸಿದ್ದನ್ನು ಕಣ್ಣಾರೆ ಕಂಡವರಿಗೆ ಅದರ ಪರವಾಗಿ ಮಾತಾಡಲು ನಿಂತಿರುವುದರಿಂದ ಸೋಜಿಗವೆನಿಸ ಬಹುದು. (ಆನಂದೋದ್ರೇಕ) ಎಂದರು.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ವಿಚಾರ ಮಾಡುವ ಮಂಡಳವಿದ್ದು ಅದಕ್ಕೆ ಯುದ್ಧ ಮಂಡಳವೆಂದರೂ ಸಲ್ಲುತ್ತದೆ. ಅಲ್ಲಿ ಯುದ್ಧ ಮಂಡಳದ ಸಭಾಸದನಂತೆ ನನ್ನ

ಅಭಿಪ್ರಾಯವನ್ನು ಮರೆಮಾಚದೇ ಹೇಳಿದ್ದೆ. ನಿರ್ಣಯ ನನ್ನ ವಿರುದ್ಧವಾಯಿತು. ಈಗ ಆ ನಿರ್ಣಯವನ್ನು ಮಾನ್ಯ ಮಾಡಲೇಬೇಕು ಎಂಬ ಶಿಸ್ತಿನಿಂದ ಗೊತ್ತುವಳಿಯನ್ನು ಈಗ ಸಮರ್ಥಿಸುತ್ತಿದ್ದೇನೆ ಎಂದು ತಿಳಿಸಿದರು.

ನನಗೆ ಶಿಸ್ತು ಬೇಕು. ಆದರೆ ವಿಚಾರ ಮಾಡುವ ಸಭೆಗಳಲ್ಲಿಯೂ ಪಂ. ಜವಾರಹಲಾಲ ನೆಹ್ರು ಅವರು ಯೋಜಿಸುವಂಥ ಶಿಸ್ತು ನನಗೆ ಅವಶ್ಯವಿಲ್ಲ. ಕಾರ್ಯ ಮಾಡುವಾಗಲಷ್ಟೇ ಶಿಸ್ತಿನ ಅಗತ್ಯತೆ ಇರುತ್ತದೆ. ವಿಷಯಗಳ ಚರ್ಚೆ ಸಂದರ್ಭದಲ್ಲಿ ಸ್ವಂತದ ಅಭಿಪ್ರಾಯಗಳನ್ನು ಮರೆಮಾಚದೇ ಹೇಳಬಹುದು. ಆದರೆ ಒಮ್ಮೆ ನಿರ್ಣಯವಾದ ಬಳಿಕ ಆ ನಿರ್ಣಯವೇನೇ ಇರಲಿ ಅದರ ಕಾರ್ಯಾಚರಣೆಗೆ ಬದ್ಧರಾಗಿರತಕ್ಕದ್ದು. ಆದ್ದರಿಂದ ನಾನು ಗೊತ್ತುವಳಿ ಸಮರ್ಥಿಸುತ್ತೇನೆ ಎಂದು ನುಡಿದರು.

ಈ ಗೊತ್ತುವಳಿಯಂತೆ ಅಂತಃಕರಣ ಪೂರ್ವಕ ನಡೆಯಲು ಬದ್ಧ ಕಂಕಣರಾಗಿದ್ದರೇನೇ ಇದನ್ನು ಅನುಸರಿಸಿ ನಡೆಯುವುದು ಮಾತ್ರ ಸರಿ ಎಂದೆನಿಸಿದರೆ ಅನುಕೂಲ ಮತ ನೀಡಿ ಸಹಾನುಭೂತಿ ತೋರಿಸಿ ಮೋಸಗೊಳಿಸಬೇಡಿರಿ ಎಂಬುದೊಂದೇ ನನ್ನ ಪ್ರಾರ್ಥನೆ ಎಂದು ಕೌಜಲಗಿಯವರು ಕೇಳಿಕೊಂಡರು.

ನಂತರ ಎನ್.ಸಿ. ಕೇಳಕರರು ಮರಾಠಿಯಲ್ಲಿ ಗೊತ್ತುವಳಿಯನ್ನು ಸಮರ್ಥಿಸಿ ಮಾತಾಡಿದರು.

ನಂತರ ಶ್ರೀ ಅಭ್ಯಂಕರ ಅವರು ''ಗೊತ್ತುವಳಿಯ ಸಮರ್ಥನೆ ಹಾಗೂ ವಿರೋಧ ಮಾಡಲು ಮಾತಾಡುವವರಲ್ಲಿ ನಾನಿರಲಿಲ್ಲವಾದರೂ ಗೊತ್ತುವಳಿಯನ್ನು ಅನುಮೋದಿಸಿದ ಮೌಲಾನಾ ಮಹಮ್ಮದ ಅಲಿಯವರ ಕೆಲವು ಮಾತುಗಳಿಗೆ ಪ್ರತಿಕ್ರಯಿಸಲೆಂದೇ ಅಧ್ಯಕ್ಷರ ವಿಶೇಷ ಅನುಮತಿ ಪಡೆದು ಗೊತ್ತುವಳಿ ಸಮರ್ಥಿಸಿ ಮಾತಾಡಲು ನಿಂತಿದ್ದೇನೆ. ಮೌಲಾನಾ ಮಹಮ್ಮದ ಅಲಿಯವರು ಭಾಷಣದಲ್ಲಿ ವಿವಾದಿತ ಅಭಿಪ್ರಾಯಗಳು ಕಾಣಿಸಿಕೊಳ್ಳದೇ ಹೋಗಿದ್ದರೆ ನಾನು ಮಾತಾಡುತ್ತಿರಲೇ ಇಲ್ಲ'' ಎಂದರು.

ಹಳೆಯ ವಿವಾದಗಳನ್ನು ಪುನಃ ಯಾರೂ ಕೆದಕುವುದು ಬೇಡವೆಂದೂ ಸ್ವತಃ ತಾವು ಸಹ ಹಾಗೆ ಮಾಡುತ್ತಿಲ್ಲವೆಂದೂ ಭರವಸೆ ನೀಡಿದ ಮಹಮ್ಮದ ಅಲಿಯವರು ತಮ್ಮ ಭಾಷಣದಲ್ಲಿ ಅತ್ಯಂತ ಕೆಟ್ಟದಾದ ರೀತಿಯಲ್ಲಿ ಅದನ್ನೇ ಮಾಡಿದ್ದಾರೆ (ಕೇಳಿರಿ, ಕೇಳಿರಿ, ಇಲ್ಲ, ಇಲ್ಲ ಎಂಬ ಧ್ವನಿ)

ನಾವು ಈ ರಾಜೀ ಒಡಂಬಡಿಕೆಯ ಗೊತ್ತುವಳಿಯಿಂದಾಗಿ ಪುನಃ ಒಂದಾಗುತ್ತಿದ್ದೇವೆ ಎಂದು ಮಹಮ್ಮದ ಅಲಿ ವ್ಯಕ್ತಪಡಿಸಿದರಾದರೂ ನನ್ನ ಸ್ವರಾಜ್ಯ ಪಕ್ಷದ ನಾಯಕ ದೇಶಬಂಧು ಚಿತ್ತರಂಜನದಾಸರು ಕೊನೆಗೂ ಮಹಾತ್ಮಾ ಗಾಂಧೀಜಿ ಹುಚ್ಚರಲ್ಲವೆಂಬುದನ್ನು

ಒಪ್ಪಿಕೊಂಡರಲ್ಲ! ದೇಶಬಂಧು ಚಿತ್ತರಂಜನದಾಸರು ಗಾಂಧೀಯವರನ್ನು ಎಂದೂ ಹುಚ್ಚ ಎಂದು ಕರೆದುದಿಲ್ಲ. ಚರಖಾದ ಸಾಮರ್ಥ್ಯವನ್ನು ದಾಸರು ಅರ್ಥ ಮಾಡಿಕೊಂಡರು ಎಂದೂ ಮೌಲಾನಾ ಹೇಳಿದರು. ಆದರೆ ದಾಸರು ಯಾವಾಗಲೂ ಚರಖಾದ ಮಹತ್ವವನ್ನು ಅಲ್ಲಗಳೆದಿಲ್ಲ. ಸ್ವರಾಜ್ಯವನ್ನು ಗೆದ್ದುಕೊಳ್ಳುವ ಕೇವಲ ಸಾಧನವದಾಗದೆಂದು ಮಾತ್ರ ಹೇಳಿದ್ದಾರೆ. ಈ ಸತ್ಯಾಂಶದ ಖಚಿತತೆ ಬಗ್ಗೆ ನಾನು ಯಾರನ್ನಾದರೂ ಅಹ್ವಾನಿಸಬಲ್ಲೆ. ಚರಖಾ ಸ್ವರಾಜ್ಯವನ್ನು ಪಡೆಯುವುದಕ್ಕೆ ಸರಿಯಾದ ಶಸ್ತ್ರ ಅಥವಾ ಸಾಧನವಾಗಲಾರದೆಂದಿಷ್ಟೇ ದಾಸರು ಹೇಳಿದ್ದರು. ಅಭ್ಯಂಕರರಿಗೆ ಅನೇಕರು ಭಾಷಣಕ್ಕೆ ತಡೆಯೊಡ್ಡಿ ಪ್ರಶ್ನಿಸಹತ್ತಿದಾಗ "ಅದು ಅವರ ಅಭಿಪ್ರಾಯ" ಎಂದು ಅಭ್ಯಂಕರರು ಉತ್ತರಿಸಿದರು. "ಅವರಿಗೆ ತಮ್ಮ ಭಾಷಣ ಮುಗಿಸಲು ಬಿಡಿ" ಎಂದು ಅಧ್ಯಕ್ಷ ಮಹಾತ್ಮಾಜೀ" ನಡುವೆಯೇ ಆಕ್ಷೇಪಕರನ್ನುದ್ದೇಶಿಸಿ ನುಡಿದರು. ನಂತರ ಅಭ್ಯಂಕರ ತಮ್ಮ ಭಾಷಣ ಮುಂದುವರಿಸಿದರು.

ಮೌಲಾನಾ ಮಹಮ್ಮದ ಅಲಿಯವರು ರಾಜೀ ಒಡಂಬಡಿಕೆ ಠರಾವು ಸಮರ್ಥಿಸಿ ಮಾತನಾಡಲಾರಂಭಿಸಿದ್ದಂತೆ ನನಗೆ ಪುಣೆಯಿಂದ ಬೆಳಗಾವಿಗೆ ಬರುವಾಗ ಪ್ರಯಾಣದ ಅವಧಿಯಲ್ಲಿ ಇಂಗ್ಲೀಷ ನಿಯತಕಾಲಿಕವೊಂದರಲ್ಲಿ ಓದಿದ್ದ ಒಂದು ನಗಿಸುವ ಪ್ರಸಂಗದ ಕತೆ ನೆನಪಾಯಿತೆಂದು ಅಭ್ಯಂಕರರು ನುಡಿದರು.

ನ್ಯಾಯಾಲಯವೊಂದರಲ್ಲಿ ಪ್ರಕರಣದ ವಿಚಾರಣೆ ಮುಗಿದಂತೆಯೇ ನ್ಯಾಯಾಧೀಶರು ತೀರ್ಪನ್ನು ಘೋಷಿಸುತ್ತಾರೆ. ಪ್ರಕರಣದಲ್ಲಿ ತನ್ನ ವಿರುದ್ಧ ತೀರ್ಪು ಪಡೆದ ಸೋತ ಮಹಾಶಯನು ನ್ಯಾಯಾಧೀಶರೇ ನಾನು ನಿಮ್ಮನ್ನು ನಾಯಿಗೆ ಹುಟ್ಟಿದವ ಎಂದು ಕರೆದರೆ ಅದು ನ್ಯಾಯಾಲಯದ ನಿಂದೆಯಾದೀತೇ ? ಎಂದು ಪ್ರಶ್ನಿಸುತ್ತಾನೆ. ನ್ಯಾಯಾಧೀಶರು ಹಾಗೆ ಹೇಳುವುದು ಖಚಿತವಾಗಿ ನ್ಯಾಯಾಲಯ ನಿಂದೆಯೇ ಎಂದು ಸ್ಪಷ್ಟ ಪಡಿಸುತ್ತಾರೆ. ಆಗ ಪ್ರಕರಣದಲ್ಲಿ ಸೋತ ಆ ಮಹಾಶಯನು "ಹಾಗಾದರೆ ನಾನು ನಿಮ್ಮನ್ನು ಆ ರೀತಿ ಕರೆಯುವುದಿಲ್ಲ" ಎಂದು ನ್ಯಾಯಾಧೀಶರಿಗೆ ತಿಳಿಸಿ ಕುಳಿತು ಬಿಡುತ್ತಾನೆ ಎಂಬುದೇ ಆ ನಗೆಯ ಪ್ರಸಂಗ; ಜೋಕು ಎಂದು ಅಭ್ಯಂಕರ ತಾವು ಓದಿದುದನ್ನು ಪ್ರಸ್ತಾಪಿಸಿದರು.

ಮೌಲಾನಾ ಮಹಮ್ಮದ ಅಲಿಯವರು ಕಲಕತ್ತೆಯಲ್ಲಿಯ ಸಾರ್ವಜನಿಕ ಸಭೆಯೊಂದರಲ್ಲಿ ಮಾತಾಡುವಾಗ ವಿಧಾನ ಮಂಡಳ ಪ್ರವೇಶವನ್ನು ವಿರೋಧಿಸಿದುದು ತಪ್ಪು ಎಂದು ಹೇಳಿದ್ದರೆಂಬುದು ಇಲ್ಲಿ ಯಾರಿಗೂ ನೆನಪಿನಲ್ಲಿಲ್ಲವೆ ? ಎಂದು ಪ್ರಶ್ನಿಸಿದ ಅಭ್ಯಂಕರರು "ಇಷ್ಟೇ ಅಲ್ಲ ಮಿಂಚಿ ಹೋದ ಮಾತಿಗೆ ಈಗ ಚಿಂತಿಸಿ ಫಲವೇನು ? ನನಗೆ ಅವಕಾಶ ಸಿಗುವುದಾದರೆ ಈಗಲೂ ನಾನು ವಿಧಾನ ಮಂಡಳ ಪ್ರವೇಶಿಸುವುದಕ್ಕಾಗಿ ಚುನಾವಣೆಗೆ ನಿಲ್ಲ ಬಯಸುತ್ತೇನೆ" ಎಂದಿದ್ದರು. ಈ ಮಹಮ್ಮದ ಅಲಿ ಮಹನೀಯರು!"

ಎಂದು ನುಡಿದಾಗ ಶ್ರೋತೃಗಳಿಂದ ಕೇಳಿರಿ ಕೇಳಿರಿ ಎಂಬ ಧ್ವನಿಗಳು ದೊಡ್ಡ ಪ್ರಮಾಣದಲ್ಲಿ ಕೇಳಿ ಬಂದವು.

''ಮೌಲಾನಾ ಮಹಮ್ಮದ ಅಲಿಯವರು ವಿಧಾನ ಮಂಡಳ ಪ್ರವೇಶಕ್ಕಾಗಿ ಸ್ವರಾಜ್ಯ ಪಕ್ಷವನ್ನು ಟೀಕಿಸಲು ಸುಳ್ಳನ್ನು ಆಧರಿಸಬಾರದಿತ್ತು. ಸುಳ್ಳಾಡುವುದು ಅವರಿಗೋ ಶೋಭಿಸುವುದಿಲ್ಲ'' ಎಂದು ಅಭ್ಯಂಕರರು ತಿವಿದರು.

ಚರಖಾ - ಚರಖಾವೊಂದೇ ನಮ್ಮೆಲ್ಲರನ್ನು ಸ್ವರಾಜ್ಯ ಪ್ರಾಪ್ತಿಯತ್ತ ಮುನ್ನಡೆಸುತ್ತದೆಂದು ಅಲಿ ಸಾಹೇಬರು ವಿಶ್ವಾಸಪೂರ್ವಕವಾಗಿ ಹೇಳುತ್ತಾರೆ. ಮಹನೀಯರೇ ನಾವು ಸ್ವರಾಜ್ಯ ಕಳೆದುಕೊಂಡಾಗ ಚರಖಾಗಳಿರಲಿಲ್ಲವೇ ಎಂಬುದನ್ನು ತಮ್ಮಿಂದ ತಿಳಿದುಕೊಳ್ಳಬಯಸುತ್ತೇನೆ. ಬ್ರಿಟಿಷರು ಭಾರತದೊಳಕ್ಕೆ ತಮ್ಮಲ್ಲಿ ತಯಾರಾದ ಬಟ್ಟೆಗಳನ್ನು ನಿರ್ಯಾತ ಮಾಡ ಹತ್ತಿದ ಬಳಿಕವೇ ನಾವು ಸ್ವಾತಂತ್ರ್ಯ ಕಳೆದುಕೊಂಡೆವೇನು ? ನಾವು ಚರಖಾವನ್ನು ಎಂದೂ ಕಳೆದುಕೊಂಡಿರಲಿಲ್ಲ. ಆದರೆ ನಾವು ಸ್ವಾತಂತ್ರ್ಯವನ್ನು ಮಾತ್ರ ಕಳೆದುಕೊಂಡಿದ್ದೇವೆ. (ಇಲ್ಲ, ಇಲ್ಲ, ಹೌದು, ಹೌದು, ಕೇಳಿರಿ, ಕೇಳಿರಿ) ಎಂಬ ಧ್ವನಿಗಳು ಕೇಳಿ ಬಂದವು. ನೀವು ಸಹಜವಾಗಿ ಖಚಿತವಾಗಿ ಮರೆತು ಹೋಗಿರುವ ಇತಿಹಾಸವನ್ನು ನೆನಪಿಸಿಕೊಳ್ಳಲೆಂದು ಇಚ್ಛಿಸುತ್ತೇನೆ. ಭಾರತದೊಳಕ್ಕೆ ಬ್ರಿಟನ್ನಿನಿಂದ ಬಟ್ಟೆಗಳ ಆಯಾತ ಮಾಡಿಕೊಳ್ಳಹತ್ತಿದ್ದರಿಂದ ನಾವು ಸ್ವಾತಂತ್ರ್ಯವನ್ನು ಕಳೆದುಕೊಳ್ಳಲೂ ಇಲ್ಲ. ಈಗ ಬ್ರಿಟನ್ನಿನಿಂದ ಬರುವ ಬಟ್ಟೆಗಳನ್ನು ಬಹಿಷ್ಕರಿಸುವದರಿಂದಲೇ ನಮಗೆ ಸ್ವರಾಜ್ಯವೆಂದೂ ಸಿಕ್ಕುವುದೂ ಇಲ್ಲ. ನಮ್ಮಿಂದ ಸ್ವರಾಜ್ಯವನ್ನು ಬ್ರಿಟಿಷರು ಕಿತ್ತುಕೊಳ್ಳುವುದಕ್ಕೆ ಬೇರೆಯೇ ಕಾರಣಗಳಿದ್ದವು. ಬೇರೆ ಶಕ್ತಿಗಳೂ ಅದಕ್ಕೆ ಸಹಾಯಕವೆನಿಸಿದವು. ಸತ್ಯ ಸಂಗತಿಗಳು ಬೇರೆಯೇ ಇವೆ. ನಮ್ಮ ಸ್ವರಾಜ್ಯ ಹರಣವಾಗುವುದಕ್ಕೆ ಕಾರಣವಾದಂಥವುಗಳನ್ನು ನಿವಾರಿಸಿ ನಮ್ಮ ಕೊರತೆಗಳನ್ನು ತುಂಬಿಕೊಂಡಾಗಲೇ ನಮಗೆ ಸ್ವರಾಜ್ಯ ಸಿಕ್ಕೀತು. ಚರಖಾವೊಂದರಿಂದಲೇ ಸ್ವರಾಜ್ಯ ಸಿಗಲಾರದು ಎಂದು ಖಡಾ ಖಂಡಿತವಾಗಿ ಹೇಳ ಬಯಸುತ್ತೇನೆ. ಚರಖಾ ನಮಗೆ ಇಂದು ಒಂದು ಶಸ್ತ್ರವಾಗಿ ಅಣು ಮಾತ್ರವೂ ಉಪಯೋಗಕ್ಕೆ ಬರಲಾರದು ಎಂದು ಹೇಳ ಬಯಸುತ್ತೇನೆ. ದಯವಿಟ್ಟು ಕ್ಷಮಿಸಿ, ವಿಧಾನ ಮಂಡಳ ಪ್ರವೇಶದ ವಿಷಯದಲ್ಲಿ ಮೌಲಾನಾ ಮಹಮ್ಮದ ಅಲಿಯವರಿಗೆ ನಂಬಿಗೆಯಿಲ್ಲವಾದರೆ ಸ್ವರಾಜ್ಯ ಪಕ್ಷದವರಿಗೆ ಕೇವಲ ರಿಯಾಯಿತಿ ತೋರಿಸಲೆಂದೇ ಅದನ್ನು ಒಪ್ಪುವದಾದರೆ ಅವರು ಪ್ರತಿಪಾದಿಸಿದ ಚರಖಾ ನಮ್ಮನ್ನು ಸ್ವರಾಜ್ಯ ಪ್ರಾಪ್ತಿಯ ಗುರಿಯತ್ತ ಒಂದಂಗುಲ ಸಹ ಮುನ್ನಡೆಸಲಾರದು ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಸ್ವರಾಜ್ಯ ಪಕ್ಷದ ಓರ್ವ ಸದಸ್ಯನಾಗಿ ಚರಖಾದಲ್ಲಿ ನಂಬಿಗೆಯಿರಿಸಿರುವವರ ಸಮಾಧಾನಕ್ಕಾಗಿ ಮಾತ್ರವೇ ನಾವು ಸ್ವರಾಜ್ಯ ಪಕ್ಷದ ಸದಸ್ಯರು

ರಾಜೀ ಒಡಂಬಡಿಕೆಗೆ ಒಪ್ಪಿದ್ದೇವೆ ಎಂದು ನಾವು ಹೇಳಿದರೆ ನಿಮಗೆ ಹೇಗೆ ಎನಿಸುತ್ತದೆ ? ಎಂದು ಪ್ರಶ್ನಿಸಿದರು. ಹಾಗೆಯೇ ನಾನು ಚರಖಾದ ಮೇಲೆ ನೂಲು ತೆಗೆದು ಕೈನೂಲು ವಂತಿಗೆ ಸಲ್ಲಿಸುವುದಕ್ಕೆ ಬದ್ಧನಾಗಿರುತ್ತೇನೆ (ಕೇಳಿರಿ ಕೇಳಿರಿ ಎಂಬ ಧ್ವನಿ ಹಾಗೂ ಕರತಾಡನ) ನಾಗಪುರ ಕಾಂಗ್ರೆಸ್ಸಿನ ಅಧಿವೇಶನ ದಿಂದೀಚೆ ನಾನು ಮಹಾತ್ಮಾ ಗಾಂಧೀಜಿಯವರ ರಾಜಕೀಯ ವಿರೋಧಿ ಎಂಬುದಕ್ಕೆ ಸ್ವತಃ ಅವರೇ ಸಾಕ್ಷಿಯಾಗಿದ್ದಾರೆ. (ಗಾಂಧೀಜಿಯವರು ಹೌದೌದು ನಿಶ್ಚಿತವಾಗಿ ಎನ್ನುತ್ತ ಮುಗುಳು ನಗೆ ಸೂಸಿದರು). ನನಗೆ ಅವರ ಕಾರ್ಯಕ್ರಮದಲ್ಲಿ ಹಾಗೂ ಧೋರಣೆಯಲ್ಲಿ ಅಣುಮಾತ್ರವೂ ವಿಶ್ವಾಸವಿಲ್ಲದೇ ಹೋದರೂ ಕಾಂಗ್ರೆಸ್ಸಿಗನಾಗಿ ಕಾಂಗ್ರೆಸ್ಸಿನಲ್ಲಿಯ ಅಚಲ ಶ್ರದ್ಧೆಯಿಂದಾಗಿ ಎಲ್ಲವನ್ನೂ ತಪ್ಪದೇ ಅನುಸರಿಸುತ್ತ ಬಂದಿದ್ದೇನೆ ಅಲ್ಲವೇ ? ನಾನು ನುಡಿದಂತೆ ನಡೆಯುವ ವಚನವನ್ನು ಪರಿಪಾಲಿಸುತ್ತ ಬಂದವ. ಮುಂದೆಯೂ ವೈಯಕ್ತಿಕವಾಗಿ ಹಾಗೆಯೇ ನಡೆಯುತ್ತೇನೆ. ನಾನು ಹಾಗೆ ನಡೆದುಕೊಂಡಿರುವೆನೋ ಇಲ್ಲವೋ ಎಂಬ ಬಗ್ಗೆ ನಮ್ಮ ಪ್ರಾಂತ ಮಹಾರಾಷ್ಟ್ರದಲ್ಲಿ ಯಾರನ್ನಾದರೂ ಕೇಳಿ ಸಾಕ್ಷ ಪಡೆದು ದೃಢಪಡಿಸಿಕೊಳ್ಳಬಹುದು ಎಂದು ಆಹ್ವಾನವೆಸೆಯುತ್ತೇನೆ. ನಾನಾಗಲೀ ಸ್ವರಾಜ್ಯ ಪಕ್ಷದಲ್ಲಿಯ ಇತರರಾಗಲೀ ಇಂಥದೇ ಭಾವನೆಯಿಂದ ರಾಜೀ ಒಡಂಬಡಿಕೆಗೆ ಒಪ್ಪಿಗೆ ಸೂಚಿಸಿದ್ದೇವೆ. ಮಹಾತ್ಮಾಜೀ ಹೇಳಿರುವಂತೆ ನಮ್ಮ ಅಭಿಪ್ರಾಯ ದೊಡ್ಡದಾಗಿದ್ದು ಇತರರ ಅಭಿಮತವನ್ನೂ ಗೌರವಿಸುವ ಇರು-ಇರುಗೊಡು ಎಂಬ ಸಹಬಾಳುವೆ ತತ್ವಕ್ಕೆ ನಾವು ಬದ್ಧ. ಯಾವಾಗಲೂ ಕೂಡಿ ಒಂದಾಗಿರೋಣ, ಸಾಯುವುದಾದರೂ ಒಟ್ಟಿಗೇ ಸಾಯೋಣವೆಂಬ ತತ್ವ ನಮ್ಮದು. ಕಾಲ ಗತಿಸಿದಂತೆ ಜಯ ಯಾವುದೇ ಗುಂಪಿನದಾದೀತು. ಆದರೆ ಒಂದೇ ನೀತಿ. ಒಂದೇ ತತ್ವ ಹಾಗೂ ಒಂದೇ ಕಾರ್ಯಕ್ರಮ ಅನುಸರಿಸುತ್ತ ಒಟ್ಟಿಗೆಯೇ ಮುನ್ನಡೆಯೋಣ. ಎಲ್ಲಿಯಾದರೂ ಸ್ವಲ್ಪ ತಪ್ಪುಗಳು ಸಂಭವಿಸಬಹುದು. ನಾನೇನೂ ತಪ್ಪನ್ನೇ ಮಾಡದಷ್ಟು ಜಾಣನಲ್ಲ. ಜಗತ್ತಿನಲ್ಲಿ ತಪ್ಪು ಮಾಡದೇ ಇರುವ ಪರಿಪೂರ್ಣ ಹಾಗೂ ಜಾಣರಿದ್ದಾರೆಂಬುದನ್ನು ನಾನೊಪ್ಪಲಾರೆ. ಎಲ್ಲರೂ ತಪ್ಪುಗಳನ್ನು ಮಾಡುವವರೇ ಆದರೆ ನಮ್ಮೆಲ್ಲ ಗುಂಪುಗಳಿಗೂ ಒಬ್ಬನೇ ಒಬ್ಬ ವೈರಿಯಿದ್ದಾನೆ. ಆತನ ವಿರುದ್ಧ ನಾವೆಲ್ಲ ಒಗ್ಗಟ್ಟಿನಿಂದ ಇರಲೇಬೇಕಾಗಿದೆ. ನಮ್ಮೊಳಗಿನ ಆಂತರಿಕ ಸಂಘರ್ಷ, ಅಭಿಪ್ರಾಯ ಭೇದ ಮರೆತು ಒಂದಾಗಿ ಹೋರಾಡಲೇಬೇಕಾಗಿದೆ. ಈ ರಾಜೀ ಒಡಂಬಡಿಕೆ ಗೊತ್ತುವಳಿಯಲ್ಲಾದರೂ ಇನ್ನು ಮುಂದಾದರೂ ನಾವೆಲ್ಲ ಒಂದಾಗೋಣ.

ಇನ್ನೆರಡು ನಿಮಿಷಗಳಲ್ಲಿ ಇನ್ನೆರಡು ವಿಷಯ ಪ್ರಸ್ತಾಪಿಸಿ ನನ್ನ ಭಾಷಣ ಮುಗಿಸಬಯಸುತ್ತೇನೆ. ಗೊತ್ತುವಳಿಯ ಪರವಾಗಿ ಅನೇಕರು ಈಗಾಗಲೇ ಮಾತಾಡಿದ್ದಾರೆ. ನನ್ನ ಸ್ನೇಹಿತ ಶ್ರೀ ಎನ್.ಸಿ. ಕೇಳಕರರೊಬ್ಬರೇ ಒಡಂಬಡಿಕೆ ಗೊತ್ತುವಳಿಗೆ ಸಂಬಂಧಿಸಿದಂತೆ

ಎರಡು ಪಕ್ಷ, ಎರಡು ಭರವಸೆ, ಎರಡು ವಿಷಯಗಳ ಅಂಗೀಕಾರ, ಎರಡು ತತ್ವಗಳ ಅನುಸರಣೆ ಕುರಿತು ಪ್ರಸ್ತಾಪಿಸಿದ್ದಾರೆ. ನನಗಿಂತ ಮೊದಲಿಗೆ ಮಾತಾಡಿದ ಎಲ್ಲರೂ ಪ್ರಾಮಾಣಿಕವಾಗಿಯೇ ಗಂಭೀರತೆಯಿಂದಲೇ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿರ ಬಹುದು. ಶ್ರೀ ಚಿತ್ತರಂಜನದಾಸ ಅವರಿಗೆ ಚರಖಾದಲ್ಲಿ ವಿಶ್ವಾಸವಿಲ್ಲದೇ ಹೋದರೆ ಅವರು ಸಹಕರಿಸುವುದೇ ಬೇಡ. ನಾವು ಮಾತ್ರ ಚರಖಾ ಆಂದೋಲನದೊಂದಿಗೆಯೇ ಇರಬಯ ಸುತ್ತೇವೆಂದು ಮೌಲಾನಾ ಮಹಮ್ಮದ ಅಲಿ ಹೇಳಿಕೊಂಡಿದ್ದಾರೆ. ಸ್ವರಾಜ್ಯ ಪಕ್ಷದವರೂ ಹೀಗೆಯೇ ಹೇಳುವುದಾದರೆ ನಡೆದೀತೇ ಎಂದು ನಾನವರಿಗೆ ಸವಾಲು ಎಸೆಯುತ್ತೇನೆ. ನಾವೆರಡು ಗುಂಪಿನವರು ಈಗ ಒಂದು ನಿರ್ಣಯಕ್ಕೆ ಬಂದಿದ್ದೇವೆ ಅಲ್ಲವೇ? ಒಂದು ನಿರ್ಣಯಕ್ಕೆ ಬಂದಿರುವೆವೆಂದ ಬಳಿಕ ಪರಸ್ಪರ ವಿಶ್ವಾಸದಿಂದ ಮುಂದೆ ಸಾಗೋಣ. ಪರಸ್ಪರ ಸಹಕಾರ ಸೌಹಾರ್ದತೆಯಿಂದ ಪ್ರಗತಿ ಸಾಧಿಸಬಹುದು. ವಿಧಾನ ಮಂಡಳದಲ್ಲಿ ಈಗಾಗಲೇ ಸ್ವರಾಜ್ಯ ಪಕ್ಷದವರು ಪ್ರವೇಶ ಮಾಡಿದ್ದಾರೆ. ಆದರೂ ಸ್ವರಾಜ್ಯ ಲಭಿಸಿಲ್ಲವೆಂದು ಎಂದು ಮಹಮ್ಮದ ಅಲಿ ಹೇಳುತ್ತಾರೆ. ವಿಧಾನ ಮಂಡಳಗಳಲ್ಲಿಯ ಪ್ರವೇಶ ಮಾತ್ರದಿಂದಲೇ ಸ್ವರಾಜ್ಯ ಲಭಿಸುವುದೆಂದು ನಾವು ಸಹ ಹೇಳುತ್ತಿಲ್ಲವೆಂದು ಸ್ಪಷ್ಟ ಪಡಿಸಬಯಸುತ್ತೇವೆ. ಭಾರತ ಈಗಿರುವ ಪರಿಸ್ಥಿತಿಯಲ್ಲಿರುವ ಯಾವುದೇ ದೇಶವು ಇಂಥದನ್ನು ಸಾಧಿಸಿಲ್ಲ. ಸ್ವರಾಜ್ಯ ಪಕ್ಷಕ್ಕೂ ಇದು ಸಾಧ್ಯವಾಗದು. ನಮ್ಮನ್ನು ಆಳಿಕೊಳ್ಳುವ ಆಧುನಿಕ ಸಾಧನವೊಂದನ್ನಾಗಿ ಸರಕಾರವೇ ನಮಗೆ ನೀಡಿರುವಂಥದು ಮಾತ್ರ ವಿಧಾನ ಮಂಡಳ ವ್ಯವಸ್ಥೆಯೆನಿಸಿದೆ. ಸರಕಾರ ತಾನು ನಿರ್ಮಿಸಿರುವ ವಿಧಾನ ಮಂಡಳಗಳ ಮೂಲಕ ಆಳುವ ಅಧಿಕಾರ ಪಡೆದುಕೊಳ್ಳುತ್ತದೆ ಎಂದು ಸ್ವತಃ ಮಹಾತ್ಮಾಜೀಯವರೇ ಹೇಳಿದ್ದಾರೆ. ಸರಕಾರವೇ ಈ ಶಸ್ತ್ರದಿಂದ ನಮ್ಮ ಶೋಷಣೆ ಮಾಡುವುದರಿಂದ ತಪ್ಪಿಸಲು ಶಸ್ತ್ರವನ್ನು ನಿಷ್ಕ್ರಿಯಗೊಳಿಸು ವುದಾಗಲೀ ನಮ್ಮ ವಿರೋಧಿಗಳಿಂದ ಅಧಿಕಾರ ಕಿತ್ತುಕೊಳ್ಳುವುದಾಗಲೀ ನಾವು ಮಾಡದೇ ಕರ್ತವ್ಯ ಚ್ಯುತರಾಗೋಣವೇ ? ನಮ್ಮಿಂದ ಯಾವುದೇ ಸಾಧನೆಯಾಗುವುದಿಲ್ಲ. ನಮ್ಮ ಬಲ ಹೆಚ್ಚಿಸಿಕೊಳ್ಳಲಾಗುವುದಿಲ್ಲವೆಂದೇ ಭಾವಿಸೋಣ. ಈ ವಿಚಾರದಿಂದ ನಾವು ವಿಧಾನ ಮಂಡಳಗಳಿಂದ ದೂರವೇ ಉಳಿದರೆ ಸರಕಾರ ನಮ್ಮ ವಿರುದ್ಧ ಮತ್ತಷ್ಟು ಬಲಾಢ್ಯವಾಗುವುದಿಲ್ಲವೇ ? ಸರಕಾರ ವಿಧಾನ ಮಂಡಳಗಳ ವ್ಯವಸ್ಥೆ ತಂದಿದೆಯಾದರೂ ಏಕೆ ? ಐವತ್ತು ವರ್ಷಗಳಷ್ಟು ಹಿಂದೆ ಈ ವ್ಯವಸ್ಥೆಯಿತ್ತೇ ? ಐವತ್ತು ವರ್ಷಗಳಷ್ಟು ಹಿಂದೆ ವಿಧಾನ ಮಂಡಳಗಳ ವ್ಯವಸ್ಥೆಯಿಲ್ಲದೇ ಸರಕಾರ ನಮ್ಮನ್ನು ರಾಜಾರೋಷವಾಗಿ ಆಳುತ್ತಿತ್ತು. ಕೇವಲ ಅಧಿಕಾರ ಬಲದಿಂದ ನಮ್ಮ ಮೇಲೆ ಆಡಳಿತ ನಡೆಸುತ್ತ ಬಂದಿತ್ತು. ಈಗ ಸಹ ಹಾಗೆಯೇ ಅಧಿಕಾರ ಬಲದ ಆಳ್ವಿಕೆ ಮುಂದುವರಿಸಿಕೊಂಡು ಹೋಗಲು ಸಾಧ್ಯವಿತ್ತು. ಆದರೆ ಆಧುನಿಕ ಕಾಲ ಪರಿಸ್ಥಿತಿಗನುಗುಣವಾಗಿ ಈ ವ್ಯವಸ್ಥೆಯನ್ನು ಅದು ತಂದಿದೆ.

ನಿಮಗೆ ಬೇಕಾದ ಯಾವುದೇ ಯೋಜನೆ, ಕಾರ್ಯಕ್ರಮವನ್ನು ಕಾರ್ಯಗತಗೊಳಿಸಿ ವಿಧಾನ ಮಂಡಳ ನಿಮ್ಮ ಪರವಾಗಿರುವುದಾದರೆ ನಿಮಗೆ ನಿಮ್ಮ ಕಾರ್ಯಕ್ರಮಗಳಿಗೆ ಬಲ ಬರುವುದೇ ಇಲ್ಲವೆ ? ನಿಮ್ಮ ವಿರುದ್ಧವಾಗಿ ನಾವು ನಿಂತುಕೊಳ್ಳುವುದಾಗಲೀ ನೀವು ನಮ್ಮಿಂದ ಉದ್ದೇಶಪೂರ್ವಕ ದೂರವಿರುವುದಾಗಲೀ ನಿಮಗೆ ಯಶ ತರಲು ಸಾಧ್ಯವೇ ? ವಿಧಾಯಕ ಕಾರ್ಯಕ್ರಮವೇ ಆಗಲೀ, ಮತ್ತೆ ಆಂದೋಲನವೇ ಆಗಲೀ ನಿಮ್ಮ ಕಾರ್ಯಕ್ರಮಗಳಿಗೆ ವಿಧಾನ ಮಂಡಳಗಳು ನಿಮ್ಮ ಪರವಾಗಿದ್ದರೆ ಒಳಿತೋ ? ವಿರೋಧವಾಗಿದ್ದರೆ ಒಳಿತೋ ? ಯಾವುದರಿಂದ ನೀವು ಯಶಸ್ವಿಯಾಗುವಿರಿ ? ಇದು ಸುಲಭವಾಗಿ ತಿಳಿಯುವಂಥದು. ಹೆಚ್ಚಿನ ತರ್ಕ ಅಥವಾ ಪ್ರತಿಪಾದನೆ ಅನಗತ್ಯ. ಆದ್ದರಿಂದ ಹೆಚ್ಚಿಗೇನನ್ನೂ ನಾನು ಹೇಳ ಬಯಸುತ್ತಿದ್ದಿಲ್ಲ ಎಂದರು.

ಬಹಳ ವೇಳೆಯನ್ನು ತೆಗೆದುಕೊಂಡಿದ್ದೇನೆಂದು ಮಹಾತ್ಮಾಜೀ ಹೇಳುತ್ತಿದ್ದಾರೆ. ಆದರೆ ಕೊನೆಯ ಮಾತೊಂದನ್ನು ಹೇಳದೇ ಇರಲಾರೆ. ಸ್ವರಾಜ್ಯ ಪಕ್ಷವೆಂಬುದು ಅಸ್ತಿತ್ವದಲ್ಲಿದೆ ಎಂಬುದನ್ನು ನೆನಪಿನಲ್ಲಿಡಿ. ಮಹಾತ್ಮಾಜಿಯವರಲ್ಲಿ ನಿಮಗೆ ವಿಶ್ವಾಸವಿರುವುದಾದರೆ ನೀವೆಲ್ಲ ಸ್ವರಾಜ್ಯ ಪಕ್ಷದ ಅಸ್ತಿತ್ವವನ್ನು ಒಪ್ಪಿಕೊಳ್ಳಲೇಬೇಕು. ಮಹಾತ್ಮಾಜೀಯವರೇ ಸ್ವರಾಜ್ಯ ಪಕ್ಷ ವಿರುವುದನ್ನು ಅಂಗೀಕರಿಸಿದ್ದಾರೆ. ಬದಲಾವಣೆ ಬಯಸದ ಗುಂಪಿನವರ ನಾಯಕನಾಗಿ ಮಹಾತ್ಮಾಜಿಯವರು ಸ್ವರಾಜ್ಯ ಪಕ್ಷದೊಂದಿಗೆ ಮುಂದೆ ಬಂದು ಕೈಜೋಡಿಸಿದ್ದಾರೆ. ನಾನವರನ್ನು ಅಭಿನಂದಿಸುತ್ತೇನೆ ಎರಡೂ ಕಡೆಯವರು ತಾಳ್ಮೆ ಸಹನೆಯಿಂದ ಮುನ್ನಡೆಯಬೇಕೆಂದು ನಾನು ಬಯಸುತ್ತೇನೆ. ಸ್ವರಾಜ್ಯ ಪಕ್ಷದಲ್ಲಿ ನನ್ನಂತೆಯೇ ಅನೇಕರು ಚರಖಾದಲ್ಲಿ ಒಂದಾಗಲು ವಿಶ್ವಾಸವಿಲ್ಲದವರು ಇರುತ್ತಾರೆ. ನಿಮ್ಮಲ್ಲಿಯೂ ಬಹಳಷ್ಟು ಜನರು ವಿಧಾನ ಮಂಡಳಗಳಲ್ಲಿ ವಿಶ್ವಾಸವಿಲ್ಲದಿದ್ದರೂ ಇರಲಿಕ್ಕೆ ಸಾಕು. ಆದರೆ ಎಲ್ಲರೂ ಒಟ್ಟಿಗೆ ಬರೋಣ. ಸ್ವರಾಜ್ಯ ಪ್ರಾಪ್ತಿಗೆ ಒಂದಾಗಿಯೇ ಇರೋಣ ಎಂದು ಎಲ್ಲರೂ ನಿರ್ಣಯಕ್ಕೆ ಬಂದಿದ್ದೇವೆ. ಹೀಗೆಯೇ ನಿರಂತರ ಒಂದಾಗಿದ್ದು ಕಾರ್ಯ ಸಾಧನೆಗಾಗಿ ಕ್ರಿಯಾಶೀಲ ರಾಗೋಣ ಎಂದೂ ನುಡಿದರು.

ನಂತರ ಅಧ್ಯಕ್ಷರು ಗೋವಿಂದಾನಂದರಿಗೆ ಗೊತ್ತುವಳಿಯ ವಿರುದ್ಧ ಮಾತಾಡುವುದಕ್ಕೆ ಅವಕಾಶ ನೀಡಿದರು.

ಸಿಂಧ ಪ್ರಾಂತದ ಸ್ವಾಮೀ ಗೋವಿಂದಾನಂದರು, ದೇಶಬಂಧು ಚಿತ್ತರಂಜನ ದಾಸ, ಮೌಲಾನಾ ಮಹಮ್ಮದ ಅಲಿಯಂಥ ಮಹಾ ವ್ಯಕ್ತಿಗಳಿಂದ ಸೂಚಿತ, ಅನುಮೋದಿತವಾದ ಗೊತ್ತುವಳಿಯನ್ನು ವಿರೋಧಿಸಿ ಮಾತನಾಡುತ್ತಿದ್ದೇನೆ ಎಂದು ಭಾಷಣ ಆರಂಭಿಸಿದರು. ಪರಸ್ಪರ ವಿರೋಧಿಗಳಾದ ಈ ಉಭಯ ನೇತಾರರು ಕಾಂಗ್ರೆಸ್ಸಿನ ಇಲ್ಲಿಯ ವ್ಯಾಸ ಪೀಠದ

ಮೇಲೆ ಒಂದಾದುದು ಒಂದು ದೈವ ಯೋಗವೇ ಸರಿ. ಆದರೆ ಕಾಂಗ್ರೆಸ್ಸಿನ ಸಂವಿಧಾನದಲ್ಲಿ ಮೂಲಭೂತ ಹಾಗೂ ಕ್ರಾಂತಿಕಾರಕ ಪರಿವರ್ತನೆ ತರಲಿರುವ ಅವರು ಮಂಡಿಸಿದ ಗೊತ್ತುವಳಿ ರಾಷ್ಟ್ರದ ಹಿತ ಬಲಿಕೊಟ್ಟು ಒಗ್ಗಟ್ಟನ್ನು ಖರೀದಿಸಿದಂತಹದು.

ಕಾಂಗ್ರೆಸ್ಸಿನ ಎರಡು ಮುಖ್ಯ ಗುಂಪುಗಳನ್ನು ಈ ರಾಜೀ ಒಡಂಬಡಿಕೆ ಗೊತ್ತುವಳಿಯು ಒಗ್ಗೂಡಿಸುತ್ತದೆ., ಇತರ ರಾಜಕೀಯ ಪಕ್ಷ ಹಾಗೂ ಸಂಘಟನೆಗಳಿಗೂ ಕಾಂಗ್ರೆಸ್ಸಿನಲ್ಲಿ ಸೇರುವುದಕ್ಕೆ ಇದು ಅವಕಾಶ ಕಲ್ಪಿಸುತ್ತದೆಂದು ಈ ಗೊತ್ತುವಳಿಯಲ್ಲಿ ಹೇಳಲಾಗಿದೆ. ಗೆಳೆಯರೇ ನಿಜವಾಗಿಯೂ ಈ ಗೊತ್ತುವಳಿ ವಿವಿಧ ಪಕ್ಷಗಳನ್ನು, ರಾಜಕೀಯ ಸಂಘಟನೆಗಳನ್ನು ಒಗ್ಗೂಡಿಸಲು ಸಾಧ್ಯವೇ ಎಂಬುದನ್ನು ಗಂಭೀರವಾಗಿ ಯೋಚಿಸಿ ಹೇಳಿರಿ ಕಾಂಗ್ರೆಸ್ಸಿನಲ್ಲಿ ಇಲ್ಲಿಯವರೆಗೆ ಎರಡೂ ಗುಂಪು ಅಥವಾ ಪಕ್ಷಗಳಿದ್ದವು. ವಿಷಯ ನಿರ್ಣಾಯಕ ಸಮಿತಿಯಲ್ಲಿ ಸ್ವತಃ ದಾಸರೇ ಹೇಳಿದಂತೆ ಈ ಠರಾವು ಪಾಸಾದರೆ ಮೂರನೆಯ ಇನ್ನೊಂದು ಪಕ್ಷಕ್ಕೆ ಜನ್ಮ ನೀಡುತ್ತದೆಂಬುದೇ ಸತ್ಯ. ಈ ಮಹಾ ಸಂಘಟನೆಯಲ್ಲಿ ದೃಢ ವಿಶ್ವಾಸ ಇರಿಸಿದಂಥ ನನ್ನಂಥವರುಳ್ಳ ಮೂರನೆಯ ಭಿನ್ನಮತೀಯರ ಗುಂಪು ಇದರಿಂದ ತಲೆಯೆತ್ತಲಿದೆ. ಭಾರತದ ಅನಧಿಕೃತ ಸಂಸತ್ತಿನ ಸ್ವರೂಪವೇ ಇರುವಂಥ ಕಾಂಗ್ರೆಸ್ಸಿನಲ್ಲಿಯ ನನ್ನಂತಹ ಲಕ್ಷಾಂತರ ಜನರ ಮತಾಧಿಕಾರವನ್ನು ಈ ಗೊತ್ತುವಳಿಯ ಮೂಲಕ ಕಿತ್ತುಕೊಳ್ಳಲಾಗುತ್ತಿದೆ. ನಮ್ಮ ಮತಾಧಿಕಾರವನ್ನು ಚಲಾಯಿಸುವ ಮೂಲಕ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಹಾಗೂ ಕಾಂಗ್ರೆಸ್ಸಿನ ಮೂಲಕ ರಾಷ್ಟ್ರಕ್ಕೆ ಸಲ್ಲಿಸುವ ಅವಕಾಶವನ್ನು ನಮ್ಮಿಂದ ಕಿತ್ತುಕೊಳ್ಳಲು ಯಾರಿಗೂ ಸಾಧ್ಯವಿಲ್ಲ. ನನಗೆ ಚರಖಾ ತಿರುಗಿಸುತ್ತ ಕುಳಿತು ನೂಲು ತೆಗೆಯುವುದರಲ್ಲಿ ವಿಶ್ವಾಸವಿಲ್ಲವೆಂದ ಮಾತ್ರಕ್ಕೆ ಈ ದೇಶಕ್ಕೆ, ಈ ದೇಶ ಸ್ವತಂತ್ರಗೊಳ್ಳುವುದಕ್ಕೆ ಸೇವಾವಕಾಶದಿಂದ ನನ್ನನ್ನು ನನ್ನಂಥವರನ್ನು ವಂಚಿತರನ್ನಾಗಿಸುವಿರಾ? ಈ ದೇಶಕ್ಕೆ ಸ್ವಾತಂತ್ರ್ಯ ಹೋರಾಟಕ್ಕೆ ಸೇವೆ ಸಲ್ಲಿಸದೇ ಮೂಕನಂತೆ ನಾನು ತೆಪ್ಪಗಾಗಿರಬೇಕೆನ್ನುವಿರಾ? ಹೊಸದಾಗಿ ಕಾಂಗ್ರೆಸ್ ಸೇರಬೇಕೆನ್ನುವವರಿಗೆ ಕಾಂಗ್ರೆಸ್‌ನೊಳಕ್ಕೆ ಬರದಂತೆ ಬಾಗಿಲು ಮುಚ್ಚುವಿರಾ? ಕಾಂಗ್ರೆಸ್ಸಿನೊಳಕ್ಕೆ ಇರುವವರನ್ನು ಹೊರದಬ್ಬುವಿರಾ ? ಚರಖಾ ತಿರುಗಿಸುತ್ತ ಕೈನೂಲು ತೆಗೆಯುವದರಲ್ಲಿ ವಿಶ್ವಾಸವಿಲ್ಲವೆಂಬ ಕಾರಣಕ್ಕಾಗಿ ಕಾಂಗ್ರೆಸ್ಸಿನ ಹಾಗೂ ತನ್ಮೂಲಕ ರಾಷ್ಟ್ರದ ಸೇವೆಗೈಯುವ ಹಾಗೂ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಹಕ್ಕಿನಿಂದ ಅಥವಾ ಅಧಿಕಾರದಿಂದ ನಾನು ನನ್ನಂತಹವರು ವಂಚಿತರಾಗಬೇಕೆ ? ಪ್ರಪಂಚದಲ್ಲೆ ಅತ್ಯಂತ ಕ್ರೂರತಮ ದಾಸ್ಯದಲ್ಲಿರುವ ನಮ್ಮ ರಾಷ್ಟ್ರವನ್ನು ಸ್ವತಂತ್ರಗೊಳಿಸುವ ಹಕ್ಕನ್ನು ನಾನು ಕಳೆದುಕೊಳ್ಳಲೇನು ? ನನ್ನ ದೇಶಕ್ಕಾಗಿ ಏನನ್ನೂ ಮಾಡದೇ ಮೂಕ ಪ್ರೇಕ್ಷಕನಾಗಿ ತೆಪ್ಪಗೆ ಕುಳಿತುಕೊಳ್ಳಬೇಕಾದ ಗತಿ ನನಗೆ ಬರುವುದೇ ? ಈ ರಾಜೀ ಗೊತ್ತುವಳಿಯನ್ನು ನೀವು ಒಂದು ವೇಳೆ ಅಂಗೀಕರಿಸಿ ರಾಷ್ಟ್ರದ ಸ್ವರಾಜ್ಯ ಪ್ರಾಪ್ತಿಯ ಹೊಣೆಗಾರಿಕೆಯನ್ನು ನೀವಷ್ಟೇ

ಹೊತ್ತುಕೊಳ್ಳವಿರೋ ? ಹೊಸಬರನ್ನು ಪಕ್ಷದೊಳಕ್ಕೆ ಬರ ಮಾಡಿಕೊಳ್ಳಲು ತೆರೆದಿಡಬೇಕಾದ ಕಾಂಗ್ರೆಸ್ಸಿನ ದ್ವಾರವನ್ನೇ ನೀವು ಮುಚ್ಚಿ ಬಿಡಬಯಸುವಿರಾ ? ಈ ಗೊತ್ತುವಳಿಯ ಮೂಲಕ ನೀವು ಅನೇಕ ನಿಷ್ಠಾವಂತ ದೇಶಭಕ್ತರನ್ನು ಕಾಂಗ್ರೆಸ್ಸಿನಿಂದ ಹೊರದೂಡುವಿರಲ್ಲವೆ ? ಸದಸ್ಯತ್ವ ಹಾಗೂ ಮತಾಧಿಕಾರ ಕಾಂಗ್ರೆಸ್ಸಿನಲ್ಲಿ ಮುಕ್ತ ವಿರಬೇಕು ಅಂದರೆ ರಾಷ್ಟ್ರವನ್ನು ಪರಕೀಯರ ದಾಸ್ಯದಿಂದ ವಿಮುಕ್ತಗೊಳಿಸಲು ಯಾರು ಬೇಕಾದವರು ಕಾಂಗ್ರೆಸ್ಸಿನೊಳಕ್ಕೆ ಬಂದು ಸ್ವರಾಜ್ಯ ಪ್ರಾಪ್ತಿಯ ಯಜ್ಞ ಕುಂಡದಲ್ಲಿ ತಮ್ಮ ಆಹುತಿ ಸಮರ್ಪಿಸಲು ಸಾಧ್ಯವಾದೀತು. ಕಾಂಗ್ರೆಸ್ ಸದಸ್ಯರಾಗುವುದಕ್ಕೆ ವೈಯಕ್ತಿಕ ದೈಹಿಕ ಪರಿಶ್ರಮವನ್ನೇ ಅಗತ್ಯದ ವಂತಿಗೆಯಾಗಿ ಗಾಂಧೀಜಿ ಏಕೆ ಅಂಗೀಕರಿಸಿದರು. ಚರಖಾದ ಮೇಲೆ ಕೈನೂಲು ತೆಗೆಯುವುದನ್ನು ಮಾತ್ರವೇ ಸರಿಯಾದ ಕಾಯಕ ದೈಹಿಕ ಪರಿಶ್ರಮವೆಂದು ಅವರೇಕೆ ತಿಳಿಯುತ್ತಾರೆ. ಗೊತ್ತುವಳಿಯು ಕ್ರಾಂತಿಕಾರೀ ಬದಲಾವಣೆ ತರಲಿದೆ ಎಂದು ಹೇಳುವ ಗಾಂಧೀಜಿಯವರಿಗೆ ಅದೆಂಥ ಬದಲಾವಣೆ ತರಲಿದೆ ಎಂಬುದನ್ನು ನಾನೇ ನೇರವಾಗಿ ಗಂಭೀರ ರೀತಿಯಿಂದ ಪ್ರಶ್ನಿಸುತ್ತೇನೆ. ಕೈನೂಲು ತೆಗೆಯುವಿಕೆಯೇನೂ ರಾಜಕೀಯದಲ್ಲಿ ಸೂಕ್ತ ಸಾಧನ ಹಾಗೂ ಸದಸ್ಯತ್ವ ವಂತಿಗೆಯೆನಿಸಲು ಸಾಧ್ಯವೇ ಇಲ್ಲ.

ಸ್ನೇಹಿತರೆ ಈ ಪ್ರಶ್ನೆಗೆ ಇನ್ನೂ ಒಂದು ಮುಖವಿದೆ. ನೀವು ಈ ಗೊತ್ತುವಳಿಯನ್ನು ಮತಕ್ಕೆ ಹಾಕುವಾಗ ನನ್ನಂತೆಯೇ ಅಭಿಮತವುಳ್ಳವರು ಕೈಗಳನ್ನೆತ್ತಿ ಮತ ನೀಡುವುದಿಲ್ಲ. ನಾವು ಅಲ್ಪ ಸಂಖ್ಯೆಯಲ್ಲಿದ್ದೇವೆ. ಆದರೆ ಈ ಅಧಿವೇಶನದಲ್ಲಿಯ ಅಧಿಕ ಸಂಖ್ಯೆಯ ಸದಸ್ಯರು ತಮ್ಮ ಮನಃಸಾಕ್ಷಿಯಾಗಿ ಕೈನೂಲು ವಂತಿಗೆ ಸಂದಾಯದ ಕಡ್ಡಾಯದ ಸೂತ್ರಕ್ಕೆ ವಿರೋಧಿಯಾಗಿಯೇ ಇದ್ದಾರೆ. ಮನಃಸ್ಸಾಕ್ಷಿಗನುಗುಣವಾಗಿ ಎಲ್ಲರೂ ಮತದಾನ ಮಾಡುವುದಾದರೆ ಈ ಗೊತ್ತುವಳಿ ನಿಶ್ಚಿತವಾಗಿ ಬಿದ್ದು ಹೋಗುತ್ತದೆ. ದೇಶಬಂಧು ಚಿತ್ತರಂಜನದಾಸರು ಹಾಗೂ ಪಂ. ಮೋತಿಲಾಲ ನೆಹ್ರು ಅವರು ಸ್ವರಾಜ್ಯ ಪಕ್ಷದ ಸದಸ್ಯರೆಲ್ಲರೂ ಶಿಸ್ತಿಗೆ ಒಳಪಟ್ಟು ಗೊತ್ತುವಳಿಗೆ ಪರ ಮತ ನೀಡಬೇಕೆಂದು ವಿಧಿಸಿದ್ದಾರೆ. ಸ್ವರಾಜ್ಯ ಪಕ್ಷದಲ್ಲಿ ಈಗೀಗ ಪ್ರತಿಯೊಂದಕ್ಕೂ ಶಿಸ್ತು ಶಿಸ್ತು ಎಂದು ಹೇಳುತ್ತಲೇ ಇರುತ್ತಾರೆ. ಗಯಾ ಕಾಂಗ್ರೆಸ್ ಅಧಿವೇಶನದಲ್ಲಿ ಅವರ ಶಿಸ್ತಿನ ಗತಿಯೇನಾಯಿತು ? ಸ್ವರಾಜ್ಯ ಪಕ್ಷದವರು ಕಾಂಗ್ರೆಸ್ಸಿನ ಘೋಷಿತ ತೀರ್ಮಾನವನ್ನು ಉಲ್ಲಂಘಿಸಿ ವಿಧಾನ ಮಂಡಳ ಪ್ರವೇಶಿಸುವಾಗ ಅವರ ಶಿಸ್ತು ಎಲ್ಲಿಗೆ ಹೋಗಿತ್ತು ? ದೇಶಬಂಧು ಚಿತ್ತರಂಜನ ದಾಸ ಹಾಗೂ ಮೋತಿಲಾಲ ನೆಹ್ರು ಅವರೇ ಮೊದಲಿಗೆ ಇಡೀ ದೇಶದ ವಿರುದ್ಧ ನಡೆದುಕೊಂಡರು. ಅವರೇ ಮೊತ್ತ ಮೊದಲು ಶಿಸ್ತನ್ನು ಉಲ್ಲಂಘಿಸಿದವರು. ಕಾಂಗ್ರೆಸ್ಸಿಗಿಂತಲೂ ಅವರಿಗೆ ತಮ್ಮ ಪಕ್ಷವೇ ದೊಡ್ಡದಾಯಿತಲ್ಲವೇ ? ಕಾಂಗ್ರೆಸ್ಸಿಗೆ ನಿಷ್ಠೆ ತೋರುವುದಕ್ಕಿಂತ ತಮ್ಮ ಪಕ್ಷದ ನಿಷ್ಠೆ ಅವರಿಗೆ ಹೆಚ್ಚಾಯಿತೆ ? ನೀವು ಕಾಂಗ್ರೆಸ್ಸಿನ ನಿರ್ಣಯ ಉಲ್ಲಂಘಿಸಿದ್ದೀರಿ. ಈಗ ಕಾಂಗ್ರೆಸ್

ಅಧಿವೇಶನದಲ್ಲಿ ಭಾಗವಹಿಸುವುದಕ್ಕೆ ಮೊದಲಿಗೆ ನೀವೆಲ್ಲಾ ಸ್ವರಾಜ್ಯ ಪಕ್ಷದ ಸದಸ್ಯರಾಗಿ ಉಳಿದಿಲ್ಲವೇನು ? ಎಂದು ನಾನವರನ್ನು ಕೇಳಬಯಸುತ್ತೇನೆ. ಇಲ್ಲಿ ನೀವೀಗ ಕೇವಲ ಕಾಂಗ್ರೆಸ್ ಸದಸ್ಯರಷ್ಟೇ ಆಗಿರುವಿರಿ. ಹೀಗಾಗಿ ಕಾಂಗ್ರೆಸ್ಸಿಗೆ ನಿಷ್ಠರಾಗಿದ್ದು ಕಾಂಗ್ರೆಸ್ಸಿನ ಬೇಡಿಕೆಗಳನ್ನು ನಿಮ್ಮ ಬೇಡಿಕೆಗಳೆಂದು ತಿಳಿದು ಅವುಗಳ ಪೂರ್ತತೆಗೆ ಶ್ರಮಿಸಿರಿ. ಕಾಂಗ್ರೆಸ್ಸು ಸ್ವರಾಜ್ಯ ಪಕ್ಷಕ್ಕಿಂತಲೂ ಮಿಗಿಲಾದುದು. ಆದ್ದರಿಂದ ಕರ್ತವ್ಯ ನಿರ್ವಹಣೆ ಸಂಬಂಧವಾಗಿ ಸಂಘರ್ಷ ಉದ್ಭವಿಸಿದಾಗ ಹೆಚ್ಚು ಮಹತ್ವದ ಹಾಗೂ ಮಿಗಿಲಾದ ಕರ್ತವ್ಯವನ್ನೇ ಆಯ್ದುಕೊಂಡು ನಿಷ್ಠೆಯಿಂದ ನಿರ್ವಹಿಸಬೇಕಾಗುತ್ತದೆ. ಈಗ ನಿಮ್ಮ ಕರ್ತವ್ಯ ಸ್ವರಾಜ್ಯ ಪಕ್ಷಕ್ಕೆ ಸೇವೆ ಸಲ್ಲಿಸುವುದಾಗಿರದೇ ಕಾಂಗ್ರೆಸ್ಸಿಗೆ ಸೇವೆ ಸಲ್ಲಿಸುವುದಾಗಿದೆ. (ದೇಶಬಂಧು ದಾಸರು ತಮಗೆ ಎಸೆಯಲಾದ ಸವಾಲುಗಳು ಸರಿಯಾಗಿ ಕೇಳಿಸುತ್ತಿಲ್ಲವೆಂದಾಗ ಸ್ವಾಮೀ ಗೋವಿಂದಾನಂದರು ತಮಗೆ ಇದಕ್ಕೂ ಹೆಚ್ಚು ಜೋರಾಗಿ ಮಾತನಾಡಲು ಸಾಧ್ಯವಿಲ್ಲವೆಂದು ಉತ್ತರಿಸಿ ತಮ್ಮ ಭಾಷಣವನ್ನು ಹಾಗೆಯೇ ಮುಂದುವರಿಸಿದರು.)

ಸ್ವರಾಜ್ಯ ಪಕ್ಷ ಹೀಗೆಯೇ ದಾಸ್ಯ ಮನೋಭಾವದ ಆತ್ಮ ಸಾಕ್ಷಿ ಹೊಂದಿದೆ. ಇದರರ್ಥ ಭಾರತ ಮಾತೆಯ ಓರ್ವ ನಿಷ್ಠಾವಂತ ಪುತ್ರನಾಗಿ, ಸೇವಕನಾಗಿ ನಾನು ಹೊಸ ಬಗೆಯ ಇಂಥ ದಾಸ್ಯದ ಮನೋಭಾವವನ್ನು ಕಡಿದು ಬಿಸಾಕುವವ. ನಾವೆಲ್ಲ ದೇಶ ಬಾಂಧವರು. ಇಂತಹ ದಾಸ್ಯವನ್ನು ನುಚ್ಚು ನೂರಾಗಿಸಬೇಕೆಂದು ಕರೆಕೊಡಬಯಸುತ್ತೇನೆ.

ಈ ಗೊತ್ತುವಳಿಯನ್ನು ಅಂಗೀಕರಿಸುವದರಿಂದ ನೀವು ಕಾಂಗ್ರೆಸ್ಸಿನಲ್ಲೆ ಹೊಸದೊಂದು ಪಕ್ಷಕ್ಕೆ ಹುಟ್ಟು ಹಾಕುತ್ತಿದ್ದೀರೆಂದು ಎಲ್ಲರ ಮನಸ್ಸಿನ ಮೇಲೆ ಮತ್ತೊಮ್ಮೆ ಬಿಂಬಿಸ ಬಯಸುತ್ತೇನೆ. ಕಾಂಗ್ರೆಸ್ಸಿನಲ್ಲಿ ನಮ್ಮ ಹಕ್ಕು ಅಧಿಕಾರಗಳನ್ನು ದೃಢಪಡಿಸುವುದಕ್ಕೆ ಬದ್ಧರಾಗೋಣ. ಕೈನೂಲಿನ ವಂತಿಗೆ ಬಂಧನವನ್ನು ಕಡಿದೊಗೆಯೋಣ. ಈಗಿನ ದಮನಕಾರಿ ವಿದೇಶೀ ಸರಕಾರವನ್ನು ಕಿತ್ತೆಸೆದು ದೇಶೀಯ ಜನತಾ ಸರಕಾರವನ್ನು ಸ್ಥಾಪಿಸುವಲ್ಲಿ ಪ್ರತಿಯೊಬ್ಬ ಭಾರತೀಯನು ಕೃತ ನಿಶ್ಚಯಿಯಾಗಿದ್ದಾನೆ. ನಮ್ಮ ಮಾತೃಭೂಮಿಗೆ ಸೇವೆ ಸಲ್ಲಿಸುವ ನಮ್ಮ ಹಕ್ಕನ್ನು ನಿರಾಕರಿಸುವ ಈ ಕೈನೂಲಿನ ವಂತಿಗೆ ಕಡ್ಡಾಯದ ನಿಯಮವನ್ನು ಕಿತ್ತೊಗೆದು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಉಗ್ರ ಹೋರಾಟಕ್ಕೆ ಸಿದ್ಧರಾಗೋಣ.

ನನಗೆ ಕೊಡಲಾದ ಸಮಯ ಮುಗಿದಿದೆ. ಆದರೂ ವಿದೇಶೀಯ ಬಟ್ಟೆ ಬಹಿಷ್ಕಾರ ಕುರಿತು ಯೋಚಿಸಬೇಕೆಂದು ಕೊನೆಯದಾಗಿ ಬಿನ್ನಹ ಮಾಡುತ್ತೇನೆ. ವಿದೇಶೀಯ ಬಟ್ಟೆಯ ಬಹಿಷ್ಕಾರವು ನಿಮ್ಮನ್ನು ಸ್ವರಾಜ್ಯದ ಗುರಿ ಸಾಧನೆಯತ್ತ ಒಂದಂಗುಲವಾದರೂ ಸನಿಹಕ್ಕೆ ತಂದಿದೆಯೋ ಹೇಗೆಂಬ ಬಗ್ಗೆ ಗಂಭೀರವಾಗಿ ಆಲೋಚಿಸಿ. ನಾನು ಇಂಥ ಬಾಹ್ಯ ಹಾಗೂ ಸಂಬಂಧವಿಲ್ಲದ ವಿಷಯಗಳ ಬಗ್ಗೆ ಆಸಕ್ತನಿಲ್ಲ. ಯಾವುದೇ ಕಠಿಣ ಮಾರ್ಗ ಅನುಸರಿಸಿಯೂ



ಗಂಗಾಧರರಾವ ದೇಶಪಾಂಡೆ (ಕುದುರೆ ಮೇಲೆ) ಮತ್ತು ಪುಂಡಲೀಕ ಜೀ. ಕಾತಗಡೆ (ನಿಂತಿರುವವರು) ಕಾಂಗ್ರೆಸ್ ಅಧಿವೇಶನದ ಸ್ಥಳ ಪರಿಶೀಲನೆಯಲ್ಲಿ.



ತಾತ್ಕಾಲಿಕ ರೇಲ್ವೆ ನಿಲ್ದಾಣ 'ವಿಜಯ ನಗರ' ಟಿಳಕವಾಡಿ, ಬೆಳಗಾವಿ 1924.



ವಿಜಯನಗರ ಕಾಂಗ್ರೆಸ್ ಬಾವಿ ಮುಂಭಾಗದಲ್ಲಿ ಮತ್ತು ದಿನ್ನೆ.
(ಕಾಂಗ್ರೆಸ್ ಅಧಿವೇಶನಕ್ಕೆ ಇಲ್ಲಿಂದಲೇ ನೀರಿನ ಪೂರೈಕೆ ಮಾಡಲಾಗಿತ್ತು).



ಕಾಂಗ್ರೆಸ್ ಅಧಿವೇಶನ ಸ್ಥಳದ ಮಹಾದ್ವಾರದ ಗೋಪುರ. ವಿಜಯ ನಗರ, ಬೆಳಗಾವಿ.



ಗಾಂಧೀಜಿ ವಿಜಯ ನಗರ ರೇಲ್ವೆ ಸ್ಟೇಶನ್‌ನಿಂದ ಅಧಿವೇಶನದಲ್ಲಿ ಭಾಗವಹಿಸಲು ಬಂದಾಗ (ಜೀಪ್ ನಡೆಸುತ್ತಿರುವವರು ಜೀವಣರಾವ್ ಯಾಳಗಿ).



ಗಾಂಧೀಜಿ ಮತ್ತು ಮಹಮ್ಮದ ಅಲಿ
(ಗಾಂಧೀಜಿಯವರನ್ನು ಅಧ್ಯಕ್ಷಸ್ಥಾನ ಸ್ವೀಕಾರ ಮಾಡಲು ಕರೆದೊಯ್ಯುವಾಗ).


ಗಾಂಧೀಜಿ, ಅಧಿವೇಶನಕ್ಕೆ ಶ್ರೀಮತಿ ಲಿಯಾಕತ್ ಅಲಿ ಅವರೊಂದಿಗೆ ಹೋಗುತ್ತಿರುವಾಗ.


ಗಾಂಧೀಜಿ ಸಭಾ ಮಂಟಪಕ್ಕೆ ಹೋಗುತ್ತಿರುವುದು.



ಗಾಂಧೀಜಿ, ಮಹಮ್ಮದ ಅಲಿ ಅವರಿಂದ ಅಧ್ಯಕ್ಷ ಪದವಿ ಪಡೆಯುವುದು.



ಗಾಂಧೀಜಿಯವರು ಅಧ್ಯಕ್ಷ ಪದವಿ ಸ್ವೀಕರಿಸಿದ ನಂತರ ಸದಸ್ಯರನ್ನು ಸಂಭೋಧಿಸುತ್ತಿದ್ದಾರೆ.



ಗಾಂಧೀಜಿ ಮತ್ತು ಆರು ವರ್ಷದ ಇಂದಿರಾ ಗಾಂಧಿ.



ಸುಭಾಷಚಂದ್ರ ಬೋಸ ಸ್ಟೇಶನ್‌ಗೆ ಬರುತ್ತಿರುವಾಗ.



ಗಾಂಧೀಜಿ, ಅಧಿವೇಶನ ಸ್ಥಳದ ಮುಂಭಾಗದಲ್ಲಿ.



ಗಾಂಧೀಜಿ, ಸಂಜೆ ವಾಕಿಂಗ್ ಹೋದಾಗ.



ಗಾಂಧೀಜಿಯವರನ್ನು ಗಂಗಾಧರರಾವ್ ದೇಶಪಾಂಡೆ ಬೀಳ್ಕೊಡುತ್ತಿದ್ದಾರೆ.



ತಮ್ಮ ತಾಯಿಯ ತಂದೆ ವಾಮನರಾವ್ ಬಿದರಿ ಅವರ ಸ್ವಗ್ರಾಮ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಬಿದರಿ ಗ್ರಾಮಕ್ಕೆ ಮನೋಜ್ ಪಾಟೀಲ ಅವರು ದಿನಾಂಕ 25.01.2012 ರಂದು ಭೇಟಿ ನೀಡಿದಾಗ ಅವರ ಸನ್ಮಾನಾರ್ಥ ನಡೆದ ಸಮಾರಂಭ. (ಎಡದಿಂದ ಬಲಕ್ಕೆ) ಹಿಂದಿನ ಶಾಸಕ ಬಾಬುರಡ್ಡಿ ತುಂಗಳ, ಬಿದರಿ ಕುಮಾರೇಶ್ವರ ಮಠದ ಪೂಜ್ಯ ಶ್ರೀ ಶಿವಲಿಂಗ ಮಹಾಸ್ವಾಮೀಜಿಗಳು, ಮನೋಜ್ ಪಾಟೀಲ (ಮಾತನಾಡುತ್ತಿದ್ದಾರೆ) ಸಾಹಿತಿ, ಇಂಗ್ಲೀಷ ಪ್ರಾಧ್ಯಾಪಕಿ ಶ್ರೀಮತಿ ಸರೋಜಾ ಆರ್. ಕುಲಕರ್ಣಿ (ಶ್ರೀ ಮನೋಜ್ ಅವರ ತಂಗಿ)

ಸ್ವರಾಜ್ಯ ಪಡೆಯೋಣ ಎಂಬುದರಲ್ಲೇ ನನ್ನ ನಂಬುಗೆ. ಸ್ವರಾಜ್ಯ ಪಡೆಯುವುದಕ್ಕೆ ನೂಲುವುದೊಂದೇ ಮಾರ್ಗವಲ್ಲ. ಈಗಿನ ಸಾಮ್ರಾಜ್ಯಶಾಹೀ, ಅಧಿಕಾರಶಾಹಿಯನ್ನು ದಮನಕಾರೀ ಭಾರತ ಸರಕಾರವನ್ನು ಕಿತ್ತೆಸೆಯಲು ಪ್ರತಿಯೊಬ್ಬನೂ ಗೌರವಯುತ, ಧೀರೋದಾತ್ತ ಹಾಗೂ ಸೂಕ್ತ ಮಾರ್ಗ ಅನುಸರಿಸಲು ಯೋಜಿಸಿ ಮುಂದಾಗಬೇಕು. ಸವಿನಯ ಕಾಯ್ದೆ ಭಂಗ, ಅಸಹಕಾರ ಆಂದೋಲನದಂಥ ಕ್ರಮಗಳನ್ನು ಯೋಜಿಸಿ ಅಂಥ ಆಂದೋಲನಕ್ಕೆ ಬೆಂಬಲಿಸಿ, ನೂಲುತ್ತ ಕೂಡುವುದನ್ನು ಬಿಟ್ಟು ಕಾಯ್ದೆ ಭಂಗ ಆಂದೋಲನವನ್ನೇ ಕೈಗೆತ್ತಿಕೊಳ್ಳುವುದನ್ನು ಗಂಭೀರವಾಗಿ ಯೋಚಿಸಿ.

ಇಲ್ಲಿರುವ ''ಚರಖಾ ಗುರು''(ಮಹಾತ್ಮಾ ಗಾಂಧೀಜಿ)ವಿನಿಂದ ಪಾಠ ಹೇಳಿಸಿಕೊಡಲಿರುವಂಥ, ಅವನ ಪದತಲದಲ್ಲಿ ಕುಳಿತು ಚರಖಾದ ಮೇಲೆ ಕೈನೂಲು ತೆಗೆಯದಿರುವಂಥವರಲ್ಲಿ ದೇಶಾಭಿಮಾನ ಕಿಚ್ಚಿರುವುದಿಲ್ಲವೇನು ? ಸಾಮ್ರಾಜ್ಯಶಾಹಿ ಹಾಗೂ ಅಧಿಕಾರಶಾಹಿ ವಿರುದ್ಧ ನಿಂತು ಹೋರಾಡಲು ಅಂಥವರು ಶಕ್ತರಿರುವುದಿಲ್ಲವೇ ? ಚರಖಾ ತಿರುಗಿಸಿ ಕೈನೂಲು ತೆಗೆದು ಕೈನೂಲಿನ ವಂತಿಗೆ ಸಲ್ಲಿಕೆಯ ನಿಯಮವನ್ನು ಒಪ್ಪಲಾರದ ನಮ್ಮಲ್ಲಿ ಭಿನ್ನಮತೀಯರ ಹೃದಯದಲ್ಲಿ ದೇಶಾಭಿಮಾನದ ಕಿಚ್ಚು ಕಮ್ಮಿಯಿದೆಯೇ ಎಂದು ನಾನವರನ್ನು ಪ್ರಶ್ನಿಸಬಯಸುತ್ತೇನೆ. ಕೈನೂಲು ವಂತಿಗೆ ಸಲ್ಲಿಕೆ, ದೈಹಿಕ ಶ್ರಮಕ್ಕೆ ಪರ್ಯಾಯವೆಂದು ಅದನ್ನು ಗ್ರಹಿಸುವುದೇಕೆ ? ಆತ್ಮ ವಂಚನೆಯೇಕೆ ? ನಾನು ಇಂಥ ಮತಾಂಧತೆಯನ್ನು ನಾಶಗೊಳಿಸಬಯಸುತ್ತೇನೆ. ನಾನು ಜನ್ಮತಃ ಎಲ್ಲ ಬಗೆಯ ಮತಾಂಧತೆಗಳ ವಿಚಾರಾಂಧತೆ, ಅಂಧ ನಿಷ್ಠೆಗಳ ವಿರೋಧಿ. ಆಧುನಿಕ ಯುಗದ ಅಗತ್ಯತೆ ಸ್ವಾತಂತ್ರ್ಯ, ಸಮಾನತೆ, ಹಾಗೂ ಪ್ರಜಾಸತ್ತೆ ಇವುಗಳ ಸುರಕ್ಷತೆಗೆ, ಇವುಗಳೊಂದಿಗೆ ಸುರಕ್ಷಿತವಾಗಿ ಮುನ್ನಡೆಯುವುದಕ್ಕಾಗಿ ದೈಹಿಕ ಪರಿಶ್ರಮದ ಅಗತ್ಯತೆಗೆ ಪರ್ಯಾಯವಾಗಿ ಹೇಳಲಾದ ಚರಖಾ ತಿರುಗಿಸುತ್ತ ಕೂಡುವುದಕ್ಕೂ ಅಂಟಿಕೊಳ್ಳುವುದನ್ನು ಪ್ರತಿಭಟಿಸಿ ಇಲ್ಲವಾಗಿಸಬೇಕು.

ಈ ರಾಜೀ ಒಡಂಬಡಿಕೆ ಗೊತ್ತುವಳಿಯಡಿ ಒಂದಾಗುವ ನಾವೆಲ್ಲ ಕ್ರೂರ ಹಾಗೂ ಅಧಿಕಾರಶಾಹೀ ದಬ್ಬಾಳಿಕೆಯನ್ನು ಯಶಸ್ವಿಯಾಗಿ ಎದುರಿಸಬಲ್ಲೆವು ಎಂದು ಗೊತ್ತುವಳಿಯ ಸೂಚಕ ದೇಶಬಂಧು ಚಿತ್ತರಂಜನದಾಸ ಹೇಳುತ್ತಾರೆ. ಆದರೆ ಬಂಗಾಲ ಪ್ರಾಂತದ ಹಾಗೂ ಭಾರತ ಸರಕಾರದಿಂದ ಈ ಸುಗ್ರಿವಾಜ್ಞೆ ಘೋಷಿತವಾಗುವುದಕ್ಕಿಂತ ಮೊದಲು ಸ್ವರಾಜ್ಯ ಪಕ್ಷದೊಂದಿಗೆ ನಾವು ಒಂದಾಗಿದ್ದೆವು. ಭಾರತದಲ್ಲಿರುವ ಅತ್ಯಂತ ಕೆಳದರ್ಜೆಯ ನೌಕರ ಅಧಿಕಾರಿಯಿಂದ ಹಿಡಿದು ಉನ್ನತ ಮಟ್ಟದ ಅಧಿಕಾರಿಗಳ ತನಕ ಎಲ್ಲ ಸ್ವರಾಜ್ಯ ವಿರೋಧಿ ಅಧಿಕಾರಶಾಹೀ ದಬ್ಬಾಳಿಕೆ ವಿರುದ್ಧ ನಾವು ಯಾವುದೇ ರಾಜಕೀಯ ಪಕ್ಷ ಹಾಗೂ ಚಿಂತನೆ ವಿಚಾರಕ್ಕೆ ಒಳ ಪಟ್ಟವರೇ ಆದರೂ ಏಕ ಮುಖಿಯಾಗಿ ಒಗ್ಗಟ್ಟಿನಿಂದ ಹೋರಾಡುತ್ತ ಒಂದೇ

ಇದ್ದೇವೆ. ನಾವು ಅಂದಮಾನಕ್ಕೆ ಸಹ ಹೋಗಿ ಶಿಕ್ಷೆ ಅನುಭವಿಸಲು ಸಿದ್ಧ. ಬಲಿದಾನಕ್ಕೆ ನಮ್ಮ ರುಂಡಗಳನ್ನು ಉರುಳಿಸಿಕೊಳ್ಳಲು ನೇಣುಗಂಬವೇರಲು ನಾವು ಸದಾಸಿದ್ಧರಾಗಿಯೇ ಇದ್ದೇವೆ ಎಂದು ದಾಸರಿಗೆ ನಾನು ಭರವಸೆ ನೀಡಬಯಸುತ್ತೇನೆ. ಭಾರತದ ಸಂಪೂರ್ಣ ಸ್ವರಾಜ್ಯಕ್ಕಾಗಿ ನಾವು ಬಲಿದಾನಕ್ಕೆ ಸಿದ್ಧರಾಗಿಯೇ ಇದ್ದೇವೆ ಎಂದು ಮತ್ತೊಮ್ಮೆ ಘೋಷಿಸಬಯಸುತ್ತೇನೆ.

ಆಗ ಅಧ್ಯಕ್ಷ ಗಾಂಧೀಜಿಯವರು ''ನಾನಿನ್ನೂ ಹೆಚ್ಚಿಗೆ ನಿಮ್ಮ ಅಂದರೆ ಜನತೆಯ ತಾಳ್ಮೆಯನ್ನು ಕೆದಕ ಬಯಸುವುದಿಲ್ಲ. ಇನ್ನೂ ಇಬ್ಬರು ಮಾತಾಡುವವರಿದ್ದಾರೆ. ಅವರಿಗೆ ಗೊತ್ತುವಳಿ ವಿರುದ್ಧ ಮಾತಾಡಬೇಕೆನ್ನುವವರಿಗೆ ಅವಕಾಶ ನೀಡಲೇಬೇಕು. ಗೊತ್ತುವಳಿಗೆ ವಿರೋಧವಾಗಿ ಮಾತಾಡಲು ಇನ್ನೊಬ್ಬರನ್ನು ಕರೆಯುವೆ. ಅವರ ನಂತರ ಗೊತ್ತುವಳಿಯನ್ನು ಸಮರ್ಥಿಸಿ ಟೀಕೆಗಳಿಗೆ ಉತ್ತರವೀಯಲು ಹಾಗೂ ಚರ್ಚೆಯನ್ನು ಸಮಾರೋಪಗೊಳಿಸಲು ಪಂ. ಮೋತಿಲಾಲ ನೆಹ್ರು ಅವರನ್ನು ಆಮಂತ್ರಿಸುವೆ ಎಂದು ನುಡಿದರು. ಗೊತ್ತುವಳಿ ವಿರೋಧಿಸಿ ಮಾತಾಡಲು ನಾನೀಗ ಕಾನಪುರದ ಸರದಾರ ಅಲಿ ಸೋಬ್ರಿ ಅವರನ್ನು ಕರೆಯುತ್ತೇನೆ. ಅವರು ಇಲ್ಲಿ ಇರುವರೋ ? ಎಂದು ಪ್ರಶ್ನಿಸಲಾಗಿ ಅವರು ಈಗ ಇಲ್ಲಿಲ್ಲವೆಂಬ ಉತ್ತರ ಕೇಳಿ ಬಂತು. ಈಗ ಪಂ. ಮೋತಿಲಾಲ ನೆಹ್ರು ಚರ್ಚೆಯನ್ನು ಸಮಾರೋಪಗೊಳಿಸಲಿ ಎಂದು ಅಧ್ಯಕ್ಷರು ಆದೇಶಿಸಿದರು.

ಮೋತಿಲಾಲರು ಮಾತಾಡಲು ಎದ್ದು ನಿಂತಂತೆಯೇ ಹಿಂದೀಯಲ್ಲಿ ಇಂಗ್ಲೀಷಿನಲ್ಲಿ ಎಂಬ ಬೇಡಿಕೆಗಳು ಬಂದವು. ಆಗ ಅವರು ನಾನು ಎರಡರಲ್ಲೂ ಮಾತಾಡುತ್ತೇನೆ ಎಂದು ಸಮಾಧಾನ ಪಡಿಸಿ ಹಿಂದುಸ್ತಾನಿಯಲ್ಲಿ ಭಾಷಣ ಆರಂಭಿಸಿದರು.

''ದೇಶಬಂಧು ಚಿತ್ತರಂಜನದಾಸರು ಗೊತ್ತುವಳಿಯನ್ನು ಮಂಡಿಸಿದವರು. ಮಹಾತ್ಮಾ ಗಾಂಧೀಜಿಯವರು ಅಧ್ಯಕ್ಷೀಯ ಭಾಷಣದಲ್ಲಿ ಗೊತ್ತುವಳಿಯನ್ನು ಕುರಿತು ಮೊದಲೇ ಹೇಳಿ ಬಿಟ್ಟಿದ್ದಾರೆ. ಗೊತ್ತುವಳಿಗೆ ಅಂಕಿತ ಹಾಕಿರುವ ನಾನೊಬ್ಬನೇ ಮಾತಾಡದೇ ಉಳಿಯುವವನಾಗುವದರಿಂದ ಮಹಾತ್ಮಾಜಿಯವರನ್ನು ನನಗೂ ಕೊಂಚ ಸಮಯ ನೀಡುವಂತೆ ಕೇಳಿಕೊಂಡೆ. ಅವರೂ ನನಗೆ ಸಮಯವನ್ನು ದಯಪಾಲಿಸಿರುವರು ಎಂದು ಪಂ. ಮೋತಿಲಾಲ ನೆಹ್ರು ಅವರು ಹಿಂದುಸ್ತಾನಿಯಲ್ಲಿ ತಮ್ಮ ಸಮಾರೋಪ ಭಾಷಣ ಆರಂಭಿಸಿ ವಿರೋಧಕರಿಂದ ಬಂದಂಥ ಆಕ್ಷೇಪಗಳಿಗೆ ಸಮಾಧಾನ ನೀಡಿದರು.

ಮಹಾತ್ಮಾಜೀಯವರನ್ನು ಸ್ವರಾಜ್ಯ ಪಕ್ಷದವರು ತಮ್ಮ ಜಾಲದಲ್ಲಿ ಸಿಕ್ಕಿಸಿ ವಂಚಿಸಿದ್ದಾರೆಂಬ ಸಂದೇಹ ಕೆಲವರಿಗಿದೆ. ಹಾಗೇನೂ ಆಗಿಲ್ಲ. ನಾವೆಲ್ಲ ಸಂಪೂರ್ಣ ಗೊತ್ತುವಳಿಯ ಪರವಾಗಿ ಸದಾ ಕಾಲ ನಿಂತಿರುತ್ತೇವೆಂಬ ಭರವಸೆ ನೀಡಬಯಸುತ್ತೇನೆ. ಬದಲಾವಣೆ ವಿರೋಧಿ ಗುಂಪಿನಲ್ಲಿಯಂತೆಯೇ ನಮ್ಮಲ್ಲಿಯೂ ಹಲವಾರು ರೀತಿ

ಯೋಚಿಸುವ ಹಲವಾರು ಅಭಿಪ್ರಾಯಗಳ ಜನರಿರುತ್ತಾರೆ. ಮೌಲಾನಾ ಹಜರತ ಮೋಹಾನಿಯವರು ಎಷ್ಟೊಂದು ಉತ್ಸಾಹದಿಂದ ಗೊತ್ತುವಳಿಯನ್ನು ವಿರೋಧಿಸಿ ಮಾತಾಡುತ್ತಾರೋ ಅಷ್ಟೇ ಉತ್ಸಾಹದಿಂದ ಬದಲಾವಣೆ ವಿರೋಧಿ ಗುಂಪಿನವರೂ ಮಾತಾಡುತ್ತಾರೆ. ಹೀಗೆ ಮಾತಾಡಿದ ಮಾತ್ರಕ್ಕೆಯೇ ಗೊತ್ತುವಳಿಗೆ ಕಾರ್ಯ ಸ್ವರೂಪ ನೀಡುವಲ್ಲಿ ಯಾರಾದರೂ ಹಿಂದೆಗೆಯುತ್ತಾರೆಂದು ಭಾವಿಸುವುದು ತೀರ ಸಣ್ಣ ಮನಸ್ಸೆನಿಸುತ್ತದೆಂದರು.

ಕೈನೂಲು ವಂತಿಗೆ ಕಡ್ಡಾಯ ಕೇವಲ ಇಬ್ಬರ ಯೋಜನೆಯೆಂದು ಹಜರತ ಮೋಹಾನಿ ಟೀಕಿಸುತ್ತಾರೆ. ಮಹಾತ್ಮಾ ಗಾಂಧೀಜಿಯ ಒತ್ತಡಕ್ಕೆ ನಾವು ಮಣಿಯಬೇಕಾಗಿದೆ ಎನ್ನುತ್ತಾರೆ. ಒತ್ತಡ ಹೇರಬಾರದೆಂದೇ ಮಹಾತ್ಮಾಜೀಯವರೇ ಬೇಕಾದರೆ ಮತ ನೀಡಿ ಬೇಡವಾದರೆ ನೀಡದಿರಿ ಎಂದು ಸ್ಪಷ್ಟಪಡಿಸಿದ್ದಾರೆ. ಮಹಾತ್ಮಾಜೀಯವರು ಹೇಗೆನ್ನುತ್ತಾರೋ ಹಾಗೆಯೇ ಜನರು ಹೇಳುವುದುಂಟು. ದೇಶಬಂಧು ದಾಸ ಹಾಗೂ ನಾವಿಬ್ಬರೂ ನಮ್ಮ ಸ್ವಂತ ಅಭಿಮತವನ್ನು ಬದಿಗಿರಿಸಿ ಗಾಂಧೀಜಿ ಒತ್ತಡಕ್ಕೆ ಮಣಿದಿದ್ದೇವೆ ಎನ್ನುವವರಿದ್ದಾರೆ. ನನ್ನ ಮೇಲೆ ಮಹಾತ್ಮಾಜೀ ಆ ರೀತಿ ಒತ್ತಡ ತರಲಾರರೆಂದು ನಿಮಗೆಲ್ಲ ಗೊತ್ತಿದೆ. ಬದಲಾವಣೆ ವಿರೋಧಿಗಳಲ್ಲೂ ಗಾಂಧೀಜಿ ಒತ್ತಡಕ್ಕೆ ಮಣಿಯದವರಿದ್ದಾರೆ. ಆದರೆ ಉಭಯ ಪಕ್ಷಗಳಲ್ಲೂ ಗಾಂಧೀಜಿಯ ಬಗ್ಗೆ ಆದರವಿದೆ ಎಂದು ಹೇಳಬಹುದು.

ಅಸಹಕಾರ ಆಂದೋಲನವನ್ನು ಸ್ಥಗಿತಗೊಳಿಸಿರುವುದು ಆಂದೋಲನದ ಹತ್ಯೆಯೇ ಎನಿಸಿದೆಂದು ಮೊಹಾನಿ ಹೇಳುತ್ತಾರೆ. ಅಸಹಕಾರ ಆಂದೋಲನ ಕಾಂಗ್ರೆಸ್ಸಿನ ನಿರ್ಣಯ ವಾಗಿತ್ತು. ಕಾಂಗ್ರೆಸ್ಸಿಗರಾದ ಗಾಂಧೀಜಿಯೇ ಅದರ ಅಂತ್ಯಗೊಳಿಸಬಹುದೇನು ? ಈಗ ಅಸಹಕಾರ ಆಂದೋಲನ ಮುನ್ನಡೆಸುವುದಕ್ಕಿಂತಲೂ ದೇಶದ ರಾಜಕೀಯ ಪರಿಸ್ಥಿತಿಗೆ ಅಧಿಕ ಮಹತ್ವ ಕೊಟ್ಟು ಕ್ರಿಯಾಶೀಲರಾಗಬೇಕಾದುದರಿಂದ ಸದ್ಯಕ್ಕೆ ಅದನ್ನು ಸ್ಥಗಿತಗೊಳಿಸಲಾಗಿದೆಯಷ್ಟೇ. ಇದರಿಂದ ಅಸಹಕಾರ ಆಂದೋಲನವನ್ನು ಪೂರ್ಣ ಕೈಬಿಟ್ಟಂತೆ ಆಗುವುದಿಲ್ಲ. ಅಗತ್ಯ ಬಿದ್ದರೆ ಮತ್ತೆ ಶುರು ಮಾಡಬಹುದಾಗಿದೆ ಎಂದು ತಿಳುವಳಿಕೆ ನೀಡಿದರು.

ಸ್ವರಾಜ್ಯ ಪಕ್ಷದವರಿಗೆ ಗೊತ್ತುವಳಿಯ ವಿಷಯಗಳನ್ನು ಕುರಿತು ಮೊದಲೇ ತಿಳಿಸಿಲ್ಲವೆಂಬುದು ಇನ್ನೊಂದು ಆಕ್ಷೇಪ. ಪಕ್ಷದ ಸದಸ್ಯರಿಗೆ ನೋಟೀಸುಗಳನ್ನು ಕಳಿಸಲಾಗಿತ್ತು. ಪತ್ರಿಕೆ, ಆಕಾಶವಾಣಿಗಳಲ್ಲಿ ಪ್ರಚಾರವನ್ನು ಕೊಡಲಾಗಿತ್ತು. ಹಜರತ ಮೌಲಾನಾ ಮೊಹಾನಿಯವರಿಗೆ ನಾನೇ ಸ್ವತಃ ವಿವರ ನೀಡಿದ್ದೆ. ಆದರೂ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಓಘದಲ್ಲಿ ಹೀಗೆ ಹೇಳುತ್ತಿದ್ದಾರಷ್ಟೇ ಬೇರೇನೂ ಇಲ್ಲ. ಪಕ್ಷದ ಸಾಮಾನ್ಯ ಮಂಡಳದಲ್ಲಿ ಚರ್ಚೆಯಾದಾಗಲೂ ಅನೇಕರು ತಮ್ಮ ಅಭಿಪ್ರಾಯವನ್ನು ಮುಕ್ತ ಮನಸ್ಸಿನಿಂದ

ನೀಡಿದ್ದಾರೆ. ಆದರೆ ಒಮ್ಮೆ ನಿರ್ಣಯವಾದ ಬಳಿಕ ಎಲ್ಲರೂ ಅದರ ಕಾರ್ಯಕ್ರಮಕ್ಕೆ ಬದ್ಧರಾಗಿರಬೇಕೆಂಬುದು ಸ್ವರಾಜ್ಯ ಪಕ್ಷದ ಘಟನೆಯಲ್ಲಿಯೇ ಇದೆ. ಇದರಲ್ಲಿ ಹೊಸದೇನಿಲ್ಲ.


ವಿದೇಶಿ ಬಟ್ಟೆ ಬಹಿಷ್ಕಾರದ ವಿಚಾರವೂ ಹೊಸದಲ್ಲ. ನಾವು ಈ ಕ್ರಿಯೆ ಮೂಲಕ ಬ್ರಿಟಿಶರಿಗೆ 40 ರಿಂದ 50 ಕೋಟಿ ರೂ.ಗಳಷ್ಟು ಮಾತ್ರ ಹಾನಿ ಸೋಸುವಂತೆ ಮಾಡುತ್ತೇವೆ ಯಾದರೂ ಕೈನೂಲು ವಂತಿಗೆಯ ಕ್ರಮದ ಅನುಷ್ಠಾನಕ್ಕೆ ಇನ್ನೊಂದೆಡೆ 15 ಕೋಟಿ ರೂ. ತೊಡಗಿಸಬೇಕಾದುದರಿಂದ ಅಷ್ಟು ಪ್ರಮಾಣದ ವೆಚ್ಚದ ಭಾರ ನಮ್ಮ ಮೇಲೂ ಬೀಳುತ್ತದೆ ಎಂಬುವುದು ಆಂಗ್ಲರಿಗೆ 40-50 ಕೋಟಿ ರೂ. ಹಾನಿಯುಂಟು ಮಾಡುವುದರಿಂದ ಅವರನ್ನು ಬಗ್ಗಿಸಬಲ್ಲೆವೆಂಬ ಊಹೆ ಸರಿಯಲ್ಲವೆಂಬ ವಾದ ನಿಜವೇ. ಆದರೆ ಈ ಕ್ರಮದಿಂದ ದೇಶದ ಸಮಸ್ತ ಜನರಿಗೆ ವಿಶೇಷ ಬಡವರಿಗೆ ಮಧ್ಯಮ ವರ್ಗೀಯರಿಗೆ ತಕ್ಕ ಮಟ್ಟಿಗೆ ಬದುಕಲು ಗಂಜಿಯನ್ನು ಒದಗಿಸುತ್ತೇವೆ. ಅದೇ ಕಾಲಕ್ಕೆ ಎಲ್ಲರನ್ನೂ ಸ್ವರಾಜ್ಯ ಪ್ರಾಪ್ತಿ ಗುರಿಯತ್ತ ಜಾಗೃತಗೊಳಿಸುತ್ತೇವೆಂಬುದು ಸಹ ನಗಣ್ಯವೇನಲ್ಲ. ಹಜರತ ಸುಭಾನಿಯವರೂ ಮೋಹಾನಿಯವರಂತೆಯೇ ವಾದಿಸಿದ್ದಾರೆ. ಅವರಿಗೂ ಸೂಕ್ತ ಸಮಾಧಾನ ಇದರಿಂದ ನೀಡಿದಂತಾಗಿದೆ.

ಗಯಾ ಕಾಂಗ್ರೆಸ್ ಅಧಿವೇಶನದಲ್ಲಿಯೇ ಸ್ವರಾಜ್ಯ ಪಕ್ಷದ ನಾವು ಕಾಂಗ್ರೆಸ್ಸಿನ ನಿರ್ಣಯವನ್ನು ಉಲ್ಲಂಘಿಸಿ ವಿಧಾನ ಮಂಡಳ ಪ್ರವೇಶ ಮಾಡಿದೆವು. ಮಾತೃಸಂಸ್ಥೆ ಕಾಂಗ್ರೆಸ್ಸಿನ ಧೋರಣೆಗೆ ವಿರುದ್ಧವಾಗಿ ಆಗ ನಡೆದುಕೊಂಡ ನಮ್ಮ ರೀತಿ ಶಿಸ್ತು ಉಲ್ಲಂಘನೆಯೇ ಎಂದು ಸ್ವಾಮಿ ಗೋವಿಂದಾನಂದರು ಆಕ್ಷೇಪವೆತ್ತಿ ಈಗ ಮಾತ್ರ ಶಿಸ್ತು ಬದ್ಧತೆ ಮಾತೇಕೆ ಎಂದು ಪ್ರಶ್ನಿಸುತ್ತಾರೆ. ಹಿಂದಿನ ಸಂದರ್ಭಗಳಲ್ಲಿ ವಿಧಾನ ಮಂಡಳ ಪ್ರವೇಶ ವಿಷಯದಲ್ಲಿ ನಾವು ಗಮನಾರ್ಹ ಅಲ್ಪಸಂಖ್ಯಾಕರೆನಿಸಿದ್ದೆವು. ಹೀಗಾಗಿ ನಮ್ಮದೇ ಪಕ್ಷ ರಚಿಸಿಕೊಳ್ಳದೇ ಪರ್ಯಾಯವಿರಲಿಲ್ಲ. ಆದರೂ ನಾನು ಕಾಂಗ್ರೆಸ್ಸಿನಿಂದ ದೂರವಾಗಿರಲಿಲ್ಲ. ಸ್ವತಃ ಗಾಂಧೀಜಿಯವರೇ ನಮ್ಮನ್ನು ಕಾಂಗ್ರೆಸ್ಸಿಗರೆಂದೇ ಹೇಳಿ ನಮ್ಮನ್ನು ಗೌರವಿಸಿದ್ದಾರೆ. ಗಣನೀಯ ಅಲ್ಪಸಂಖ್ಯಾಕ ಗುಂಪು ಯಾವುದೇ ಆದರೂ ಮಾಡುವುದು ಹೀಗೆಯೇ.

ದೇಶಬಂಧು ಚಿತ್ತರಂಜನದಾಸರು ಯಾವಾಗಲೂ ಮಹಾತ್ಮಾ ಗಾಂಧೀಜಿಯವರನ್ನು ಹುಚ್ಚರೆಂದು ನಿಂದಿಸಿರುವದಿಲ್ಲ. ಚರಖಾ ಹಾಗೂ ಖಾದಿ ಬಳಕೆಯಲ್ಲಿ ಅವಿಶ್ವಾಸವನ್ನು ಎಂದೂ ವ್ಯಕ್ತಪಡಿಸಿದವರಲ್ಲ. ಚರಖಾದಲ್ಲಿ ತಮ್ಮ ವಿಶ್ವಾಸವೀಗ ಹೆಚ್ಚಿದೆಂದಿಷ್ಟೇ ಹೇಳಿದ್ದಾರೆ. ಸ್ವರಾಜ್ಯ ಪಕ್ಷ ಹಾಗೂ ಸ್ವರಾಜ್ಯ ಪಕ್ಷೇತರರು, ಬದಲಾವಣೆ ಪರರು. ಬದಲಾವಣೆ ವಿರೋಧಿಗಳು ಈಗ ನಾವೆಲ್ಲರೂ ಒಂದು ಒಗ್ಗಟ್ಟಿನಿಂದ ಕ್ರಿಯಾಶೀಲರಾಗೋಣ ಎಂದು

ಮೋತಿಲಾಲರು ನುಡಿದರು. ನಂತರ ಸಂಜೆ 7.25 ರ ಸುಮಾರಿಗೆ ಮಹಾತ್ಮಾಜಿ ಮಾತಾಡಲು ಎದ್ದು ನಿಂತಾಗ ಮಹಾತ್ಮಾ ಗಾಂಧೀಜಿ ಕೀ ಜೈ ಘೋಷಣೆ ಕೇಳಿ ಬಂದವು. ಗೊತ್ತುವಳಿ ಪರವಾಗಿ ಅನುಮೋದಕರೊಬ್ಬರೇ ಮಾತಾಡಿದಂತಾಗಿದೆಂಬುದು ಹಲವರ ಆಕ್ಷೇಪ. ರಾಜಗೋಪಾಲಾಚಾರಿಯವರೆಗೆ ಮಾತಾಡುವಂತೆ ಹೇಳಬಹುದಿತ್ತು. ಆದರೆ ಪಂಡಿತ ಮೋತಿಲಾಲ ನೆಹ್ರು ಹೇಳಬೇಕಾದುದನ್ನೆಲ್ಲ ಹೇಳಿ ಬಿಟ್ಟಿದ್ದಾರೆ. ಆದ್ದರಿಂದ ರಾಜಗೋಪಾಲಾಚಾರಿಯವರು ಮಾತಾಡಬೇಕಾಗಿಲ್ಲವೆಂದೆನಿಸುತ್ತದೆಂದರು. ಡಾ|| ಎನಿಬೆಸೆಂಟರೂ ಈಗ ಇದ್ದಿದ್ದರೆ ಮಾತಾಡಬಹುದಿತ್ತೆಂದೂ ಗಾಂಧೀಜಿ ಹೇಳಿದರು.

ಗಾಂಧೀಜಿಯವರ ನಂತರ ಹಿಂದೀ, ಇಂಗ್ಲೀಷ ಭಾಷಣಗಳನ್ನು ಶ್ರೀ ಗಂಗಾಧರರಾವ್ ದೇಶಪಾಂಡೆಯವರು ಕನ್ನಡದಲ್ಲಿಳಿಸಿದರು. ನಂತರ ಗೊತ್ತುವಳಿಯನ್ನು ಗಾಂಧೀಜಿ ಮತ್ತೆ ಮಂಡಿಸಿ ಮತಕ್ಕೆ ಹಾಕಿ ಪಾಸಾಯಿತೆಂದು ಘೋಷಿಸಿದರು.



ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ 39ನೇ ಮಹಾಧಿವೇಶನದ ಎರಡನೇ ದಿನದ ಕಲಾಪಗಳು

(ದಿನಾಂಕ 29 ಡಿಸೆಂಬರ್ 1924)

ಕಾಂಗ್ರೆಸ್ ಅಧಿವೇಶನದ ದಿನಾಂಕ 29 ಡಿಸೆಂಬರ 1924 ಕಲಾಪಗಳು ಸರಿಯಾಗಿ ಬೆಳಿಗ್ಗೆ 11 ಗಂಟೆಗೆ ಪ್ರಾರಂಭಿಸಲ್ಪಟ್ಟವು ಮಹಾತ್ಮಾ ಎಂ.ಕೆ. ಗಾಂಧಿಯವರು ಅಧ್ಯಕ್ಷತೆ ವಹಿಸಿದ್ದರು. ಕಲಾಪಗಳು ಸಹಜವಾಗಿ ಅತ್ಯಂತ ಉತ್ಸಾಹದಿಂದ ಆದರೆ ಕ್ರಮ ಬದ್ಧತೆಯಿಂದ ಸಾಗಿದವು. ಹಿಂದಿನ ದಿನದಂತೆಯೇ ಸ್ವಯಂ ಸೇವಕರು ವಂದೇ ಮಾತರಮ್ ರಾಷ್ಟ್ರ ಗೀತೆಯನ್ನು ಹಾಡಿದ ಬಳಿಕ ಗದುಗಿನ ಶ್ರೀ ಹುಯಿಲಗೋಳ ನಾರಾಯಣ ಶರ್ಮಾ ಅವರಿಂದ ರಚಿತವಾದ ''ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು'' ನಾಡ ಗೀತೆಯನ್ನು ಹಾಡಲಾಯಿತು.

ಕರ್ನಾಟಕದ ರಾಷ್ಟ್ರಗೀತೆ

(ಮೋಹನರಾಗ ಝಂಪೆತಾಳ)

ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು
ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು ॥ ಪ ॥
ರಾಜನ್ಯರಿಪು ಪರಶುಧರನ ಜನನಿಯ ನಾಡು
ಆ ಜಲಧಿಯನೆ ಜಿಗಿದ ಹನುಮನುದಿಸಿದ ನಾಡು ।
ಓಜೆಯಿಂ ಮೆರೆದರಸುಗಳ ಸಾಹಸದ ಸೂಡು
ತೇಜವನು ನಮಗೀವ ವೀರವೃಂದದ ಬೀಡು ॥ 1 ॥
ಲೆಕ್ಕಿಗ-ಮಿತಾಕ್ಷರರು ಬೆಳೆದು ಮೆರೆದಿಹ ನಾಡು
ಜಕ್ಕಣನ ಶಿಲ್ಪಕಲೆಯಚ್ಚರಿಯ ಕರುನಾಡು ।
ಚೊಕ್ಕ ಮತಗಳ ಸಾರಿದವರಿಗಿದು ನೆಲೆವೀಡು
ಬೊಕ್ಕಸದ ಕಣಜ ಜಯಸಿರಿಯು ನಲಿಯುವ ನಾಡು ॥ 2 ॥
ಪಾವನೆಯರಾ ಕೃಷ್ಣೆ - ಭೀಮೆಯರ ತಾಯ್ನಾಡು
ಕಾವೇರಿ ಗೋದೆಯರು ಮೈದೊಳೆವ ನಲುನಾಡು ।
ಆವಗಂ ಬಗೆಯ ನಗಿಸುವ ಕಬ್ಬಿಗರ ಹಾಡು
ಕಾವ ಗದುಗಿನ ವೀರ ನಾರಾಯಣನ ಬೀಡು ॥ 3 ॥

- ಹುಯಿಲಗೋಳ ನಾರಾಯಣ ಶರ್ಮಾ, ಗದಗ

ನಂತರ ಕವಿ ಹಾಗೂ ನಾಟಕಕಾರರಾದ ಶ್ರೀ ಬಾಬೂ ಹರೀಂದ್ರನಾಥ ಚಟ್ಟೋಪಾಧ್ಯಾಯರು ಸುಂದರವಾದ ಹಿಂದೀ ಹಾಡೊಂದನ್ನು ಹಾಡಿದರು. ಶ್ರೋತೃಗಳು ಪರಮಾನಂದದಿಂದ ಎಲ್ಲ ಹಾಡುಗಳನ್ನು ಕೇಳಿ ಹಾಡುಗಾರರನ್ನು ಅಭಿನಂದಿಸಿದರು.

ನಂತರ ಅಧ್ಯಕ್ಷರು ಕಲಾಪಗಳನ್ನು ಆರಂಭಿಸಲು ಅಧ್ಯಕ್ಷಪೀಠ ಅಲಂಕರಿಸಿದರು. ಮಹಾತ್ಮಾ ಗಾಂಧೀಜಿಕೀ ಜೈ ಘೋಷಣೆಯಿಂದ ಎಲ್ಲರೂ ಅವರನ್ನು ಸ್ವಾಗತಿಸಿದರು.

11.20 ಕ್ಕೆ ಅಧ್ಯಕ್ಷರು ಶ್ರೀ ಜಿ.ಎಂ. ಭರ್ಗರಿಯವರ ನಿಧನದ ಬಗ್ಗೆ ಶೋಕ ಸೂಚಕ ಗೊತ್ತುವಳಿ ಮಂಡಿಸಿ ದಿವಂಗತರ ಆತ್ಮಕ್ಕೆ ಶಾಂತಿಕೋರಿ ಅವರ ಕುಟುಂಬಕ್ಕೆ ಸಾಂತ್ವನ ಹೇಳಿದರು. ಗೊತ್ತುವಳಿಯನ್ನು ಮತಕ್ಕೆ ಹಾಕುವುದಕ್ಕೆ ಮೊದಲು ಅಧ್ಯಕ್ಷರು ಹೀಗೆ ಭಾಷಣ ಮಾಡುತ್ತ ಕೆಲ ಮಾತುಗಳನ್ನು ಹೇಳಿದರು.

ಮೊದಲಿಗೆ ಶೋಕ ಸೂಚಕ ಗೊತ್ತುವಳಿಯನ್ನು ಪಾಸು ಮಾಡುವಾಗ ನಾವು ಒಬ್ಬ ದಿವಂಗತನ ಹೆಸರು ಮರೆತೆವು ಎಂದು ಬಂಧು ಭಗಿನಿಯರೇ ನನಗೆ ನಾಚಿಕೆಯೆನಿಸುತ್ತಿದೆ. ಇಂದು ನಮ್ಮ ಸಿಂಧ ನಿವಾಸಿ ಸೋದರನೊಬ್ಬ ಅವರ ಹೆಸರನ್ನು ನಮಗೆ ನೆನಪಿಸಿ ಹೇಳಿದ್ದಾನೆ.

ನಮ್ಮ ಗೊತ್ತುವಳಿಯಲ್ಲಿ ದಿವಂಗತ ಶ್ರೀ ಜಿ.ಎಂ. ಭರ್ಗರಿ ಎಂಬವರನ್ನು ನಾವು ತಿಳಿದೂ ತಿಳಿದೂ ಬಿಟ್ಟಿಲ್ಲ. ಕೆಲಸಗಳ ಒತ್ತಡದಲ್ಲಿ ಕೆಲವನ್ನು ನಾನು ಮರೆತು ಹೋಗುತ್ತೇನೆ. ಅದಕ್ಕಾಗಿ ಕ್ಷಮಿಸಿರಿ. ನಾನು ಅವರ ಹೆಸರನ್ನೇನೋ ಬರೆದುಕೊಂಡಿದ್ದೆ. ಅದನ್ನು ನನ್ನ ಭಾಷಣದ ಪ್ರತಿಯಲ್ಲಿ ಬರೆದುಕೊಂಡಿದ್ದೆ. ನನಗೆ ಅದು ಮರೆತು ಹೋಯಿತು.

ಈಗ ಅತ್ಯಂತ ಆದರದಿಂದ ಭರ್ಗರಿಯವರ ಹೆಸರನ್ನು ತೆಗೆದುಕೊಳ್ಳುತ್ತಿದ್ದೇನೆ. ನನ್ನ ಮನಸ್ಸಿನಲ್ಲಿ ಸಹ ಅವರ ಬಗ್ಗೆ ತುಂಬಾ ಆದರ ಭಾವನೆಯಿದೆ. ನನ್ನ ಹೃದಯದಲ್ಲಿ ಅವರ ಬಗ್ಗೆ ತುಂಬಾ ಪ್ರೇಮಾದರಗಳಿವೆ. ಮರೆತು ಹೋದುದರ ಬಗ್ಗೆ ಅವರ ಕುಟುಂಬದವರ ಕ್ಷಮೆ ಕೋರುತ್ತೇನೆ. ಭರ್ಗರಿಯವರು ಒಬ್ಬ ಸಿಂಧೀ ಮುಸ್ಲೀಮರು. ಹಿಂದುಗಳನ್ನವರು ತುಂಬಾ ಪ್ರೇಮದಿಂದ ಕಾಣುತ್ತಿದ್ದರು. ನಾನು ಸಿಂಧ ಪ್ರಾಂತಕ್ಕೆ ಹೋದಾಗಲೆಲ್ಲ ಅಲ್ಲಿಯ ಜನರು ಅವರನ್ನು ನಿಜವಾಗಿಯೂ ಹಿಂದುಸ್ತಾನದ ಪ್ರೇಮದ ಪುತ್ರನೆಂದೇ ಉಲ್ಲೇಖಿಸುತ್ತಿದ್ದರು. ಅವರ ನಿಧನದ ಬಗ್ಗೆ ನಾವೆಲ್ಲ ದುಃಖ ವ್ಯಕ್ತ ಪಡಿಸೋಣ. ಎಲ್ಲರೂ ಒಂದು ನಿಮಿಷ ಎದ್ದು ನಿಂತು ಮೌನ ಪ್ರಾರ್ಥನೆ ಸಲ್ಲಿಸಬೇಕೆಂದು ವಿನಂತಿಸುತ್ತೇನೆ. ಮುಂದೆ ಎಲ್ಲರೂ ಶಾಂತಿಯಿಂದ ಇರಬೇಕು. ನಮಗೆ ಸಕಾಲದಲ್ಲಿ ನಿಗದಿತ ವೇಳೆಯಲ್ಲಿ ಎಲ್ಲ ಕಾರ್ಯ ಕಲಾಪ ನಡೆಸಬೇಕಾಗಿದೆ. ಈ ದಿಶೆಯಲ್ಲಿ ನಾನು ಎಲ್ಲರ ಸಹಾಯ ಸಹಕಾರಗಳನ್ನು ಕೋರುತ್ತೇನೆ. ನಾನು ಮೊದಲ ಗೊತ್ತುವಳಿಯನ್ನು ಓದುತ್ತೇನೆ.

ಇವತ್ತಿನ ಗೊತ್ತುವಳಿಗಳ ಪ್ರತಿಗಳನ್ನು ನಿಮ್ಮ ಮಧ್ಯೆ ಹಂಚಿಲ್ಲ. ಬೆಳಗಾವಿಯಲ್ಲಿ ಮುದ್ರಣಾಲಯವಿಲ್ಲದಿರುವುದರಿಂದ ಸ್ವಾಗತ ಸಮಿತಿಯ ಗೊತ್ತುವಳಿಯ ಮುದ್ರಿತ ಪ್ರತಿಗಳನ್ನು ಹೊಂದಲು ಸಾಧ್ಯವಾಗಿಲ್ಲ. ವಿಷಯ ನಿಯಾಮಕ ಸಮಿತಿ ಎರಡೂ ಮೂರು ದಿನ ಸಭೆ ಸೇರಿ ಗೊತ್ತುವಳಿಗಳನ್ನು ಸಿದ್ಧ ಪಡಿಸುತ್ತದೆ. ಅವುಗಳನ್ನೆಲ್ಲವನ್ನು ಮುದ್ರಣಕ್ಕೆ ಕಳಿಸಿಕೊಡಬೇಕಾಗುತ್ತದೆ. ಆದರೆ ಹಾಗಾಗಿಲ್ಲ. ನಿಮಗೆ ಕೈಯಲ್ಲಿರಿಸಲೇ ಬೇಕಾದಂಥ ಗೊತ್ತುವಳಿಗಳೇನೂ ಅವುಗಳಾಗಿಲ್ಲ. ಅವುಗಳನ್ನು ಇಲ್ಲಿ ಓದಿದುದನ್ನೇ ಕೇಳಿ ನೀವು ಅಂಗೀಕರಿಸುವಂಥವಿವೆ. ಅವುಗಳನ್ನು ನಿಮ್ಮ ಕೈಯಲ್ಲಿರಿಸಲು ಸಾಧ್ಯವಾಗದಿರುವ ಬಗ್ಗೆ ಸ್ವಾಗತ ಸಮಿತಿಯವರನ್ನೂ ಹಾಗೂ ನನ್ನನ್ನು ದಯವಿಟ್ಟು ಕ್ಷಮಿಸಿ. ಆದ್ದರಿಂದ ಓದಿದ ಗೊತ್ತುವಳಿಗಳನ್ನು ಕೇಳಿಯೇ ಅಂಗೀಕರಿಸಿರಿ.

4ನೇ ಠರಾವು

ನಂತರ ಅಧ್ಯಕ್ಷರೇ 4ನೇ ಠರಾವನ್ನು ಹೀಗೆ ಓದಿದರು.

ಶ್ರೀಮತಿ ಸರೋಜಿನಿ ನಾಯಡು ಅವರು ಸಾಗರೋತ್ತರ ಭಾರತೀಯರ ಹಿತರಕ್ಷಣೆಗಾಗಿ ಸಲ್ಲಿಸಿದ ಮಹಾನ್ ಸೇವೆಯನ್ನು ಹಾಗೂ ಅವರಿಗೆ ಅಲ್ಲಿಯ ಸರಕಾರದಿಂದ

ದೊರೆಯಬೇಕಾದ ಸವಲತ್ತುಗಳನ್ನು ಕೊಡಿಸಲು ಪ್ರಯತ್ನಿಸಿದುದನ್ನು ಕಾಂಗ್ರೆಸ್ ಪಕ್ಷ ಪ್ರಶಂಸಿಸುತ್ತದೆ. ಅದೇ ರೀತಿ ಶ್ರೀಮತಿ ನಾಯಡು ಅವರು ಅಲ್ಲಿಯ ಭಾರತೀಯ ನಿವಾಸಿಗಳ ವಿಷಯದಲ್ಲಿ ತಮ್ಮ ಪ್ರಭಾವಿ ಪ್ರತಿಪಾದನೆಯಿಂದ ಐರೋಪ್ಯರ ಸಹಾನುಭೂತಿ ಅನುಕಂಪ ಗಳಿಸಿದುದನ್ನು ಸಹ ಕಾಂಗ್ರೆಸ್ಸು ಮೆಚ್ಚಿಕೊಂಡಿದೆ.

ಕೆನ್ಯಾದಲ್ಲಿಯ ಭಾರತ ನಿವಾಸಿಗಳ ಹಿತರಕ್ಷಣೆಗಾಗಿ ಸರ್ವಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಶ್ರೀ ವಝೆ ಹಾಗೂ ಪಂ. ಬನಾರಸೀದಾಸ ಚತುರ್ವೇದಿಯವರು ಸಲ್ಲಿಸಿದ ಸೇವೆಯನ್ನು ಕಾಂಗ್ರೆಸ್ಸು ಸ್ಮರಿಸಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತದೆ.

ಗೊತ್ತುವಳಿಯ ಹಿಂದೀ ಹಾಗೂ ಕನ್ನಡ ಅನುವಾದಗಳನ್ನು ಪಂ. ಸುಂದರಲಾಲ ಹಾಗೂ ಮುದವೀಡಕರ ಕೃಷ್ಣ ರಾಯರು ಓದಿದರು.

ಶ್ರೀಮತಿ ಸರೋಜಿನಿದೇವಿ ನಾಯಡು ಅವರನ್ನು ಹೊರತು ಪಡಿಸಿ ಎಲ್ಲರೂ ಎದ್ದು ನಿಂತು ಗೊತ್ತುವಳಿಗೆ ಬೆಂಬಲ ಸೂಚಿಸಿದರು. ಗೊತ್ತುವಳಿ ಸರ್ವಾನುಮತದಿಂದ ಪಾಸಾಯಿತು.

5ನೇ ಠರಾವು

ಬ್ರಹ್ಮದೇಶದ ಜನರಿಗೆ ಅಲ್ಲಿ ಅವರ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯ ಬಗ್ಗೆ ಖೇದ ವ್ಯಕ್ತಪಡಿಸಿ ಅವರ ಬಗ್ಗೆ ಸಹಾನೂಭೂತಿ ಸೂಚಿಸುವ ಗೊತ್ತುವಳಿಯನ್ನು ಶ್ರೀ ಎಸ್.ಎ.ಎಸ್. ತಯ್ಯಬಜೀ ಮಂಡಿಸಿದರು.

ಬ್ರಹ್ಮದೇಶದಲ್ಲಿಯ ಭಾರತ ನಿವಾಸಿಗಳು ಜಾತಿ ಪ್ರಾತಿನಿಧ್ಯ ಕೇಳುತ್ತಿರುವುದರ ಬಗ್ಗೆ ಕಾಂಗ್ರೆಸ್ಸು ತನ್ನ ತೀವ್ರ ಅಸಮಾಧಾನ ವ್ಯಕ್ತ ಪಡಿಸುತ್ತದೆ. ಹೀಗೆ ಜಾತಿ ಪ್ರಾತಿನಿಧ್ಯ ಕೇಳುವುದು ಪ್ರತ್ಯೇಕತಾ ಭಾವವನ್ನು ಬೆಳೆಸುವಂಥದ್ದು ತತ್ವಶಃ ತುಂಬಾ ಕೆಟ್ಟ ಪರಿಣಾಮ ಬೀರುವಂಥದು ಎಂದು ಹೇಳುವ ಗೊತ್ತುವಳಿಯನ್ನು ಅವರು ಮಂಡಿಸಿದರು.

ಅದನ್ನು ಸಹ ಪಂಡಿತ ಸುಂದರಲಾಲ ಹಿಂದಿಗೆ ಮುದವೀಡಕರ ಕೃಷ್ಣರಾಯರು ಕನ್ನಡಕ್ಕೆ ಅನುವಾದಿಸಿ ಓದಿದರು.

ನಂತರ ತಯ್ಯಬಜೀ ಗೊತ್ತುವಳಿಯ ಬಗ್ಗೆ ಮಾತಾಡುತ್ತ ''ಮಹಾತ್ಮಾಜೀ, ಬಂಧು ಹಾಗೂ ಭಗಿನಿಯರೇ, ನಿಮ್ಮೆದುರು ಈಗ ಮಂಡಿಸಲಾದ ಗೊತ್ತುವಳಿ ಕಾಂಗ್ರೆಸ್ ಪಕ್ಷದಲ್ಲಿ ಅತ್ಯಂತ ಕಡಿಮೆ ಸಲ ಬರುವಂಥದ್ದು. ಬ್ರಹ್ಮದೇಶವನ್ನು ಹಿಂದುಸ್ತಾನದ ಒಂದು ಪ್ರಾಂತವಾಗಿ ಪರಿಗಣಿಸಲಾಗುತ್ತಿದೆಯಾದ್ದರಿಂದ ಕಾಂಗ್ರೆಸ್ ಪಕ್ಷಕ್ಕೂ ಇದು ಅದರ ಪ್ರಾಂತೀಯ ಘಟಕವೇ ಸೈ. ಹಿಂದುಸ್ತಾನವು ಹೇಗೆ ಆಂಗ್ಲ ಸಾಮ್ರಾಜ್ಯದ ಒಂದು ಘಟಕವೋ ಹಾಗೆಯೇ

ಬ್ರಹ್ಮದೇಶವೂ ಒಂದು ಘಟಕವಾಗಿದೆ. ಆಂಗ್ಲರು ಭಾರತದ ಮೇಲೆ ತಮ್ಮ ಪ್ರಭುತ್ವ ಹೇಗೆ ಸ್ಥಾಪಿಸಿದರೋ ಹಾಗೆಯೇ ಬ್ರಹ್ಮದೇಶದ ಸ್ವಾತಂತ್ರ್ಯವನ್ನು ಸಹ ಹರಣ ಮಾಡಿದ್ದಾರೆ.

ಬ್ರಹ್ಮ ದೇಶವನ್ನು ಕುರಿತು ಬಹಳ ಕಡಿಮೆ ಚರ್ಚೆ ಹಾಗೂ ಠರಾವು ಆಗುತ್ತಿರುವುದಕ್ಕೆ ಅದರ ಬಗ್ಗೆ ಹಿಂದುಸ್ಥಾನದಲ್ಲಿ ತುಂಬಾ ಕಡಿಮೆ ತಿಳುವಳಿಕೆಯಿರುವುದೇ ಕಾರಣವೆನಿಸಿದೆ. ಬ್ರಹ್ಮ ದೇಶದ ಜನರು ಸ್ವಾತಂತ್ರ್ಯಕ್ಕಾಗಿ ನಮ್ಮಂತೆಯೇ ಹೋರಾಟ ನಡೆಸುತ್ತಿರುವದರಿಂದ ನಾವು ಸಹ ಅವರ ಬಗ್ಗೆ ಆಸಕ್ತಿ ಹೊಂದಬೇಕಾದುದು ಕ್ರಮ ಪ್ರಾಪ್ತವೆನಿಸುತ್ತದೆ. ಈಗಾಗಲೇ ನಾನು ಇಂಗ್ಲೀಷನಲ್ಲಿ ಈ ವಿಷಯ ಕುರಿತು ಐದನೆಯ ಗೊತ್ತುವಳಿಯನ್ನು ಓದಿದ್ದೇನೆ. ಬ್ರಹ್ಮ ದೇಶದ ಜನರ ತೊಂದರೆ, ಸಂಕಷ್ಟಗಳಲ್ಲಿ ನಾವೂ ಸಹಾನುಭೂತಿ, ಅನುಕಂಪವನ್ನು ವ್ಯಕ್ತಪಡಿಸಿ ಹೆದರುವುದು ಬೇಡವೆಂದು ಅವರಿಗೆ ಧೈರ್ಯ ಹೇಳಬಯಸುತ್ತೇವೆ. ಅಲ್ಲಿಯ ಕೆಲವರು ಜಾತಿ ಪ್ರಾತಿನಿಧ್ಯ ಕೇಳುತ್ತ ಬೇರೆ ಪ್ರತ್ಯೇಕತಾವಾದದ ನಿಲುಮೆ ತಳೆಯುವುದರ ಬಗ್ಗೆ ಕಾಂಗ್ರೆಸ್ಸಿಗೆ ತೀವ್ರ ಅಸಮಾಧಾನವೆನಿಸಿದೆ. ಪಂಡಿತ ಸುಂದರಲಾಲರು ಹಿಂದೀಯಲ್ಲಿ ಗೊತ್ತುವಳಿಯ ಭಾವವನ್ನು ನಮ್ಮೆದುರು ಈಗಾಗಲೇ ಇರಿಸಿದ್ದಾರೆ. ಬ್ರಹ್ಮ ದೇಶದ ರಾಜಕೀಯ ಇತಿಹಾಸವನ್ನು ಸಂಕ್ಷಿಪ್ತವಾಗಿ ನಿಮ್ಮ ಮುಂದೆ ಸಾದರ ಪಡಿಸಿ ಇನ್ನಷ್ಟು ಸ್ಪಷ್ಟ ಪಡಿಸಬಯಸುತ್ತೇನೆ. 1918 ರಲ್ಲಿ ಮೊಂಟೆಗ್ಯೂ ಸಾಹೇಬರು ಅಧಿಕಾರಕ್ಕೆ ಬರುವವರೆಗೆ ಬ್ರಹ್ಮದೇಶದಲ್ಲಿ ರಾಜಕೀಯ ಯಥಾಸ್ಥಿತಿಯಾಗಿ ಉಳಿದಿತ್ತು. ಜನತೆಗೆ ಯಾವುದೇ ರೀತಿ ಚಿಂತಿಸಬೇಕಾದ ಪ್ರಮೇಯವಿರಲಿಲ್ಲ.

ನಂತರವೇ ಬ್ರಹ್ಮದೇಶದಲ್ಲಿ ಅನೇಕರು ಹೊಸದಾಗಿ ಯೋಚಿಸಲಾರಂಭಿಸಿ ಭಾರತದಲ್ಲಿ ಕಾಂಗ್ರೆಸ್ಸು ಕೇಳುವಂತೆ ನಾವೂ ಸ್ವಾತಂತ್ರ್ಯವನ್ನೇ ಕೇಳಿ ಹೋರಾಡೋಣವೆಂದರು. ಆದರೆ ಅಲ್ಲಿಯ ವಿದೇಶೀಯರ ಸರಕಾರ ಈ ಸಂದರ್ಭದಲ್ಲಿ ಹಲರು ಜನರನ್ನು ತನ್ನ ಪ್ರಭಾವಕ್ಕೆ ಒಳಪಡಿಸಿಕೊಂಡಿತು. ಅವರಿಂದಾಗಿ ಕೆಲವರು ತಾವು ಹಿಂದುಸ್ಥಾನದಿಂದ ಬೇರೆಯಾಗಬಯಸುವುದಾಗಿ ಹೇಳತೊಡಗಿದರು. ಅಲ್ಲಿಯ ಪ್ರಾಂತೀಯ ಕಾಂಗ್ರೆಸ್ ಸಮಿತಿ ಹಾಗೂ ಖಿಲಾಫತ್ ಮುಸ್ಲಿಂಲೀಗಿನವರು ಬ್ರಹ್ಮದೇಶ ಹಿಂದುಸ್ಥಾನದಿಂದ ಬೇರೆಯಾಗುವುದರಲ್ಲಿ ಯಾವದೇ ತರ್ಕಬದ್ಧತೆ ಇಲ್ಲವೆಂದೆನ್ನತೊಡಗಿದರು. ಬ್ರಹ್ಮದೇಶ ಹೀಗೆ ಹಿಂದುಸ್ಥಾನದಿಂದ ಬೇರೆಯಾದರೂ ಒಗ್ಗಟ್ಟಿನಿಂದ ಶಾಂತಿ ಸಮಾಧಾನದಿಂದಿರಲು ಸಾಧ್ಯವಿಲ್ಲ. ಅಥವಾ ಬೇರೆಯಾಗುವುದು ಯೋಗ್ಯವೆನಿಸದೆಂದೇ ನಮ್ಮ ನಿಜವಾದ ಸಲಹೆ. ಒಂದು ವೇಳೆ ಹೀಗೆ ಭಿನ್ನವಾದುದಾದರೆ ಬ್ರಹ್ಮದೇಶವನ್ನು ಆಂಗ್ಲರು ತಮ್ಮ ದಾಸ್ಯದಲ್ಲೇ ಇರಿಸಿ ಮುಂದುವರಿಸುವರು. ಹಿಂದುಸ್ಥಾನದಲ್ಲಿ ಸುಧಾರಣೆಗಳು ಜಾರಿಗೊಂಡರೆ ಬ್ರಹ್ಮದೇಶದಲ್ಲಿಯೂ ಅವುಗಳು ಜಾರಿಯಲ್ಲಿ ತರಲ್ಪಡಲೇಬೇಕು. ಬ್ರಹ್ಮದೇಶದ ಪ್ರಾಂತಿಕ ಸುಧಾರಣೆಗಳು ಜಾರಿಗೊಳ್ಳಬೇಕು. ಆದರೆ

ಹಾಗಾಗಲಿಲ್ಲ. ಹಿಂದುಸ್ಥಾನದಲ್ಲಿ ಆಂಗ್ಲರು ಜಾರಿಗೆ ತಂದ ಅನೇಕ ಸುಧಾರಣೆಗಳು ಒಪ್ಪಿಗೆಯಾಗದಿದ್ದುದಕ್ಕೆ ಅಸಹಕಾರ ಆಂದೋಲನ ಶುರುವಾದಂತೆ ಹಂತ ಹಂತವಾಗಿ ಬ್ರಹ್ಮದೇಶದಲ್ಲೂ ಅಸಹಕಾರ ಆಂದೋಲನ ಆರಂಭವಾಯಿತು. ಆಂಗ್ಲ ಸರಕಾರ ಸುಧಾರಣೆಗಳನ್ನು ತಂದಂತೆಯೇ ಭಾರತದಲ್ಲಿಯಂತೆ ಬ್ರಹ್ಮದೇಶದಲ್ಲಿಯೂ ವಿಧಾನ ಮಂಡಳ ಪ್ರವೇಶದ ಪರ ಹಾಗೂ ವಿರೋಧಿ ಗುಂಪುಗಳಾದವು. ಅಸಹಕಾರ ಆಂದೋಲನವೂ ಸ್ಥಗಿತಗೊಂಡಿತ್ತು. ಹೀಗೆ ಎರಡು ಪಕ್ಷಗಳಲ್ಲಿ ಬ್ರಹ್ಮೀಯರು ಒಡೆದು ಹೋದಾಗ ಹಿಂದೀಯರು ಏನು ಮಾಡಬೇಕು? ಕಾಂಗ್ರೆಸ್ ಹಾಗೂ ಖಿಲಾಫತ್ ಮುಸ್ಲಿಂ ಲೀಗ್ ಅವರಿಗೆ ಬೇಡವಾದ ಸ್ಥಿತಿಯುಂಟಾಗಿತ್ತು. ಜಾತಿ ಪ್ರಾತಿನಿಧ್ಯ ಕೇಳುವುದಾದರೆ ಅಲ್ಲಿರುವ ಹಿಂದೀಯರು ಕೇವಲ ಶೇಕಡಾ 5 ರಷ್ಟು ಒಂದು ವೇಳೆ ನೂರರಲ್ಲಿ ಒಂಭತ್ತು ಹಿಂದೀಯರು ಆಯ್ಕೆಗೊಂಡು ವಿಧಾನ ಮಂಡಳ ಪ್ರವೇಶಿಸಿದರೂ ಬಹುಸಂಖ್ಯಾಕರು ಬ್ರಹ್ಮೀಯರೇ ಇರುವಾಗ ಹಿಂದೀಯರ ಹಿತ ಹೇಗೆ ಸಾಧ್ಯವಾದೀತು ? ವಿಧಾನ ಮಂಡಳಗಳಲ್ಲಿ ಬ್ರಹ್ಮೀಯರು ಹಿಂದಿಯರ ಹಿತವೆನ್ನುತ್ತ ಅವರನ್ನು ಪ್ರತ್ಯೇಕವೆಂದು ಪರಿಗಣಿಸುತ್ತಿದ್ದರು. ಹೀಗಾಗಿ ಹಿಂದುಸ್ಥಾನದಲ್ಲಿಯಂತೆ ಬ್ರಹ್ಮದೇಶದಲ್ಲಿಯೂ ರಾಷ್ಟ್ರೀಯರ ಹಾಗೂ ಜಾತಿವಾದಿಗಳ ಹೀಗೆ ಎರಡು ಗುಂಪುಗಳು ಉಂಟಾಗಲು ಕಾರಣವಾಯಿತು. ನಮಗೆ ಇಂಥ ಪ್ರಾತಿನಿಧ್ಯ ಬೇಡವೆಂದು ನಾವೆನ್ನುತ್ತಿರುವಾಗಲೇ ಸರಕಾರದಿಂದ ಜಾತಿ ಪ್ರಾತಿನಿಧ್ಯ ಜಾರಿಗೆ ತರಲ್ಪಟ್ಟಿತು. ಹಿಂದೀಯರಾದ ನೀವೇ ಈ ಪರಿಸ್ಥಿತಿಗೆ ಕಾರಣವೆಂದು ಅಲ್ಲಿಯ ಸರಕಾರ ದೂಷಿಸುತ್ತಿದೆ. ಕಾಂಗ್ರೆಸ್‌ನವರು ಹಿಂದಿಯರು ಜಾತ್ಯಾತೀತ ಆಧಾರದ ಮೇಲೆ ಕೆಲಸ ಮಾಡ ಬಯಸುತ್ತಾರೆ. ಬರ್ಮಿಯರಿಗೆ ಸಹಾಯ ಮಾಡಬಯಸುತ್ತಾರೆ.

ಸರ್ ಹರ್‌ಕೋರ್ಟ್ ಬಟ್ಲರ್‌ರು ಬ್ರಹ್ಮದೇಶದಲ್ಲಿ ಬಂದು ಅಧಿಕಾರ ಸ್ವೀಕರಿಸಿದಂತೆಯೇ ಪರಿಸ್ಥಿತಿ ದಿನ ದಿನಕ್ಕೆ ಹದಗೆಡುತ್ತ ನಡೆದಿದೆ. ಜನರ ಮೇಲೆ ದಬ್ಬಾಳಿಕೆ ಹೆಚ್ಚುತ್ತಲೇ ಇದೆ. ಬಟ್ಲರ್ ಸರಕಾರ ಒಂದೆಡೆ ಬ್ರಹ್ಮದೇಶದ ಗಣ್ಯಮಾನ್ಯ ನಾಯಕ ಉತ್ತಮ ಅವರನ್ನು ಜೈಲಿಗೆ ದಬ್ಬಿದರೆ ಇನ್ನೊಂದೆಡೆ ವಿಧಾನ ಮಂಡಳದ ಕೆಲ ಸದಸ್ಯರಿಗೆ ಮಂತ್ರಿಸ್ಥಾನವಿತ್ತು ಅವರನ್ನೂ ಒಂದು ರೀತಿಯಲ್ಲಿ ಸರಕಾರಾಧೀನ ಜೈಲಿನಲ್ಲಿರಿಸಿದೆ. (ನಗೆ ಧ್ವನಿ) ಬ್ರಹ್ಮದೇಶದಲ್ಲಿ ಎಲ್ಲವೂ ನಿಂತು ಹೋಗಿದೆ. ಸರಕಾರ ಕೆಲಸವನ್ನೇ ಮಾಡುತ್ತಿಲ್ಲ. ಎಲ್ಲವೂ ತಣ್ಣಗಾಗಿದೆ. ಅಲ್ಲಿಯ ರಾಷ್ಟ್ರೀಯ ಪಕ್ಷ ಕ್ರಿಯಾಶೀಲವಾಗಬಯಸುತ್ತಿದೆ. ನೀವು ಈ ಗೊತ್ತುವಳಿಯನ್ನು ಸಮರ್ಥಿಸಿ ಅವರಿಗೆ ಪ್ರೋತ್ಸಾಹ ನೀಡಿ. ಬ್ರಹ್ಮದೇಶದ ಶ್ರೀ ವ್ಹಿ ಮದನಗೆಲಾತ ಅವರು ಗೊತ್ತುವಳಿಯನ್ನು ಅನುಮೋದಿಸುತ್ತ ಇಂಗ್ಲೀಷನಲ್ಲಿ ವಿವರಗಳನ್ನು ನೀಡಿದರು.

ಬ್ರಹ್ಮದೇಶದಲ್ಲಿಯ ನೈಜ ಸ್ಥಿತಿಯೇನು ಎಂಬುದನ್ನು ಈಗಾಗಲೇ ತಯ್ಯಬಜೀಯವರು ತಮ್ಮ ಹಿಂದುಸ್ಥಾನೀ ಭಾಷೆಯಲ್ಲಿ ವಿವರಿಸಿದ್ದಾರೆ. ಬ್ರಹ್ಮದೇಶದಲ್ಲಿ ಅಸಹಕಾರ ಆಂದೋಲನದ ಪಕ್ಷವೊಂದಿದೆ. ಆ ದೇಶದಲ್ಲಿಯ ಬೇರೆ ಬೇರೆ ಏಳು ಸಾವಿರ ಸಂಘಟನೆಗಳನ್ನು ಒಳಗೊಂಡಿರುವ ಜಿ.ಸಿ.ಬಿ.ಎ ಎಂಬುದೇ ಆ ಪಕ್ಷ. ಬ್ರಹ್ಮದೇಶದ ಸರ್ಕಾರಕ್ಕೆ ಅದು ಸವಾಲಾಗಿ ನಿಂತಿದೆ. ಸರ್ ಹರ್‌ಕೋರ್ಟ್ ಬಟ್ಲರರು ತೀವ್ರ ದಬ್ಬಾಳಿಕೆ ನಡೆಸುತ್ತ ಆ ಪಕ್ಷ ಹತ್ತಿಕ್ಕಲೆತ್ನಿಸುತ್ತಿದ್ದಾರೆ. ಅವರ ದಬ್ಬಾಳಿಕೆ ದಿನದಿನಕ್ಕೆ ಹೆಚ್ಚುತ್ತಲೇ ಇದೆ ಎಂದು ವಿವರಿಸಿದರು.



ಕೋಹತ್ ಹಾಗೂ ಗುಲಬರ್ಗಾ ಗಲಭೆಗಳು

ಏಳನೆಯ ಗೊತ್ತುವಳಿ

ಪಂಡಿತ ಮೋತಿಲಾಲ ನೆಹ್ರು ಅವರು ಕೋಹತ್ ಹಾಗೂ ಗುಲಬರ್ಗಾ ದೊಂಬಿಗಳನ್ನು ಕುರಿತು ಗೊತ್ತುವಳಿಯನ್ನು ಮಂಡಿಸಲು ವ್ಯಾಸಪೀಠದೆಡೆಗೆ ಬರುತ್ತಿದ್ದಂತೆಯೇ ಪ್ರಚಂಡ ಸ್ವಾಗತ ಹಾಗೂ ಜಯಘೋಷಗಳ ಮಧ್ಯೆ ಅವರಿಗೆ ಸ್ವಾಗತ ಕೋರಲಾಯಿತು. ಮಹಾತ್ಮಾಜೀ ಹಾಗೂ ಸ್ನೇಹಿತರೆ ಎಂದವರು ಇಂಗ್ಲೀಷಿನಲ್ಲಿ ಭಾಷಣ ಆರಂಭಿಸುತ್ತಿದ್ದ ಹಾಗೆಯೇ ''ಹಿಂದೀಯಲ್ಲಿ ಹಿಂದೀಯಲ್ಲಿ'' ಎಂದು ''ಇಂಗ್ಲೀಷಿನಲ್ಲಿ ಇಂಗ್ಲೀಷಿನಲ್ಲಿ'' ಎಂಬ ವಿನಂತಿಗಳು ಕೇಳಿ ಬಂದುವು. ಮೊದಲಿಗೆ ಇಂಗ್ಲೀಷಿನಲ್ಲಿ ನಂತರ ಹಿಂದೀಯಲ್ಲಿ ತಾವು ಮಾತನಾಡಲಿರುವುದಾಗಿ ತಿಳಿಸಿ ಅವರು ಶ್ರೋತೃಗಳ ಅನುಮತಿ ಪಡೆದುಕೊಂಡರು. ನಂತರ ಅವರು

''ಗೆಳೆಯರೇ ನನಗೆ ಈ ಮಹಾ ಸಭೆಯಲ್ಲಿ ಮಂಡಿಸಲು ವಹಿಸಿಕೊಡಲಾದ ಗೊತ್ತುವಳಿಯು ಕೋಹತ್ ಹಾಗೂ ಗುಲಬರ್ಗಾಗಳ ದೊಂಬಿಗೆ ಸಂಬಂಧಿಸಿದುದು'' ಎಂದರು.

ಹಿಂದು-ಮುಸ್ಲಿಂ ದ್ವೇಷ ಹಾಗೂ ಭಾರತದ ಬೇರೆ ಬೇರೆ ಭಾಗಗಳಲ್ಲಿ ಸಂಭವಿಸಿದ ದೊಂಬಿಗಳ ಬಗ್ಗೆ ಕಾಂಗ್ರೆಸ್ಸು ತನ್ನ ತೀವ್ರ ವ್ಯಸನವನ್ನು ವ್ಯಕ್ತಪಡಿಸುತ್ತಿದೆ. ಅನೇಕರ ಸಾವು, ಮಂದಿರ ಹಾಗೂ ಗುರುದ್ವಾರಗಳನ್ನೊಳಗೊಂಡಂತೆಯೇ ಅನೇಕ ಆಸ್ತಿ ಪಾಸ್ತಿಗಳ ನಾಶ ಸಂಭವಿಸಿದ ಕೋಹತ್‌ದಲ್ಲಿಯ ಇತ್ತೀಚಿನ ದೊಂಬಿಗಳ ಬಗ್ಗೆ ತೀವ್ರ ವಿಷಾದ ಸೂಚಿಸುತ್ತಿರುವ ಕಾಂಗ್ರೆಸ್ಸು ಅಲ್ಲಿಯ ಅಧಿಕಾರಿಗಳು ಜನತೆಯ ಜೀವ ಹಾಗೂ ಆಸ್ತಿ

ಪಾಸ್ತಿಗಳನ್ನು ರಕ್ಷಿಸುವ ತಮ್ಮ ಪ್ರಾಥಮಿಕ ಕರ್ತವ್ಯಗಳನ್ನೇ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆಂದು ಅಭಿಪ್ರಾಯ ಪಡುತ್ತಿದೆ. ಹಿಂದು ಜನಾಂಗದವರು ತಮಗೆ ಸಂರಕ್ಷಣೆಯೇ ಇಲ್ಲದಂತಾದುದರಿಂದ ಕೋಹತ್ ನಗರವನ್ನೇ ತ್ಯಜಿಸಿ ಬೇರೆಡೆಗೆ ಗುಳೆ ಹೋಗುವಂತಾದುದರ ಬಗ್ಗೆ ತೀವ್ರ ಖೇದವನ್ನು ವ್ಯಕ್ತಪಡಿಸುತ್ತ ಕೋಹತದ ಮುಸಲ್ಮಾನರು ತಮ್ಮ ಹಿಂದು ಬಾಂಧವರ ವಿತ್ತ-ಜೀವಿತಗಳ ರಕ್ಷಣೆಗೆ ಸಂಪೂರ್ಣ ಭರವಸೆ ಘೋಷಿಸಿ ಕೋಹತ್ ನಗರಕ್ಕೆ ಮರಳುವಂತೆ ಅವರನ್ನು ಕೇಳಿಕೊಳ್ಳಬೇಕೆಂದು ಕಾಂಗ್ರೆಸ್ ಪಕ್ಷವು ಬಿನ್ನವಿಸುತ್ತದೆ. ಕೋಹತದ ಮುಸಲ್ಮಾನರಿಂದ ಈ ರೀತಿಯ ಗೌರವಯುತವಾದ ಆಮಂತ್ರಣ ಬಂದ ಬಳಿಕ ಹಾಗೂ ಹಿಂದು-ಮುಸ್ಲಿಂ ನೇತಾರರ, ಸಲಹೆಯಂತೆಯೇ ಹಿಂದುಗಳು ನಡೆದುಕೊಳ್ಳಬೇಕು ಎಂದು ಕಾಂಗ್ರೆಸ್ ಪಕ್ಷವು ವ್ಯಕ್ತಪಡಿಸುತ್ತಿದೆ. ಹಿಂದುಗಳೇ ಆಗಲಿ, ಮುಸಲ್ಮಾನರೇ ಆಗಲಿ ಯಾರೂ ಈ ದೊಂಬಿಗಳನ್ನು ಕುರಿತಂತೆ ಭಾರತ ಸರಕಾರದ ಅಥವಾ ಬೇರೆಯವರ ನಿರ್ಣಯಗಳನ್ನು ಅಂಗೀಕರಿಸಕೂಡದು. ಕೋಹತ್ ದುರಂತದ ಸಂಬಂಧದಲ್ಲಿ ಐಕ್ಯ ಪರಿಷತ್‌ದಿಂದ ನೇಮಕಗೊಂಡಿರುವ ಮಂಡಳಿಯು ತನ್ನ ವರದಿ ನೀಡುವ ತನಕ ಅಥವಾ ಅದರಂತೆಯೇ ಪ್ರಾತಿನಿಧಿಕ ಸ್ವರೂಪದ ಬೇರೆ ಸಮಿತಿಯು ದುರದೃಷ್ಟಕರ ಘಟನೆಯ ಸಂಬಂಧವಾಗಿ ವಿಚಾರಣೆ ನಡೆಸಿ ವರದಿ ನೀಡುವವರೆಗೆ ಜನರು ಯಾವುದೇ ನಿರ್ಣಯಕ್ಕೆ ಬರುವುದನ್ನು ಸ್ಥಗಿತವಾಗಿಟ್ಟು ನಂತರವೇ ಯಾವುದೊಂದು ಸೂಕ್ತ ನಿರ್ಧಾರಕ್ಕೆ ಬರಬಹುದೆಂದು ಸೂಚಿಸಲಾಗುತ್ತಿದೆ.

ಗುಲಬರ್ಗಾದ ದೊಂಬಿಗಳಲ್ಲಿ ಹಾನಿಗೀಡಾದವರಿಗೂ ಕಾಂಗ್ರೆಸ್ಸು ತನ್ನ ಹೃತ್ಪೂರ್ವಕ ಸಾಂತ್ವನ, ಸಹಾನುಭೂತಿಗಳನ್ನು ನಿವೇದಿಸುತ್ತದೆ. ನಗರದಲ್ಲಿಯ ಪೂಜಾಸ್ಥಳಗಳನ್ನು ಅಪವಿತ್ರಗೊಳಿಸಿದುದನ್ನು ಖಂಡಿಸುತ್ತದೆ.

ಗೊತ್ತುವಳಿಯ ಕನ್ನಡಾನುವಾದವನ್ನು ಶ್ರೀ ಮುದವೀಡಕರ ಕೃಷ್ಣರಾಯರು ಹಾಗೂ ಹಿಂದೀ ಅನುವಾದವನ್ನು ಬೇರೊಬ್ಬರು ಓದಿ ಸಾದರಪಡಿಸಿದರು.

ನಂತರ ಗೊತ್ತುವಳಿ ಸೂಚಕ ಪಂ. ಮೋತಿಲಾಲರು ತಮ್ಮ ಭಾಷಣವನ್ನು ಮುಂದುವರಿಸುತ್ತ ಗೆಳೆಯರೇ ಈಗಿನ ಗೊತ್ತುವಳಿಯಲ್ಲಿ ಪ್ರಸ್ತಾಪಿತವಾದ ದುರಂತಗಳಲ್ಲಿಯ ಸತ್ಯ ಸಂಗತಿಗಳ ವಿಶೇಷ ಪರಿಜ್ಞಾನ ನನಗಿದೆ ಎಂದು ನಾನೇನೂ ಹೇಳಲಾರೆ. ಆದರೂ ಗೊತ್ತುವಳಿಯನ್ನು ನಾನೇ ಮಂಡಿಸಿರುವೆನಾದ್ದರಿಂದ ಅದನ್ನು ನೀವೆಲ್ಲ ಒಪ್ಪಿಕೊಳ್ಳಬೇಕೆಂದು ಪ್ರತಿಪಾದಿಸಲು ನಾನು ನಿಮ್ಮ ಮುಂದೆ ನಿಂತಿದ್ದೇನೆ. ಸಂದೇಹಾಸ್ಪದವಾದುದೇನೂ ಇರಕೂಡದು. ಹಾಗೂ ಅದೇ ಕಾಲಕ್ಕೆ ವಿವಾದಾತೀತ ಇರಬೇಕೆಂಬ ತತ್ವಗಳನ್ನು ಈ ಗೊತ್ತುವಳಿ ಒಳಗೊಂಡಿರುತ್ತದೆ. ಅನೇಕ ವರ್ಷಗಳಿಂದ ಭಾರತದಲ್ಲಿಯ ಯಾವುದೇ ಭಾಗದಲ್ಲಿ ಎಂದೂ ಸಂಭವಿಸದಿರುವಂಥ ಘಟನೆ ಕೋಹತದಲ್ಲಿ ನಡೆದುದು ಎಂಬುದು

ಮೊದಲ ಸತ್ಯ ಸಂಗತಿ. ನನ್ನ ಇಲ್ಲಿಯವರೆಗಿನ ಜೀವಮಾನದಲ್ಲಿ ಅಂದರೆ ಅದೇನೂ ಚಿಕ್ಕ ಅವಧಿಯಲ್ಲವೆನ್ನುವಂಥ ಜೀವಮಾನದ ದಿನಗಳಲ್ಲಿ ಕೋಹತದಲ್ಲಿ ನಡೆದುಹೋದಂಥದ್ದೊಂದು ಬೇರೆ ಎಲ್ಲಿಯೂ ಸಂಭವಿಸಿದುದು ನನಗೆ ನೆನಪಿಲ್ಲ. ಕೋಹತ ನಗರದಲ್ಲಿ ತೀರಾ ಕಡಿಮೆ ಪ್ರಮಾಣದಲ್ಲಿರುವ ಅಲ್ಪಸಂಖ್ಯಾಕ ಸಮುದಾಯ ಹಿಂದುಗಳಿಗೆ ಭಾರೀ ಆಸ್ತಿ ಪಾಸ್ತಿ ಹಾನಿ, ಜೀವ ಹಾನಿ ಅನುಭವಿಸಬೇಕಾಗಿದೆಂಬುದು ಖಚಿತ, ಸಂಶಯಾತೀತ. ವಿಶೇಷ ನ್ಯಾಯಾಧೀಶ ದರ್ಜೆ ಅಧಿಕಾರಿಯೊಬ್ಬರು ಸಾರ್ವಜನಿಕರೆಲ್ಲರನ್ನು ಸಂಪೂರ್ಣ ವಿಶ್ವಾಸಕ್ಕೆ ತೆಗೆದುಕೊಳ್ಳದೇ ತಮ್ಮೆದುರಿಗೆ ಬಂದ ಅಥವಾ ಲಭ್ಯವಾದ ಅಪೂರ್ಣ ಸಾಕ್ಷ್ಯ ಪುರಾವೆಗಳನ್ನೇ ಆಧರಿಸಿ ವಿಚಾರಣೆ ನಡೆಸಿ ವರದಿ ಸಲ್ಲಿಸಿದುದರಿಂದ ಅವರ ವರದಿ ಅಪೂರ್ಣ ಹಾಗೂ ಅಂಶಿಕವೆಂಬುದು ಸಹ ಸ್ಪಷ್ಟ ಹಾಗೂ ಸಂದೇಹಾತೀತವೆನಿಸುವುದು ಎಂಬುದು ಸಹ ಸತ್ಯವಾಗಿದೆ.

ಇಲ್ಲಿ ಎರಡೂ ಸತ್ಯಗಳು ಸ್ಪಷ್ಟವಾಗಿ ಎದ್ದು ಕಾಣಿಸುತ್ತಿವೆ. ಹಿಂದೂ ಹಾಗೂ ಮಹಮ್ಮದೀಯ ಎರಡೂ ಜನಾಂಗಗಳವರು ಶಾಂತಿ ಸಮಾಧಾನದಿಂದ ಬಾಳಲು ಪರಸ್ಪರ ಅವಲಂಬಿತರು. ಹಾಗೂ ಪರಸ್ಪರ ಸಹಕರಿಸುವುದರಿಂದಲೇ ಸಾಧ್ಯವೆಂಬುದು ಮೂಲತತ್ವ, ಕಾನೂನು ಬಲವಾದ ಪೊಲೀಸ್ ರಕ್ಷಣೆ ಅಥವಾ ಸೈನಿಕ ರಕ್ಷಣೆ ಸಹ ಎರಡೂ ಜನಾಂಗಗಳಿಗೆ ರಕ್ಷಣೆ ಒದಗಿಸಲಾರವು. ಎರಡೂ ಜನಾಂಗಗಳವರು ಪರಸ್ಪರರ ರಕ್ಷಣೆಯ ಹೊಣೆ ಹೊತ್ತುಕೊಂಡರೇನೆಯೇ ಸುರಕ್ಷಿತರಾಗುವರು (ಕೇಳಿರಿ, ಕೇಳಿರಿ ಎಂಬ ಧ್ವನಿ)

ಏನು ನಡೆದಿದೆಂಬುದು ನಿಮಗೆ ತಿಳಿದೇ ಇದೆ. ಭಾರತದ ಉತ್ತರದ ತುತ್ತತುದಿಯ ಭಾಗದಲ್ಲಿಯದೊಂದು ಎಂದರೆ ಕೋಹತದಲ್ಲಿನ ದೊಂಬಿ. ಇನ್ನೊಂದು ಬಂಗಾಲದಲ್ಲಿಯದು. ಹೀಗೆ ಎರಡು ಘಟನೆಗಳು ನಡೆದಿವೆ. ಬಂಗಾಲದಲ್ಲಿ ಸುಗ್ರೀವಾಜ್ಞೆಯಿಂದ ಉಂಟಾದ ದುರಂತವೊಂದಾದರೆ ಹಿಂದು ಮುಸಲ್ಮಾನ ಸಂಘರ್ಷ ಎರಡನೆಯ ದುರಂತ. ಸರಕಾರ ಯಾವಾಗಲೂ ಜನತೆಯ ವಿತ್ತ ಜೀವಿತಗಳ ರಕ್ಷಕ ತಾನೆಂದು ಜಂಭ ಕೊಚ್ಚಿಕೊಳ್ಳುತ್ತದೆ. ಸರಕಾರ ತನ್ನ ಕರ್ತವ್ಯ ನಿರ್ವಹಿಸಲೇಬೇಕೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ಸರಕಾರ ತಾನೇನು ಮಾಡಬೇಕು ಏನು ಮಾಡಕೂಡದು ಎಂಬುದನ್ನು ನಿರ್ಧರಿಸಿದಂತಿದೆ. ಬಂಗಾಲದಲ್ಲಿ ಸರಕಾರ ಅರಾಜಕತೆಯುಂಟು ಮಾಡುವಂಥ ಕೆಲ ಗುಂಪುಗಳ ಬಗ್ಗೆ ಹೆದರಿದೆ. ಆದರೆ ಈ ವಿಷಯದಲ್ಲಿ ಸರಕಾರ ಏನನ್ನೂ ಮಾಡಿಲ್ಲ. ವಿಚಾರಣೆಯನ್ನು ನಡೆಸಿಲ್ಲ. ತನಿಖೆಯನ್ನೂ ನಡೆಸಿಲ್ಲ. ಅಲ್ಲಿ ಇಲ್ಲಿ ಯಾವುದೇ ರೀತಿ ಸಂಬಂಧಪಡದ ಕೆಲ ವ್ಯಕ್ತಿಗಳನ್ನು ಬಂಧಿಸಿ ಜೈಲಿಗಟ್ಟಿ ತನ್ನ ಕರ್ತವ್ಯವಾಯಿತೆಂದು ತೆಪ್ಪಗೆ ಕುಳಿತಿದೆ. ಅಷ್ಟರಲ್ಲೇ ಹೃದಯ ಬಿರಿಯುವ ಮತೀಯ ದೊಂಬಿ ದುರಂತ ನಡೆದು ಹೋಗಿದೆ. ದೊಂಬಿಯ ಸ್ಥಳಕ್ಕೆ ಪ್ರತ್ಯಕ್ಷ ಭೇಟಿ ನೀಡಿದ ಪತ್ರಕರ್ತನೊಬ್ಬನು ಸಾಲಿಗೆ ಸಾಲೇ ಮನೆಗಳಿಗೆ

ಬೆಂಕಿಯಿಟ್ಟು ನಾಶ ಪಡಿಸಿದ್ದನ್ನು ತಾನು ನೋಡಿದ್ದಾಗಿ ವರದಿ ಮಾಡಿದುದನ್ನು ನಾನು ಇಂಗ್ಲೀಷ ಪತ್ರಿಕೆಯೊಂದರಲ್ಲಿ ಓದಿದ್ದೇನೆ. ಸತ್ತವರ ದೊಡ್ಡ ಸಂಖ್ಯೆ ಅಪವಿತ್ರಗೊಳಿಸಲಾದ ಬಹಳಷ್ಟು ದೇವಾಲಯಗಳ ವಿವರ ಅದರಲ್ಲಿದೆ. ದೇವಸ್ಥಾನಗಳ ಅಪವಿತ್ರೀಕರಣ ಹಿಂದುಗಳ ಆಸ್ತಿ ಪಾಸ್ತಿಯ ನಾಶ ಇವುಗಳನ್ನು ನೆರೆ ಹೊರೆಯ ಮುಸಲ್ಮಾನರೇ ಮಾಡಿದ್ದಾರೆಂಬುದು ಸ್ಪಷ್ಟವಾಗಿ ಕಂಡು ಬರುತ್ತಿದೆ. ಮುಸ್ಲೀಮರಿಗೆ ಆಗಿರತಕ್ಕಂಥ ಹಾನಿ ಹಿಂದುಗಳಿಂದಲೇ ಆಗಿದೆಂಬುದು ಸ್ಪಷ್ಟವಿದೆ.

ಇದರಲ್ಲಿ ತಪ್ಪುಗಾರರು ಯಾರು? ಹಿಂಸಾಚಾರಕ್ಕೆ ಕಾರಣರಾದವರು ಯಾರು? ಹೇಗೆ ಶುರುವಾಯಿತು ಮೊದಲಾದ ವಿವರಗಳನ್ನು ನಾನಿಲ್ಲಿ ಎತ್ತಬಯಸುವುದಿಲ್ಲ. ಯಾಕೆಂದರೆ ಈಗ ಯಾವುದೇ ಗುಂಪಿನ ವಿರುದ್ಧ ದೋಷಾರೋಪಣೆ ಮಾಡುತ್ತ ಕೂಡಲು ಸಮಯವಿಲ್ಲ. ಈಗ ಮಂಡಿಸಲಾದ ಗೊತ್ತುವಳಿಯೂ ವಿವಾದಾತೀತವಾಗಿದೆ. ಮುಸಲ್ಮಾನ ಅಥವಾ ಹಿಂದು ಇವರಲ್ಲಿ ಯಾವುದೇ ಗುಂಪಿಗೆ ಅಂಟಿಕೊಳ್ಳುವ ಅಥವಾ ಪಕ್ಷ ವಹಿಸುವ ರೀತಿಯಲ್ಲಿ ಈಗಿನ ಗೊತ್ತುವಳಿಯಿಲ್ಲ. ನಮಗೆ ತಿಳಿದು ಬಂದಿರುವ ಸತ್ಯಾಂಶಗಳನ್ನು ಆಧರಿಸಿರುವ ಈ ಗೊತ್ತುವಳಿಯು ಐಕ್ಯ ಪರಿಷತ್ತಿನಿಂದ ನೇಮಕಗೊಳ್ಳಲಾಗಿರುವ ವಿಚಾರಣೆ ಮಂಡಳಿ ಇಲ್ಲವೆ ಭಾರತದ ಜನತೆಯಿಂದ ನೇಮಕಗೊಳ್ಳುವ ಸರ್ವ ಪ್ರಾತಿನಿಧಿಕ ತನಿಖಾ ಸಮಿತಿಯಿಂದ ವಿಚಾರಣೆ ನಡೆಯಬೇಕೆಂದು ಒತ್ತಾಯಿಸುತ್ತದೆ. ದೋಷಪೂರಿತವೆಂದು ಮೇಲ್ನೋಟಕ್ಕೆಯೇ ಸ್ಪಷ್ಟ ಕಾಣುವಂತಿರುವ ವಿಶೇಷ ನ್ಯಾಯಾಧೀಶರ ತನಿಖೆಯ ವರದಿಯ ಅಂಶಗಳನ್ನು ಸರಕಾರೀ ಅಧಿಕಾರಿಗಳೇ ದೋಷಿಗಳು, ಕರ್ತವ್ಯಚುತರೆಂದು ಸ್ವತಃ ಒಪ್ಪಿಕೊಳ್ಳಲಾದ ಆ ವರದಿಯನ್ನು ತಿರಸ್ಕರಿಸುವಂತೆ ಜನತೆಯನ್ನು ಈ ಗೊತ್ತುವಳಿಯಲ್ಲಿ ಕೇಳಿಕೊಳ್ಳಲಾಗಿದೆ. ಅಧಿಕಾರಿಗಳು ಹೀಗೆ ಕರ್ತವ್ಯಚ್ಯುತರಾಗಿರುವ ಹಿಂದಿನ ಕಾರಣಗಳಾದರೂ ಏನು ? ಈ ಗೊತ್ತುವಳಿಯನ್ನು ಅಂಗೀಕರಿಸುವುದರ ಮೂಲಕ ನೀವು ಯಾವುದೇ ಒಂದು ಪಕ್ಷ ಅಥವಾ ಗುಂಪಿನಿಂದ ಏಕಪಕ್ಷೀಯವಾಗಿ ಪಡೆದಿರುವ ಮಾಹಿತಿ ಅಥವಾ ನಮ್ಮೆಲ್ಲರ ಆಗುಹೋಗುಗಳಿಗೆ ಕಾರಣವೆನಿಸಿದ ತಮ್ಮ ಮಧ್ಯಸ್ಥಿಕೆಯಿಂದ ಸರಕಾರದಿಂದಲೇ ಪಡೆಯಲಾದ ಮಾಹಿತಿಗಳನ್ನೇ ಏಕಪಕ್ಷೀಯವಾಗಿ ಪಡೆದ ಮಾಹಿತಿಗಳನ್ನು ಆಧರಿಸುವ ಪಕ್ಷಪಾತದ ವರದಿಯನ್ನು ನೀವು ಒಪ್ಪಿದಂತಾಗದು. ಜನತೆಯ ವಿಶ್ವಾಸಕ್ಕೆ ಪಾತ್ರವಾಗಿರುವ ಸಮಿತಿಯು ನೀಡುವ ಸಲಹೆ ಹಾಗೂ ಉಪಕ್ರಮಗಳನ್ನೇ ಹಿಂದು ಹಾಗೂ ಮುಸಲ್ಮಾನರಿಬ್ಬರೂ ಒಪ್ಪಿಕೊಳ್ಳಲೇಬೇಕೆಂದು ಗೊತ್ತುವಳಿಯು ಕರೆ ಕೊಡುತ್ತಿದೆ. ಮುಸಲ್ಮಾನ ಸೋದರರು ಸುರಕ್ಷತೆ ಭರವಸೆ ನೀಡುವತನಕ ಮುಸಲ್ಮಾನರೇ ಸ್ವತಃ ಹಿಂದುಗಳಿಗೆ ಕೋಹತಕ್ಕೆ ಮರಳುವಂತೆ ಕೇಳಿಕೊಳ್ಳುವವರೆಗೆ ಹಿಂದುಗಳು ಕೋಹತಕ್ಕೆ ಮರಳಕೂಡದೆಂದು ಗೊತ್ತುವಳಿ ಕೇಳಿಕೊಳ್ಳುತ್ತದೆ. ಈ ಗೊತ್ತುವಳಿಯು ಮುಖ್ಯವಾಗಿ ಏನನ್ನೂ ತಾನೆ ಹೇಳುತ್ತದೆ ? ಬ್ರಿಟಿಷರ

ಬಂದೂಕಿನ ಮೊನೆ ಅಥವಾ ಅದರಿಂದ ಹೊರಡುವ ಗುಂಡುಗಳು ಬ್ರಿಟಿಶರ ಪೋಲೀಸು ಹಾಗೂ ಸೈನ್ಯ ಬಲ ಇವುಗಳು ನಾಗರಿಕರ ರಕ್ಷಣೆಗೆ ಇರುವುದಿಲ್ಲ. ನಮ್ಮ ಜನರನ್ನು ಹತ್ತಿಕ್ಕಲು ಹಾಗೂ ನಮ್ಮ ಜನರನ್ನು ಸಂಕಷ್ಟಗಳಿಗೆ ಈಡು ಮಾಡಲು ಅವರ ಬಲವಿಲ್ಲದೆಂಬುದನ್ನೇ ಇದು ಸಾರಿ ಹೇಳುತ್ತಲಿದೆ. ಸರಕಾರದ ಎಲ್ಲ ಸೈನ್ಯ ಬಲ, ಸಂಪನ್ಮೂಲಗಳನ್ನು ತೆಪ್ಪಗೆ ಆಲಸ್ಯದಿಂದ ಇರಲು ಬಿಟ್ಟು ಸರಕಾರದ ವಿರುದ್ಧ ಎಲ್ಲಿಯಾದರೂ ಒಂದು ಧ್ವನಿ ಕೇಳಿ ಬರುತ್ತದೋ ಅಂಥಲ್ಲಿಗೆ ನುಗ್ಗಿ ಎಲ್ಲರನ್ನು ಪ್ರಾಮಾಣಿಕ ಅಪ್ರಾಮಾಣಿಕ, ಅಪರಾಧಿ ನಿರಪರಾಧಿ ಮುಗ್ಧ ನಾಗರಿಕ ಎಂಬ ಭೇದವೆಣಿಸದೇ ಎಲ್ಲರನ್ನು ದಬ್ಬಾಳಿಕೆ ದಮನ ಕ್ರಿಯೆಯಿಂದ ಬಗ್ಗು ಬಡಿದು ಜೈಲುಗಳನ್ನು ಅವರಿಂದ ತುಂಬಿ ಭಯದ ವಾತಾವರಣ ಸೃಷ್ಟಿಸುವ ಕಾಯಕ ಸರಕಾರದ್ದೆಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ಇಂಥ ವಿಶಾಲ ತತ್ವಗಳ ತಳಹದಿಯ ಮೇಲೆಯೇ ಕೋಹತ್ ಅದೇ ರೀತಿ ಗುಲಬರ್ಗಾದಲ್ಲಿಯ ದೊಂಬಿಗಳ ವಿಷಯಕವಾಗಿ ಈ ಗೊತ್ತುವಳಿಯನ್ನು ಮಂಡಿಸಲಾಗಿದೆ (ಹರ್ಷೋದ್ಗಾರ).

‘‘ಪ್ರಿಯ ಬಂಧು ಭಗಿನಿಯರೇ, ಕಾಂಗ್ರೆಸ್ಸಿನಲ್ಲಿ ಹಿಂದೂಸ್ತಾನದಾದ್ಯಂತ ಹಲವಾರು ಭಾಷಣಗಳನ್ನು ಮಾಡಿದ್ದೇನೆ ಪ್ರಚಂಡ ಜನ ಸಮುದಾಯವನ್ನುದ್ದೇಶಿಸಿ ಹೀಗೆ ಮಾತಾಡುವಾಗ ನಾನು ಒಮ್ಮೆಯೂ ಗಾಬರಿಯಾಗಿಲ್ಲ. ವಿಚಲಿತವಾಗಿಲ್ಲ. ಇಂದು ನಾನು ನನ್ನ ಒಂದು ಕರ್ತವ್ಯ ಎಂಬ ದೃಷ್ಟಿಯಿಂದ ಮಾತಾಡಲು ತಮ್ಮ ಮುಂದೆ ಬಂದಿದ್ದೇನೆ. ಆದರೆ ನಾಚಿಕೆಯಿಂದ ನನಗೆ ತಲೆ ತಗ್ಗಿಸಬೇಕಾಗಿದೆ. ನಾಚಿಕೆಯಿಂದಾಗಿ ನಿಮ್ಮೆದುರಿಗೆ ನಿಂತು ಮಾತಾಡಲು ನನಗೆ ಆಗುತ್ತಿಲ್ಲ. ಆದ್ದರಿಂದ ಕುಳಿತುಕೊಂಡೇ ಮಾತಾಡಬಯಸುತ್ತೇನೆ ಎಂದು ಹಜರತ್ ಮೌಲಾನಾ ಶೌಕತ್ ಅಲಿಯವರು ಗೊತ್ತುವಳಿಯನ್ನು ಅನುಮೋದಿಸ ತೊಡಗಿದರು.

ನನಗೆ ಪರಸ್ಪರ ಪ್ರೇಮದಲ್ಲಿ ಪರಮ ವಿಶ್ವಾಸ, ಶ್ರದ್ಧೆ, ತಂಟೆ, ಜಗಳ, ಸಂಘರ್ಷ ದಿಂದ ನಾನು ಯಾವಾಗಲು ದೂರ ಇರಬಯಸುವವ. ಆಜಾನುಬಾಹುವಾದ ನನ್ನ ಕೈ ಕಾಲುಗಳು ಉದ್ದವಿವೆ. ನನ್ನ ದೇಹ ಬಲು ದೊಡ್ಡದು. ಅದಕ್ಕಿಂತಲೋ ಏನೋ ಸರಕಾರೀ ಅಧಿಕಾರಿಗಳು ನನ್ನನ್ನು ಕಾಣುತ್ತಲೇ ಹಿಂದೆ ಸರಿಯುತ್ತಾರೆ (ನಗುವಿನ ಅಲೆ) ಆದರೆ ನನ್ನ ಬಗ್ಗೆ ಹೀಗೆ ಯಾರೂ ಹೆದರುವ ಕಾರಣವಿಲ್ಲ. ನಾನು ತಂಟೆ ಸಂಘರ್ಷಗಳಿಂದ ಅನೇಕ ಮೈಲುಗಳಷ್ಟು ದೂರ ಇರುತ್ತೇನೆ. ಸಂಘರ್ಷಗಳೆಂದರೆ ದೂರ ಓಡಿ ಹೋಗುತ್ತೇನೆ. ಆದರೂ ಅಂಥವುಗಳ ಆಘಾತ ಮಾತ್ರ ನನ್ನ ಅನುಭವಕ್ಕೆ ಬಂದೇ ಬರುತ್ತದೆ. ಹಿಂದು ಮುಸ್ಲಿಮರ ನಡುವಿನ ಸಂಘರ್ಷದ ಪ್ರಸಂಗಗಳಲ್ಲಿ ಹಿಂದುಗಳದೇ ತಪ್ಪಿರಲಿ, ಮುಸಲ್ಮಾನರೇ ದೋಷಿಗಳಾಗಿರಲಿ ಅಂಥ ಪಾಪಿಗಳ ಮುಖವನ್ನು ಸಹ ನಾನು ನೋಡಬಯಸುವುದಿಲ್ಲ. ಕೋಹತ್ ದುರಂತ ಕುರಿತಂತೆ ನಾನಿಲ್ಲಿ ಕೆಲ ಮಾತು ಹೇಳಬಯಸುತ್ತೇನೆ.

ಈ ಗೊತ್ತುವಳಿಯ ಬಗ್ಗೆ ನಾನು ಮಾತಾಡುವವನಿರಲೇ ಇಲ್ಲ. ನನ್ನ ಸೋದರ ಮಹಮ್ಮದ ಅಲಿ ಮಾತಾಡಬೇಕಿತ್ತು. ಆದರೆ ಮಹಾತ್ಮಾಜೀ ನನ್ನ ಹೆಸರು ಕೂಗಿದ್ದರಿಂದ ನಾನು ಮಾತಾಡಲು ಬಂದಿದ್ದೇನೆ. ಕೋಹತದಲ್ಲಿಯ ನಿಜ ಪರಿಸ್ಥಿತಿ ಕುರಿತು ಅಲ್ಲಿಯ ಮುಸಲ್ಮಾನರು ಡೆಪ್ಯೂಟಿ ಕಮೀಶನರರಿಗೆ ಬರೆದ ಮನವಿಯ ನಕಲೊಂದು ನನ್ನ ಬಳಿಯಿದ್ದು ಅದನ್ನೇ ನಾನಿಲ್ಲಿ ಸಾದರ ಪಡಿಸುತ್ತಿದ್ದೇನೆ.

ಮಹಾತ್ಮಾಜಿಯವರೊಡನೆ ನಾನೂ ಕೋಹತಕ್ಕೆ ಹೋಗಿದ್ದೆನೆಂಬುದು ನಿಮಗೆ ಗೊತ್ತೇ ಇದೆ. ನಿಜವಾದ ಪರಿಸ್ಥಿತಿಯನ್ನು ಕೇಳಿ ತಿಳಿದುಕೊಳ್ಳಲು ನಾನು ಮುಸಲ್ಮಾನರನ್ನೇ ಕರೆದು ಕೇಳಬಯಸಿದ್ದೆ. ನಾನು ಕೋಹತಕ್ಕೆ ಈ ಕುರಿತು ಕಳಿಸಿದ ತಂತಿ ಸಂದೇಶಕ್ಕೆ ಪೇಶಾವರದಿಂದ ಉತ್ತರ ಬಂದಿದೆ. ''ಪೇಶಾವರಕ್ಕೆ ನಾವು ಒಂದು ನಿಯೋಗವನ್ನು ಅಲ್ಲಿಯ ಡೆಪ್ಯೂಟಿ ಕಮೀಶ್ನರರ ಬಳಿ ಒಯ್ಯುತ್ತಿರುವುದರಿಂದ ನಿಮ್ಮ ಬಳಿ ಬರಲು ಸಾಧ್ಯವಾಗುತ್ತಿಲ್ಲವೆಂದು ನನಗೆ ತಂತಿ ಸಂದೇಶಕ್ಕೆ ಪ್ರತಿ ಕಳಿಸಲಾದ ಉತ್ತರದಲ್ಲಿ ತಿಳಿಸಲಾಗಿದೆ. ಪೇಶಾವರಕ್ಕೂ ನಾನು ಹೋಗುವ ಪೂರ್ವದಲ್ಲಿ ಬೇರೊಂದು ತಂತಿ ಸಂದೇಶ ರವಾನಿಸಿ ತಮ್ಮಲ್ಲಿಯ ಒಬ್ಬಿಬ್ಬರು ನನ್ನನ್ನು ಕಂಡು ಮಾತಾಡಲು ಸಾಧ್ಯವಿದೆಯೇ ಹೇಗೆ ಎಂದು ಕೇಳಿ ಕೊಂಡಿದ್ದೆ. ಪೇಶಾವರಕ್ಕೆ ಕಳಿಸಿದ ಈ ತಂತಿ ಸಂದೇಶಕ್ಕೆ ಕೋಹತದಿಂದ ಉತ್ತರ ಬಂದಿತ್ತು. ಪೇಶಾವರದಿಂದ ಮರಳಿರುವ ನಾವೆಲ್ಲಾ ಪ್ರಶ್ನೆಗೆ ಪರಿಹಾರ ಕಂಡು ಹಿಡಿಯಲೆತ್ನಿಸುತ್ತಿದ್ದೇವೆ. ಆದ್ದರಿಂದ ತಮ್ಮ ಬಳಿ ಬಂದು ಭೆಟ್ಟಿಯಾಗಲು ಸಾಧ್ಯವಿಲ್ಲವೆಂದು ಅವರು ನನಗೆ ಉತ್ತರಿಸಿದ್ದರು. ಇಂದು ನನಗೆ ಬಂದಿರುವ ಮಾಹಿತಿಯ ಪ್ರಕಾರ ನಾನು ಅಲ್ಲಿಯ ಮುಸಲ್ಮಾನ ನೇತಾರರಿಗೆ ಕಳುಹಿಸಿದ ಸಂದೇಶಗಳು ಅವರಿಗೆ ಕೈ ಸೇರಿಯೇ ಇಲ್ಲವಂತೆ. ನಾಲ್ಕಾರು ಸರಕಾರೀ ಅಧಿಕಾರಿಗಳು ಸಮಸ್ಯೆಯ ಪರಿಹಾರಕ್ಕೆ ಪ್ರಯತ್ನಿಸುತ್ತಿರುವುದು ಅದರಿಂದ ವ್ಯಕ್ತವಾಗುತ್ತಿದೆ. ಈ ಪತ್ರಗಳನ್ನು ಓದಿ ನನಗೆ ಒಂದು ತರಹ ಆನಂದವಾಗುತ್ತಿದೆ. ಯಾಕೆಂದರೆ ಸಮಸ್ಯೆ ಬಗೆ ಹರಿಸಲು ಪ್ರಯತ್ನಿಸುತ್ತಿದ್ದಾರಲ್ಲವೆ? ನಾನು ಈಗ ಆ ಪತ್ರವನ್ನೇ ನಿಮ್ಮೆದುರು ಓದಿಬಿಡುತ್ತೇನೆ. ನಾನು ಕೋಹತದಿಂದ ಮರಳಿದ ಬಳಿಕ ಖಿಲಾಫತ್‌ಗೂ ಒಂದು ಬರೆದಿದ್ದೇನೆ. ಕೋಹತದ ಮುಸಲ್ಮಾನ ನೇತಾರರಿಗೆ ಬರೆದ ಪತ್ರದಲ್ಲಿ ಖಿಲಾಫತ್‌ಗೆ ಸಂಬಂಧಿಸಿದಂತೆ ನಾನು ಪತ್ರ ಬರೆದಾಗಲೆಲ್ಲ ನೀವು ಅದನ್ನು ಲಕ್ಷಕ್ಕೆ ತೆಗೆದುಕೊಳ್ಳುವುದಿಲ್ಲವೇಕೆ ? ಎಂದು ಪ್ರಶ್ನಿಸಿದ್ದೆ. ಅವರ ಉತ್ತರ ಹೀಗಿದೆ.

ಕೋಹತದ ಮುಸಲ್ಮಾನರಾಗಿರುವ ನಾವು ಒಂದು ಕಾರ್ಯಕಾರಿ ಸಮಿತಿ ರಚಿಸಿಕೊಂಡಿದ್ದೇವೆ. ಕೋಹತದ ಶಾಂತಿಗಾಗಿ ಸುರಕ್ಷತೆಗಾಗಿ ಸಮಿತಿ ಕ್ರಮ ಕೈಕೊಳ್ಳುತ್ತಿದೆ. ಅಶಕ್ತ ದುರ್ಬಲರಾದ ಮುಸಲ್ಮಾನರನ್ನು ತೆಗೆದು ಹಾಕಿ ಸರಕಾರೀ ಅಧಿಕಾರಿಯಾಗಿದ್ದ ಓರ್ವ ಅನುಭವಿ ನೇತಾರನ ಕೈಯಲ್ಲಿ ಎಲ್ಲ ವಿಷಯಗಳನ್ನು ವಹಿಸಿಕೊಡಲಾಗಿದೆ. ಆತನ ಕೈಯಲ್ಲಿ

ಎಲ್ಲ ಜವಾಬ್ದಾರಿ ವಹಿಸಿಕೊಟ್ಟ ಬಳಿಕ ಉಳಿದ ಕೆಲವರು ಪೇಶಾವರದ ಡೆಪ್ಯೂಟಿ ಕಮೀಶ್ನರರನ್ನು ಭೆಟ್ಟಿಯಾಗಲು ಸಿದ್ಧರಾಗಲಿಲ್ಲ. ಈಗ ಮುಸಲ್ಮಾನ ನೇತಾರರಲ್ಲಿ ಯೋಗ್ಯರಲ್ಲದವರನ್ನು ದೂರ ಇರಿಸಲಾಗಿದೆ. ತನ್ಮಧ್ಯೆ ನಿಮ್ಮಿಂದ ಕಳುಹಿಸಲ್ಪಟ್ಟ ಎರಡು ತಂತಿ ಸಂದೇಶಗಳು ನಮಗೆ ಕೈಸೇರಿರಲೇ ಇಲ್ಲ. ನಿಮ್ಮನ್ನು ಭೆಟ್ಟಿಯಾಗದಿರುವುದಕ್ಕೆ ಏನೂ ಕಾರಣಗಳಿಲ್ಲ. ನಿಮ್ಮನ್ನು ಭೆಟ್ಟಿಯಾಗಿದ್ದರೆ ನಮ್ಮನ್ನು ಕುರಿತು ಈಗ ಅಂಟಿರುವ ಕಳಂಕವೂ ಹತ್ತುತ್ತಿರಲಿಲ್ಲ. ಆದರೆ ನಮ್ಮ ನಿಮ್ಮ ಭೇಟಿಯಂತೂ ತಪ್ಪೇ ಹೋಗಿದೆ. ಆದರೆ ಕೋಹತದಲ್ಲಿಯ ಪರಿಸ್ಥಿತಿ ಈಗ ಬದಲಾಗಿದೆ. ಪ್ರತಿಯೊಬ್ಬ ಒಳ್ಳೆಯ ಹಾಗೂ ಕೆಟ್ಟ ವ್ಯಕ್ತಿಯನ್ನು ದೇವರೇ ನೋಡುತ್ತಿದ್ದಾನೆ. ಕೆಟ್ಟ ಕೆಲಸ ಮಾಡಿದವರು ಹೆದರಿ ಹೋಗಿದ್ದಾರೆ. ಪೇಶಾವರಕ್ಕೆ ತೆರಳಿದ ನಿಯೋಗ ವಿಫಲಗೊಂಡು ಮರಳಿದೆ. ಸಮಸ್ಯೆಗೆ ಯಾವುದೇ ಪರಿಹಾರ ಲಭಿಸಿಲ್ಲ. ಸುಮಾರು ಎಂಬತ್ತು ಹಿಂದು ಶೀಖ, ಮುಸಲ್ಮಾನರ ಬಂಧನವಾಗಿದೆ. ಇನ್ನೂ 1500 ರ ತನಕ ಬಂಧಿತರ ಸಂಖ್ಯೆ ಏರಲಿದೆಂಬ ವದಂತಿಗಳಿವೆ. ರಾವಳಪಿಂಡಿಯಲ್ಲೂ ಸಂಶಯಿತ ಜನರನ್ನು ಬಂಧಿಸಲಿಕ್ಕಾಗಿ ಪೊಲೀಸರು ತೆರಳಿದರು ಎಂದೆನ್ನಲಾಗಿದೆ. ಕೋಹತದಲ್ಲಿ ನೀವು ಎಲ್ಲಿಗೆಯೇ ಬಂದರೂ ನಿಮ್ಮನ್ನು ಭೆಟ ಮಾಡಲು ಸಿದ್ಧರಿದ್ದೇವೆ. ಆದರೆ ನೀವು ರಾವಳಪಿಂಡಿಗೆ ಬರುವುದೇ ಸೂಕ್ತ. ಕೋಹತದಲ್ಲಿ ಪರಿಸ್ಥಿತಿ ಈಗ ತುಂಬಾ ಕೆಟ್ಟುದಿದೆ. ತ್ವೇಷಮಯವಿದೆ. ಈ ಪರಿಸ್ಥಿತಿಯಲ್ಲಿ ಹಿಂದುಸ್ತಾನದ ಯಾವುದೇ ದೊಡ್ಡ ನೇತಾರನಾದರೂ ರಾವಳಪಿಂಡಿಗೆ ಬರುವುದೇ ಒಳ್ಳೆಯದು. ಈಗದು ಅತ್ಯವಶ್ಯ. ಕೋಹತದ ಬಗ್ಗೆ ಒಂದು ಸಮಿತಿ ರಚಿಸುತ್ತೇವೆ ಅದು ಪರಿಶೀಲನೆಗೈದು ತಪ್ಪಿತಸ್ಥರನ್ನು ಗುರುತಿಸಲಿದೆ. ಆದರೆ ಗುಲಬರ್ಗಾ ಬಗ್ಗೆ ನಾನು ನಾಚಿಕೆಯಿಂದ ತಲೆ ತಗ್ಗಿಸಬೇಕಾಗಿದೆ. ಅಲ್ಲಿ ನಡೆದುದು ಇಡೀ ದೇಶದ ಮೇಲೆ ದುಷ್ಪರಿಣಾಮ ಬೀರುವಂಥದು. ಗುಲಬರ್ಗಾದ ಬಗ್ಗೆ ಪೂರ್ಣ ಮಾಹಿತಿಯೇ ಲಭ್ಯವಾಗುತ್ತಿಲ್ಲ. ಕುರೇಶೀಯವರು ಅಲ್ಲಿಗೆ ಹೋಗಿದ್ದರು. ಆದರೆ ಅವರು ಅಲ್ಲಿ ನಡೆದುದು ಕೆಲವರ ಕುಚೋದ್ಯವೆಂದಿಷ್ಟೇ ಹೇಳಿದ್ದಾರೆ. ಗುಲಬರ್ಗಾದ ಬಗ್ಗೆ ಹೆಚ್ಚಿಗೇನನ್ನೂ ಹೇಳಲಿಕ್ಕಿಲ್ಲ.

ನಾನು ಹಾಗೂ ನನ್ನ ಸೋದರ ಇಬ್ಬರೂ ಕೇವಲ ಒಂದು ವರ್ಷದ ಹಸುಗೂಸಿದ್ದಾಗಲೇ ನಮ್ಮ ತಂದೆ ಪೈಗಂಬರವಾಸಿಗಳಾದುದು ನಿಮಗೆ ಗೊತ್ತೇ ಇದೆ. ಅಂದಿನಿಂದ ನಾವಿಬ್ಬರೂ ನಮ್ಮ ತಾಯಿ ಲಾಲನೆ ಪಾಲನೆಯಲ್ಲೇ ಬೆಳೆದೆವು. ತಾಯಿಯ ಹೊರತಾಗಿ ನಾವು ಬೇರೆ ಯಾರನ್ನೂ ಹತ್ತಿರದವರೆಂದು ಅರಿಯೆವು. ನಮ್ಮ ತಾಯಿ ತೀರಿಕೊಳ್ಳುವಾಗ ನಮ್ಮಿಬ್ಬರನ್ನೂ ಹತ್ತಿರಕ್ಕೆ ಕೂಡಿಸಿಕೊಂಡು ಆದೇಶ ನೀಡಿದ್ದಾರೆ. ಹಿಂದು - ಮುಸಲ್ಮಾನರ ನಡುವೆ ಅತ್ಯಂತ ಪ್ರೇಮ ಆತ್ಮೀಯತೆ, ವಿಶ್ವಾಸ ಹಾಗೂ ಕರುಣೆ ಸಹಕಾರ ಭಾವನೆ ಬೆಳೆಸುವುದೇ ನಿಜವಾದ ಇಸ್ಲಾಮ ಧರ್ಮಾನುಯಾಯಿ. ಧರ್ಮ ರಕ್ಷಕ ಹಾಗೂ

ಸ್ವರಾಜ್ಯ ಹೋರಾಟದ ಯೋಧನ ಲಕ್ಷಣವೆಂದು ಆಕೆ ಹೇಳಿದ್ದಳು. ಎಲ್ಲ ಸೋದರ ಸೋದರಿಯರಿಗೆ ನಾನು ನನ್ನ ತಾಯಿಯ ಕೊನೆಯ ಸಂದೇಶವನ್ನೇ ಅನುಸರಿಸಲು ಕೋರುತ್ತೇನೆ. ನಮ್ಮ ತಾಯಿ ನಿಧನ ಹೊಂದಿದ ಬಳಿಕ ನಮ್ಮ ತಂಗಿಯೇ ನಮ್ಮ ಮನೆಗೆ ಸರದಾರಿಣಿ ಅಥವಾ ಮುಖ್ಯಸ್ಥಳು. ತಾಯಿಯ ಆದೇಶದಂತೆ ನಮ್ಮ ತಂಗಿಯು ನೀಡುವ ಸಲಹೆಯ ಪ್ರಕಾರ ನಾವು ನಡೆದುಕೊಳ್ಳುತ್ತೇವೆ. ಜೀವದಿಂದಿರುವವರೆಗೆ ಸರ್ವ ತ್ಯಾಗ ಬಲಿದಾನಗಳಿಂದ ಸ್ವರಾಜ್ಯ ಗಳಿಸಲು ನಾವು ಸಿದ್ಧರು. ವಚನಕ್ಕೆ ಬದ್ಧರು. ಹಿಂದು ಮುಸಲ್ಮಾನರನ್ನು ಒಂದು ಗೂಡಿಸುತ್ತೇವೆ. ಸುದೈವವಶಾತ್ ಸಾವಿರಾರು ಮುಸಲ್ಮಾನರು ಹಿಂದುಗಳು ಈ ಕಾರ್ಯ ಸಾಧನೆಯಲ್ಲಿ ನಮ್ಮೊಂದಿಗಿದ್ದಾರೆ. ಹಿಂದು ಮುಸ್ಲಿಂ ಏಕತೆಗಾಗಿ ಪ್ರಾಣ ತ್ಯಾಗಕ್ಕೂ ಸಿದ್ಧರಿದ್ದಾರೆ. ಮಹಾತ್ಮಾಜಿಯವರು ಏನನ್ನು ಆದೇಶಿಸುತ್ತಾರೋ ಅದರಂತೆ ನಡೆದುಕೊಳ್ಳಲು ನಾವು ಬದ್ಧರಾಗಿದ್ದೇವೆ. ನಮ್ಮ ಕರ್ತವ್ಯವೇ ಇದು. ಹಿಂದುಸ್ಥಾನದ ಸ್ವರಾಜ್ಯ ಗಳಿಸೋಣ ಹಾಗೂ ಮುನ್ನಡೆಯೋಣ ಎಂದವರು ನುಡಿದರು.

ಭಾಷಣ ನಡೆದಿರುವಂತೆಯೇ ಡಾ॥ ಎನಿಬೆಸೆಂಟರು ಜಮ್ನಾದಾಸ ದ್ವಾರಕಾದಾಸ ಮತ್ತಿತರರೊಂದಿಗೆ ವ್ಯಾಸ ಪೀಠದ ಮೇಲೆ ಬಂದರು. ಅಧ್ಯಕ್ಷರು ಅವರನ್ನು ಅತ್ಯಂತ ಗೌರವಯುತವಾಗಿ ಸ್ವಾಗತಿಸಿದರು. ಎಲ್ಲ ಜನರೂ ಎದ್ದು ನಿಂತು ಗೌರವ ಸೂಚಿಸಿದರು.

ನಂತರ ಅಧ್ಯಕ್ಷ ಮಹಾತ್ಮಾ ಗಾಂಧೀಜಿಯವರಿಂದ ಗೊತ್ತುವಳಿಗೆ ಪರವಾಗಿ ಮಾತಾಡಲು ಕರೆಯಲ್ಪಟ್ಟ ಲಾಲಾ ಲಜಪತರಾಯರು ತಮ್ಮ ಭಾಷಣದ ವರದಿ ಸರಿಯಾಗಿ ಆಗಬೇಕೆಂಬ ದೃಷ್ಟಿಯಿಂದ ಇಂಗ್ಲೀಷನಲ್ಲಿಯೇ ಮಾತಾಡಲಿರುವುದಾಗಿ ತಿಳಿಸಿ ಹಿಂದೀಯಲ್ಲಿ ಎಂದು ಆಗ್ರಹಿಸಿದವರಿಗೆ ಸಮಾಧಾನ ಹೇಳಿದರು. ತಾವು ಈ ಅಧಿವೇಶನದಲ್ಲಿ ವಿಶೇಷವಾಗಿ ಹಿಂದು-ಮುಸ್ಲಿಂ ಸಂಬಂಧಗಳ ಬಗೆಗಿನ ಸದ್ಯದ ಗೊತ್ತುವಳಿ ಕುರಿತು ಮಾತಾಡಲು ಉದ್ದೇಶಿಸಿರಲಿಲ್ಲವೆಂದು ನುಡಿದರು.

ಈಗಿನ ಗೊತ್ತುವಳಿ ಅತ್ಯಂತ ಸೂಕ್ಷ್ಮವಾದುದು. ಅತ್ಯಂತ ಕಾಳಜಿ ಪೂರ್ವಕವಾಗಿ ಪ್ರತಿಯೊಂದು ಶಬ್ದವನ್ನು ಬಳಸಬೇಕಾಗಿದೆ. ಯಾಕೆಂದರೆ ಯಾವುದೇ ಒಂದು ಶಬ್ದದ ಬಳಕೆಯಿಂದಲೂ ಹಿಂದು ಅಥವಾ ಮುಸಲ್ಮಾನರ ಭಾವನೆಗಳಿಗೆ ಧಕ್ಕೆ ತಗಲಬಹುದಾದ ಸಂದರ್ಭವಿದೆ. ಘಟನೆಗಳನ್ನು ಕುರಿತಂತೆ ಎರಡು ಅಥವಾ ಮೂರು ತರಹದ ವಿವರಣೆ ಪ್ರಚಲಿತವಿವೆ. ಕೋಹತದಲ್ಲಿ ನಡೆದ ಘಟನೆಗಳು ಕೋಹತ ದುರಂತವೆಂದೇ ಉಲ್ಲೇಖಿಸಲ್ಪಡುತ್ತಿವೆ. ಈ ದುರಂತಕ್ಕೆ ಸಂಬಂಧಿಸಿದಂತೆ ಹಿಂದುಗಳ ಅಭಿಮತ, ಮುಸಲ್ಮಾನರ ಅಭಿಮತ ಹಾಗೂ ಮೂರನೆಯದಾಗಿ ಸರಕಾರದ ವಿವರಣೆ ಹೀಗೆ ಮೂರು ತರಹದ ಬೇರೆ ಬೇರೆ ವಿವರಗಳು ನಮ್ಮ ಮುಂದಿವೆ. ಈ ಮೂವರ ಪೈಕಿ ನಾನು ಯಾವುದರ ಬಗ್ಗೆಯೂ

ಮಾತಾಡ ಬಯಸುತ್ತಿಲ್ಲ. ಕೋಹತ ದುರಂತ ಕುರಿತು ಎಲ್ಲರೂ ಒಪ್ಪಿಕೊಂಡೇ ಇರುವ ಕೆಲ ಸತ್ಯಗಳನ್ನು ಇಲ್ಲಿ ಪ್ರಸ್ತಾಪಿಸಬಯಸುತ್ತೇನೆ

ಭಾರತದಲ್ಲಿಯ ಬ್ರಿಟಿಶ ಆಡಳಿತದ ಇತಿಹಾಸದಲ್ಲೇ ಕೋಹತ ದುರಂತದ ವಿಶಿಷ್ಟ ಸ್ವರೂಪದ್ದಿದೆ ಎಂದು ಪಂಡಿತ ಮೋತಿಲಾಲ ನೆಹ್ರು ಅವರು ಈಗಾಗಲೇ ವಿವರಿಸಿದ್ದಾರೆ. ನಾನು ದೇವರ ಸಾಕ್ಷಿಯಾಗಿ ಹಿಂದು - ಮುಸ್ಲಿಂ ಸಂಘರ್ಷಕ್ಕೆ ಒಂದು ಪರಿಹಾರ ಕಂಡುಕೊಳ್ಳದ ಹೊರತು ಭಾರತದ ಬಂಧ ವಿಮೋಚನೆ ಸಾಧ್ಯವಿಲ್ಲವೆಂದು ನಂಬಿದ್ದೇನೆ ಕೋಹತದಂಥ ದುರಂತಗಳಿಗೆ ಕೊನೆ ಹೇಳುವ ದೃಷ್ಟಿಯಿಂದ ನಾನು ವಿಚಾರ ಮಾಡಬೇಕಾದುದು ಅತ್ಯಗತ್ಯ ಹಾಗೂ ಮಹತ್ವದ ವಿಷಯವಾಗಿದೆ. ಹಿಂದು ಮುಸ್ಲೀಂ ಐಕ್ಯ ಸಾಧಿಸದ ಹೊರತು ನಮಗೆ ದಾಸ್ಯ ವಿಮೋಚನೆಯಿಲ್ಲ. ಸ್ವರಾಜ್ಯದ ಗಳಿಕೆಯಿಲ್ಲ. ಶಾಂತಿ ಸಮಾಧಾನವಿಲ್ಲ, ಸಮೃದ್ಧಿ ಸಾಧನೆಯಾಗದು. ಅಧ್ಯಕ್ಷರ ಅನುಮತಿ ಪಡೆದು ಹೇಳುವುದೆಂದರೆ ಖಾದೀ ಹಾಗೂ ಸ್ವದೇಶೀಯೂ ಮುಂದುವರಿಯಲು ಸಾಧ್ಯವಿಲ್ಲ. ಹಿಂದು-ಮುಸ್ಲಿಂರಿಬ್ಬರ ಸಹಮತದೊಡನೆಯೇ ನಾವು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಅಗತ್ಯ ವೆನಿಸಿದೆಂದು ಲಾಲಾ ಲಜಪತರಾಯರು ನುಡಿದಿದ್ದಕ್ಕೆ ಕೇಳಿರಿ ಕೇಳಿರಿ ಎಂಬ ಧ್ವನಿ ಹಾಗೂ ಜಯಘೋಷಗಳು ಶ್ರೋತೃಗಳಿಂದ ಕೇಳಿ ಬಂದವು.

ಹಿಂದು - ಮುಸ್ಲಿಂ ಸಮಸ್ಯೆಗೆ ಪರಿಹಾರ ಕಂಡು ಹಿಡಿಯುವುದರ ಮೇಲೆ ಭಾರತದ ಭವಿಷ್ಯ ಅವಲಂಭಿಸಿದೆ. ಅಷ್ಟೇ ಅಲ್ಲ ಇಡೀ ಏಶಿಯದ ಪ್ರಪಂಚದ ಶಾಂತಿ ಸಮಾಧಾನವೂ ಅವಲಂಬಿಸಿದೆ. ಆದ್ದರಿಂದ ಈ ಪ್ರಶ್ನೆಯನ್ನು ಸಮಗ್ರ ರೀತಿಯಲ್ಲಿ ನೋಡಿ ಶೀಘ್ರವೇ ಪರಿಹಾರ ಕಂಡು ಕೊಳ್ಳುವ ಅಗತ್ಯವಿದೆ.

ಕೋಹತ ದುರಂತಕ್ಕೆ ಕಾರಣ ಹಿಂದು ಅಥವಾ ಮುಸ್ಲಿಮರೆಂದು ನಾನು ದೋಷಾ ರೋಪಣೆ ಮಾಡ ಬಯಸುವುದಿಲ್ಲ. ಘಟನೆಗೆ ಸಂಬಂಧಿಸಿದಂತೆ ಕೆಲವು ಸತ್ಯಾಂಶಗಳನ್ನು ಮುಂದಿಡಬಯಸುವೆ. ಸರಕಾರದ ನಿರ್ಣಯ ಹೇಳಿಕೆ, ಹಿಂದು ಹಾಗೂ ಮುಸ್ಲಿಂ ನೇತಾರರ ಪ್ರಕಟಣೆಗಳನ್ನು ನೋಡಿ ಎಲ್ಲರೂ ಒಪ್ಪಿಕೊಂಡಿರುವ ಸತ್ಯಾಂಶಗಳನ್ನೇ ತಮ್ಮ ಮುಂದಿಡುತ್ತೇನೆ. ಸಾರ್ವತ್ರಿಕವಾಗಿ ಹಂಚಲಾದ ಒಂದು ಕರಪತ್ರದ ಕಾರಣದಿಂದಾಗಿ ಹಿಂದು-ಮುಸ್ಲಿಂ ಸಂಬಂಧಗಳು ಹದಗೆಟ್ಟು ದೊಂಬಿಗೆ ಕಾರಣವಾಯಿತೆಂದು ತಿಳಿದು ಬರುತ್ತದೆ. ನಂತರ ಜಲಾಶಯವೊಂದರ ಬಗ್ಗೆ ಉಭಯತರಲ್ಲಿ ತಂಟೆ ಉದ್ಭವಿಸಿತು. ಜಲಾಶಯದ ತಂಟೆಯನ್ನು ಬಗೆಹರಿಸಲಾಯಿತೆನ್ನುವಷ್ಟರಲ್ಲೇ ಕರಪತ್ರಗಳಿಂದ ಗೊಂದಲ ಶುರುವಾದದ್ದು. ಆ ಕರಪತ್ರವೇನು ? ಅದರಲ್ಲಿ ಏನಿತ್ತು ? ಎಂಬುದನ್ನು ಇಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

ಅಗಸ್ಟ 22 ರಂದು ಕೃಷ್ಣ ಜನ್ಮಾಷ್ಟಮಿ ಸಂದರ್ಭದಲ್ಲಿ ಕೃಷ್ಣನ ಬಗ್ಗೆ ಒಂದು ಕವನವುಳ್ಳ 35-40 ಕರಪತ್ರಗಳು ಕೋಹತದಲ್ಲಿ ಮಾರಲ್ಪಟ್ಟವು ಅಥವಾ ವಿತರಣೆ ಮಾಡಲ್ಪಟ್ಟವು. ಆ ಕವನವು ಇಸ್ಲಾಮ ಧರ್ಮವನ್ನು ಹೀಗಳೆಯುವಂಥದಿತ್ತು. ಓರ್ವ ಹಿಂದುವಾಗಿ ಯಾವನೇ ಹಿಂದುವು ಇಂಥ ಪದ್ಯವನ್ನು ಬರೆದು ಪ್ರಚಾರ ಪಡಿಸುವುದು ಸೂಕ್ತವಲ್ಲವೆಂದು ಭಾವಿಸಿ ನಾಚಿಕೆಯಿಂದ ತಲೆ ತಗ್ಗಿಸುತ್ತೇನೆ. ಕೋಹತದ ಮುಸಲ್ಮಾನರು ಆ ಪದ್ಯದ ಬಗ್ಗೆ ಕೆರಳಿ ಪ್ರತಿಕ್ರಯಿಸಿದುದು ಸಹಜವೇ ಆಗಿದೆ. ಮಹಮ್ಮದೀಯರು ಹಿಂದು ಧರ್ಮಕ್ಕೆ ಇದಕ್ಕೂ ಹೆಚ್ಚು ಹೀಗಳೆದು ಬರೆದು ಹಂಚುತ್ತಾರೆಂದು ಆ ಕರಪತ್ರವನ್ನು ಸಮರ್ಥಿಸಿಕೊಳ್ಳ ಲಾಗುತ್ತದೆ. ಆದರೆ ಬೇರೆಯವರು ಏನೋ ಮಾಡಿದರೆಂದು ಅದಕ್ಕೆ ಪ್ರತಿಕ್ರಿಯೆಯಾಗಿ ನಾವು ಅದನ್ನೇ ಮಾಡುವುದು ತಪ್ಪು ಹಾಗೂ ಅಸಮರ್ಥನೀಯವೆಂದು ನಾನು ಅಭಿಪ್ರಾಯ ಪಡುತ್ತೇನೆ. ಹಿಂದೂ ಮಹಮ್ಮದೀಯ ಇಬ್ಬರೂ ಹೀಗೆ ಪ್ರತಿಕ್ರಿಯಾತ್ಮಕ ದ್ವೇಷ ಮಾಡಕೂಡದು. ನಮ್ಮ ಧರ್ಮವನ್ನು ಹಾಗೂ ನಮ್ಮ ಧರ್ಮಗಳವರ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳುವುದು ನಮ್ಮ ಕರ್ತವ್ಯವೇನೋ ಸರಿ ಆದರೆ ಪರಸ್ಪರ ದ್ವೇಷವನ್ನು ವರ್ಧಿಸುವ ಇಂಥ ವೃತ್ತಿ ನಡೆಸುವುದು ಸರಿಯೆನಿಸದು. ಇಂಥ ಕೃತಿ ಯಾರೇ ಮಾಡಿದರೂ ಆತ ಹಿಂದುವಿರಲಿ, ಮುಸಲ್ಮಾನನಾಗಿರಲಿ ದೇಶದ ವೈರಿಯೇ ಆಗಿರುತ್ತಾನೆ. ಅಷ್ಟೇ ಅಲ್ಲ ಅಂಥವರು ಮಾನವತೆಯ ವೈರಿಗಳೇ ಆಗಿರುತ್ತಾರೆ.

ಆಗಸ್ಟ 22 ರಂದು ಮುಸ್ಲಿಮರಿಗೆ ಆಕ್ಷೇಪಾರ್ಹವೆನಿಸುವ ಕವನದ ಮೂವತ್ತು ನಲವತ್ತು ಪ್ರತಿಗಳನ್ನು ಮಾರಲಾಯಿತು. ಇಲ್ಲವೆ ವಿತರಣೆ ಮಾಡಲಾಯಿತು. (ಸಪ್ಟೆಂಬರ್ 1 ಅಥವಾ 2 ರಂದು ನನಗೆ ನಿಶ್ಚಿತ ದಿನ ನೆನಪಿಲ್ಲ) ಕೆರೆಯ ಸಂಬಂಧದಲ್ಲಿ ಹಿಂದು ಮುಸ್ಲಿಂರ ನಡುವೆ ವಿವಾದವೆದ್ದಿತು. ಮಹಮ್ಮದೀಯರೇ ಆಗಿರುವ ಸಹಾಯಕ ಆಯುಕ್ತರು ವಿವಾದವನ್ನು ಹಿಂದುಗಳ ಪರವಾಗಿ ತೀರ್ಮಾನಿಸಿದರು. ಆ ಸಂದರ್ಭದಲ್ಲಿ ಹಾಜರಿದ್ದ ಕೆಲವು ಮಹಮ್ಮದೀಯರು ಪ್ರಚುರ ಪಡಿಸಲಾದ ಕರಪತ್ರದ ವಿರುದ್ಧ ಆಕ್ಷೇಪವೆತ್ತಿದ್ದರು. ಬಹುತೇಕವಾಗಿ 2ನೇ ತಾರೀಖಿನಂದು ಆಕ್ಷೇಪಾರ್ಹ ಕರಪತ್ರದ ಬಗ್ಗೆ ಹಿಂದು ಸಮಾಜದ ಹಿರಿಯರ ಗಮನ ಸೆಳೆಯಲಾಯಿತು. ತಮ್ಮ ಗಮನಕ್ಕೆ ಅದು ಬಂದಿಲ್ಲ ಎಂದು ಅವರೆಲ್ಲರೂ ಸ್ಪಷ್ಟ ಪಡಿಸಿ ಕರಪತ್ರದಲ್ಲಿದ್ದ ಕವನವನ್ನು ಖಂಡಿಸಿದರು.

ಅದೇ ದಿನದಂದು ಹಿಂದುಗಳು ಸಭೆ ಸೇರಿ ಆಕ್ಷೇಪಾರ್ಹ ಕವನವನ್ನು ಒಳಗೊಂಡ ಕರಪತ್ರಗಳ ಪ್ರಕಟಣೆಯ ಬಗ್ಗೆ ವಿಷಾದ ಗೊತ್ತುಪಡಿಸುವ ಠರಾವನ್ನು ಅಂಗೀಕರಿಸಿ ಗೊತ್ತುವಳಿಯ ಪ್ರತಿಗಳನ್ನು ಖಿಲಾಫತ್ ಸಮಿತಿಯ ಹಾಗೂ ಕೆಲವು ಗಣ್ಯ ಮುಸ್ಲಿಮ ಧುರೀಣರಿಗೆ, ಅಧಿಕಾರಿಗಳಿಗೆ ಕಳಿಸಲಾಯಿತು. ಅದಕ್ಕಿಂತ ಮೂರುದಿನ ಮೊದಲಿಗೆ ಸಹಾಯಕ ಆಯುಕ್ತ ಅಹ್ಮದ್‌ಖಾನ್‌ರು ಕರಪತ್ರಗಳ ಪ್ರಕಟಣೆಯಿಂದ ನಗರದಲ್ಲಿ

ತ್ವೇಷವುಂಟಾಗಿದೆಯೋ ಹೇಗೆ ಎಂಬ ವರದಿಯನ್ನು ನೀಡುವಂತೆ ತನ್ನ ಕೈಕೆಳಗಿನ ಅಧಿಕಾರಿಗಳಿಗೆ ಆದೇಶಿಸಿದ್ದ. ದಿನಾಂಕ 2 ರಂದು ಹಿಂದುಗಳ ವತಿಯಿಂದ ಘೋಷಣೆ ಸಲ್ಲಿಸಲಾಗಿತ್ತು. ಹಿಂದುಗಳ ಕ್ಷಮಾ ಕೋರಿಕೆಯಷ್ಟರಿಂದಲೇ ಮುಹಮ್ಮದಿಯರಿಗೆ ಸಮಾಧಾನವಾಗಲಿಲ್ಲವೆಂದು ಸರಕಾರದ ವರದಿ ಹೇಳುತ್ತದೆ. ಸರಕಾರದ ಅಭಿಪ್ರಾಯವೇನೇ ಇರಬಹುದು. ಹಿಂದುಗಳು ಮತ್ತೇನನ್ನು ಮಾಡಬೇಕಿತ್ತು ಎಂಬುದು ನನಗೆ ಮಾತ್ರ ಅರ್ಥವಾಗದು. ತದನಂತರ ಕೋಹತದಲ್ಲಿ ಈ ಕರಪತ್ರಗಳ ವಿತರಣೆಗೆ ಕಾರಣನಾದ ವ್ಯಕ್ತಿಯ ವಿರುದ್ಧ ಸರಕಾರ ಕೆಲ ಕಾನೂನು ಕ್ರಮಗಳನ್ನು ಕೈಗೊಂಡಿತು. ಕರಪತ್ರಗಳ ವಿತರಣೆಗೆ ಕಾರಣನಾದವ ಜೀವನದಾಸ ಎಂಬ ಮಹಾಶಯ. ಆತನನ್ನು ಬಂಧಿಸಿ ಹತ್ತು ಸಾವಿರ ರೂ.ಗಳ ಜಾಮೀನು ನೀಡುವಂತೆ ಕೇಳಲಾಯಿತು. ಬಂಧನದ ಸಮಯದಲ್ಲಿ ಕವನದ ಉಳಿದ ಪ್ರತಿಗಳನ್ನು ಸಹಾಯಕ ಆಯುಕ್ತರು ತರಿಸಿಕೊಂಡರು. ಮಧ್ಯದಲ್ಲಿ ಒಂದು ವಿಷಯ ಹೇಳುವುದನ್ನು ಮರೆತೇ ಬಿಟ್ಟಿದ್ದೆ. ಹಿಂದುಗಳು ತಮ್ಮ ಕ್ಷಮಾಪಣೆ ಸಲ್ಲಿಸಿದ ದಿನವೇ ಆಕ್ಷೇಪಾರ್ಹ ಕವನವನ್ನು ಒಳಗೊಂಡ ಕರ ಪತ್ರಗಳನ್ನು ನಾಶಗೊಳಿಸಿದ್ದರು. ನಾಲ್ಕನೆಯ ತಾರೀಖಿನಂದು ಅಸಿಸ್ಟಂಟ ಕಮೀಶನರರ ಮುಂದೆ ಪ್ರಕರಣದ ವಿಚಾರಣೆ ನಡೆಯುತ್ತಿದ್ದ ಹಾಗೇಯೆ ಅವರು ಕೋಹತಕ್ಕೆ ಬಂದಂಥ ಎಲ್ಲ ಕರ ಪತ್ರಗಳ ಪ್ರತಿಗಳನ್ನು ತರಿಸಿ ಹಿಂದು ಮುಸ್ಲಿಮರೆಲ್ಲರ ಸಮ್ಮುಖದಲ್ಲಿ ಅವುಗಳನ್ನು ಸುಟ್ಟು ಹಾಕಿದರು. ಕರ ಪತ್ರಗಳ ಮುಖಪುಟದಲ್ಲಿ ಶ್ರೀಕೃಷ್ಣ ಪರಮಾತ್ಮನ ಚಿತ್ರವೊಂದಿತ್ತಂತೆ. ಕರಪತ್ರಗಳ ಪ್ರತಿಗಳನ್ನು ಅಸಿಸ್ಟಂಟ ಕಮೀಶ್ನರರು ಸುಡುವಾಗ ಅದರಲ್ಲಿಯ ಶ್ರೀಕೃಷ್ಣನ ಭಾವಚಿತ್ರವೂ ಸುಟ್ಟು ಹೋದ ಬಗ್ಗೆ ಹಿಂದುಗಳ ಮನಸ್ಸಿಗೆ ನೋವಾಯಿತು. ಅಲ್ಲಿಂದ ಮರಳಿದ ಹಿಂದುಗಳೆಲ್ಲ ಅದೇ ವಿಷಯವನ್ನು ಎತ್ತಿಕೊಂಡು ಕೃಷ್ಣನ ಭಾವಚಿತ್ರಕ್ಕೆ ಅಗ್ನಿ ಸ್ಪರ್ಶ ಮಾಡಿದ್ದನ್ನು ವಿರೋಧಿಸಿ ಅಂಶಿಕ ಹರತಾಳ ಆಚರಿಸಿದರು. ಅಧಿಕಾರಿಗಳು ಕೂಡಲೇ ಕ್ರಮ ತೆಗೆದುಕೊಂಡು ಹಿಂದುಗಳಿಂದ ಹರತಾಳವಾಗದಂತೆ ತಡೆದರು. ಅಷ್ಟರಲ್ಲೇ ಮುಸ್ಲಿಮರು ಆಕ್ಷೇಪಾರ್ಹ ಕರಪತ್ರ ಹಾಗೂ ಕವನವನ್ನು ಉರ್ದು ಭಾಷೆಗೆ ಅನುವಾದಿಸಲಾದ ಕರಪತ್ರಗಳನ್ನು ಎಲ್ಲೆಡೆಗೆ ಗಡಿಯಲ್ಲಿಯ ಜನರಿಗೆ ಹಂಚಿ ಎಲ್ಲರೂ ಜೀವನದಾಸರ ಪ್ರಕರಣದ ವಿಚಾರಣೆ ಕಾಲಕ್ಕೆ ನ್ಯಾಯಾಲಯದಲ್ಲಿ ಹಾಜರಿರಬೇಕೆಂದು ಮನವಿ ಮಾಡಿಕೊಂಡಿದ್ದರು. ಆದರೆ ಅಂಥ ವಿಶೇಷವೇನೂ ನಡೆಯಲಿಲ್ಲ. ಹಿಂದುಗಳ ಕ್ಷಮಾಪಣೆ ಬಗ್ಗೆ ಮುಸ್ಲಿಮರು ತಮ್ಮ ಅಸಮಾಧಾನ ಸೂಚಿಸಿದ್ದರು. ಜೀವನದಾಸನು ಜೆಪಿಸಿ 102 ನೇ ಕಲಮಿನಡಿ ಬಂಧಿಸಲ್ಪಟ್ಟು 8 ನೇ ತಾರಿಖಿನಿಂದ ಡೆಪ್ಯುಟೀ ಕಮೀಶ್ನರನಿಂದ ಜಾಮೀನಿನ ಮೇಲೆ ಬಿಡುಗಡೆ ಮಾಡಲ್ಪಟ್ಟಿದ್ದನು. ಇದು ಸರಿ ಅಥವಾ ತಪ್ಪು ಎಂದೇನೂ ನಾನು ಹೇಳುತ್ತಿಲ್ಲ. ಅವನ ಬಿಡುಗಡೆಯಾದ ಬಳಿಕ ಮಹಮ್ಮದೀಯರ ಕ್ರೋಧ ಹೆಚ್ಚತೊಡಗಿತು. ಜೀವನದಾಸನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದರ ಬಗ್ಗೆ ಮುಸ್ಲಿಮರು ತಮ್ಮ ಅತೃಪ್ತಿಯನ್ನು ವ್ಯಕ್ತ

ಪಡಿಸಹತ್ತಿದ್ದರು. ಮಸೀದೆಯೊಂದರಲ್ಲಿ ಮುಸ್ಲಿಮರೆಲ್ಲರೂ ಸಭೆ ಸೇರಿ ಹಿಂದುಗಳೊಡನೆಯ ಸರ್ವ ಸಂಬಂಧಗಳನ್ನು ಕಡಿದುಕೊಳ್ಳಲು ನಿರ್ಣಯಿಸಿದರೆಂದು ಹೇಳಲಾಗುತ್ತಿದೆ. ನಾನು ಈ ವಿಷಯದಲ್ಲಿ ಹಿಂದು ಅಥವಾ ಮುಸ್ಲಿಮ ಸಮುದಾಯದವರ ಹೇಳಿಕೆಗಳನ್ನು ಆಧಾರವಾಗಿ ಹಿಡಿಯುತ್ತಿಲ್ಲ. ನಾನು ಇಷ್ಟೆಲ್ಲವನ್ನು ವಿಶೇಷ ನ್ಯಾಯಾಧೀಶರ ವರದಿ, ಚೀಫ್ ಕಮೀಶ್ನರರ ವರದಿ ಭಾರತ ಸರಕಾರದ ಗೊತ್ತುವಳಿಯಲ್ಲಿಯ ಅಂಶಗಳನ್ನು ಆಧರಿಸಿ ಹೇಳುತ್ತಿದ್ದೇನೆ. ಯಾವುದೇ ವರದಿಗಳಲ್ಲಿ ಮುಸ್ಲಿಮರು ಸಭೆಯಲ್ಲಿ ಆದುದೆಂದು ಹೇಳಲಾದ ಗೊತ್ತುವಳಿ ಸಂಬಂಧಗಳನ್ನು ಕಡಿದುಕೊಳ್ಳುವ ಗೊತ್ತುವಳಿಯ ಸ್ಪಷ್ಟವಾದ ಭಾಷೆ ವಿವರಣೆ ಯಾವುದನ್ನು ಸರಿಯಾಗಿ ವಿವರಿಸಿಲ್ಲ. ಇದರ ಮೇಲೆ ವಿಚಾರಣೆ ಹೇಗೆ ನಡೆದಿದೆ ವಿಚಾರಣೆ ವೈಖರಿ ಬಗ್ಗೆ ನೀವೇ ಒಂದು ನಿರ್ಣಯಕ್ಕೆ ಬರಬಹುದಾಗಿದೆ. ಆದರೆ ಅದು ಈಗ ಪ್ರಸ್ತುತವಲ್ಲ. ಸಂಬಂಧ ಕಡಿದುಕೊಳ್ಳುವ ಗೊತ್ತುವಳಿಯ ಅರ್ಥವೆಂದರೆ ಮುಸ್ಲಿಮರು ತಮ್ಮ ಬೇಡಿಕೆಗಳು ಈಡೇರದೇ ಹೋದಲ್ಲಿ ತಮ್ಮ ತೊಂದರೆ, ಅಸಮಾಧಾನಗಳ ನಿವಾರಣೆಯಾಗದಿದ್ದಲ್ಲಿ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ನೇರ ಕ್ರಮಕ್ಕೆ ಮುಂದಾಗುತ್ತೇವೆ ಎನ್ನುವುದೇ ಆಗಿದೆ. ತಮ್ಮ ಬೇಡಿಕೆಗಳು ಈಡೇರುವ ತನಕ ಎಲ್ಲ ಮುಸ್ಲಿಮರು ತಮ್ಮ ಪತ್ನಿಯರಿಂದ ಘಟಸ್ಫೋಟ ಪಡೆದ ರೀತಿಯಲ್ಲಿ ದೂರವಿರಬೇಕೆಂಬ ಪ್ರತಿಜ್ಞೆಯನ್ನು ಈ ಸಂಬಂಧ ಕಡಿದುಕೊಳ್ಳುವ ಗೊತ್ತುವಳಿಯು ಒಳಗೊಂಡಿದೆಯಂತೆ, ಎಂಟನೇ ತಾರೀಖಿನಂದು ಈ ನಿರ್ಣಯವಾಗಿದೆಂದು ಮುಸ್ಲಿಮರು ಹೇಳುತ್ತಾರೆ.

ದಿನಾಂಕ 9 ರ ನಸುಕಿನಲ್ಲಿ ತಂಟೆ, ಗೊಂದ, ದೊಂಬಿ ಶುರುವಾಗಿದೆ. ಸರಕಾರ ಈ ಹಂತದಲ್ಲಿ ಅಕ್ಷಮ್ಯ ನಿರ್ಲಕ್ಷ ಹಾಗೂ ಮೂರ್ಖತನದಿಂದ ತಪ್ಪಗಿದ್ದುಕೊಂಡು ಸೂಕ್ತ ಪ್ರತಿಬಂಧಕ ಕ್ರಮಗಳನ್ನು ಯೋಜಿಸದೇ ಮಹಾ ಪ್ರಮಾದವನ್ನೇ ಎಸಗಿದೆಂದು ನಾನು ಹೇಳಬಯಸುತ್ತೇನೆ. ಭಾರತ ಸರಕಾರ ವಿಶೇಷ ಗೆಜೆಟ್ಟಿನ 45ನೇ ಪುಟದಲ್ಲಿ ತನ್ನ ನಿರ್ಣಯವನ್ನು ಹೀಗೆ ಹೇಳುತ್ತದೆ. ''ಹಠಾತ್ತನೇ ಉಂಟಾದ ಗೊಂದಲಮಯ ಪರಿಸ್ಥಿತಿ ದ್ವೇಷದ ವಾತಾವರಣದಲ್ಲಿ ಸರಕಾರಕ್ಕೆ ಹಿಂಸೆ ಹಾಗೂ ದೊಂಬಿಯನ್ನು ತಡೆಯಲು ಕ್ರಮ ತೆಗೆದುಕೊಳ್ಳುವುದು ಅಸಾಧ್ಯವಿತ್ತು''. ಒಂದು ರಾತ್ರಿ ಮೊದಲಿಗೆ ಮುಸ್ಲಿಮರ ಸಂಬಂಧ ಕಡಿದುಕೊಳ್ಳುವ ಸಂಬಂಧದ ಗೊತ್ತುವಳಿಯ ವಿಷಯ ಡೆಪ್ಯೂಟಿ ಕಮೀಶ್ನರರಿಗೆ ತಿಳಿದಿದ್ದ ಪಕ್ಷದಲ್ಲಿ ದೊಂಬಿಯನ್ನು ತಡೆಯುವುದಕ್ಕೆ ಮೊದಲೇ ಕ್ರಮಗಳನ್ನು ಯೋಚಿಸಲು ಶಕ್ಯವಿತ್ತು ಎಂದು ಹೇಳಲಾಗಿದೆ. ಆದರೆ ಮುಸ್ಲಿಮರ ಈ ನಿರ್ಣಯ ತನಗೆ ಮೊದಲಿಗೆ ತಿಳಿದಿಲ್ಲವೆಂದು ಡೆಪ್ಯೂಟಿ ಕಮೀಶ್ನರರು ಹೇಳಿದ್ದಾರೆ. ಚೀಫ್ ಕಮೀಷ್ನರರ ವರದಿಯ ಪ್ರಕಾರ ದಿನಾಂಕ 9 ರ ನಸುಕಿನ ಒಂದು ಗಂಟೆಗೆ ಮುಸ್ಲೀಮರ ನಿರ್ಣಯ ಪೊಲೀಸ್ ಇನ್‌ಸ್ಪೆಕ್ಟರ್‌ರಿಗೆ ಗೊತ್ತಾಗಿತ್ತು ಅವರು ಎಲ್ಲ ಮಾಹಿತಿಗಳನ್ನು ಲಿಖಿತವಾಗಿ ಕೊಡುವಂತೆ ಹೆಡ್ ಕಾನ್‌ಸ್ಟೇಬಲ್‌ನಿಗೆ

ಆದೇಶಿಸಿದ್ದರು. ಬೆಳಗಿನ 6 ಗಂಟೆಗೆ ಮಾಹಿತಿ ನೀಡಲಾಯಿತು. ನಂತರ ಪೊಲೀಸ್ ಇನ್‌ಸ್ಪೆಕ್ಟರ್‌ರು ಧುರೀಣರ ಹೆಸರುಗಳನ್ನು ನೀಡುವಂತೆ ಹೆಡ್‌ಕಾನ್‌ಸ್ಟೇಬಲ್‌ನಿಗೆ ಆದೇಶಿಸಿದ್ದರು. ಬೆಳಿಗ್ಗೆ 9 ರ ತನಕ ಧುರೀಣರ ಯಾದಿ ಕೊಡುವುದಾಗಿಲ್ಲ. ಅಷ್ಟೊತ್ತಿಗಾಗಲೇ ಡೆಪ್ಯೂಟಿ ಕಮೀಶ್ನರನಾದವನಿಗೆ ಬೇರೆ ಸೂತ್ರಗಳಿಂದ ಮಾಹಿತಿಯೆಲ್ಲವೂ ಲಭ್ಯವಾಗಿದೆ. ಬೆಳಿಗ್ಗೆ 10 ಕ್ಕೆ ಹಿಂದುಗಳು ತ್ವೇಷಮಯ ಸ್ಥಿತಿ ಹಾಗೂ ಗಂಭೀರ ಪರಿಸ್ಥಿತಿಯ ಬಗ್ಗೆ ಡೆಪ್ಯೂಟಿ ಕಮೀಶ್ನರರಿಗೆ ತಂತಿ ಸಂದೇಶಗಳನ್ನು ಕಳುಹಿಸಿದ್ದಾರೆ. ಪರಿಸ್ಥಿತಿಯನ್ನು ಹೇಗೆ ಹತೋಟಿಗೆ ತರಲು ಸಾಧ್ಯವೆಂಬ ಸೂಚನೆ ಇವೆಲ್ಲವುಗಳಿಂದ ಡೆಪ್ಯೂಟಿ ಕಮೀಶ್ನರನಿಗೆ ದೊರೆತಿರಬೇಕು. ಸಪ್ಟೆಂಬರ್ 9 ರಂದು ಮಹಮ್ಮದೀಯರು ಟೌನ್‌ಹಾಲ್‌ದಲ್ಲಿ ಡೆಪ್ಯೂಟಿ ಕಮೀಶ್ನರರನ್ನು ಭೆಟ್ಟಿಯಾಗಿದ್ದಾರೆ. ಹಿಂದುಗಳು ಈ ಗುಂಪನ್ನು ಜನಜಂಗುಳಿ ಎಂದೇ ಕರೆದಿದ್ದಾರೆ. ವಿಶೇಷ ನ್ಯಾಯಾಧೀಶರು ಇದನ್ನೇ ಹೇಳಿದ್ದಾರೆ. ಜಿರಗಾ ಅಥವಾ ಮುಸ್ಲಿಮರ ಜನಜಂಗುಳಿ ಡೆಪ್ಯುಟಿ ಕಮೀಶ್ನರರನ್ನು ಭೆಟ್ಟಿಯಾಗಿ ಸನಾತನ ಸಭಾ ಸದಸ್ಯರನ್ನು ಬಂಧಿಸದಿರುವ ಬಗ್ಗೆ ಹಾಗೂ ಜೀವನದಾಸರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಕ್ಕೆ ತೀವ್ರವಾಗಿ ಆಕ್ಷೇಪಿಸಿದರು. ಡೆಪ್ಯೂಟಿ ಕಮೀಶ್ನರರು ಅವರಿಗೆ ಸೂಕ್ತ ಕ್ರಮದ ಭರವಸೆ ನೀಡಿ ಕಳಿಸಿದರು. ಸಂಬಂಧಿಸಿದ ಅಪರಾಧಿಗಳನ್ನು ಬಂಧಿಸಿ ಶಿಕ್ಷೆಗೆ ಗುರಿಪಡಿಸಲಾಗುವುದೆಂಬ ಭರವಸೆಯಿಂದ ಮುಸ್ಲೀಮರಿಗೆ ಸಮಾಧಾನವಾಗಿದೆಂದು ಸರಕಾರೀ ಅಧಿಕಾರಿಗಳು ಭಾವಿಸಿ ಸುಮ್ಮನಿದ್ದು ಬಿಟ್ಟರು. ಅಧಿಕಾರಿಗಳು ಯಾವಾಗಲೂ ಹೀಗೆಯೇ ಮಾಡುತ್ತಾರೆ. ಸ್ವತಃ ತಪ್ಪು ಮಾಡಿಬಿಟ್ಟು ನಂತರ ಅದರ ಹೊಣೆಗಾರಿಕೆಯನ್ನು ಹಿಂದುಗಳ ತಲೆಗೋ ಮುಸ್ಲಿಮರ ತಲೆಗೋ ಇಲ್ಲವೇ ಬೇರೆಯವರ ತಲೆಗೋ ಹೊರಿಸಿ ನಿಂದಿಸುತ್ತ ಕೂಡುವುದೇ ಅವರ ಕಾಯಕ. ಹಿಂದು ಮುಸ್ಲಿಮರು ಪರಸ್ಪರ ಸಂಘರ್ಷಕ್ಕೆ ಇಳಿದು ದೊಡ್ಡ ದೊಂಬಿಯೇಳಬಹುದೆಂಬ ಲಕ್ಷಣಗಳು ಸ್ಪಷ್ಟವಾಗಿ ಕಾಣುತ್ತಿದ್ದರೂ. ಹಿಂದುಗಳು ದಿ 8, 9 ಹಾಗೂ 10 ಈ ಮೂರು ದಿನಗಳಂದು ಡೆಪ್ಯೂಟಿ ಕಮೀಶ್ನರ, ಚೀಫ್ ಕಮೀಶ್ನರರು ಹಾಗೂ ಪೊಲೀಸ್ ಸುಪರಿಂಟೆಡೆಂಟ್‌ರಿಗೆ ತ್ವೇಷಮಯ ಸ್ಥಿತಿಯ ಬಗ್ಗೆ ತಂತಿ ಸಂದೇಶಗಳನ್ನು ಕಳಿಸಿ ಎಚ್ಚರಿಸಿಯೇ ಇದ್ದರೂ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲಾಗಿಲ್ಲ. ದುರಂತ ನಡೆದು ಹೋದ ಬಳಿಕ ಅಧಿಕಾರಿಗಳು ತಮಗೆ ಅದರ ಸಂಭವನೀಯತೆ ಬಗ್ಗೆ ಪೂರ್ವ ಮಾಹಿತಿಯೇ ಇರಲಿಲ್ಲವೆಂದು ಹೇಳುತ್ತಾರೆ. ಸರಕಾರದ ರೀತಿಯೇ ಹೀಗೆ. ಸರಕಾರ ಲಕ್ಷಾಂತರ ರೂ.ಗಳನ್ನು ಗುಪ್ತಚರ ವಿಭಾಗದ ಮೇಲೆ ಖರ್ಚು ಮಾಡುತ್ತದೆ. ಹೀಗಿರಬೇಕಾದರೂ ಸರಕಾರ ತನಗೆ ಯಾವುದೇ ಮಾಹಿತಿ ಅಥವಾ ಮುನಸ್ಸೂಚನೆ ಇರಲಿಲ್ಲವೆಂದು ರಾಗ ಎಳೆಯುತ್ತಿರುವುದು ಸರಿಯಲ್ಲ ಎಂದರು. (ನಾಚಿಕೆಗೇಡು, ನಾಚಿಕೆಗೇಡು ಎಂಬ ಕೂಗುಗಳು ಸಭಿಕರಲ್ಲಿಂದ ತೂರಿ ಬಂದವು.)

ಇಂಥದೇ ಒಂದು ಪ್ರಸಂಗ ಅಮೃತಸರ ಬಳಿ ಗೂರೂಕಾಬಾಗ್‌ದಲ್ಲಿ ನಡೆದುದು ನನ್ನ ನೆನಪಿಗೆ ಬರುತ್ತಿದೆ. ಗವರ್ನರ್ ಹಾಗೂ ಅವರ ಸಲಹಾ ಮಂಡಳಿ ಅಮೃತಸರಕ್ಕೆ ಬಂದಿದ್ದರೂ ಸಹ ಘಟನೆ ನಡೆದಿದ್ದ ಸ್ಥಳಕ್ಕೆ ಹೋಗಿ ವೀಕ್ಷಿಸಬೇಕಾದ ಹೊಣೆಗಾರಿಕೆಯಿಂದ ನುಣುಚಿಕೊಂಡಿದ್ದು ತುಂಬಾ ವಿಚಿತ್ರ ಹಾಗೂ ಪ್ರಜೆಗಳ ವಿಶ್ವಾಸಕ್ಕೆ ಎರವಾಗುವಂತಹದಿತ್ತು. ಗುರೂಕಾ ಬಾಗ್‌ದಲ್ಲಿ ಇಷ್ಟೆಲ್ಲ ದುರಂತ ನಡೆದಿದೆಂಬುದನ್ನೇ ತಮಗೆ ನಂಬಲಾಗುತ್ತಿಲ್ಲವೆಂದು ಹೇಳುತ್ತ ತೆಪ್ಪಗೆ ಕುಳಿತು ಕಾಲಹರಣ ಮಾಡುತ್ತಲಿದ್ದ ಅವರಿಗೆ ಹೇಗೂ ನೀವು ಇಲ್ಲಿಯ ತನಕ ಬಂದಿರುವಿರಿ ಸ್ವತಃ ನೀವು ಅಲ್ಲಿಗೆ ಭೇಟಿ ನೀಡಿ ಪ್ರತ್ಯಕ್ಷ ಪರೀಶೀಲಿಸಬಾರದೇಕೆ? ಎಂದು ಪ್ರಶ್ನಿಸಲಾಯಿತು. ಅದಕ್ಕವರು ''ನಾವು ಅಲ್ಲಿಗೆ ಹೋಗುವುದಿಲ್ಲ'' ಎಂದು ಉತ್ತರಿಸಿದ್ದರು. ಗುರೂಕಾ ಬಾಗ್‌ಕ್ಕೆ ಹೋಗುವುದನ್ನು ಬಿಡಿ ಆದರೆ ಘಟನೆಯಲ್ಲಿ ಗಾಯಗೊಂಡವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಚಿಕಿತ್ಸೆ ಪಡೆಯುತ್ತಿರುವ ಅವರನ್ನು ಪ್ರತ್ಯಕ್ಷ ಭೇಟಿ ಮಾಡಿ ಅವರಿಂದ ಪ್ರತ್ಯಕ್ಷ ಘಟನೆಯ ವಿವರಗಳನ್ನು ಕೇಳಿ ತಿಳಿಯಬಹುದಲ್ಲವೆ ಎಂದು ಪ್ರಶ್ನಿಸಿದಾಗ ''ಅದು ನಮ್ಮ ಘನತೆ ಪ್ರತಿಷ್ಠೆಗೆ ಕುಂದು ತರುವಂಥದು. ಆದ್ದರಿಂದ ನಾವು ಅಲ್ಲಿಗೆ ಹೋಗಲಾರೆವು. ಎಂದು ಮುಗುಳ್ನಗುತ್ತಲೇ ವ್ಯಕ್ತಪಡಿಸಿದ್ದರು ಸರಕಾರೀ ಅಧಿಕಾರಿಗಳು. ದುರಂತ ಅಥವಾ ಅಪರಾಧದ ಘಟನೆಗಳು ಸಂಭವಿಸಿದಾಗ ಅವುಗಳನ್ನು ನೋಡುವ ರೀತಿ ಇಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಘಟನೆಗಳು ಸಂಭವಿಸಿದಾಗ ಸರಕಾರಿ ಅಧಿಕಾರಿಗಳು ಎಷ್ಟೊಂದು ನಿರ್ಲಕ್ಷದಿಂದಿರುತ್ತಾರೆಂಬುದಕ್ಕೆ ಹಿಡಿದ ಕನ್ನಡಿಯಂತಿದೆ. ಸರ್ವ ಸಾಧನ ಸಂಪನ್ಮೂಲಗಳಿಂದ ಸುಸಜ್ಜಿತವಾದ ದೊಡ್ಡ ಗುಪ್ತಚರ ಸಿಬ್ಬಂದಿಯನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಂಡಿರುವ ಸರಕಾರ ಇಷ್ಟೊಂದು ಮಾಹಿತಿಯನ್ನು ದೊರಕಿಸಿಕೊಳ್ಳದೇ ಏನು ತಾನೇ ಮಾಡುತ್ತಿದೆ ? ಘಟನೆ ನಡೆದ ಸ್ಥಳದ ಸನಿಹಕ್ಕೆ ಹೋಗಿದ್ದರೂ ಅದನ್ನು ಪ್ರತ್ಯಕ್ಷ ನೋಡಬಯಸದೇ ಸತ್ಯವನ್ನು ಕಾಣಲು ನಿರಾಕರಿಸುವ ಆಡಳಿತದ ಈ ವೈಖರಿ ಎಲ್ಲೆಡೆ ಸ್ಪಷ್ಟವಾಗಿ ಎದ್ದು ಕಾಣುತ್ತಿದೆ.

ಗೆಳೆಯರೆ ನಾನು ತಮ್ಮ ವೇಳೆಯನ್ನು ಇನ್ನಷ್ಟು ತೆಗೆದುಕೊಂಡು ನಿಮಗೆ ಬೇಸರವುಂಟು ಮಾಡಬಯಸುವುದಿಲ್ಲ. ಸರಕಾರದ ಗುಪ್ತಚರ ವಿಭಾಗದ ಮೂರ್ಖತನ ಅದಕ್ಷತೆಗಳನ್ನು ನಿಮ್ಮ ಮುಂದೆ ಮಂಡಿಸಲಾದ ಗೊತ್ತುವಳಿ ಎತ್ತಿ ತೋರಿಸುತ್ತದೆ. ವಿಶೇಷ ನ್ಯಾಯಾಧೀಶರ ವಿಚಾರಣೆ ವರದಿ, ಚೀಫ್ ಕಮೀಶ್ನರರ ವರದಿ, ಸರಕಾರದ ನಿರ್ಣಯ ಇವುಗಳೆಲ್ಲವೂ ನಿರಾಧಾರ ಹಾಗೂ ಅದಕ್ಷತೆಯಿಂದ ಕೂಡಿದವುಗಳೆಂಬುದನ್ನು ಸ್ಪಷ್ಟ ಪಡಿಸುವಂತಿವೆ. ದಿನಾಂಕ 9 ರಂದು ಘಟನೆ ಶುರುವಾದಾಗಲೇ ಸರಕಾರ ಕ್ರಮ ತೆಗೆದುಕೊಂಡಿದ್ದ ಪಕ್ಷದಲ್ಲಿ ಪರಿಸ್ಥಿತಿ ಹತೋಟಿಗೆ ಬರಲು ಸಾಧ್ಯವಿತ್ತು. ಮರುದಿನ ಪರಿಸ್ಥಿತಿ ಶಾಂತವಾಗಿ ಯಾವುದೇ ಅನಾಹುತ ನಡೆಯುತ್ತಿರಲೇ ಇಲ್ಲವೆಂದು ನನ್ನ ಮನಸ್ಸಿಗೆ ಖಚಿತವಾಗಿದೆ.

ಸರಹದ್ ಪ್ರಾಂತದಲ್ಲಿಯ ಹಿಂದುಗಳು ಅಲ್ಲಿಯ ಬಹುಸಂಖ್ಯಾಕ ಮುಸ್ಲಿಮರ ಸ್ನೇಹ ವಿಶ್ವಾಸ ಗಳಿಸಿಕೊಳ್ಳದ ಹೊರತೂ ಸುರಕ್ಷಿತವಾಗಿರಲು ಸಾಧ್ಯವೇ ಇಲ್ಲ. ಪ್ರತಿಶತ 93 ರಷ್ಟು ದೊಡ್ಡ ಪ್ರಮಾಣದಲ್ಲಿ ವಾಸಿಸುತ್ತಿರುವ ಮುಸ್ಲಿಮ ಜನಸಾಗರದ ನಡುವೆ ಕೇವಲ ಪ್ರತಿಶತ 7 ರಷ್ಟಿರುವ ಹಿಂದುಗಳು ಸಿಂಧು ಸಾಗರದಲ್ಲಿ ಒಂದು ಬಿಂದುವಿನಂತಿದ್ದಾರೆ. ನೆರೆಯ ಪ್ರದೇಶಗಳಲ್ಲಿಯ ಮಹಮ್ಮದೀಯರೂ ಸರಹದ್ ಪ್ರಾಂತದವರೊಡನೆ ಬಂದು ಸೇರಿಕೊಂಡರಾದರೆ ಸರಹದ್ ಪ್ರಾಂತದಲ್ಲಿ ಹಿಂದುಗಳು ನಾಮಶೇಷಗೊಳ್ಳಲು ಕೆಲವೇ ಕ್ಷಣಗಳು ಸಹ ಹತ್ತಲಾರವು. ಕೋಹತದ ದುರಂತ ಸರಹದ್ ಪ್ರಾಂತದಲ್ಲಷ್ಟೇ ಅಲ್ಲ ಇಡೀ ಭಾರತದ ಇತಿಹಾಸದಲ್ಲೇ ಹಿಂದೆಂದೂ ಸಂಭವಿಸದ ದುರಂತವೆನಿಸಿದೆ. ಲೂಟಿ, ದರೋಡೆ, ಅಪಹರಣ ಇವುಗಳು ಮಿತಿಮೀರಿ ಹಿಂದೆಂದೂ ಸಂಭವಿಸದ ಹಿಂದು ಮುಸ್ಲಿಂ ದೊಂಬಿ ದುರಂತವೆನಿಸಿದೆ. ಇಷ್ಟೊಂದು ದೊಡ್ಡ ಪ್ರಮಾಣದ ದುರಂತ ಭಾರತದ ಬೇರಾವುದೇ ಭಾಗದಲ್ಲಿ ನನ್ನ ಪ್ರಾಂತವಾದ ಪಂಜಾಬಿನಲ್ಲಿ ನಡೆದುದನ್ನು ನನ್ನ ಜೀವಮಾನದಲ್ಲೇ ಕೇಳಿಲ್ಲ. ಕಂಡಿಲ್ಲ. ಹಿಂದು ಮುಸ್ಲಿಮರು ಎಲ್ಲೆಡೆ ಸ್ನೇಹ ಶಾಂತಿ ಬಂಧುತ್ವದಿಂದಲೇ ಇದ್ದಾರೆ. ದೊಡ್ಡ ಪ್ರಮಾಣದ ದುರಂತ ನಡೆದಿರುವುದಕ್ಕೆ ಏನಾದರೂ ವಿಶೇಷ ಕಾರಣವಿರಲಿಕ್ಕೇ ಬೇಕು. ಕೋಹತ ದುರಂತ ಕುರಿತಂತೆ ಸರಕಾರ ಏನೂ ತಿಳಿಯದಿರುವವನಂತೆ ಮುಗ್ಧವಾಗಿ ನಿರಪರಾಧಿಯಂತೆ ನಡೆದುಕೊಳ್ಳುವ ಮೂಲಕ ನುಣುಚಿಕೊಳ್ಳಲು ಸಾಧ್ಯವೇ ಇಲ್ಲ.

ಗೆಳೆಯರೇ ದಕ್ಷಿಣ ಭಾರತದ ನಿವಾಸಿಗಳಾದ ನೀವು ಸುರಕ್ಷಿತವೆಂದು ಭಾವಿಸಿದಿರಿರಾದರೆ ನಿಮ್ಮಷ್ಟು ಮೂರ್ಖರು ಬೇರೆ ಯಾರೂ ಇಲ್ಲ. ಅಂದರೆ ಕೋಹತದಲ್ಲಿಯ ದುರಂತದ ಪ್ರತಿಕ್ರಿಯೆ ಭಾರತದ ಇತರೆಡೆಗಳಲ್ಲಿ ಆರಂಭವಾದದ್ದಾದರೆ ಮುಸ್ಲೀಮರೂ ಸುರಕ್ಷಿತವಾಗಿರಲಾರರು. ಆ ರೀತಿ ಏನೂ ಆಗದಂತೆ ದೇವರು ಸದ್ಬುದ್ಧಿಯನ್ನು ಎಲ್ಲರಿಗೂ ದಯಪಾಲಿಸಲಿ. ಮುಂದೆ ಸ್ವತಂತ್ರವಾಗಲಿರುವ ಅಖಂಡ ಭಾರತದ ಸುಖ ಶಾಂತಿ ಸಮಾಧಾನ ಸಮೃದ್ಧಿಗಳಿಗೆ ಮತೀಯ ಸಂಘರ್ಷ, ವಿರಸ ಅಳಿದು ಶಾಂತಿ ಸಮಾನತೆ ಸ್ನೇಹ ಇವುಗಳು ಎಲ್ಲರಲ್ಲಿ ಬೆಳೆಯಲೇಬೇಕು. ಯಾವನೇ ಒಬ್ಬ ಹಿಂದು ಅಥವಾ ಮುಸಲ್ಮಾನನಿಗೆ ಮಾಡಲಾದ ಹಿಂಸೆ ಇಡೀ ಭಾರತ ಮಾತೆಗೆ ಉಂಟು ಮಾಡಲಾದ ಹಿಂಸೆಯೇ ಆಗಿದೆ ನಾವೀಗ ಯಾರನ್ನು ದೂಷಿಸದೇ ಮುಂದೆ ಆಗಬಹುದಾದ ದುರಂತವನ್ನು ತಡೆಯೋಣ. ನಾನು ಗೊತ್ತುವಳಿಯನ್ನು ವಿರೋಧಿಸುವುದಿಲ್ಲ. ಹಾಗೆಯೇ ಮೌಲಾನಾ ಶೌಕತ್ ಅಲಿಯವರು ಅನುಮೋದನೆ ಕಾಲಕ್ಕೆ ಓದಿದ ಪತ್ರದಲ್ಲಿಯ ಭಾವನೆಗಳನ್ನು ಗೌರವಿಸುತ್ತೇನೆ. ಹಿಂದು ಮುಸ್ಲಿಮರು ಶಾಂತಿಯಿಂದಿರುವುದಕ್ಕೆ ಕ್ರಮ ತೆಗೆದುಕೊಳ್ಳೋಣ. ಎಲ್ಲ ನೇತಾರರು ರಾವಳಪಿಂಡಿಗೂ ತೆರಳಿ ಸಮಸ್ಯೆಗೆ ಪರಿಹಾರ ಕಂಡು ಹಿಡಿದು ಸೂಕ್ತ ಕ್ರಮಕೈಗೊಳ್ಳಲಿ ಎಂದವರು ತಮ್ಮ ಭಾಷಣ ಕೊನೆಗೊಳಿಸಿದರು.

ಮೌಲಾನಾ ಜಾಫರ ಅಲಿಖಾನರು ನಂತರ ಉರ್ದುವಿನಲ್ಲಿ, ಶ್ರೀಮುದವೀಡಕರ ಕೃಷ್ಣರಾಯರು ಕನ್ನಡದಲ್ಲಿ ಗೊತ್ತುವಳಿ ಸಮರ್ಥಿಸಿ ಮಾತಾಡಿದರು. ಮಹಾತ್ಮಾಜಿಯವರು ಹಿಂದಿಯಲ್ಲಿ ಎಲ್ಲ ಚರ್ಚೆಯ ಸಾರವನ್ನಿತ್ತು ಇನ್ನೂ ಅನೇಕರು ಗೊತ್ತುವಳಿಯ ಬಗ್ಗೆ ಮಾತಾಡಲು ಮುಂದೆ ಬಂದಿದ್ದಾರೆ. ಈಗಾಗಲೇ ಸಾಕಷ್ಟು ಚರ್ಚೆಯಾಗಿ ತಿಳಿಯಬೇಕಾದ ವಿವರಗಳನ್ನೆಲ್ಲ ತಿಳಿದುಕೊಂಡೇ ಇರುವಿರಿ. ಈ ಗೊತ್ತುವಳಿಯನ್ನು ಹಿಂದು ಮುಸ್ಲಿಂರೆಲ್ಲರೂ ಬೆಂಬಲಿಸಿ ಮತ ಹಾಕಬೇಕೆಂದು ಕೇಳಿಕೊಂಡರು. ಮತಕ್ಕೆ ಹಾಕಲಾಗಿ ಗೊತ್ತುವಳಿ ಪಾಸಾಯಿತು.

ಅಸ್ಪೃಶ್ಯತಾ ನಿವಾರಣೆ ಠರಾವನ್ನು ಮಂಡಿಸಲು ಮಹಾರಾಷ್ಟ್ರದ ಎಲ್.ಬಿ. ಭೋಪಟಕರರನ್ನು ಕೇಳಿಕೊಳ್ಳುತ್ತ ಅಧ್ಯಕ್ಷ ಮಹಾತ್ಮಾ ಗಾಂಧೀಜಿಯವರು ಗೊತ್ತುವಳಿಯ ತಮಿಳು ಅನುವಾದ ಅಪೇಕ್ಷಿಸಿದವರಿಗೆ ಮಾನ್ಯರೇ ''ನಮ್ಮ ದೇಶದಲ್ಲಿ ಇಪ್ಪತ್ತೊಂದು ಪ್ರಾಂತಗಳಿವೆ. ಅವರೆಲ್ಲರ ಪ್ರಾಂತೀಯ ಭಾಷೆಗಳಲ್ಲಿ ಠರಾವುಗಳ ಅನುವಾದ ಒದಗಿಸುವುದು ಸಾಧ್ಯವಿಲ್ಲ. ಇಂಗ್ಲೀಷ, ಹಿಂದೀ ಅಥವಾ ಹಿಂದುಸ್ತಾನೀ ಹಾಗೂ ಅಧಿವೇಶನ ಯಾವ ಪ್ರಾಂತದಲ್ಲಿ ನಡೆಯುವುದೋ ಅಲ್ಲಿಯ ಪ್ರಾಂತೀಯ ಭಾಷೆಯಲ್ಲಿ ಒಂದು ಹೀಗೆ ಮೂರು ಭಾಷೆಗಳಲ್ಲಿ ಠರಾವುಗಳನ್ನು ಪೂರೈಸುವ ಕ್ರಮವನ್ನು ಹಾಕಿಕೊಳ್ಳಲಾಗಿದೆ. ಬೇರೆ ಬೇರೆ ಪ್ರಾದೇಶಿಕ ಭಾಷೆಗಳವರು ಠರಾವುಗಳ ಬಗ್ಗೆ ಸ್ನೇಹಿತರಿಂದ ವಿವರಗಳನ್ನು ಪಡೆಯಬಹುದು ಎಂದರು. ನಂತರ ಭೊಪಟಕರರು ಅಸ್ಪಶ್ಯತಾ ನಿವಾರಣೆ ಠರಾವನ್ನು ಹೀಗೆ ಮಂಡಿಸಿದರು.

ಅಸ್ಪಶ್ಯತೆ ನಿವಾರಣೆ ವಿಷಯದಲ್ಲಿ ಹಿಂದುಗಳ ಮನೋಭಾವ ಸಾಕಷ್ಟು ಬದಲಾವಣೆ ಹೊಂದಿ ಅನುಕೂಲಕರವಾಗಿ ಪರಿಣಮಿಸಿರುವುದು ಸ್ವಾಗತಾರ್ಹ. ಆದರೂ ಇನ್ನೂ ಈ ದಿಶೆಯಲ್ಲಿ ಸಾಧಿಸಬೇಕಾದದ್ದು ಬಹಳಷ್ಟಿದೆಂದು ಕಾಂಗ್ರೆಸ್ಸು ಅಭಿಪ್ರಾಯ ಪಟ್ಟು ಹಿಂದುಗಳ ಮನೋಭಾವದಲ್ಲಿ ಹೆಚ್ಚಿನ ಪರಿವರ್ತನೆಯನ್ನು ಬಯಸುತ್ತಿದೆ. ಕಾಂಗ್ರೆಸ್ ಸಂಸ್ಥೆಯಲ್ಲಿಯ ಎಲ್ಲ ಹಿಂದುಗಳು ಈ ದಿಶೆಯಲ್ಲಿ ಅಧಿಕ ಪ್ರಯತ್ನ ಪರಿಶ್ರಮ ಮಾಡಬೇಕೆಂದು ಕರೆಕೊಡುತ್ತಾರೆ. ಭಾವಿ, ಕೆರೆ, ನದಿ, ಜಲಾಶಯ, ದೇವರ ಗುಡಿ, ಇವುಗಳಲ್ಲಿ ಅಸ್ಪಶ್ಯರಿಗೆ ಮುಕ್ತ ಅನಿರ್ಬಂಧ ಗೌರವಯುತ ಪ್ರವೇಶ, ಪೂಜೆ, ಪ್ರಾರ್ಥನೆ ಸಲ್ಲಿಸುವ ಅವಕಾಶ, ಶೈಕ್ಷಣಿಕ ಸವಲತ್ತು ಮೊದಲಾದವುಗಳನ್ನು ಸಮಾನ ಅವಕಾಶಗಳನ್ನು ಎಲ್ಲೆಡೆ ಅಸ್ಪಶ್ಯರಿಗೆ, ದೀನ ದಲಿತರಿಗೆ, ತುಳಿತಕ್ಕೆ ಒಳಗಾಗಿರುವ ವರ್ಗಗಳಿಗೆ ಲಭ್ಯವಾಗಿಸಲು ಪ್ರಾಂತೀಯ ಕಾಂಗ್ರೆಸ್ ಸಮಿತಿಗಳ ಹಿಂದು ಸದಸ್ಯರು ತೀವ್ರ ಪ್ರಯತ್ನ ಮಾಡಬೇಕೆಂದು ಕರೆ ಕೊಡಲಾಗುತ್ತಿದೆ. ಸವರ್ಣೀಯ ಹಿಂದುಗಳು ಸಂಚರಿಸುವ ಬೀದಿಗಳಲ್ಲಿ ಅಸ್ಪಶ್ಯರಿಗೆ ನಡೆದಾಡುವ ಅವಕಾಶವನ್ನು ನಿರಾಕರಿಸುವ ಕ್ರಮಕ್ಕೆ ವಿರುದ್ಧವಾಗಿ ವೈಕಮ್‌ದಲ್ಲಿ ಅಸ್ಪಶ್ಯರು

ನಡೆಸುತ್ತಿರುವ ಅಹಿಂಸಾತ್ಮಕ ಹೋರಾಟಕ್ಕೆ ಬೆಂಬಲ ಸೂಚಿಸಿ ಯಶಕೋರಲಾಗುತ್ತಿದೆಯಲ್ಲದೇ ಪ್ರಗತಿ ಪರ ಹಾಗೂ ಪ್ರಜ್ಞಾವಂತವರ್ಗವೆನಿಸಿರುವ ತ್ರಾವಣಕೋರ ಸಂಸ್ಥಾನದ ಸರಕಾರ ಸತ್ಯಾಗ್ರಹಿಗಳ ಕೋರಿಕೆಯನ್ನು ಕೂಡಲೇ ಮನ್ನಿಸಿ ಗೌರವಯುತ ಹಾಗೂ ಸ್ವಾಭಿಮಾನದ ಜೀವನಕ್ಕೆ ಅವಕಾಶ ಕೊಡುವುದೆಂದು ಕಾಂಗ್ರೆಸ್ಸು ಆಶಿಸುತ್ತದೆಂಬ ಗೊತ್ತುವಳಿಯನ್ನು ಭೋಪಟಕರರು ಮಂಡಿಸಿ ಮರಾಠಿಯಲ್ಲಿ ಸಮರ್ಥಿಸುವ ಮಾತುಗಳನ್ನು ಹೇಳಿದರು.

ಕಲಕತ್ತಾದ ಹೈಕೋರ್ಟ್ ವಕೀಲ ಬಾಬು ಶೈಲೇಶನಾಥ ಬಿಷ್ಟ ಅವರು ಗೊತ್ತುವಳಿಯನ್ನು ಸಮರ್ಥಿಸಿ ಅನುಮೋದಿಸಿದರು. ತಮಿಳ್ನಾಡಿನ ಶ್ರೀ ಇ.ವ್ಹಿ ರಾಮಸ್ವಾಮಿ ನಾಯಕರ್ ಸ್ಥಾಪಿಸಿದ ನಾಸ್ತಿಕವಾದಿ ಪೆರಿಯಾರ ರಾಮಸ್ವಾಮಿ ನಾಯಕರ್. ಸಂಸ್ಕೃತದಲ್ಲಿ ಮಾತನಾಡಿದ ತಿರುವಣ್ಣಾ ಮಲೆಯ ರಮಣ ಮಹರ್ಷಿಗಳ ನಿಕಟವರ್ತಿ ಅನುಯಾಯಿ ಸಂಸ್ಕೃತ ಪಂಡಿತ ಕಾವ್ಯಕಂಠಮ್ ಆರ್ಯ ಸೋಮಯಾಜಲು ಗಣಪತಿ ಶಾಸ್ತ್ರಿ ತೆಲುಗಿನಲ್ಲಿ ಮಾತನಾಡಿದ ವಿಜಯವಾಡದ ವೇದಾಂತಮ್ ಶಂಭುಶಾಸ್ತ್ರಿ ಮರಾಠಿಯಲ್ಲಿ ಪಂಡಿತ ದಿವೇಕರ ಶಾಸ್ತ್ರಿಯವರು ಗೊತ್ತುವಳಿಯನ್ನು ಸಮರ್ಥಿಸಿ ಮಾತನಾಡಿದರು. ಅಸ್ಪಶ್ಯರಿಗೆ ಸ್ವರಾಜ್ಯದ ಸಮಾನತೆಯ ಹಕ್ಕನ್ನು ನಿರಾಕರಿಸುವ ಹಿಂದುಗಳು ದೇಶಕ್ಕೆ ಸ್ವರಾಜ್ಯವನ್ನು ಕೊಡುವಂತೆ ಆಂಗ್ಲರನ್ನು ಒತ್ತಾಯಿಸುವ ಹಕ್ಕನ್ನು ಹೇಗೆ ತಾನೇ ಪಡೆಯುತ್ತಾರೆ ಎಂದು ಪ್ರಶ್ನಿಸಿದರು. ಮಡಿವಂತ ಸವರ್ಣೀಯರ ಮಹಾತ್ಮರ ದರ್ಶನ ಮಾತ್ರದಿಂದ ಪಾಪಿಯೂ ಪವಿತ್ರನಾಗುತ್ತಾನೆಂದಾದರೆ ಸವರ್ಣೀಯರು ಅಸ್ಪೃಶ್ಯರನ್ನೂ ದೂರವೇಕೆ ಇರಿಸಬಯಸುತ್ತಾರೆ. ? ಪ್ರಭು ರಾಮ ಚಂದ್ರನು ಶಬರಿಯ ಭಕ್ತಿಗೆ ಮೆಚ್ಚಿ ಅವಳು ತಿಂದು ರುಚಿ ನೋಡಿದ ಹಣ್ಣಗಳನ್ನೇ ಭಕ್ಷಿಸಿದ ಹಾಗೂ ಕೃಷ್ಣನು ಸಮಗಾರನ ಮನೆಯಲ್ಲಿಯ ಖಿಚಡಿಯನ್ನೇ ಸವಿದ ಎಂಬ ಉದಾಹರಣೆಗಳೊಂದಿಗೆ ಅಸ್ಪಶ್ಯತೆಯು ಅಧರ್ಮವೆಂದೇ ಸಾರಿದರು.

ಪಂಡಿತ ಮದನ ಮೋಹನ ಮಾಲವೀಯರು ಈ ಸಂದರ್ಭದಲ್ಲಿ ಸ್ಥಳದಲ್ಲಿರಲಿಲ್ಲವಾದ್ದರಿಂದ ಅವರಿಗೆ ಮಾತನಾಡಲು ಸಾಧ್ಯವಾಗದಿದ್ದುದಕ್ಕೆ ಅಧ್ಯಕ್ಷ ಮಹಾತ್ಮಾಜೀ ವಿಷಾದಿಸಿದರು. ಮತಕ್ಕೆ ಹಾಕಲಾಗಿ ಗೊತ್ತುವಳಿಯ ವಿರುದ್ಧ ಓರ್ವನು ಮಾತ್ರ ಕೈ ಎತ್ತಿದ್ದರಿಂದ ಮಹಾತ್ಮಾಜಿ ಗೊತ್ತುವಳಿ ಪಾಸಾಗಿದೆ ಎಂದು ಸಾರಿದರು.

ಸಾಗರೋತ್ತರ ಭಾರತೀಯ ನಿವಾಸಿಗಳಿಗೆ ಅಲ್ಲಿಯ ವಿದೇಶೀ ಸರಕಾರಗಳಿಂದ ನ್ಯಾಯ ಒದಗಿಸಿಕೊಡಲು ಆಗ್ರಹಿಸುವ ಗೊತ್ತುವಳಿಯನ್ನು ಶ್ರೀಮತಿ ಸರೋಜಿನಿ ನಾಯಡು ಅವರು ಮಂಡಿಸಲು ಮುಂದೆ ಬಂದು ನಾನು ಮಹಾತ್ಮಾಜಿಯವರ ಚಾಳೀಸನ್ನು ಓದಲು ಎರವಲಾಗಿ

ಪಡೆಯುತ್ತಿದ್ದೇನೆ. ಅಂದರೆ ಅವರ ಜ್ಞಾನನಿಧಿ ಹಾಗೂ ಆಧುನಿಕ ವಿಚಾರಗಳನ್ನು ಅವರ ಈ ವಸ್ತುವಿನ ಮೂಲಕ ಅಪಹರಿಸಲು ನನಗೆ ಸಾಧ್ಯವಾದೀತು ಎಂಬ ಆಸೆ ಎಂದು ನುಡಿದರು.

ಸಾಗರೋತ್ತರ ಭಾರತೀಯ ನಿವಾಸಿಗಳಿಗೆ ಆಗುತ್ತಿರುವ ಪೀಡೆ, ಕಿರುಕುಳವನ್ನು ನಿವಾರಿಸಲಾಗುತ್ತಿಲ್ಲವೆಂಬ ಬಗ್ಗೆ ಈ ಅಧಿವೇಶನ ತನ್ನ ಅಸಮಾಧಾನ ಸೂಚಿಸುತ್ತಲಿದೆ. ಅವರಿಗೆ ತನ್ನ ಸಹಾನುಭುತಿಯನ್ನು ಸೂಚಿಸುತ್ತ ಭಾರತ ಸ್ವತಃ ಸ್ವರಾಜ್ಯ ಪಡೆಯದ ಹೊರತು ಅವರ ಅಸಹನೀಯ ತೊಂದರೆ ತಾರತಮ್ಯದ ಕಿರುಕುಳವನ್ನು ಸಂಪೂರ್ಣ ನಿವಾರಿಸಲು ಸಾಧ್ಯವಿಲ್ಲವೆಂದು ತನ್ನ ಅಭಿಮತ ವ್ಯಕ್ತಪಡಿಸುತ್ತದೆ. ದಕ್ಷಿಣ ಆಫ್ರಿಕೆ ಒಕ್ಕೂಟದ ಗವರ್ನರ್ ಜನರಲ್‌ನಿಂದ ನಾತಾಳ ಪ್ರಾಂತೀಯ ವಿಧಾನ ಮಂಡಳದಿಂದ ಸುಗ್ರೀವಾಜ್ಞೆ ಆಧರಿಸಿ ನಡೆಯುತ್ತಿರುವ ದಬ್ಬಾಳಿಕೆ, ಪುರಸಭೆಗಳ ಚುನಾವಣೆಗಳಲ್ಲಿ ಭಾರತೀಯ ಮೂಲದವರಿಗೆ ನಿರಾಕರಿಸಲಾದ ಮತಾಧಿಕಾರ ಇವುಗಳನ್ನು ಖಂಡಿಸಿ ಇದು 1924 ರಲ್ಲಿ ಕೇಂದ್ರ ಸರಕಾರ ಹಾಗೂ ಭಾರತೀಯರ ನಡುವೆ ಆದ ನಾತಾಳ ಸರಕಾರದ ಒಡಂಬಡಿಕೆ ಸ್ಪಷ್ಟ ಉಲ್ಲಂಘನೆ ಎಂದು ವ್ಯಕ್ತ ಪಡಿಸಲಾಯಿತು. ಕೆನ್ಯಾದಲ್ಲಿ ಇತರ ಆಫ್ರಿಕನ್ ಪ್ರಾಂತಗಳಲ್ಲಿ ದೇಶಗಳಲ್ಲಿ ಭಾರತೀಯರನ್ನು ಅಲ್ಲಿಯ ಮೂಲ ನಿವಾಸಿಗಳಿಂದ ಬೇರೆಯೇ ಎಂದು ಪರಿಗಣಿಸಿ ಭಾರತೀಯರಿಗೆ ನಾಗರಿಕ ಹಕ್ಕುಗಳನ್ನು ನಿರಾಕರಿಸುತ್ತಿರುವ ಕ್ರಮಗಳನ್ನು ಖಂಡಿಸಲಾಯಿತು.

ಸಾಗರೋತ್ತರ ಭಾರತೀಯರ ಪರಿಸ್ಥಿತಿಯ ಅಧ್ಯಯನ ಹಾಗೂ ಅವರಿಗೆ ನ್ಯಾಯ ದೊರಕಿಸುವ ಹೊಣೆ ಹೊತ್ತು ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ತೆರಳಿದ ತಮಗೆ ಪೂರ್ವ ಆಫ್ರಿಕೆಯಲ್ಲಿ ಭೆಟ್ಟಿಯಾದ ಓರ್ವನು ''ಜನರಲ್ ಸ್ಮಟ್ಸ್ ಬಹಳ ಬಲಶಾಲಿ ಕ್ರೂರ ಗವರ್ನರ್. ಅಂಥವನಿಂದ ನ್ಯಾಯ ಒದಗಿಸುವ ಶಕ್ತಿ ನಿಮಗುಂಟೆ ? ಎಂದು ಪ್ರಶ್ನಿಸಿದ್ದ. ಅದಕ್ಕೆ ನಾನು ಅವನಿಗಿಂತ ಕಡಿಮೆ ಶಕ್ತಿ ಸಂಪನ್ನೆಯೇನೂ ನಾನಿಲ್ಲ. ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಬಂದಿರುವ ನನ್ನ ಹಿಂದೆ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿದೆ. ಹೀಗಾಗಿ ಅವನಿಗಿಂತ ಹೆಚ್ಚು ಬಲಾಢ್ಯ ನಾನೇ ಎಂದು ಉತ್ತರಿಸಿದ್ದೆ, ಎಂದು ಸರೋಜಿನಿ ನಾಯ್ಡು ವಿವರಿಸಿ ಗೊತ್ತುವಳಿಯನ್ನು ಮಂಡಿಸಿದರು. ಸಾಗರೋತ್ತರ ಪ್ರದೇಶಗಳಿಗೆ ನಾವು ಇನ್ನು ಬರೀ ಕೂಲಿಗಳನ್ನಷ್ಟೇನೇ ಕಳುಹಿಸದೆ ಸುಶಿಕ್ಷಿತ ಉಚ್ಚ ಶಿಕ್ಷಣ ವಿಭೂಷಿತರನ್ನು ಕಳಿಸಿ. ಅವರ ನೇತೃತ್ವದಲ್ಲಿ ಭಾರತೀಯರಿಗೆ ಸಂಘಟಿತರಾಗಿ ನ್ಯಾಯ ದೊರಕಿಸಿಕೊಳ್ಳಲು ಸಾಧ್ಯವಾಗಬೇಕು. ಬರೀ ಬಾಯ್ಮಾತಿನ ಸಹಾನುಭೂತಿ ತೋರುವುದರಿಂದ ಏನೂ ಆಗದು ಎಂದರು. ಮದ್ರಾಸಿನ ಆರ್.ಕೆ. ಷಣ್ಮುಗಂ ಚೆಟ್ಟಿಯಾರ ಆಂಧ್ರದ ವ್ಹಿ.ಕೂರ್ಮಯ್ಯ ಅವರು ಗೊತ್ತುವಳಿ ಬೆಂಬಲಿಸಿ ಮಾತಾಡಿದರು.

ವ್ಯಾಸ ಪೀಠದ ಮೇಲೆ ಆಗಮಿಸಿದ ಕಾಂಗ್ರೆಸ್ಸಿನ ಹಿಂದಿನ ಅಧ್ಯಕ್ಷೆ ಡಾ॥ ಎನಿಬೆಸೆಂಟರನ್ನು ಅಧ್ಯಕ್ಷ ಗಾಂಧೀಜಿ ಹೃತ್ಪೂರ್ವಕ ಸ್ವಾಗತಿಸಿ ಕೆಲ ಮಾತುಗಳನ್ನು ಹೇಳುವಂತೆ ಕೇಳಿಕೊಂಡರು.

ಭಾರತದಲ್ಲಿ ಅನೇಕ ಬೇರೆ ಬೇರೆ ಪಕ್ಷಗಳು, ಬೇರೆ ಬೇರೆ ವಿಚಾರಗಳವರು ಇದ್ದಾರೆ. ಅಂಥವರೆಲ್ಲರೂ ಭಾರತದ ಸ್ವರಾಜ್ಯವನ್ನು ಬಯಸುವವರು ಹಾಗೂ ದೇಶಪ್ರೇಮಿಗಳಾಗಿದ್ದು ಅಂಥ ಎಲ್ಲರಿಗೂ ಕಾಂಗ್ರೆಸ್ಸಿನಲ್ಲಿ ಪ್ರವೇಶ ಸುಲಭವಾಗುವಂತೆ ಕ್ರಮ ಕೈಕೊಳ್ಳುವುದಗತ್ಯ ಎಂದರು.

ಹೀಗೆ ಹೇಳುವ ನೀವು ಯಾರು ನೀವು ಭಾರತೀಯರೇ ಅಲ್ಲವಲ್ಲ ? ಎಂದು ನನಗೆ ಪ್ರಶ್ನಿಸಬಹುದಾಗಿದೆ. ಹೌದು ಜನ್ಮತಃ ನಾನು ಭಾರತೀಯಳಲ್ಲವೆಂಬುದು ನಿಜವಾದರೂ ನಾನು ನನ್ನನ್ನು ಭಾರತದ ದತ್ತು ಪುತ್ರಿ ಎಂದೇ ಭಾವಿಸಿದ್ದೇನೆ. ನನ್ನ ಜನ್ಮ ಭೂಮಿ ಬೇರೆ ದೇಶವಾದರೂ ನಾನು ಈ ದೇಶದ ಮಗಳೆಂದೇ ಭಾವಿಸಿ ಭಾರತ ಮಾತೆಯ ಸ್ವತಂತ್ರ್ಯಕ್ಕಾಗಿ, ಸ್ವಯಮಾಡಳಿತಕ್ಕಾಗಿ ಹೋರಾಡುತ್ತ ಬಂದವಳಾಗಿದ್ದೇನೆ. ಜಗತ್ತಿನ ಬೇರೆ ಯಾವುದೇ ರಾಷ್ಟ್ರಕ್ಕಿಂತಲೂ ಭಾರತವನ್ನು ನಾನು ಪ್ರೀತಿಸುತ್ತ ಬಂದಿದ್ದೇನೆ., ಹೀಗಾಗಿ ನಾನು ಸಂಪೂರ್ಣ ಭಾರತೀಯಳೇ. ಈ ಹಕ್ಕು ಹಾಗೂ ಅಧಿಕಾರದಿಂದಲೇ ಕಾಂಗ್ರೆಸ್ಸು ಎಲ್ಲ ವಿಚಾರಗಳವರಿಗೆ ಹೇಗೊ ಮುಕ್ತದ್ವಾರವಿಡಬೇಕೋ ಆ ರೀತಿ ಇಡಲು ಸಾಧ್ಯವಾಗಿಲ್ಲವೆಂದು ಸ್ಪಷ್ಟಪಡಿಸುತ್ತೇನೆ'' ಎಂದರು.

ನೂಲುವುದಕ್ಕೆ ನನ್ನ ವಿರೋಧವಿಲ್ಲ. ನಾನು ಕೂಡ ನೂಲುತ್ತೇನೆ. ಆದರೆ ಕಾಂಗ್ರೆಸ್ ಪಕ್ಷದ ಅಧಿಕೃತ ಸದಸ್ಯಳಾಗಲು ನಿಶ್ಚಿತಗೊಳಿಸಲಾದ ಮಾಸಿಕ ಎರಡು ಸಾವಿರ ಯಾರ್ಡಿನಷ್ಟು ನೂಲುವ ಸಾಮರ್ಥ್ಯ ನನ್ನಲ್ಲಿಲ್ಲ. ಆದ್ದರಿಂದ ನನ್ನಂಥವರಿಗೆ ಕಾಂಗ್ರೆಸ್ಸಿನ ಬಾಗಿಲು ಸದಾ ಮುಚ್ಚಿಯೇ ಇರಬೇಕೇ ? ಎಂದು ಪ್ರಶ್ನಿಸಿದರು.

ಕಾಂಗ್ರೆಸ್ಸು ರಾಷ್ಟ್ರೀಯ ಪಕ್ಷ. ಬೇರೆ ಅಭಿಪ್ರಾಯಗಳವರನ್ನು ಕಾಂಗ್ರೆಸ್ಸಿನ ಹೊರಗಿಡುವ ಪ್ರಯತ್ನದಿಂದ ಕಾಂಗ್ರೆಸ್ಸು ರಾಷ್ಟ್ರೀಯವೆಂದು ನಿಜಾರ್ಥದಲ್ಲಿ ಕರೆಸಿಕೊಳ್ಳಲಾರದು. ಆದ್ದರಿಂದ ಎಲ್ಲ ರೀತಿಯ ಅಡೆತಡೆಗಳನ್ನು ನಿವಾರಿಸಿ ಕಾಂಗ್ರೆಸ್ಸಿನ ಬಾಗಿಲನ್ನು ಎಲ್ಲರಿಗೂ ತೆರೆದಿಡಿ ಎಂದು ಸಲಹೆ ಮಾಡಿದರು.

ನಂತರ ಅಧ್ಯಕ್ಷ ಗಾಂಧೀಜಿಯವರು ಮಾತನಾಡಿ ಎನಿಬೆಸೆಂಟರ ಮಾತುಗಳನ್ನು ನೀವೆಲ್ಲ ಕೇಳಿರುವಿರಿ ನಾನು ಅದರ ಬಗ್ಗೆ ಯಾವುದೇ ಅಭಿಪ್ರಾಯ ವ್ಯಕ್ತಪಡಿಸುತ್ತಿಲ್ಲ. ಕೈನೂಲು ವಂತಿಗೆ ಗೊತ್ತುವಳಿ ಈಗಾಗಲೇ ಸ್ವೀಕೃತವಾಗಿದೆ. ಬೆಸೆಂಟರೂ ಅದಕ್ಕೆ ಸಹಮತ ವ್ಯಕ್ತಪಡಿಸಿದ್ದಾರೆ. ಆದರೆ ಅವರ ಅಭಿಪ್ರಾಯವನ್ನು ನಾವು ಗೌರವಿಸುತ್ತೇವೆ ಎಂದು ಗಾಂಧೀಜಿ ವ್ಯಕ್ತಪಡಿಸಿದರು.

ಆಂಧ್ರದ ಶ್ರೀ ಟಿ.ಪ್ರಕಾಶಮ ಅವರು ಅಕಾಲಿ ಗೊತ್ತುವಳಿಯನ್ನು ಮಂಡಿಸಿದರು. ತಾಳ್ಮೆ, ಸಹನೆ, ಧೈರ್ಯ ಹಾಗೂ ಅಹಿಂಸೆಯಿಂದ ಗುರುದ್ವಾರಗಳ ಸುಧಾರಣೆ ಕುರಿತು ನಡೆದ ಅಕಾಲಿಗಳ ಆಂದೋಲನವನ್ನು ಗೊತ್ತುವಳಿಯಲ್ಲಿ ಬೆಂಬಲಿಸಲಾಯಿತು.

ನಾಭಾ ಜೈಲುಗಳಲ್ಲಿರಿಸಲಾದ ನೂರಾರು ಅಕಾಲಿ ಬಂಧಿತರ ಸಾವು ನೋವಿನ ಬಗ್ಗೆ ಅಸಮಾಧಾನ ಸೂಚಿಸಿ ಕಾಂಗ್ರೆಸ್ ಕಾರ್ಯ ಸಮಿತಿಯಿಂದ ನೇಮಕಗೊಂಡ ಅಕಾಲಿಗಳ ಮೇಲಿನ ದಬ್ಬಾಳಿಕೆಯ ತನಿಖಾ ಸಮಿತಿಗೆ ನಾಭಾ ಜೈಲುಗಳನ್ನು ಸಂದರ್ಶಿಸಿ ಸತ್ಯಾನ್ವೇಷಣೆ ಮಾಡಲು ಅವಕಾಶ ನೀಡದಿರುವುದನ್ನು ಗೊತ್ತುವಳಿ ಖಂಡಿಸುತ್ತದೆ. ನಾಭಾ ಜೈಲು ಅಧಿಕಾರಿಗಳ ಅಮಾನವೀಯ ವರ್ತನೆಯಿಂದಾಗಿ ಅಕಾಲಿ ಕೈದಿಗಳ ಮರಣವಾಗಿದೆ. ಮೃತರಿಗೆ ಈ ಸಭೆ ತನ್ನ ಸಹಾನುಭೂತಿ ವ್ಯಕ್ತ ಪಡಿಸಿ ಶಾಂತಿ ಕೋರುತ್ತದೆ. ಹಾಗೆಯೇ ಗುರುದ್ವಾರಗಳ ಸುಧಾರಣೆಗೆ ಆಂದೋಲನಕ್ಕೆ ಜಯ ದೊರೆತೇ ತೀರುವುದೆಂದು ಗೊತ್ತುವಳಿಯಲ್ಲಿ ಸಾರಲಾಗಿತ್ತು. ಸರದಾರ ಮಂಗಲ ಸಿಂಗರು ಗೊತ್ತುವಳಿಯನ್ನು ಅನುಮೋದಿಸಿದರು. ಗೊತ್ತುವಳಿ ಸರ್ವಾನುಮತದಿಂದ ಅಂಗೀಕೃತವಾಯಿತು. ಪಂ. ಜವಾಹರಲಾಲ ನೆಹ್ರು ಇಂಗ್ಲೀಷನಲ್ಲಿ ಶ್ರೀ ಕೃಷ್ಣರಾವ್ ಮುದವೀಡಕರರು ಕನ್ನಡದಲ್ಲಿ ಪಂ. ಸುಂದರಮಾರು ಹಿಂದಿಯಲ್ಲಿ ಗೊತ್ತುವಳಿಯನ್ನು ಸಮರ್ಥಿಸಿದರು.

ರಾಷ್ಟ್ರೀಯ ಶಾಲೆ ಮತ್ತಿತರ ಶೈಕ್ಷಣಿಕ ಸಂಸ್ಥೆಗಳನ್ನು ಮುಂದುವರಿಸಿಕೊಂಡು ಹೋಗಲು ಹಾಗೂ ಅಂಥ ಹೊಸ ಸಂಸ್ಥೆಗಳನ್ನು ಸ್ಥಾಪಿಸಲು ಪ್ರಾಂತೀಯ ಕಾಂಗ್ರೆಸ್ ಸಮಿತಿಗಳು ಪ್ರಯತ್ನಿಸಬೇಕೆಂಬ ಗೊತ್ತುವಳಿಯನ್ನು ಅಧ್ಯಕ್ಷ ಮಹಾತ್ಮಾಜೀ ಮಂಡಿಸಿ ಪ್ರಾದೇಶಿಕ ಭಾಷೆಗಳೇ ಶಿಕ್ಷಣ ಮಾಧ್ಯಮ ರಾಷ್ಟ್ರಭಾಷೆ ಹಿಂದಿಯ ಕಲಿಸುವಿಕೆ, ನೂಲುವ ಹಾಗೂ ನೇಯ್ಗೆಯ ತರಬೇತಿ ಹಿಂದು ಮುಸ್ಲಿಮ ಐಕ್ಯ ಹಾಗೂ ಅಸ್ಪೃಶ್ಯತೆ ನಿವಾರಣೆ ಇವುಗಳನ್ನು ಹೊಂದಿದ್ದಾರೆಯೇ ಶೈಕ್ಷಣಿಕ ಸಂಸ್ಥೆಗಳಿಗೆ ರಾಷ್ಟ್ರೀಯ ಎಂದು ಕರೆಯುವುದು ಅರ್ಥಪೂರ್ಣ ವೆನಿಸುತ್ತದೆಂದು ಗೊತ್ತುವಳಿಯನ್ನು ವಿವರಿಸಿದರು. ಹಾಗೆಯೇ ಇನ್ನೊಂದು ಗೊತ್ತುವಳಿ ಮಂಡಿಸಿ ದೊಡ್ಡ ಪ್ರಮಾಣದ ವೇತನ ಲಭ್ಯವಾಗುವಂಥ, ಸರಕಾರೀ ನೌಕರಿಯನ್ನು ಬಿಟ್ಟು ರಾಷ್ಟ್ರೀಯ ಶಾಲೆಗಳಲ್ಲಿ ಸೇವೆ ಸಲ್ಲಿಸುವುದೇ ಒಂದು ಮಹಾತ್ಯಾಗ ಹಾಗೂ ದೇಶ ಸೇವೆ. ಹೀಗೆ ಸೇವೆ ಸಲ್ಲಿಸುವಂಥವರು ತಮ್ಮ ಜೀವನ ನಿರ್ವಹಣೆಗಾಗಿ ಯಾದರೂ ಕೊಂಚ ವೇತನ ತೆಗೆದುಕೊಳ್ಳಬೇಕು. ಪುಕ್ಕಟೆ ಸೇವೆ ಸಲ್ಲಿಸದಿರಲಿ ಎಂದು ಗೊತ್ತುವಳಿಯಲ್ಲಿ ಸ್ಪಷ್ಟ ಪಡಿಸಿದರು.

11 ನೇ ಕಲಮಿನಲ್ಲಿದ್ದ 10 ರೂ. ವಂತಿಗೆಯನ್ನು ಒಂದು ರೂ. ಗೆ ಇಳಿಸುವ ಕಾಂಗ್ರೆಸ್ ಘಟನೆಯ ತಿದ್ದುಪಡಿಯನ್ನು ಗಾಂಧೀಜಿ ಸೂಚಿಸಿದರು. 23ನೇ ಕಲಮಿನ ಮೊದಲನೇ ವಾಕ್ಯದ ಕೊನೆಯನ್ನು ಕೋಶಾಧ್ಯಕ್ಷರು ಕಾಂಗ್ರೆಸ್ಸಿನ ಹಣಕಾಸು ಸ್ಥಿತಿಯ ನಿರ್ವಹಣೆ ಲೆಕ್ಕ ಪತ್ರದ ಹೊಣೆಗಾರಿಕೆ ಹೊಂದಿರುತ್ತಾರೆ. ಪ್ರಧಾನ ಕಾರ್ಯದರ್ಶಿಗಳಿಗೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕಾರ್ಯಾಲಯ ನಿರ್ವಹಣೆ ಜವಾಬ್ದಾರಿ ಇರುತ್ತದೆ. ಕಾಂಗ್ರೆಸ್ ಅಧಿವೇಶನ ಹಾಗೂ ವಿಶೇಷ ಅಧಿವೇಶನದ ಕಲಾಪಗಳ ವರದಿ ಲೆಕ್ಕ ಪತ್ರವನ್ನು ಪ್ರಧಾನ ಕಾರ್ಯದರ್ಶಿ ಸ್ವಾಗತ ಸಮಿತಿಯ ಸಹಕಾರದಿಂದ ಸಿದ್ಧ ಪಡಿಸಿ ಪ್ರಕಟಿಸಬೇಕು. ಅಧಿವೇಶನ

ಕೊನೆಗೊಂಡ ನಾಲ್ಕು ತಿಂಗಳಿಗಿಂತ ಹೆಚ್ಚಾಗದಿರುವಷ್ಟು ಅವಧಿಯಲ್ಲಿ ಎಲ್ಲವನ್ನೂ ಪ್ರಕಟಿಸಿ ಮಾರಾಟಕ್ಕೆ ಬಿಡುಗಡೆ ಮಾಡಬೇಕೆಂದು ಗಾಂಧೀಜಿ ಆದೇಶಿಸಿದರು.

1920 ರಲ್ಲಿ ಮದ್ಯ ಹಾಗೂ ಮಾದಕಗಳ ವಿರುದ್ಧ ಆರಂಭವಾದ ಚಳುವಳಿಯನ್ನು ಕಾಂಗ್ರೆಸ್ ಕಾರ್ಯಕರ್ತರು ಉತ್ಸಾಹದಿಂದ ಮುಂದುವರಿಸಿಕೊಂಡು ಹೋಗಲು ಸಿದ್ಧರಿದ್ದಾಗಲೇ ಅಕಸ್ಮಾತ್ ಹಿಂಸೆ ಪ್ರವೇಶಿಸಿ ನಿಂತು ಹೋಯಿತು. ಆದರೆ ಕಾಂಗ್ರೆಸ್ ಸಂಸ್ಥೆಯ ಕಾರ್ಯಕರ್ತರು ತಮ್ಮ ಇಂಥ ಪ್ರಯತ್ನ ಮುಂದುವರೆಸಬೇಕೆಂದು ಗಾಂಧೀಜಿ ಇನ್ನೊಂದು ಗೊತ್ತುವಳಿ ಮಂಡಿಸಿದರು. ಮದ್ಯ ಮಾದಕಗಳ ಬಳಕೆಯ ನಿಯಂತ್ರಣಕ್ಕಿಂತ ಅದನ್ನು ಸಂಪೂರ್ಣ ಪ್ರತಿಬಂಧಿಸಲು ಸರಕಾರ ಗಮನ ಕೊಡಬೇಕೆಂದು ಇನ್ನೊಂದು ಗೊತ್ತುವಳಿ ಮಂಡಿಸಿದರು. ಎಲ್ಲ ಗೊತ್ತುವಳಿ ಪಾಸಾದವು.

ಪಂ. ಜವಾಹರಲಾಲ ನೆಹ್ರು, ಶೋಯೆಬ್ ಕುರೇಶಿ ಹಾಗೂ ಬೈರೋಜಿ ಪ್ರೇಮಜೀ ಬರೋಚಾ ಮೂವರು ಪ್ರಧಾನ ಕಾರ್ಯದರ್ಶಿ, ಸೇಠ ರೇವಾಶಂಕರ ಜಗಜೀವ ಝುವೇರಿನ, ಸೇಠ ಜುಮ್ನಾಲಾಲ ಜಾಜಿ ಕೋಶಾಧ್ಯಕ್ಷ ಎಂದು ನೇಮಿಸುವ ಗೊತ್ತುವಳಿಯನ್ನು ಗಾಂಧೀಜಿಯೇ ಮಂಡಿಸಿದರು. ಎಲ್ಲವೂ ಪಾಸಾದವು. ಲೆಕ್ಕ ತಪಾಸಿಗರನ್ನು ಎ.ಐ.ಸಿ.ಸಿ. ನೇಮಿಸಲಿ ಎಂದವರು ಆದೇಶಿಸಿದರು.

ಅಧ್ಯಕ್ಷ ಗಾಂಧೀಜೀಯವರ ಸಮಾರೋಪ ಭಾಷಣ

ಅಧ್ಯಕ್ಷ ಮಹಾತ್ಮಾ ಗಾಂಧೀಜಿಯವರು ಮೊದಲಿಗೆ ಹಿಂದೀ ನಂತರ ಇಂಗ್ಲೀಷಿನಲ್ಲಿ ಸಮಾರೋಪ ಭಾಷಣ ಮಾಡಿ ಅಧಿವೇಶನದ ಕಲಾಪಗಳನ್ನು ನಡೆಸುವಲ್ಲಿ ವಿಷಯ ನಿಯಾಮಕ ಸಮಿತಿ ಹಾಗೂ ಬಹಿರಂಗ ಅಧಿವೇಶನದಲ್ಲಿ ತಮಗೆ ಅಪಾರ ಗೌರವ ಆತ್ಮೀಯತೆ ತೋರಿಸಿ ಸಂಪೂರ್ಣ ಸಹಕರಿಸಿದ ಬಗ್ಗೆ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು. ತಮಗೆ ಇಷ್ಟೊಂದು ಗೌರವ ನೀಡಿದುದರ ಬಗ್ಗೆ ಎಲ್ಲವೂ ತಮ್ಮ ಪೂರ್ವ ಜನ್ಮದ ಪುಣ್ಯ ದೇವರ ಕೃಪೆ ಎಂದು ಭಾವಪರವಶರಾಗಿ ನುಡಿದರು. ನಾನು ಬದುಕುವುದು ಭಾರತಕ್ಕೋಸುಗ. ನನ್ನ ಮರಣವೂ ಭಾರತದ ಸಲುವಾಗಿಯೇ ಒಬ್ಬ ಬಾಲಕ ತನ್ನ ತಂದೆಯನ್ನು ಬೇಡಿ ಬೇಕಾದುದನ್ನು ಪಡೆಯುವಂತೆ ನಾನೂ ದೇವರದೆುರು ನನ್ನ ಇಚ್ಛೆ ವ್ಯಕ್ತ ಪಡಿಸುತ್ತೇನೆ. ದೇವರು ನನಗೆ ಬೇಕಾದುದನ್ನು ಕೊಡುತ್ತಾನೆ. ದೇವರು ನನಗೆ ಎಷ್ಟು ಸಿಗುವುದಿದೆಯೋ ಅಷ್ಟನ್ನು ದಯಪಾಲಿಸುತ್ತಾನೆ. ದೇವರ ಇಚ್ಛೆಗೆ ವಿರುದ್ಧವಾಗಿ ಒಂದು ಹುಲ್ಲುಕಡ್ಡಿಯೂ ಅಲುಗುವುದಿಲ್ಲವಷ್ಟೇ ?

ಆದ್ದರಿಂದ ನೀವೆಲ್ಲ ಸೋದರ ಸೋದರಿಯರು ಭಾರತದ ಸೇವೆಗಾಗಿ ಬದ್ಧ ಕಂಕಣರಾಗಿರಿ. ನೀವೆಲ್ಲ ಗೊತ್ತುವಳಿ ಅಂಗೀಕರಿಸಿ ದೇವರ ಸಾಕ್ಷಿಯಾಗಿ ನಿಮ್ಮ ಕರ್ತವ್ಯಕ್ಕೆ ಬದ್ಧರಾಗಿರುವಿರಿ. ಅದರಂತೆ ನಡೆದುಕೊಳ್ಳಿರಿ. ನೀವು ಅಸ್ಪೃಶ್ಯರೆಂದು ಬಗೆದು ನಡೆದುಕೊಳ್ಳು ವುದರಿಂದ ಹಿಂದು ಸಮಾಜವನ್ನೇ ನಾಶ ಮಾಡುತ್ತಿರುವಿರೆಂದು ಅಸ್ಪೃಶ್ಯತಾ ನಿವಾರಣೆ ಗೊತ್ತುವಳಿ ಸಮರ್ಥಕ ಭೋಪಟಕರ ಹೇಳಿದ್ದು ನನಗೆ ಆನಂದವುಂಟು ಮಾಡಿದೆ. ಮೂವರು ವಿದ್ವಾನ ಶಾಸ್ತ್ರಿಗಳು ಹಿಂದು ಧರ್ಮದಲ್ಲಿ ಅಸ್ಪೃಶ್ಯತೆಯೆಂಬುದಕ್ಕೆ ಸ್ಥಾನವಿಲ್ಲವೆಂದು ತಮ್ಮ ವಿದ್ವತ್‌ಪೂರ್ಣ ಸಮರ್ಥನೆಯಲ್ಲಿ ಸ್ಪಷ್ಟ ನುಡಿದುದು. ನನಗೆ ಆನಂದವನ್ನು ಉಂಟು ಮಾಡಿದೆ. ಹಿಂದು-ಮುಸ್ಲಿಮರು ಪರಸ್ಪರರ ವೈರಿ ಎಂದು ತಿಳಿಯದೇ ಸೋದರರೆಂದು ತಿಳಿಯಬೇಕೆಂದು ಮೌಲಾನಾ ಹಜರತ ಶೌಕತ ಅಲಿ ಹೇಳಿದ್ದಾರೆ. ಲಾಲಾ ಲಜಪತರಾಯರೂ ಹಿಂದು ಮುಸ್ಲಿಂ ಐಕ್ಯ ಅಗತ್ಯವೆಂದಿದ್ದಾರೆ. ಭಾವೈಕ್ಯ ಹಿಂದು ಮುಸ್ಲಿಮರಲ್ಲಷ್ಟೇ ಅಲ್ಲ ಮಾನವ ಕುಲವೇ ಭಾವೈಕ್ಯದಿಂದಿರಬೇಕೆಂದು ಲಾಲಾ ಲಜಪತರಾಯ್ ಹೇಳಿದ್ದಾರೆ. ರಾಮಕೃಷ್ಣರನ್ನು ಮುಸಲ್ಮಾನರು ನಿರಾಕರಿಸಿದರೆ ಪ್ರತಿಕ್ರಿಯೆಯಾಗಿ ಪೈಗಂಬರರನ್ನು ನಿಂದಿಸುವ ಹುಚ್ಚುತನಕ್ಕೆ ಹಿಂದುಗಳು ಇಳಿಯುವುದು ಬೇಡವೆಂದು ಭೋಪಟಕರರು ಹೇಳುತ್ತಾರೆ. ಅವರ ಈ ಮಾತು ಸ್ವರಾಜ್ಯದ ಪ್ರತ್ಯಕ್ಷಮೂರ್ತಿಯೇ ಎನಿಸಿದ ಲೋಕಮಾನ್ಯರನ್ನು ನೆನಪಿಗೆ ತರುತ್ತದೆ. ಲೋಕಮಾನ್ಯ ಟಿಳಕರು ತಮ್ಮ ಪತ್ನಿಯ ದೇಹಾಂತ್ಯವಾದ ಸಂದರ್ಭದಲ್ಲೂ ಸ್ವರಾಜ್ಯದ ಆಂದೋಲನದಲ್ಲೇ ಗಟ್ಟಿಯಾಗಿ ನಿಂತು ಕ್ರಿಯಾಶೀಲರಾಗಿದ್ದರೆಂಬುದನ್ನು ನಾನು ಕೇಳಿ ತಿಳಿದಿದ್ದೇನೆ. ಇಂಥ ಸ್ವರಾಜ್ಯದ ಇಚ್ಛೆಯ ಜ್ವಾಲಾಮುಖಿ ಪ್ರಕಟಗೊಂಡರೆ ಜನ ಏನು ತಾನೇ ಸಾಧಿಸಲಿಕ್ಕಿಲ್ಲ? ಇಂದು ನಾನು ಸುಡುವ ಮಾತನ್ನು ಹೇಳುತ್ತಿಲ್ಲ. ವಿದೇಶೀ ಬಟ್ಟೆಗಳನ್ನೇನೋ ನಾವು ಸುಟ್ಟು ಹಾಕಿದೆವು. ಆದರೆ ಆ ಆಂದೋಲನದಲ್ಲಿ ಶಾಂತಿಯನ್ನೇ ಬಿಟ್ಟುಬಿಟ್ಟೆವು. ವಿದೇಶೀ ಬಟ್ಟೆಗಳ ಹೋಳಿ ಹೆಸರಿನಲ್ಲಿ ಅಲ್ಲಲ್ಲಿ ಕಲ್ಲುಗಳ ರಾಶಿ ಬಿದ್ದಿತು. ಈಗ ಸಂಪೂರ್ಣ ಶಾಂತಿಯಿಂದ ನಮ್ಮ ಹೋರಾಟ ನಡೆಸೋಣ.

ಸತ್ಯ - ಅಸತ್ಯ ಎರಡೂ ಜೊತೆ ಜೊತೆಯಾಗಿರಲಾರವು. ಸತ್ಯದ ಹೆಸರಿನಲ್ಲಿ ಅಸತ್ಯ ಅನುಸರಿಸಿದರೆ ದೇಹವೇ ನಾಶವಾಗುತ್ತದೆ. ನನ್ನ ಮನಸ್ಸು ಸಹ ಸುಟ್ಟುಹೋಗುತ್ತದೆ ನನ್ನನ್ನು ನಿಂದಿಸಿರಿ, ನನಗೆ ಹೊಡೆಯಿರಿ, ಪಾದರಕ್ಷೆ ಎಸೆಯಿರಿ, ನನ್ನ ಮೇಲೆ ಥೂ ಎಂದು ಉಗುಳಿರಿ. ನನಗೆ ಸಿಟ್ಟುಬರುವುದಿಲ್ಲ. ಆದರೆ ನೀವು ದೇವರ ಹೆಸರಿನಲ್ಲಿ ಪ್ರತಿಜ್ಞೆಗೈದು ಉಲ್ಲಂಘಿಸಿದರೆ ಮಾತ್ರ ನನಗೆ ಸಹನೆ ಮೀರುತ್ತದೆ. ಮಾಡಿದ ಪ್ರತಿಜ್ಞೆಯಂತೆ ನಡೆದುಕೊಳ್ಳದೇ ಹೋದರೆ ನನಗೆ ಶರೀರವೇ ಸುಟ್ಟು ಬೆಂದು ಹೋದಂಥ ಅನುಭವವುಂಟಾಗುತ್ತದೆ. ಸ್ವತಃ ಅಪವಿತ್ರ ನಾಗಿದ್ದುಕೊಂಡು ಪವಿತ್ರತೆಯನ್ನು ಸಮರ್ಥಿಸತೊಡಗಿದವರನ್ನು ನೋಡಿದಾಗ ನಾನು

ಸಾಯುವುದಿಲ್ಲವೇಕೆ ? ಎಂದುಕೊಳ್ಳುತ್ತೇನೆ. ಅಂಥವರನ್ನು ಕಣ್ಣೆತ್ತಿಯೂ ನೋಡದೇ ನಾನೇ ಸತ್ತು ಹೋಗಬೇಕೆನಿಸುತ್ತದೆ. ಸ್ವರಾಜ್ಯವಾದಿಗಳು ಹಾಗೂ ಬದಲಾವಣೆ ಬೇಡಸ್ನುವವರು ಕೂಡಿ ಐಕ್ಯದಿಂದ ಕಾರ್ಯ ಮಾಡಬೇಕು ಕಟ್ಟಿಗೆ ತುಂಡುಗಳು ಬೇರೆ ಬೇರೆಯಾಗಿದ್ದರೆ ಅವುಗಳನ್ನು ಮುರಿಯುವುದು ಸುಲಭ ಆದರೆ ಅವೇ ಕಟ್ಟಿಗೆಗಳನ್ನು ಹಗ್ಗದಿಂದ ಕಟ್ಟದಾಗ ಅವುಗಳನ್ನು ಮುರಿಯಲು ಸಾಧ್ಯವಿಲ್ಲವೆಂದು ಎನಿಬೆಸಂಟ ಹಿತವಚನ ನೀಡಿದ್ದಾರೆ.

ಸ್ವರಾಜ್ಯವಾದಿಗಳು ಕೆಟ್ಟವರು ಎಂಬುದನ್ನು ಮರೆತು ಬಿಡೋಣ. ಪವಿತ್ರಾತ್ಮರಿಗೆ ಕಾಣುವುದು ಪವಿತ್ರಾತ್ಮರೇ. ಆತ್ಮ, ಸ್ಫಟಿಕದಂತೆ ಶುಭ್ರ, ದೋಷಾತೀತವೆಂದು ಶಂಕರಾಚಾರ್ಯರು ಹೇಳಿದ್ದಾರೆ. ದೋಷವಿರುವುದು ಮಾಯೆಯದು ಎಂದವರು ಹೇಳುತ್ತಾರೆ. ಹೀಗೆ ನಾವೆಲ್ಲರೂ ಪ್ರೇಮ ವಿಶ್ವಾಸಗಳಿಂದ ಬಾಳೋಣ. ವಿಶ್ವಾಸಘಾತ ಮಾಡುವವರಿಗೆಯೇ ಕೇಡು ತಪ್ಪದು. ಪಂ. ಜವಾರಹಲಾಲರನ್ನು ನಾನು ನನ್ನ ಮಗನಿಗಿಂತ ಹೆಚ್ಚಾಗಿ ಭಾವಿಸುತ್ತೇನೆ. ಅವರಿಂದ ಕೆಲಸ ತೆಗೆದುಕೊಳ್ಳುತ್ತೇನೆ. ಜಗತ್ತು ಮುಂದೆ ಅವರನ್ನು ಪೂಜಿಸಲಿದೆ. ಅವರ ಮೇಲೆ ಪುಷ್ಪವೃಷ್ಟಿ ಮಾಡಲಿದೆ. ನಾನು ಎಲ್ಲ ಕಾರ್ಯದರ್ಶಿಗಳಿಗೂ ಸ್ವರಾಜ್ಯ ನಮಗೆ ಹೆಚ್ಚೆಚ್ಚು ಹತ್ತಿರವಾಗುವಂತೆ ಸ್ವರಾಜ್ಯ ಸಿದ್ಧಿಯಾಗುವಂತೆ ಕಾರ್ಯ ಮಾಡಲಿ ಎಂದು ಕೇಳಿಕೊಳ್ಳುತ್ತೇನೆ.

ಸ್ವಯಂಸೇವಕರನ್ನು ಉತ್ತಮ ತರಬೇತಿ ನೀಡಿ ಅನುವುಗೊಳಿಸಿದ ಡಾ॥ ನಾ.ಸು ಹರ್ಡಿಕರ ಹಾಗೂ ಸ್ವಾಗತ ಸಮಿತಿಯವರನ್ನು ಅಭಿನಂದಿಸದೇ ಹೋದರೆ ನನ್ನನ್ನು ನಾನೇ ಕ್ಷಮಿಸಿಕೊಳ್ಳಲಾರೆ. ಅವರೆಲ್ಲರಿಗೂ ಧನ್ಯವಾದಗಳು.

ಪಂ. ಮೋತಿಲಾಲ ನೆಹ್ರು ಅವರು ವಂದನಾರ್ಪಣೆಗೈದರು. ಸಂಜೆ 5.45 ಕ್ಕೆ ಅಧಿವೇಶನ ಕಲಾಪಗಳನ್ನು ಅಧ್ಯಕ್ಷರು ಕೊನೆಗೊಳಿಸಿದರು.



ಪದ್ಮಾವತಿಬಾಯಿ ಹಾಗೂ ವಾಮನರಾವ್ ದೇಸಾಯಿ ಬಿದರಿ

ಆ ನಿರ್ಧಾರ ಸ್ನೇಹಿತರಲ್ಲಿ ರೋಮಾಂಚನವನ್ನೇ ತಂದಿತ್ತು. ಅವರ ವಯಸ್ಸಿನಲ್ಲೇನೂ ಮುಪ್ಪಿರಲಿಲ್ಲ. 20 ರಿಂದ 25 ರ ವರ್ಷದವರೆಗಿನ ತರುಣರು ಇರಬೇಕು.

ಅಧಿವೇಶನದ ಸ್ವಾಗತಾಧ್ಯಕ್ಷ ಗಂಗಾಧರರಾವ ದೇಶಪಾಂಡೆ, ಸೇವಾ ದಳದ ಮುಖ್ಯಸ್ಥ ಡಾ|| ನಾ.ಸು. ಹರ್ಡೀಕರ ಅವರ ಕಂಗಳೂ ಸಹ ಉತ್ಸಾಹದಿಂದ ಅರಳಿದ್ದವು. ಆ ನಿರ್ಧಾರವೇ ಹಾಗಿತ್ತು. ಅವರೆಲ್ಲ ಸನಾತನಿ ಬ್ರಾಹ್ಮಣರು. ಆದರೆ ರಾಷ್ಟ್ರಸೇವೆಗೆ ತಮ್ಮನ್ನು ಅರ್ಪಿಸಿಕೊಂಡವರು. ಮೇಲು ಕೀಳು ಅನ್ನದೆ ಹಾಗೂ ಜಾತಿ ಜಾತಿಗಳಲ್ಲಿಯ ಅಂತಸ್ತಿನ ಕಿರೀಟವಿಲ್ಲದ ಈ ತರುಣರು ಅಧಿವೇಶನದ ಎರಡೂ ದಿನಗಳಲ್ಲಿ ಸಫಾಯಿ ಕಾರ್ಯ ಮಾಡುವದಾಗಿ ಹೇಳಿದ್ದರು. ಸ್ಥಳೀಯ ಭಾಷೆಯಲ್ಲಿ ಭಂಗಿ ಕೆಲಸ ಮಾಡುತ್ತಾರಲ್ಲ ಅದು. ಕರ್ನಾಟಕದಲ್ಲಿ ಭಂಗಿ ವೃತ್ತಿಯನ್ನು ನಿಷೇಧಿಸುವವರೆಗೂ ಅಂತ್ಯಜರೇ ಈ ಕೆಲಸವನ್ನು ಮಾಡುತ್ತ ಬಂದಿದ್ದರು.

ಇಲ್ಲಿಂದಲೇ ನಮ್ಮ ರಾಷ್ಟ್ರಸೇವೆ ಪ್ರಾರಂಭವಾಗಲಿ ಎಂದು ಅವರು ಬಯಸಿದರು. ಯಾವುದೇ ಮುಜುಗರ ನಾಚಿಕೆ ಇಲ್ಲದೆ ಅವರು ಅಧಿವೇಶನದ ಎರಡೂ ದಿನಗಳಲ್ಲಿ ಶೌಚಾಲಯ ಸಫಾಯಿ ಕೆಲಸವನ್ನು ನಿಷ್ಠೆಯಿಂದ ಮಾಡಿದರು. ವಾಮನರಾವ ದೇಸಾಯಿ - ಬಿದರಿ ಈ ತರುಣರಲ್ಲಿ ಅಗ್ರಗಣ್ಯರು.

ಅಧಿವೇಶನದ ನಂತರ ಗಂಗಾಧರರಾವ ದೇಶಪಾಂಡೆ ಅವರಿಗೆ ಬರೆದ ಪತ್ರದಲ್ಲಿ ಮಹಾತ್ಮಾ ಗಾಂಧೀಜಿಯವರು ಈ ತರುಣರ ಸಫಾಯಿ ಸೇವೆಯನ್ನು ಕೊಂಡಾಡಿದರಲ್ಲದೇ ತಮ್ಮ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಇದನ್ನು ಸ್ಮರಿಸಿ 'ಈ ತರುಣರು ದೇಶದ ಎಲ್ಲರಿಗೂ ಆದರ್ಶ ಪ್ರಾಯರಾಗಿದ್ದಾರೆಂದು' ವರ್ಣನೆ ಮಾಡಿದರು.

ಆಗ 24 ವರ್ಷದ ತರುಣರಿದ್ದ ವಾಮನರಾವ ಬಾಳಾಜಿರಾವ ದೇಸಾಯಿ ಇವರು ಬೆಳಗಾವಿಗೆ ಬಂದಿದ್ದು ಮೆಟ್ರಿಕ್ಯುಲೇಶನ್ ವರೆಗಿನ ತಮ್ಮ ಶಿಕ್ಷಣ ಪಡೆಯಲು. ಅಲ್ಲಿಯ ಬೆನನ್‌ಸ್ಮಿತ್ ಹೈಸ್ಕೂಲಿನಲ್ಲಿ ಕಲಿಯುತ್ತಿದ್ದಾಗಲೇ ಲೋಕಮಾನ್ಯ ಟಿಳಕ ಅವರ ರಾಷ್ಟ್ರೀಯ ವಿಚಾರಧಾರೆಗೆ ಮನಸೋತು ಶಿಕ್ಷಣ ಅರ್ಧಕ್ಕೆ ಬಿಟ್ಟರು. ಮತ್ತು ತಮ್ಮನ್ನು ದೇಶಕ್ಕೆ ಅರ್ಪಿಸಿಕೊಂಡರು. ಬೆಳಗಾವಿಯ ಕಾಂಗ್ರೆಸ್ಸು ಅವರ ದೇಶ ಸೇವೆಗೆ ಪ್ರಥಮ ಅವಕಾಶವನ್ನು ಒದಗಿಸಿತು. ಈ ಅಧಿವೇಶನದಲ್ಲಿ ಖಾದಿ ಪ್ರದರ್ಶನವೊಂದನ್ನು ಅವರು ಸಂಘಟಿಸಿದ್ದರು.

ಈ ಪ್ರದರ್ಶನವನ್ನು ಗಾಂಧೀಜಿ ವೀಕ್ಷಿಸುತ್ತಿದ್ದಾಗ ವಾಮನರಾಯರನ್ನು ಸಂಬೋಧಿಸುತ್ತ 'ಆವೋ ಜವಾನ್ ಇಧರ ಆವೋ' ಎಂದು ಹೇಳಿ 'ತುಮನೇ ಬಹುತ್ ಅಚ್ಛಾ ಕಾಮ ಕಿಯಾ ಎಂದು ಹೇಳಿ ಬೆನ್ನು ಚಪ್ಪರಿಸಿದ್ದರು. ಗಾಂಧೀಜಿಯ ಈ ಬೆನ್ನು ಚಪ್ಪರಿಕೆಯಿಂದ ವಾಮನರಾಯರ ಶರೀರ ಮತ್ತು ಮನ ಸ್ವಾತಂತ್ರ್ಯದ ಸಂಜೀವಿನಿ ಸ್ಪರ್ಶವಾಗಿತ್ತು. ಗಾಂಧಿ ಸರ್ವವ್ಯಾಪಿ ಆಗಿಬಿಟ್ಟರು.

ಈಗ ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ಕೃಷ್ಣಾ ನದಿ ತೀರದ ಬಿದರಿ ವಾಮನರಾಯರ ಹುಟ್ಟೂರು. ಅಲ್ಲಿಯ ದೇಸಗತಿ ಮನೆತನಕ್ಕೆ ಇವರ ಮನೆತನ ಗುಮಾಸ್ತಗಿರಿ ಮಾಡುತ್ತಿತ್ತು. ಇದಕ್ಕಾಗಿ ನೂರು ಎಕರೆ ಭೂಮಿಯೂ ಅವರಿಗೆ ಉಂಬಳಿಯಾಗಿತ್ತು. ಹಾಗೂ ಬಿದರಿಯಲ್ಲಿ ಈ ಮನೆತನಕ್ಕೆ ದೊಡ್ಡ ಮನೆಯೂ ಇತ್ತು. ಬೆಲೆಯುಳ್ಳ ಮತ್ತು ಬೆಳೆಯುಳ್ಳ ಫಲವತ್ತಾದ ಭೂಮಿ. ಶ್ರೀಮಂತ ಮನೆತನ ಇವರದು. ಬೆಳಗಾವಿಗೆ ಶಾಲೆ ಕಲಿಯಲು ಹೋದರು. ಮತ್ತು ದೇಶ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡರು. ನಂತರ ಇವರ ಹೊಲಗಳು ರೈತರ ಪಾಲಾದರೆ ಸಂಪದ್‌ಭರಿತ ಮನೆ ಬ್ರಿಟಿಷ್ ಪೊಲೀಸ್ ದಾಳಿಗೆ ಈಡಾಗಿ ಬರದ ಮನೆ ಆಗಿ ಬಿಟ್ಟವು.

ವಾಮನರಾಯರು ಕುಂದರನಾಡಿನ ಗಾಂಧಿ ಎಂದೇ ಪ್ರಸಿದ್ಧರಾದವರು. 1925 ರಲ್ಲಿ ಅವರ ವಿವಾಹ ಮೂಲತಃ ವಿಜಾಪೂರ ಜಿಲ್ಲೆ ಕಾಖಂಡಕಿಯವರಾದ ಚಂದ್ರಾಬಾಯಿ ಅವರೊಡನೆ ಬಿದರಿಯಲ್ಲಿ ಆಯಿತು. ಮದುವೆಯ ನಂತರ ಚಂದ್ರಾ ಹೋಗಿ ಪದ್ಮಾವತಿ ಆದರು. ಈ ಹುಡುಗಿ ವಾಮನರಾಯರ ಬಳಗದವರ ಪೈಕಿಯೇ. ಇವರ ಪ್ರಭಾವದಿಂದ ಮದುವೆಗೆ ಮುನ್ನವೇ ಚಂದ್ರಾ ಉರ್ಫ ಪದ್ಮಾವತಿ ಬೆಳಗಾವಿಯ ಕಾಂಗ್ರೆಸ್‌ನಲ್ಲಿ ಸ್ವಯಂ ಸೇವಕಿಯಾಗಿ ಸಕ್ರಿಯವಾಗಿ ಓಡಾಡಿದವಳು. ಮದುವೆ ಕಾಲಕ್ಕೆ ವಾಮನರಾಯರದ್ದು ಒಂದೇ ಕರಾರಿತ್ತು. ಕನ್ಯೆ ಬದುಕಿರುವವರೆಗೂ ಖಾದಿಯನ್ನೇ ಧರಿಸಬೇಕು. ಲಗ್ನವಾದಾಗ ವಧುವಿಗೆ ಬರಿ ಹನ್ನೊಂದು ವರ್ಷಗಳು. ಒಂಬತ್ತು ಮೊಳೆದ ಆ ಕಾಲದ ಖಾದಿಯನ್ನು ಉಟ್ಟಾಗ ಮದುವೆಯಲ್ಲಿ ಕನ್ಯೆಯನ್ನು ಆವರಿಸಿಕೊಂಡಿದ್ದು ಬರೀ ಆಕೆ ಉಟ್ಟ ಸೀರೆಯೇ !

ವಿವಾಹದ ನಂತರ ವಾಮನರಾಯರು ತಮ್ಮ ಕಾರ್ಯಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದರು. ಬೆಳಗಾವಿ ಜಿಲ್ಲೆಯ ಬೆಳಗಾವಿ, ಗೋಕಾಕ, ಹುಕ್ಕೇರಿ ತಾಲೂಕುಗಳಿಗೆ ಸೇರಿದ ವಿವಿಧ ಗ್ರಾಮಗಳಲ್ಲಿ ಗಾಂಧೀಜಿ ಅವರ ಆದೇಶದಂತೆ ವಿಧಾಯಕ ಕಾರ್ಯ ಮಾಡಿದರು. ಈ ಭಾಗದ ಡುಮ್ಮ ಉರುಬಿನಹಟ್ಟಿ, ಅಕ್ಕ ತಂಗೇರಹಾಳ, ಕೊಳವಿ, ಅಂಕಲಗಿ, ಹುದಲಿ, ಪಾಚ್ಛಾಪುರ ಮುಂತಾದ ಊರುಗಳಲ್ಲಿ ದಂಪತಿಗಳೀರ್ವರು ಖಾದಿ ಕಾರ್ಯ ಕೈಕೊಂಡರು. ಕಾಂಗ್ರೆಸ್ ಸದಸ್ಯರ ಆಯ್ಕೆಗೆ ಆಗ ಪ್ರತಿ ತಿಂಗಳೂ ಎರಡು ಸಾವಿರ ಗಜ ನೂಲನ್ನು ನೂಲಬೇಕಾಗಿತ್ತು. ಅದನ್ನು ಇಬ್ಬರೂ ಮಾಡಿ ಮನೆ ಮನೆಗಳಲ್ಲಿ ನೂಲುವ ಹವ್ಯಾಸ ಬೆಳೆಯಿಸಿ ಜೊತೆಗೆ ಸಂಗ್ರಹವಾದ ವಿತರಿಸುವ ಹಂಜಿಗಳನ್ನು ಕೊಡುವ, ನೂಲಿನ ಲಡಿಗಳನ್ನು ಸಂಗ್ರಹಿಸುವ, ಖಾದಿ ಬಟ್ಟೆಯನ್ನು ಕೊಡುವ ಕಾರ್ಯವನ್ನು ಮಾಡುತ್ತಿದ್ದರು. ದಿನಕ್ಕೆ ಕನಿಷ್ಠ 30 ಕಿ.ಮಿ. ಆದರೂ ಅವರು ನಡೆಯಲೇ ಬೇಕಾಗಿತ್ತು. ಪದ್ಮಾವತಿಬಾಯಿ ಅವರು ಹಳ್ಳಿ ಹೆಂಗಸಿಗರಿಗೆಲ್ಲಾ ''ಹಂಜಿ ಮಾಮಿ'' ಆಗಿದ್ದರು. ವಾಮನರಾಯರು 24.09.1945 ರಂದು ನಿಧನರಾಗುವವರೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಸುಮಾರು ಏಳು ವರ್ಷಗಳಷ್ಟು, ಅವರ ಪತ್ನಿ ಪದ್ಮಾವತಿಬಾಯಿ ಸುಮಾರು ಮೂರು ವರ್ಷಗಳಷ್ಟು ಕಾಲ ಜೈಲು ವಾಸ ಅನುಭವಿಸಿದ್ದರು. ದಂಪತಿಗಳಿಬ್ಬರೂ ಕೈಗೊಂಡ ಪ್ರಮುಖ ಹೋರಾಟಗಳೆಂದರೆ 1930 ರಲ್ಲಿ ಬೆಳಗಾವಿ ಜಿಲ್ಲೆ ಯಮಕನಮರಡಿಯಲ್ಲಿ ಉಪ್ಪಿನ ಸತ್ಯಾಗ್ರಹ, 1932 ರಲ್ಲಿ ಗೋಕಾಕದಲ್ಲಿ ಪರದೇಶಿ ವಸ್ತುಗಳ ವಿರುದ್ಧ ಪಿಕೆಟಿಂಗ್, 1933 ರಲ್ಲಿ ಬೆಳಗಾವಿಯಲ್ಲಿ ಪಿಕೆಟಿಂಗ್, 1934 ರಲ್ಲಿ ವೈಯಕ್ತಿಕ ಸತ್ಯಾಗ್ರಹ, 1937 ರಲ್ಲಿ ಹುದಲಿಯ ಬಳಿಯ ಕುಮರಿ ಆಶ್ರಮದಲ್ಲಿ ಗಾಂಧೀಜಿ, ಕಸ್ತೂರ್ತಬಾ ಸುಮಾರು ಒಂದು ತಿಂಗಳು ಕಾಲ ಅಲ್ಲಿ ತಂಗಿದ್ದರು. ಗಾಂಧೀಜಿಯ ಉಸ್ತುವಾರಿ ಸೇರಿದಂತೆ ಇಡೀ ಆಶ್ರಮದ ಬೇಕು ಬೇಡಗಳ ಬಗ್ಗೆ ಹೊಣೆ ಹೊತ್ತಿದ್ದರು. ಹಾಗೂ ಇದೇ ವೇಳೆ ಅಲ್ಲಿ ನಡೆದ ಅಖಿಲ ಭಾರತ ಗಾಂಧೀ ಸೇವಾ ಸಂಘದ ಸಮ್ಮೇಳನ ಗತಿ ಚಕ್ರ ಕೂಡ್ರಿಸಿದ ರಾಟಿಗಳ ಪ್ರದರ್ಶನ, ಇದರಲ್ಲಿ ಸಂಪೂರ್ಣ ಭಾಗಿಯಾಗಿದ್ದರು.

1942 ರಲ್ಲಿ ಚಲೇಜಾವ್ ಚಳವಳಿ ಉಗ್ರರೂಪ ತಾಳಿತು. ಪದ್ಮಾವತಿಬಾಯಿ ಅವರನ್ನು ಬ್ರಿಟಿಷ್ ಪೊಲೀಸರು ಸ್ಥಾನ ಬದ್ಧತೆಗೊಳಿಸಿ ಜೈಲಿನಲ್ಲಿಟ್ಟರು. ಆದರೆ ವಾಮನರಾಯರು ಭೂಗತರಾಗಿ ಕಾರ್ಯಕರ್ತರ ತಂಡ ಕಟ್ಟಿಕೊಂಡು ಉಗ್ರ ಹೋರಾಟದಲ್ಲಿ ಪಾಲ್ಗೊಂಡರು. ಇವರ ನೇತೃತ್ವದ ತಂಡದಿಂದ ಸುಲಧಾಳ ರೇಲ್ವೆ ಸ್ಟೇಶನ್ ಮತ್ತು ನಂದಿ ಗ್ರಾಮದ ಪ್ರವಾಸಿ ಬಂಗ್ಲೆ ಸುಡಲಾಯಿತು. ಇವರ ತಲೆಗೆ ಬ್ರಿಟಿಷ ಪೊಲೀಸರು ಐದು ಸಹಸ್ರ ರೂಪಾಯಿ ಬಹುಮಾನ ಸಾರಿದ್ದರು. ಕೊನೆಗೆ ಗಾಂಧೀಜಿ ಅವರ ಕರೆಯಂತೆ 1944 ಅಗಷ್ಟ 8 ರಂದು ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ವಾಮನರಾಯರು ಬಹಿರಂಗವಾಗಿ ಪ್ರಕಟಗೊಂಡರು ಹಾಗೂ ನಂತರ ಬಂಧಿತರಾದರು.

ಚಲೇಜಾವ್ ಚಳವಳಿ ಮುಗಿದು ಭಾರತಕ್ಕೆ ಸ್ವಾತಂತ್ರ್ಯ ಸಿಗುವುದು ನಿಶ್ಚಿತವಾಗುತ್ತಿದ್ದಂತೆ ವಾಮನರಾಯರು ತಮ್ಮ ಹುಟ್ಟೂರು ಜಮಖಂಡಿಗೆ ಹೋರಾಟವನ್ನು ವಿಸ್ತರಿಸಿದ್ದರು. ಆಗ ಜಮಖಂಡಿಯಲ್ಲಿ ಸಂಸ್ಥಾನಿಕರ ಆಡಳಿತ. ಹೀಗಾಗಿ ಜನರಿಗೆ ಇಮ್ಮಡಿ ದಾಸ್ಯದ ಪ್ರಭಾವವಿತ್ತು.

1945 ರ ಸೆಪ್ಟೆಂಬರ್‌ನಲ್ಲಿ ಜಮಖಂಡಿಯಲ್ಲಿ ಪ್ರಜಾಪರಿಷತ್‌ನ ಅಧಿವೇಶನವನ್ನು ಅವರು ಸಂಘಟಿಸಿದ್ದರು. ಮತ್ತು ಅದರ ಸ್ವಾಗತಾಧ್ಯಕ್ಷರೂ ಆದರು. ಅಧಿವೇಶನ ಮುಗಿದ ನಂತರ ಅವರ ಆರೋಗ್ಯ ಕ್ಷೀಣಿಸಿತು. ಅದೇ ತಿಂಗಳ 24 ರಂದು (24.09.1945) ಅವರು ಜಮಖಂಡಿಯಲ್ಲಿ ನಿಧನರಾದರು.

ಸ್ವಾತಂತ್ರ್ಯ ಹೋರಾಟದಲ್ಲಿ ಇದ್ದ ಹೊಲ, ಮನೆ ಕಳೆದುಕೊಂಡು ಅಕ್ಷರಶಃ ನಿರ್ಗತಿಕರಾಗಿದ್ದರೂ ಸ್ವಾತಂತ್ರ್ಯ ಹೋರಾಟ ಮತ್ತು ಸಮಾಜ ಸೇವೆಯಲ್ಲಿ ಪದ್ಮಾವತಿಬಾಯಿ ಹಿಂದೆ ಬೀಳಲಿಲ್ಲ. 1946-48 ಜಮಖಂಡಿ ಸಂಸ್ಥಾನದ ಕಾಂಗ್ರೆಸ್ ಶಾಸಕಿಯಾಗಿ ಅವರು ಆಯ್ಕೆ ಆಗಿದ್ದರು. ನಂತರ ಭಾರತದ ಉಪ ರಾಷ್ಟ್ರಪತಿಗಳೂ ಆಗಿದ್ದ ಬಿ.ಡಿ. ಜತ್ತಿಯವರು ಆಗ ಸಂಸ್ಥಾನದ ಮುಖ್ಯಮಂತ್ರಿಗಳಾಗಿದ್ದರು. ಜಮಖಂಡಿಯ ಹರಿಜನ ಬೋರ್ಡಿಂಗ್ ಕಾರ್ಯದರ್ಶಿಗಳೂ ಆಗಿದ್ದರು. 1958 ರಲ್ಲಿ ವಿನೋಬಾ ಭಾವೆ ಅವರ ಭೂದಾನ ಯಜ್ಞದಲ್ಲಿ ಭಾಗವಹಿಸಿದ್ದರು. 1960 ರಲ್ಲಿ ಬಾಗಲಕೋಟ, ಹುನಗುಂದ ತಾಲೂಕುಗಳಲ್ಲಿ ಭಾರತ ಸೇವಕ ಸಮಾಜದ ಆಶ್ರಯದಲ್ಲಿ ಶಿಬಿರಗಳನ್ನು ಸಂಘಟಿಸಿದ್ದರು.

ತಮ್ಮ ಮಗಳು ಲೀಲಾತಾಯಿ - ಲಕ್ಷ್ಮೀಬಾಯಿ (1929-1962) (ಈ ಗ್ರಂಥದ ಸಂಪಾದಕ ಮನೋಜ್ ಪಾಟೀಲರ ತಾಯಿ). ಹಾಗೂ ಮಗ ಅರವಿಂದ ಬಾಬು (1931-1975) ಇಬ್ಬರೂ ಅವರ ಕಣ್ಣೆದುರೇ ಅಕಾಲಿಕವಾಗಿ ನಿಧನರಾದರು. ಪದ್ಮಾವತಿಬಾಯಿ ತಮ್ಮ ಸಮಾಜಸೇವೆಯನ್ನು ಮತ್ತು ಪತಿಗೆ ಮಾತು ಕೊಟ್ಟಂತೆ ಖಾದಿ ಧಾರಣೆಯನ್ನು ಕೈ ಬಿಡಲಿಲ್ಲ. ಮುಪ್ಪಿನ ವಯಸ್ಸು ಆರ್ಥಿಕ ಹಿನ್ನಡೆ, ಆರೈಕೆ ಮಾಡುವವರು ಇಲ್ಲದೆ ಇರುವ ಸ್ಥಿತಿ ಇವೆಲ್ಲ ಇದ್ದರೂ ಪದ್ಮಾವತಿ ಬಾಯಿ ಸಮಾಜ ಕಾರ್ಯ ಬಿಡಲಿಲ್ಲ. ಅವರು ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೆ ಒಳಗಾದ ಸ್ವಾತಂತ್ರ್ಯ ಯೋಧೆ ಆಗಿದ್ದರು. ಆದರೂ ಅವರಿಗೆ ಎಲ್ಲರೊಡನೆ ಎಂಬಂತೆ ಸನ್ಮಾನಗಳು ನಡೆದವು. ಇದರಲ್ಲಿ ಪ್ರಮುಖವೆಂದರೆ 1972 ರಲ್ಲಿ ಅವರಿಗೆ ತಾಮ್ರಪಟ ಸನ್ಮಾನ ಜೊತೆಗೆ ಹುದಲಿಯ ಖಾದಿ ಕಾರ್ಯಕರ್ತರಿಂದ ಸನ್ಮಾನ ನಡೆಯಿತು. 1987 ರಲ್ಲಿ ಸ್ವಾತಂತ್ರ್ಯ ದಿನದಂದು ಬೆಳಗಾವಿಯಲ್ಲಿ ಆಗಿನ ಸಚಿವ ವಾಮಭಾವು ಪೋತದಾರರಿಂದ ಸನ್ಮಾನ ನಡೆಯಿತು. 1988 ರಲ್ಲಿ ಸ್ವಾತಂತ್ರ್ಯ ದಿನದಂದು ವಿಜಾಪೂರದಲ್ಲಿ ಅಂದಿನ ಜಿಲ್ಲಾಧಿಕಾರಿ ಅ.ಅ. ಶೆಟ್ಟಿ ಅವರಿಂದ ಸನ್ಮಾನ, ಜಮಖಂಡಿಯಲ್ಲಿ ಹುತಾತ್ಮ ಅನಂತ ಸಾಬಡೆ ಪುತ್ಥಳಿಯನ್ನು ಅನಾವರಣಗೊಳಿಸಿದ್ದು, 1989 ರಲ್ಲಿ ಹುಬ್ಬಳ್ಳಿಯ ಲಯನ್ಸ್ ಕ್ಲಬ್ ಪದ್ಮಾವತಿ ಬಾಯಿ ಅವರನ್ನು ಸಾರ್ವಜನಿಕವಾಗಿ ಗೌರವಿಸಿತ್ತು.

ಅವರು ಜಮಖಂಡಿಯಲ್ಲಿ 03.02.1992 ರಂದು ನಿಧನರಾದರು.

ವಾಮನರಾವ ಮತ್ತು ಪದ್ಮಾವತಿಬಾಯಿ ದಂಪತಿಗಳು ಸ್ವಾತಂತ್ರ್ಯ ಹೋರಾಟ ಮತ್ತು ಸಮಾಜ ಸೇವೆಯಲ್ಲಿ ಸಂಪೂರ್ಣವಾಗಿ ನಿಷ್ಕಾಮವಾಗಿ ಭಾಗಿಯಾದವರು. ಅವರು ದೇಶ, ಸಮಾಜದಿಂದ ಪಡೆದಿದ್ದಕ್ಕಿಂತಲೂ ಕೊಟ್ಟಿದ್ದೇ ಹೆಚ್ಚು. ಹೀಗಾಗಿ ಇಬ್ಬರೂ ಪ್ರಾತಃಸ್ಮರಣೀಯರು.

21 ದಿನಗಳ ಉಪವಾಸ

1923 ರಲ್ಲಿ ಅಮೃತಸರ, ಲಾಹೋರ, ಸಹಕಾನಪುರ (ಉ.ಪ್ರ) ಮತ್ತು ಇತರೆಡೆಗೆ 1924 ರಲ್ಲಿ ಕೋಹತ್, ಗುಲಬರ್ಗಾ ಸೇರಿದಂತೆ ಅಲಹಾಬಾದ, ಕಲಕತ್ತಾ ಮತ್ತಿತ್ತರ ಕಡೆಗಳಲ್ಲಿ ನಡೆದ ಹಿಂದು-ಮುಸ್ಲಿಂ ಗಲಭೆಗಳಿಂದ ಮನನೊಂದ ಮಹಾತ್ಮಾ ಗಾಂಧೀಜಿ 21 ದಿನಗಳ ಅನ್ನ ಸತ್ಯಾಗ್ರಹ ಕೈಕೊಂಡಿದ್ದರು.

17 ಸೆಪ್ಟೆಂಬರ್ 1924 ದಿಲ್ಲಿಯಲ್ಲಿ ಮಹಮ್ಮದ ಅಲಿ ಅವರ ನಿವಾಸದಲ್ಲಿ ಗಾಂಧೀಜಿ ಅವರ ಉಪವಾಸ ಸತ್ಯಾಗ್ರಹ ಪ್ರಾರಂಭಗೊಂಡಿತು. 1924 ಅಕ್ಟೋಬರ 8 ರಂದು ಮಧ್ಯಾಹ್ನ 12.00 ಗಂಟೆಗೆ ಗಾಂಧೀಜಿ ತಮ್ಮ ಅನ್ನ ಸತ್ಯಾಗ್ರಹ ಮುಕ್ತಾಯಗೊಳಿಸಿದರು. ಇದೇ ಕಾಲಕ್ಕೆ ಮಹಮ್ಮದ ಅಲಿ ಅವರು ಕಟುಕನೊಬ್ಬನಿಂದ ಆಕಳೊಂದನ್ನು ಖರೀದಿಸಿ ಗಾಂಧೀಜಿಗೆ ಕಾಣಿಕೆಯಾಗಿ ಅರ್ಪಿಸಿದರು. ನಂತರ ಆಕಳನ್ನು ಪಾಂಜರಪೋಳಕ್ಕೆ ಕಳುಹಿಸಲಾಯಿತು.

ಕೋಹತ್ ಗಲಭೆ

ಈಗ ಪಾಕಿಸ್ತಾನದ ಫಕ್ತುನಿ ಪ್ರಾಂತ್ಯದ ಪ್ರಮುಖ ನಗರವಾಗಿರುವ ಕೋಹತ್ ಆಗ ಅಖಂಡ ಭಾರತ ವಾಯುವ್ಯ ಸರಹದ್ದಿನ ಪ್ರಾಂತವಾಗಿತ್ತು. ಮುಸ್ಲಿಂ ಜನಸಂಖ್ಯೆಯ ಪ್ರಾಬಲ್ಯದ ಈ ಪಟ್ಟಣದಲ್ಲಿ 1924 ರ ಸಪ್ಟೆಂಬರ್ 9 ಮತ್ತು 10 ರಂದು ಹಿಂದೂ ಮುಸ್ಲಿಂ ದಂಗೆ ನಡೆಯಿತು. ಇದಕ್ಕೆ ಕಾರಣವೆಂದರೆ ಹಿಂದುತ್ವವಾದಿಗಳು ಕರಪತ್ರಗಳಲ್ಲಿ ಮುಸ್ಲಿಂರ ವಿರುದ್ಧ ಅವಮಾನಕರ ಸಂಗತಿಗಳನ್ನು ಪ್ರಕಟಿಸಿದ್ದೇ ಆಗಿತ್ತು. ಹೀಗಾಗಿ ದ್ವೇಷ ಉಕ್ಕೇರಿ ಮನೆಗಳಿಗೆ ಬೆಂಕಿ, ಲೂಟಿ, ಇರಿತ, ಕೊಲೆ ಇವೆಲ್ಲ ನಡೆದವು. ಅಲ್ಪ ಸಂಖ್ಯಾತರಾಗಿದ್ದ ಹಿಂದುಗಳು ಮತ್ತು ಸಿಖ್ಖರು ಪ್ರಾಣ ಭಯದಿಂದ ಸನಿಹದ ರಾವಳಪಿಂಡಿಗೆ ಓಡಿ ಹೋದರು.

ಅಂತರ್ಜಾಲದ ಪ್ರಕಾರ 155 ಕ್ಕೂ ಮಿಕ್ಕಿ ಹಿಂದೂ ಮತ್ತು ಸಿಖ್‌ರನ್ನು ಕೊಲ್ಲಲಾಯಿತೆಂದು ತಿಳಿಸಲಾಗಿದೆ. ಗಲಭೆ ನಡೆದ ಎರಡು ದಿನಗಳ ಕಾಲ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಬ್ರಿಟಿಷ್ ಆಡಳಿತ ವಿಫಲವಾಯಿತೆಂದು ದೂರಲಾಯಿತು.

ವೈಕಂ ಸತ್ಯಾಗ್ರಹ

ಕೇರಳ ರಾಜ್ಯದ ಆಗಿನ ತ್ರಾವಣಕೋರ ಸಂಸ್ಥಾನದಲ್ಲಿ ಇರುವ ವೈಕಂನ ಶಿವ ದೇವಾಲಯವನ್ನು ಪ್ರವೇಶಿಸುವ ರಸ್ತೆಗಳು ಹಾಗೂ ದೇವಸ್ಥಾನಕ್ಕೆ ಪ್ರವೇಶವನ್ನು ಅಸ್ಪೃಶ್ಯರಿಗೆ ಮುಕ್ತವಾಗಿಡಬೇಕೆಂಬ ಸತ್ಯಾಗ್ರಹ ಆಗ ರಾಷ್ಟ್ರವ್ಯಾಪಿ ಚರ್ಚೆ ಆಗಿತ್ತು. ಬೆಳಗಾವಿಯ ಕಾಂಗ್ರೆಸ್ ಅಧಿವೇಶನದಲ್ಲಿ ಈ ಬಗ್ಗೆ ಚರ್ಚೆಯೂ ನಡೆದು ಈ ಸತ್ಯಾಗ್ರಹಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದಲ್ಲದೆ ಧನ ಸಹಾಯಕ್ಕೂ ಮುಂದಾಯಿತು.

ಬೆಂಬನಾಡ ಸರೋವರದ ದಂಡೆಯ ಮೇಲೆ ಸುಪ್ರಸಿದ್ಧ ಈ ಶಿವ ದೇವಾಲಯವಿದೆ. ಆಗ ದೇವಾಲಯದ ಆಡಳಿತ ಅಧಿಕಾರಿಗಳು ಮಾಡಿಕೊಂಡಿದ್ದ ನಿಯಮಾವಳಿಗಳ ಪ್ರಕಾರ ಅಸ್ಪೃಶ್ಯರು ದೇವಾಲಯ ಪ್ರವೇಶಿಸುವುದು ಒತ್ತಟ್ಟಿಗಿರಲಿ, ದೇವಾಲಯವನ್ನು ಪ್ರವೇಶಿಸುವ ರಸ್ತೆಗಳಲ್ಲಿಯೂ ಸಹ ಸಂಚಾರ ಮಾಡಬಾರದೆಂಬ ನಿರ್ಭಂಧ ಹೇರಿದ್ದರು. ಹೀಗಾಗಿ ಅಸ್ಪೃಶ್ಯರಿಗೆ ರಸ್ತೆಯ ಬಳಕೆಗೆ ಅಪ್ಪಣೆಯಿಲ್ಲ ಎಂಬ ಬೋರ್ಡು ಹಾಕಿದ ಜಾಗೆಯಿಂದ ಸುಮಾರು ಮೂರು ಮೈಲಿ ದೂರದ ವರ್ತುಳಾಕಾರದ ರಸ್ತೆಯನ್ನು ಬಳಸಬೇಕಾಗಿತ್ತು. ಈ ಬಗ್ಗೆ ಪ್ರತಿಭಟನೆ ನಡೆದಾಗ ಆಗಿನ ಸಂಸ್ಥಾನಿಕರು ಮತ್ತು ದಿವಾನರು ಈ ಬಗ್ಗೆ ಯಾವುದೇ ಪರಿಹಾರ ನೀಡಲು ಒಪ್ಪದೇ ಮೇಲ್ಜಾತಿಯವರ ಪರವಾಗಿ ನಿಂತರು.

ಇದಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಧುರೀಣರಾದ ಟಿ.ಕೆ. ಮಾಧವನ್, ಶ್ರೀ ನಾರಾಯಣ ಗುರು, ಸರ್ದಾರ ಕೆ.ಎಂ. ಪಣಿಕ್ಕರ್ ಮತ್ತಿತ್ತರೆಲ್ಲ ಸೇರಿ ದೇವಸ್ಥಾನ ಮತ್ತು ರಸ್ತೆ ಪ್ರವೇಶದ ಹಕ್ಕನ್ನು ಅಸ್ಪೃಶ್ಯರಿಗೆ ದೊರಕಿಸಿಕೊಡಲು ಹೋರಾಟದ ತಂತ್ರ ನಿರೂಪಿಸಿದರು. ಇದಕ್ಕೆ ಮಹಾತ್ಮಾ ಗಾಂಧೀಜಿಯವರ ಭೇಟಿಗೆ ಒಂದು ನಿಯೋಗವೂ ತೆರಳಿತು. ಅವರ ಆದೇಶದಂತೆ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಸಹ ದೇವಾಲಯ ಪ್ರವೇಶದ ಸತ್ಯಾಗ್ರಹಕ್ಕೆ ಧುಮ್ಮಿಕ್ಕಿತು.

ಹಲವು ವರ್ಷಗಳ ಹೋರಾಟದ ನಂತರ 1936 ರ ಸುಮಾರಿಗೆ ಅಸ್ಪೃಶ್ಯರಿಗೆ ದೇವಸ್ಥಾನ ಹಾಗೂ ಮಾರ್ಗ ಮುಕ್ತಾಯವಾಯಿತು.

ಅಕಾಲಿಗಳ ಹೋರಾಟ

ಸಿಖ್‌ರಲ್ಲಿ ಸಮಾನತೆ, ಆ ಧರ್ಮದಲ್ಲಿಯ ಎಲ್ಲ ವರ್ಗಗಳನ್ನು ಸಮಾನ ದೃಷ್ಟಿಕೋನದಿಂದ ಕಾಣುವ ಕುರಿತು ಅಕಾಲಿಗಳು ನಡೆಸಿದ ಹೋರಾಟ ಕುತೂಹಲಕರವಾಗಿದೆ.

1920 ರ ಸುಮಾರು ಈ ಹೋರಾಟ ಪ್ರಾರಂಭವಾಯಿತು. ಸಿಂಗ್ ಸಭಾದ ರಾಜಕೀಯ ಘಟಕವನ್ನೇ ಅಕಾಲಿದಳ ಎಂದು ನಂತರ ಕರೆಯಲಾಯಿತು. ಪಂಜಾಬ ಪ್ರಾಂತದಲ್ಲಿರುವ ಸಿಖ್ ಗುರುದ್ವಾರಗಳ ಆಡಳಿತದಲ್ಲಿ ಅವ್ಯವಸ್ಥೆ ತಲೆದೋರಿತ್ತು. ಕೆಲವು ಗುರುದ್ವಾರಗಳು ಹಿಂದು ಮಹಾಂತರ ವಶದಲ್ಲಿದ್ದವು.,

ಪ್ರಜಾತಂತ್ರದ ಹಿನ್ನೆಲೆಯಲ್ಲಿ ಗುರುದ್ವಾರಗಳ ಆಡಳಿತಕ್ಕಾಗಿ ಶಿರೋಮಣಿ ಗುರುದ್ವಾರ ಪ್ರಬಂಧಕ ಕಮಿಟಿ (ಎಸ್‌ಜಿ.ಪಿ.ಸಿ) ಅಸ್ತಿತ್ವದಲ್ಲಿ ಬಂದಿತು. ಈ ಕಮಿಟಿ ಅಮೃತಸರದ ಸ್ವರ್ಣ ಮಂದಿರ (ಹರಮಂದಿರ ಸಾಹಿಬ್)ವನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಗುರುದ್ವಾರಗಳ ಪಾವಿತ್ರತೆಯನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಸಿಗರೇಟು ಮತ್ತಿತರ ವಸ್ತುಗಳ ಮಾರಾಟ, ತರುಣಿಯರ ನರ್ತನ ಸೇವೆ ಇವುಗಳನ್ನು ನಿರ್ಬಂಧಿಸಿ ಕಮಿಟಿ ಕ್ರಮ ಕೈಗೊಂಡಿತು. ಕೆಳಜಾತಿಯ ಸಿಖ್‌ರನ್ನು ಸಮಾನವಾಗಿ ಕಾಣಲು ಕೋರಿತು.

ಸಿಖರ ಪ್ರಥಮ ಗುರು, ಗುರು ನಾನಕರ ಜನ್ಮಸ್ಥಳ ನಾನ ಸಾಹಿಬ್ ಗುರುದ್ವಾರದಲ್ಲಿಯ ಓರ್ವ ಮಹಂತ 1921 ರಲ್ಲಿ ಸಿಂಧ ಪ್ರಾಂತದ ಓರ್ವ ಹಿಂದು ಭಕ್ತರ ಹದಿಮೂರು ವರ್ಷದ ಮಗಳ ಮೇಲೆ ಅತ್ಯಾಚಾರ ಮಾಡಿದ. ಈ ಹಿನ್ನೆಲೆಯಲ್ಲಿ ಅಕಾಲಿಗಳು ಈ ಗುರುದ್ವಾರ ತಮ್ಮ ವಶಕ್ಕೆ ತೆಗೆದುಕೊಳ್ಳಲು 20.02.1921 ರಂದು ಪ್ರಯತ್ನಿಸಿದರು. ಆಗ ಮಹಾಂತರ ಘಸ್ತೂನ್ ರಕ್ಷಣಾ ಪಡೆ ಇದನ್ನು ವಿರೋಧಿಸಿ ಮನ ಬಂದಂತೆ ಗುಂಡು ಹಾರಿಸಿದ್ದರಿಂದಾಗಿ 130 ಜನ ಮೃತ ಪಟ್ಟರು. ಎರಡು ದಿನಗಳ ನಂತರ ಗಾಂಧೀಜಿ ಈ ಸ್ಥಳಕ್ಕೆ ಭೆಟ್ಟಿ ನೀಡಿ ಈ ಕೃತ್ಯದ ಹೊಣೆಗಾರರನ್ನು ಡಾಯರ್ ಮೀರಿಸಿದ ಕೃತ್ಯ ಎಂದು ಟೀಕಿಸಿದರು.

ಎಸ್.ಜಿ.ಪಿ.ಸಿಯ ಸತತ ಹೋರಾಟದಿಂದ ಗುರುದ್ವಾರ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಬ್ರಿಟಿಶ ಸರ್ಕಾರ ಕಾನೂನು ರಚಿಸಿ ಇದಕ್ಕೆ ಕಾಯಿದೆ ಸ್ವರೂಪ ನೀಡಿತು. ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಈ ಬಗ್ಗೆ ಚರ್ಚೆ ನಡೆಯಿತು. ಹಾಗೂ ಅಕಾಲಿಗಳ ಹೋರಾಟಕ್ಕೆ ಅಧಿವೇಶನ ಬೆಂಬಲ ನೀಡಿತು. ಅಕಾಲಿಗಳ ಹೋರಾಟದಲ್ಲಿ ಒಟ್ಟು 30 ಸಾವಿರ ಜನ ಬಂಧಿತರಾಗಿದ್ದರು. ಸುಮಾರು 400 ಜನ ಮೃತ ಪಟ್ಟಿದ್ದಾರೆ. ಎರಡು ಸಾವಿರ ಜನ ಗಾಯಗೊಂಡಿದ್ದರು.

ಗುಲಬರ್ಗಾ ಗಲಭೆ

ಗುಲಬರ್ಗಾದಲ್ಲಿ 1924 ಅಗಸ್ಟನಲ್ಲಿ ಹಿಂದು - ಮುಸ್ಲಿಂ ಗಲಭೆ ಸಂಭವಿಸಿ ಓರ್ವ ಹಿರಿಯ ಪೊಲೀಸ್ ಅಧಿಕಾರಿಯ ಕೊಲೆ ನಡೆಯಿತೆಂದು ಹೇಳಲಾಗುತ್ತಿದೆ. ಅಂತರ್ಜಾಲದಲ್ಲಿ ಲಭ್ಯವಾಗುವ ಮಾಹಿತಿಯ ಪ್ರಕಾರ 1924 ಅಗಸ್ಟ 11 ಹಾಗೂ ಮರುದಿನ ಹಿಂದೂ-ಮುಸ್ಲಿಂರ ಮಧ್ಯ ಗಲಭೆ ಸಂಭವಿಸಿತು. ಇದರಲ್ಲಿ ಹಲವಾರು ಜನ ಗಾಯ ಗೊಂಡರು. ಮುಸ್ಲಿಂರ ಮೊಹರಂ ಮೆರವಣಿಗೆ ಮೇಲೆ ಕೆಲ ಹಿಂದೂ ಜನ ಮಾಳಿಗೆ ಮೇಲಿಂದ ನೀರು ಎರಚಿದರೆಂದು ಹೇಳಲಾಗಿದೆ. ಈ ಗಲಭೆಯಲ್ಲಿ ಮುಸ್ಲಿಂರು ಹಿಂದು ದೇವಸ್ಥಾನಗಳ ಮೇಲೆ ದಾಳಿ ನಡೆಸಿ ಮೂರ್ತಿಗಳನ್ನು ಒಡೆದು ಹಾಕಿದರು. ಹಿಂದುಗಳು ಮೂರು ಮಸೀದೆಗಳ ಮೇಲೆ ದಾಳಿ ನಡೆಸಿ ಅಪವಿತ್ರಗೊಳಿಸಿದರು. ನಿಜಾಮ ಸರ್ಕಾರ (ಆಗ ಗುಲಬರ್ಗಾ ಹೈದ್ರಾಬಾದನ ಸಂಸ್ಥಾನದಲ್ಲಿತ್ತು, ನಿಜಾಮರು ಮುಖ್ಯಸ್ಥರಾಗಿದ್ದರು) ಈ ಘಟನೆಗೆ ಸಂಬಂಧಿಸಿದಂತೆ ವಿಚಾರಣಾ ಆಯೋಗ ನಿಯಮಿಸಿತು.

ಕೆಲವು ಅನಧಿಕೃತ ವರದಿಗಳ ಪ್ರಕಾರ ನಿಜಾಮ ಸರ್ಕಾರದ ಪೊಲೀಸರು ಗುಲಬರ್ಗಾ ದಲ್ಲಿ ಹಿಂದು ಧರ್ಮದ ಕೆಳ ಜಾತಿಗಳ ಜನರಿಗೆ ಮುಸ್ಲಿಂ ಮತಾಂತರಕ್ಕೆ ಪ್ರೋತ್ಸಾಹಿಸುತ್ತಿದ್ದರೆಂದು ಆರೋಪಿಸಲಾಗುತ್ತಿದೆ. ಇದಕ್ಕೆ ಪ್ರತಿಯಾಗಿ ಹಿಂದುಗಳು ನಡೆಸಿದ ಪ್ರತಿಭಟನೆ ಹಿಂಸಾತ್ಮಕ ಸ್ವರೂಪ ತಾಳಿ ಪೊಲೀಸ್ ಅಧಿಕಾರಿಯ ಕೊಲೆಯಲ್ಲಿ ಹಾಗೂ ಹಿಂದು ಮುಸ್ಲಿಂ ಗಲಭೆಯಲ್ಲಿ ಪರ್ಯಾವಸನಗೊಂಡಿತು.

ಗಲಭೆಯಲ್ಲಿ ಕೊಲೆಯಾದ ಪೊಲೀಸ್ ಅಧಿಕಾರಿಯ ದರ್ಜೆಯನ್ನು ಪೊಲೀಸ್ ಸುಪರಿಟೆಂಡೆಂಟ್ ಎಂದು ಅಂತರ್ಜಾಲ ಮೂಲಗಳು ವಿವರಿಸುತ್ತವೆ. ಆದರೆ 1997 ರಲ್ಲಿ ಕರ್ನಾಟಕ ಸರ್ಕಾರ ಪ್ರಕಟಿಸಿರುವ ಗುಲಬರ್ಗಾ ಜಿಲ್ಲಾ ಗೆಜೆಟಿಯರ್‌ನಲ್ಲಿ (ಸಂಪಾದಕ ಎಂ.ಬಿ. ಪಾಟೀಲ) ಗಲಭೆಯು ಎಂದು ನಡೆಯಿತೆಂಬ ಬಗ್ಗೆ ಸ್ಪಷ್ಟತೆ ಇಲ್ಲ. 1921-22 ರಲ್ಲಿ ಇದು ನಡೆದಿರಬಹುದೆಂದು ವಿವರಿಸಿ ಇದಕ್ಕೆ ಆಧಾರವಾಗಿ ಗುಲಬರ್ಗಾದ ಓರ್ವ ಪತ್ರಕರ್ತರ ನೆನಪಿನ ಹೇಳಿಕೆಯನ್ನು ನೀಡಲಾಗಿದೆ. ಗೆಜೆಟಿಯರದ ಪ್ರಕಾರ ಸಿ.ಐ.ಡಿ. ಡಿ.ಎಸ್.ಪಿ. ಅವರನ್ನು ಕೊಲೆ ಮಾಡಲಾಗಿತ್ತು.

1924 ರಲ್ಲಿ ಬೆಳಗಾವಿ ಅಧಿವೇಶನದಲ್ಲಿ ಈ ವಿಷಯ ಚರ್ಚೆಗೆ ಬಂದಿದ್ದರಿಂದ ಬಹುಶಃ ಗಲಭೆ ಅದೇ ವರ್ಷ ನಡೆದಿರಬಹುದೆನ್ನಲಾಗಿದೆ. ಗಲಭೆಯ ಹಿನ್ನೆಲೆಯಲ್ಲಿ ಮಹಾತ್ಮಾ ಗಾಂಧೀಜಿ ಅವರು ತಮ್ಮ ಯಂಗ್ ಇಂಡಿಯಾ ಪತ್ರಿಕೆಯಲ್ಲಿ 'Gulburga gone mad' ಎಂಬ ಲೇಖನ ಬರೆದಿದ್ದರು. 1927 ರಲ್ಲಿ ಗಾಂಧೀಜಿ ಗುಲಬರ್ಗಾಕ್ಕೆ ಭೆಟ್ಟಿ ನೀಡಿದ್ದರಲ್ಲದೆ ಅಲ್ಲಿಯ ಪ್ರಸಿದ್ಧ ದರ್ಗಾ ಹಾಗೂ ಶರಣ ಬಸವೇಶ್ವರ ದೇವಸ್ಥಾನಕ್ಕೆ ಭೆಟ್ಟಿ ನೀಡಿ ಹಿಂದೂ ಮುಸ್ಲಿಂ ಏಕತೆ ಬಗ್ಗೆ ಉಪದೇಶಿಸಿದ್ದರು.

ಸ್ವರಾಜ್ಯ ಪಾರ್ಟಿ

1922 ಡಿಸೆಂಬರ್‌ನಲ್ಲಿ ದೇಶಬಂಧು ಚಿತ್ತರಂಜನ ದಾಸ್ ಅವರ ಅಧ್ಯಕ್ಷತೆಯಲ್ಲಿ ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಲಾಯಿತು. ಈ ಪಕ್ಷದ ವಿವಿಧ ಧುರೀಣರೆಂದರೆ ನರಸಿಂಹ ಚಿಂತಾಮಣಿ ಕೇಳಕರ, ಹುಸೇನ ಷಹೀದ್ ಸುಹ್ರಾ ವರ್ದಿ, ಸುಭಾಷಚಂದ್ರ ಬೋಸ್, ವಿಠ್ಠಲ್‌ಭಾಯಿ ಪಟೇಲ್ ಹಾಗೂ ಮೋತಿಲಾಲ ನೆಹರೂ ಅವರು ಈ ಪಕ್ಷದ ಕಾರ್ಯದರ್ಶಿಗಳಾಗಿದ್ದರು.

ಈ ಪಕ್ಷಕ್ಕೂ ಮತ್ತು ಕಾಂಗ್ರೆಸ್‌ಗೂ ತೀವ್ರ ಮತ ಭೇದ ಇರಲಿಲ್ಲ. ಎರಡೂ ಕಡೆಯವರು ಸ್ವಾತಂತ್ರ್ಯ ಬಯಸುವವರೇ ಆಗಿದ್ದರು. ಆದರೆ ಮಾರ್ಗ ಬೇರೆ ಇತ್ತು. ಸ್ವರಾಜ್ಯ ಪಕ್ಷದವರು ಪ್ರಾಂತೀಯ ಮತ್ತು ಕೇಂದ್ರೀಯ ಶಾಸನ ಸಭೆಗಳಲ್ಲಿ ಪಾಲ್ಗೊಂಡು ಸ್ವರಾಜ್ಯದ ಹಾದಿಯತ್ತ ಸಾಗಬೇಕೆನ್ನುವವರು. ಆದರೆ ಇದನ್ನು ಕಾಂಗ್ರೆಸ್ಸಿಗರು ವಿರೋಧಿಸುತ್ತಿದ್ದರು. ಒಂದರ್ಥದಲ್ಲಿ ಅವರು ಬದಲಾವಣೆಗಳಿಗೆ ಸಿದ್ಧರಿರಲಿಲ್ಲ. ಬ್ರಿಟಿಷ ರಾಜ್ಯಸತ್ತೆಯಲ್ಲಿಯ ಶಾಸನ ಸಭೆಗಳಲ್ಲಿ ಭಾರತೀಯರಿಗೆ ಪ್ರಾತಿನಿಧ್ಯ ಕೊಡುವದೇ ಕಾಂಗ್ರೆಸ್ಸಿಗೆ ಸಲ್ಲದ ಮಾತಾಗಿತ್ತು, ಇಂತಹ ಭಾರತೀಯ ಶಾಸಕರು ಬ್ರಿಟಿಷರ ರಬ್ಬರ್ ಸ್ಟ್ಯಾಂಪ್ ಆಗುತ್ತಾರೆಂದು ಅವರು ಭಯ ಪಟ್ಟಿದ್ದರು. ಆದರೆ ಎರಡೂ ಗುಂಪುಗಳಲ್ಲಿ ತಾತ್ವಿಕ ಭಿನ್ನಾಭಿಪ್ರಾಯ ಇಲ್ಲದೆ ಇರುವುದರಿಂದ ಇಬ್ಬರೂ ಸೇರಿ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುವದು ಸೂಕ್ತವೆಂದು ಗಾಂಧೀಜಿ ಅಭಿಪ್ರಾಯ ಪಟ್ಟರು. ಇದು ಇಬ್ಬರಿಗೂ ಒಪ್ಪಿಗೆ ಆಯಿತಲ್ಲದೆ ಬೆಳಗಾವಿ ಅಧಿವೇಶನದಲ್ಲಿ ಈ ಬಗ್ಗೆ ವಿಸ್ತೃತವಾಗಿ ಚರ್ಚೆಯೂ ಆಯಿತು.

1925 ರಲ್ಲಿ ಚಿತ್ತರಂಜನ ದಾಸ್‌ರು ನಿಧನರಾದರು ಹಾಗೂ ಮೋತಿಲಾಲ್ ನೆಹರೂರವರು ಕಾಂಗ್ರೆಸ್ಸಿಗೆ ಮರಳಿದ್ದರಿಂದ (1929 ಹಾಗೂ 1919 ರಲ್ಲಿ ಅವರು ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದರು) ಸ್ವರಾಜ್ಯ ಪಕ್ಷ ದುರ್ಬಲಗೊಂಡಿತು.

ಮನೋಜ್ ಪಾಟೀಲ ಪರಿಚಯ

ಹೆಸರು	:	**ಮನೋಜಗೌಡ ಜೀ. ಪಾಟೀಲಕುಲಕರ್ಣಿ**
ತಂದೆ	:	ದಿ. ಜೀವಣ್ಣಗೌಡ
ವಿದ್ಯಾರ್ಹತೆ	:	ಬಿ.ಎಸ್.ಸಿ. (ಎಲ್.ಎಲ್.ಬಿ.)
ಜನ್ಮದಿನಾಂಕ	:	17.06.1950 ಜನ್ಮಸ್ಥಳ : ಜಮಖಂಡಿ (ಜಿ. ಬಾಗಲಕೋಟೆ)
ಪತ್ರಿಕೋದ್ಯಮ ಸೇವೆ	:	ಸಂಯುಕ್ತ ಕರ್ನಾಟಕದಲ್ಲಿ ಅಖಂಡ 38 ವರ್ಷಗಳ ಸೇವೆ. (1975 ರಿಂದ ಸೇವೆ ಪ್ರಾರಂಭ)
ಹಾಲಿ ಹುದ್ದೆ	:	ಸಂಪಾದಕ : ಕಸ್ತೂರಿ. (ವಿಶ್ರಾಂತ ಸಂಪಾದಕ ಸಂಯುಕ್ತ ಕರ್ನಾಟಕ)

ಪ್ರಶಸ್ತಿಗಳು

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ 2010

ಸರ್ವಾಧ್ಯಕ್ಷ, ಕಲಘಟಗಿ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ-2011

ಸನ್ಮಾನಗಳು	:	ಮಂತ್ರಾಲಯ ರಾಯರ ಮಠ, ಗದಗ ತೋಂಟದಾರ್ಯಮಠ, ಧಾರವಾಡ ಮುರಘಾಮಠ ಹುಬ್ಬಳ್ಳಿ ಮೂರುಸಾವಿರಮಠ, ಉಡುಪಿ ಪೇಜಾವರಮಠ, ಉತ್ತರಾದಿಮಠ, ಚಿಂಚಣಿ (ಬೆಳಗಾವಿ) ಮಠ ಇವೆಲ್ಲವುಗಳಿಂದ ಸನ್ಮಾನ - ಆಶೀರ್ವಾದ
ಉತ್ತಮ ವರದಿಗಾರ	:	★ 1994 ರಾಜ್ಯಾಧ್ಯಕ್ಷ ಪ್ರಶಸ್ತಿ
ಉತ್ತಮ ವರದಿ	:	★ 2000, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಬೆಂಗಳೂರು
ಉತ್ತಮ ಪತ್ರಕರ್ತ	:	★ 2001 ರೋಟರಿ ಇಂಟರ ನ್ಯಾಶನಲ್ ಫೌಂಡೇಶನ್ ಪ್ರಶಸ್ತಿ
ಪತ್ರಕರ್ತ ಸೇವೆ ಸ್ಮರಣೆ	:	★ 2002 ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ರಾಜ್ಯೋತ್ಸವ ಪ್ರಶಸ್ತಿ ★ 2004 ಶಾರದಾ ಶಾಲ್ಮಲಾ ಪ್ರಶಸ್ತಿ ಧಾರವಾಡ ★ 2009 ಜಗನ್ನಾಥರಾವ್ ಟಂಕಸಾಲಿ ಪ್ರಶಸ್ತಿ ★ 2010 ಜಿ.ಆರ್. ಪಾಂಡೇಶ್ವರ ಪ್ರಶಸ್ತಿ
ವಿವಿಧ ಸ್ಮರಣೀಯ ಸೇವೆ	:	★ ಕಾರ್ಯದರ್ಶಿ, ಧಾರವಾಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ (1978-1980)

★ ಪ್ರಧಾನ ಕಾರ್ಯದರ್ಶಿ, ಧಾರವಾಡ ಪತ್ರಕರ್ತರ ಸಂಘ (1980)
★ ಪ್ರಧಾನ ಕಾರ್ಯದರ್ಶಿ, ಸಾಹಿತ್ಯ ಕಲಾಕೇಂದ್ರ, ಧಾರವಾಡ (1978)
★ ಸಾಂಕೇತಿಕ ಬಂಧನ. ಗೋಕಾಕ ಚಳುವಳಿ ಹಾಗೂ ಬೆಳಗಾವಿ ಗಡಿ ಸಮಸ್ಯೆ.
★ ಅಧ್ಯಕ್ಷ, ಬೆಳಗಾವಿ ಜಿಲ್ಲಾ ಕನ್ನಡ ಪತ್ರಕರ್ತರ ಸಂಘ ಬೆಳಗಾವಿ (1985)
★ 1987, ಬೆಳಗಾವಿ ಜಿಲ್ಲಾ ಕನ್ನಡಿಗರ ಸಮ್ಮೇಳನ ಬೆಳಗಾವಿ, ಪ್ರಧಾನ ಕಾರ್ಯದರ್ಶಿ, ಸ್ವಾಗತ ಸಮಿತಿ
★ ಸ್ವಾಗತ ಸಮಿತಿ ಸದಸ್ಯ : ಅ.ಭಾ.ಕನ್ನಡ ಸಾಹಿತ್ಯ ಸಮ್ಮೇಳನ ಹುಬ್ಬಳ್ಳಿ (1990)
★ ಸದಸ್ಯ, ಪ್ರೆಸ್ ಕ್ಲಬ್, ಬೆಂಗಳೂರು
★ ಸದಸ್ಯ, ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘ, ಬೆಂಗಳೂರು
★ ಅಧ್ಯಕ್ಷ, ಗಳಗನಾಥ-ನಾ. ಶ್ರೀ ರಾಜಪುರೋಹಿತ ಪ್ರತಿಷ್ಠಾನ ಧಾರವಾಡ (2011)
★ ಮಾರ್ಗದರ್ಶಕರು, ನೃಪತುಂಗ ವಾಯು ವಿಹಾರಿಗಳ ಸಂಘ, ಹುಬ್ಬಳ್ಳಿ

ಪುಸ್ತಕಗಳು :
★ ಧಾರವಾಡ ಮಾರ್ಗದರ್ಶಿ (1985)
★ ಬೆಳಗಾವಿ ಜಿಲ್ಲಾ ಮಾರ್ಗದರ್ಶಿ (1987)
★ ವೀರ ವಾಮನರಾಯರು (1989)
★ ಕರಿಯು ಕನ್ನಡಿಯಲ್ಲಿ (2002)
★ ನೆನಪು ಶ್ರೀಗಂಧ ಆರ್. ಗುಂಡೂರಾವ (2006)
★ ಕರ್ನಾಟಕ ಕೇಸರಿ (ಜಗನ್ನಾಥರಾವ್ ಜೋಶಿ) (2009)
★ ಕನ್ನಡ ಸ್ಪಂದನ (2012)
★ ಸ್ಪಂದನ (2012)
★ ಮಹಾತ್ಮಾ ಗಾಂಧಿಜಿ ಬೆಳಗಾವಿ 1924 (2013)

ಆಧಾರ ಗ್ರಂಥಗಳು

1. Report of the Thirty Ninth Indian National Congress
Held at Belgaum on the 26the and 27th December 1924


2. ವೀರ ವಾಮನರಾಯರು (1988)
ಲೇಖಕ : ಮನೋಜ ಪಾಟೀಲ

3. ಗೋಕಾಕ ತಾಲೂಕಿನಲ್ಲಿಯ ಸ್ವಾತಂತ್ರ್ಯ ಸಮರ (1980)
ಸಂಪಾದಕರು : ಬಸವರಾಜ ಕಟ್ಟೀಮನಿ ಹಾಗೂ ಶಿವಲಿಂಗಪ್ಪ ಭಾವಿಕಟ್ಟಿ

4. Pictorial India, History of Freedom Struggles & Gandhi (2012)
Author : Somaling Malgali and Achyut R. Vadavi

5. ಬೆಳಗಾವಿ ಜಿಲ್ಲಾ ಮಾರ್ಗದರ್ಶಿ (1987)
ಸಂಪಾದಕ : ಮನೋಜ ಪಾಟೀಲ

6. ಅಂತರ್ಜಾಲ ಹಾಗೂ ಗುಲಬರ್ಗಾ ಜಿಲ್ಲಾ ಗೆಜಿಟೀಯರ್ (1997)
ಸಂಪಾದಕ ಎಂ.ಬಿ. ಪಾಟೀಲ



ಮನೋಜ್ ಪಾಟೀಲ

ಪತ್ರಿಕಾ ರಂಗ, ಸಾಂಸ್ಕೃತಿಕ ಮತ್ತು ಸಾಹಿತ್ಯ ವಲಯಗಳಲ್ಲಿ ಮನೋಜ್ ಪಾಟೀಲ ಅವರದ್ದು ದೊಡ್ಡ ಹೆಸರು. ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳು ಅವರಿಗೆ ದೊರೆತಿವೆ. ತಮ್ಮ ಅಜ್ಜ ಮತ್ತು ಸ್ವಾತಂತ್ರ್ಯಯೋಧ ದಿವಂಗತ ವಾಮನರಾವ ದೇಸಾಯಿ ಬಿದರಿ ಮತ್ತು ಅಜ್ಜಿ ಪದ್ಮಾವತಿಬಾಯಿ ಬಿದರಿಯವರ ಸ್ಫೂರ್ತಿ ಸ್ಮರಣೆಯೊಂದಿಗೆ ಅವರು ಗಾಂಧೀಜಿಯವರ ಮೊಟ್ಟ ಮೊದಲನೆಯ ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಈ ಪೂರ್ತಿ ವಿವರಗಳನ್ನು ಕನ್ನಡಿಗರಿಗೆ ಪ್ರಪ್ರಥಮ ಬಾರಿ ಎಂಬಂತೆ ಸಲ್ಲಿಸುತ್ತಿದ್ದಾರೆ.

ಮುನ್ನುಡಿಯಿಂದ .....

.......ಈ ಮಹಾಧಿವೇಶನಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನೂ ಹಲವು ವರ್ಷಗಳ ಶ್ರಮದಿಂದ ದೊರಕಿಸಿಕೊಂಡು ಮೂಲ ಇಂಗ್ಲೀಷಿನಲ್ಲಿದ್ದ ಅವುಗಳ ಯಥಾವತ್ ಕನ್ನಡ ರೂಪವನ್ನು ಶ್ರೀ ಮನೋಜ ಪಾಟೀಲರು ಇಲ್ಲಿ ನಮಗಿತ್ತು ಕನ್ನಡ ಜನತೆಗೆ ಮಹದುಪಕಾರವನ್ನು ಮಾಡಿದ್ದಾರೆ. ಇಲ್ಲಿ ದೊರೆಯುವ ಮಾಹಿತಿ ಅಮೂಲ್ಯ. ಅಂದಿನ ಹಿರಿಯರ ಹಾಗೂ ಪ್ರತಿನಿಧಿಗಳ ನಡತೆ, ಭಿನ್ನಾಭಿಪ್ರಾಯಗಳ ಹೊರತಾಗಿಯೂ, ಸೌಜನ್ಯ, ಸಜ್ಜನಿಕೆಗಳಿಗೆ ಮಾದರಿ, ಮುಖ್ಯವಾಗಿ ಭಾರತದ ಭವ್ಯ ಭವಿಷ್ಯಕ್ಕಾಗಿ, ಇಡೀ ಜನತೆಯ ಒಳಿತಿಗಾಗಿ ಕಾರ್ಯತತ್ಪರರಾಗಿರಲು ಅವರಲ್ಲಿದ್ದ ಅದಮ್ಯ ಉತ್ಸಾಹ ಮತ್ತು ಬದ್ಧತೆ, ಈ ದಿಶೆಯಲ್ಲಿ ಸರ್ವ ತ್ಯಾಗಕ್ಕೂ ಒಪ್ಪಿದ್ದ ಅವರೆಲ್ಲರ ಆದರ್ಶ ಈ ವರದಿಯಲ್ಲಿ ಸ್ಫುಟವಾಗಿ ಮೈದೋರಿವೆ.

ಕ್ರಿಕೆಟ್ ಮ್ಯಾಚೊಂದರ ವೀಕ್ಷಕ ವಿವರಣೆಯನ್ನು ನೆನಪಿಸುವಂತೆ ಅಧಿವೇಶನದ ಪ್ರತಿಕ್ಷಣದ ಆಗು ಹೋಗುಗಳನ್ನು ಶಬ್ದಗಳಲ್ಲಿ ಹಿಡಿದಿಟ್ಟಿರುವ ವರದಿ ನಾವೂ 'ವಿಜಯನಗರ'ದ ಆ ಮಹಾಧಿವೇಶನದಲ್ಲಿ ಪಾಲ್ಗೊಳ್ಳುತ್ತಿರುವ ಅನುಭವ ನೀಡುತ್ತದೆ......

ಪ್ರೊ. ಸಿ.ವಿ. ವೇಣುಗೋಪಾಲ

ಪ್ರಕಾಶಕರು
ಪವನ ಪುಸ್ತಕ ಪ್ರಕಾಶನ
ಶ್ರೀ ಮಹಾಲಕ್ಷ್ಮಿ, ಸನ್ಮತಿ ಮಾರ್ಗ, ಧಾರವಾಡ – 580 001.